# ಯುಗರಶ್ಮಿ

AHMADIYYA MUSLIM CENTENARY 1889 — 1989

- ದೇವನೂ ಸೃಷ್ಟಿಯೂ
- ಅಲ್ಲಾಹನ ವಚನಗಳು ಕೊನೆಗೊಳ್ಳುವಂತಿಲ್ಲ
- ಹಜ್: ತ್ಯಾಗದ ಮಹಾ ಹಬ್ಬ
- ಪ್ರಾರ್ಥನಾ ಸಮರಕ್ಕೆ ಆಹ್ವಾನ ಮತ್ತು ಹಿನ್ನೆಲೆ
- ಮುಬಾಹಲ ಪಂಥಾಹ್ವಾನ
- ಮುಬಾಹಲ ಮತ್ತು ಭವಿಷ್ಯವಾಣಿಗಳು


ತ್ರೈಮಾಸಿಕ

ಮಾರ್ಚ್ 1989

ಬೆಲೆ: ರೂ. 1-50


ಓ ಸತ್ಯವಿಶ್ವಾಸಿಗಳೇ, ನೀವು ಕಟ್ಟುನಿಟ್ಟಾಗಿ ನ್ಯಾಯಯುತವಾಗಿ ವರ್ತಿಸುವವರೂ ಅಲ್ಲಾಹನಿಗಾಗಿ ಸಾಕ್ಷಿ ನುಡಿಯುವವರೂ ಆಗಿರಿ–ಅದು ನಿಮ್ಮ ವಿರುದ್ಧವಾಗಿದ್ದರೂ ನಿಮ್ಮ ತಂದೆ ತಾಯಿಯರ ಅಥವಾ ಸಂಬಂಧಿಕರ ವಿರುದ್ಧವಾಗಿದ್ದರೂ ಸರಿ. (ನೀವು ಯಾರ ಬಗ್ಗೆ ಸಾಕ್ಷಿ ಹೇಳುತ್ತೀರೋ) ಆತನು ಧನಿಕನಾಗಿದ್ದರೂ ದರಿದ್ರನಾಗಿದ್ದರೂ ಅಲ್ಲಾಹನು ನಿಮಗಿಂತ ಹೆಚ್ಚಾಗಿ ಅವರೀರ್ವರ ಒಳಿತನ್ನು ಇಚ್ಛಿಸುತ್ತಾನೆ. ಆದ್ದರಿಂದ ನೀವು ಯಾವುದೇ (ನಿಕೃಷ್ಟ) ಆಶೆಯನ್ನು ಹೊಂದದೆ ನ್ಯಾಯದಿಂದ ವರ್ತಿಸಿರಿ.

—ಪವಿತ್ರ ಖುರ್‌ಆನ್ (4:136)

# ಯುಗರಶ್ಮಿ ತ್ರೈಮಾಸಿಕ

10–23–1008 ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 001.

ಬಿಡಿಪ್ರತಿ : ರೂ. **1-50**

ವಾರ್ಷಿಕ ಚಂದಾ : ರೂ. **6-00**

ಅಂಚೆ ಮೂಲಕ : ರೂ. **8-00**


**ವಿಷಯ ಸೂಚಿಕೆ:** ಪುಟ


* ಒಂದು ದಿವ್ಯ ದೃಷ್ಟಾಂತ ... 1
* ಮುನ್ನೆಚ್ಚರಿಕೆ ... 2A
* ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು ... 2B
* ದೇವನೂ ಸೃಷ್ಟಿಯೂ ... 3
* ಅಲ್ಲಾಹನ ವಚನಗಳು ಕೊನೆಗೊಳ್ಳುವಂತಿಲ್ಲ ... 8
* ಹಜ್: ತ್ಯಾಗದ ಮಹಾ ಹಬ್ಬ ... 12
* ಪ್ರಾರ್ಥನಾ ಸಮರಕ್ಕೆ ಆಹ್ವಾನ ಮತ್ತು ಅವರ ಹಿನ್ನೆಲೆ ... 15
* ಮುಬಾಹಲ ಪಂಥಾಹ್ವಾನ ... 25
* "ಸನ್ಮಾರ್ಗ"ಕ್ಕೆ ಉತ್ತರ – ಮುಬಾಹಲ ಮತ್ತು ಭವಿಷ್ಯವಾಣಿಗಳು ... 37
* ಮನ್‌ಜೂರ್ ಅಹ್ಮದ್ ಚಿನಿಯೋಟಿ ... 71
* ಝಿಯಾ ಫಿರ್‌ಔನ್ ... 72
* ಯಾವ ಕ್ಷಣದಲ್ಲೂ ಜಗತ್ತು ನಾಶ ... 73
* ಕ್ರಿಸ್ತನ ಜನ್ಮದಿನ ಜೂನ್ 17 ... 73
* 5 ಸಾವಿರ ವರ್ಷ ಹಿಂದೆ ಯೇಸು ಜನ್ಮದ ಭವಿಷ್ಯ ... 74
* ಹೇಳಿಕೆ ಶಾಸ್ತ್ರಬದ್ಧ: ಪುರಿಶ್ರೀ ಸಮರ್ಥನೆ ... 75
* ನೆಲ್ಲಲು ನೆಲೆ ಇಲ್ಲದ ಇದಿ ಅಮೀನ್ ... 75
* ಹಿಂಸಾಪೂರ್ಣ ಜಿಯಾ ಆಳ್ವಿಕೆ .... 76
* ವಿಧಿ ಲೀಲೆ ... 76
* ಛಿನ್ನ ವಿಚ್ಛಿನ್ನವಾದ ಜಿಯಾ ದೇಹ ... 76
* ಝಿಯಾ ಸಮಾಧಿಯನ್ನು ಪೈಝಲ್ ಮಸೀದಿಯಿಂದ ನೀಗಿಸಲು ಸೌದಿ ಬೇಡಿಕೆ ... 77
* ಅಹ್ಮದಿಯಾ ವಾರ್ತೆ ... 78
* ನಿಧನ ವಾರ್ತೆಗಳು ... 79



## AHMADIYYA ENGLISH LITERATURE

1. Introduction to the Study of the Holy Quran — 16-00
   By Hazrath Mirza Bashiruddin Mahmud Ahmad
2. The Philosophy of the Teachings of Islam — 6-00
   By Hazrath Mirza Ghulam Ahmad
3. Characteristics of the Quranic Teachings — 2-00
   By Hazrath Mirza Bashiruddin Mahmud Ahmad
4. The Holy Prophet Muhammad — 2-00
   By Hazrath Mirza Bashiruddin Mahmud Ahmad
5. Ahmadiyya Movement — 2-25
   By Hazrath Mirza Bashiruddin Mahmud Ahmad

Write to : **Secretary for Mission Work**
Sadr Anjuman Ahmadiyya, Qadian - 143 516 (Punjab)

بسم الله الرحمن الرحيم

نحمده ونصلي على رسوله الكريم


# ಯುಗರಶ್ಮಿ

ಸಂಪಾದಕ: ಮುಹಮ್ಮದ್ ಯೂಸುಫ್

| ಸಂಪುಟ: 13 | ಸೆಪ್ಟೆಂಬರ್ 88 – ಮಾರ್ಚ್ 89 / ತಬೂಕ್ 1367– ಅಮಾನ್ 1368 | ಸಂಚಿಕೆ: 4 |
|---|---|---|


## ಒಂದು ದಿವ್ಯ ದೃಷ್ಟಾಂತ

ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿ ಸುಮಾರು ಒಂದು ನೂರು ವರ್ಷಗಳಾದುವು. 1989 ಮಾರ್ಚ್ 23ರಿಂದ ಒಂದು ವರ್ಷಕಾಲ ಲೋಕದಲ್ಲೆಡೆ ಇರುವ ಅಹ್ಮದೀ ಮುಸ್ಲಿಮರು ಅಹ್ಮದಿಯಾ ಶತವಾರ್ಷಿಕೋತ್ಸವವನ್ನು ಆಚರಿಸಲಿದ್ದಾರೆ.

ಕಳೆದ ಒಂದು ನೂರು ವರ್ಷಗಳಲ್ಲಿ ಅಹ್ಮದಿಯಾ ಸಂಘಟನೆ ಅನೇಕಾನೇಕ ಅಗ್ನಿಪರೀಕ್ಷೆಗಳನ್ನು ಗೆದ್ದುಬಂದಿದೆ. ಹಲವಾರು ದಿವ್ಯದೃಷ್ಟಾಂತಗಳನ್ನು ಕಂಡಿದೆ. ಪಾಕಿಸ್ತಾನದ ಅಧ್ಯಕ್ಷ ಜನರಲ್ ಝಿಯಾ ಉಲ್ ಹಕ್ ಅವರ ದಾರುಣವಾದ ದುರ್ಮರಣವು, ಅಹ್ಮದಿಯತಿನ ಸತ್ಯತೆಗೆ ನಿದರ್ಶನವಾದ, ಇತ್ತೀಚೆಗೆ ಗೋಚರವಾದ ಒಂದು ದಿವ್ಯ ದೃಷ್ಟಾಂತವಾಗಿದೆ.

ಕಳೆದ ಜೂನ್ 10ರಂದು ಅಹ್ಮದಿಯಾ ಜಮಾಅತಿನ ಖಲೀಫರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಅವರು ಲಂಡನಿನ ಫಝ್ಲ್ ಮಸ್ಜಿದ್‌ನಲ್ಲಿ ಶುಕ್ರವಾರದ ಖುತ್‌ಬ ಪ್ರವಚನ ನೀಡುತ್ತಾ, ಅಹ್ಮದಿಯತಿನ ವಾಸ್ತವಿಕತೆಯನ್ನು ತಿಳಿದೂ ಅದರ ಮೇಲೆ ಮಿಥ್ಯಾರೋಪ ಹೊರಿಸಿ ಅದನ್ನು ಅಲ್ಲಗಳೆಯುವ ಹಾಗೂ ಅದರ ಸದಸ್ಯರನ್ನು ಭಯಾನಕ ದೌರ್ಜನ್ಯಕ್ಕೆ ಗುರಿಪಡಿಸುವ ಜಗತ್ತಿನ ಎಲ್ಲಾ ವಿರೋಧಿಗಳನ್ನೂ ಒಂದು ಪ್ರಾರ್ಥನಾ ಸಮರ (ಮುಬಾಹಲ)ಕ್ಕೆ ಆಹ್ವಾನಿಸಿದ್ದರು. ಹಝ್ರತ್ ಖಲೀಫರವರು ತನ್ನ ಪ್ರವಚನದಲ್ಲಿ, ಪಾಕಿಸ್ತಾನದಲ್ಲಿ ಅಹ್ಮದಿಯ

ರನ್ನು ಅತಿ ಕ್ರೂರ ರೀತಿಯಲ್ಲಿ ಹಿಂಸೆಗೆ ಗುರಿಪಡಿಸುತ್ತಿದ್ದ ಹಾಗೂ ಈ ಎಲ್ಲಾ ಪೈಶಾಚಿಕ ದೌರ್ಜನ್ಯಕ್ಕೆ ಮುಖಂಡತ್ವ ನೀಡುತ್ತಿದ್ದ ಜ। ಝಿಯಾ ಉಲ್ ಹಕ್‌ರವರ ಹೆಸರೆತ್ತಿ ಈ ಪ್ರಾರ್ಥನಾ ಸಮರ (ಮುಬಾಹಲ)ಕ್ಕೆ ಆಹ್ವಾನ ನೀಡಿದ್ದರು.

ಮುಬಾಹಲ ಪ್ರಾರ್ಥನೆ ಮೂಲಕ ತಮ್ಮ ಫಿರ್ಯಾದಿಯನ್ನು ಅಲ್ಲಾಹನ ನ್ಯಾಯಾಲಯದಲ್ಲಿ ಸಲ್ಲಿಸಿದ ಖಲೀಫರವರು, ಜುಲ್ಯಾ 1 ಮತ್ತು ಆಗಸ್ಟ್ 12ರ ಖುತ್‌ಬ ಪ್ರವಚನಗಳಲ್ಲಿ ಝಿಯಾ ಉಲ್ ಹಕ್ ಈ ಪ್ರಾರ್ಥನಾ ಸಮರವನ್ನು ಸ್ವೀಕರಿಸದಿದ್ದರೂ ಕೂಡ ಅವರು ದೇವಭಯದಿಂದ ತನ್ನ ಹಿಂಸಾಕೃತ್ಯಗಳಿಂದ ಹಿಮ್ಮೆಟ್ಟದಿದ್ದರೆ ಈ ಪ್ರಾರ್ಥನಾ ಸಮರವನ್ನು ಸ್ವೀಕರಿಸಿದಂತೆ ಆಗುವುದೆಂದು ಹೇಳಿ ಅವರು ಒಂದು ವರ್ಷದೊಳಗೆ ದೇವಕೋಪಕ್ಕೆ ಗುರಿಯಾಗುವರೆಂದು ಎಚ್ಚರಿಸಿದ್ದರು.

ಅಲ್ಪ ಕಾಲದಲ್ಲೇ, ಕಳೆದ ಆಗಸ್ಟ್ 17ರಂದು ಜನರಲ್ ಝಿಯಾ ಉಲ್ ಹಕ್ ಒಂದು ವಿಮಾನ ದುರ್ಘಟನೆಯಲ್ಲಿ ಅಪಮೃತ್ಯುವಿಗೆ ಈಡಾದರು. ಇದು ಅತಿ ಮಹತ್ತರವಾದ ಒಂದು ದೈವಿಕ ದೃಷ್ಟಾಂತವೂ ಅಹ್ಮದಿಯಾ ಜಮಾಅತಿನ ಸತ್ಯತೆಗೆ ಸ್ಪಷ್ಟವಾದ ಸಾಕ್ಷ್ಯವೂ ಆಗಿರುತ್ತದೆ.

ಝಿಯಾ ಮರಣದ ಬಳಿಕ ಅಲ್ಪ ಕಾಲ ಪಾಕಿಸ್ತಾನದಲ್ಲಿ ಅಹ್ಮದಿಯರ ವಿರುದ್ಧ ದೌರ್ಜನ್ಯ ತುಸು ಕಮ್ಮಿಯಾಗಿದ್ದರೂ ಇದೀಗ ಪುನಃ ಬಲಗೊಳ್ಳುತ್ತಿದೆಯೆಂದು ಕೇಳಿ ಬರುತ್ತದೆ. ಇತಿಹಾಸದಿಂದ ಪಾಠ ಕಲಿಯಲು ಪಾಕ್ ಆಡಳಿತವನ್ನು ನಡೆಸುತ್ತಿರುವವರು ಸಿದ್ಧರಿಲ್ಲವೆಂದಾದರೆ, ಪಾಕ್ ಅಧ್ಯಕ್ಷ ಇಸ್‌ಹಾಕ್ ಖಾನ್ ಆಗಲಿ, ಪ್ರಧಾನ ಮಂತ್ರಿ ಬೆನಜೀರ್ ಭುಟ್ಟೋ ಆಗಲಿ, ಅಥವಾ ಮುಂದಿನ ಕಾಲದಲ್ಲಿ ಪಾಕ್ ಆಳ್ವಿಕೆಯನ್ನು ಕೈಗೆತ್ತಿಕೊಳ್ಳುವ ಯಾರೇ ಆಗಲಿ, ಅವರು ದೇವಕೋಪಕ್ಕೆ ತುತ್ತಾಗುವರೆಂಬುದರ ಬಗ್ಗೆ ನಮಗೆ ಸಂಶಯವಿಲ್ಲ.

ದೇವಲೀಲೆಯನ್ನು ಕಣ್ಣಿದ್ದವರು ಖಂಡಿತವಾಗಿಯೂ ಕಾಣುತ್ತಾರೆ.

— ಸಂಪಾದಕ

---

# "ಯುಗರಶ್ಮಿ"ಯ ಪೋಷಕರಾಗಿ ದೇಣಿಗೆ ನೀಡಿದ ಉದಾರಮತಿಗಳು

| | | | | ರೂ. |
|---|---|---|---|---|
| ಜನಾಬ್ | ಎಂ. ಇ. ಮುಹಮ್ಮದ್ ಅಲಿ ಸಾಹೇಬ್, | | ಮಡಿಕೇರಿ | 1000 |
| " | ಪಿ. ಕೆ. ಉಮರ್ | " | ಮಡಿಕೇರಿ | 1000 |
| " | ಎಂ. ಪಿ. ಇಬ್ರಾಹಿಂ | " | ಮಂಜೇಶ್ವರ | 500 |
| " | ಮಸ್‌ಊದ್ ಅಹ್ಮದ್ | " | ಪಯಂಗಾಡಿ | 500 |
| " | ಡಾ। ಶರೀಫ್ ಅಹ್ಮದ್ | " | ಕರುನಾಗಪಳ್ಳಿ | 300 |
| " | ಯು. ಎಸ್. ಮಾಹಿನ್ ಕುಞ್ಞಿ | " | ಪುತ್ತೂರು | 250 |
| " | ಬಿ. ಶೇಕಾಲಿ | " | ಕೊಯನಾಡು | 250 |
| " | ಸಿ. ಕೆ. ಅಬ್ದುಲ್ ಗಫೂರ್ | " | ವಾಣಿಯಂಬಲ | 200 |
| " | ಬಶೀರ್ ಅಹ್ಮದ್ ಸಿದ್ದೀಖ್ | " | ಮೊಗ್ರಾಲ್ | 100 |
| " | ಮುಹಮ್ಮದ್ ಯೂಸುಫ್ | " | ಮಂಗಳೂರು | 100 |

# ಮುನ್ನೆಚ್ಚರಿಕೆ

"ನೆನಪಿಡಿರಿ, ಅನೇಕ ಭೂಕಂಪಗಳು ಸಂಭವಿಸಲಿವೆಯೆಂಬ ಸೂಚನೆಯನ್ನು ದೇವರು ನನಗೆ ಅರುಹಿದ್ದಾನೆ............ ಮನುಷ್ಯನುಂಟಾದ ಕಾಲದಿಂದ ಇಷ್ಟರ ವರೆಗೆ ಸಂಭವಿಸದ ರೀತಿಯ ಅತ್ಯಂತ ಭಯಂಕರವಾದ ನಾಶವು ಉಂಟಾಗಲಿದೆ. ಭೂಮಿಯ ನಾನಾ ಭಾಗಗಳು ಅಲ್ಲಿ ಮೊದಲೆಂದೂ ಜನವಾಸ ಇರಲಿಲ್ಲವೆಂದು ಭಾಸವಾಗುವಷ್ಟರ ಮಟ್ಟಿಗೆ ಅಡಿಮೇಲಾಗಿ ಸರ್ವನಾಶವಾಗುವುವು......... ಅಂತಹ ದಿನಗಳು ಅತೀ ಸಮೀಪವಾಗಿವೆ. ಅಲ್ಲ. ಬಾಗಿಲಲ್ಲೇ ಬಂದು ನಿಂತಿವೆ. ಒಂದು ಮಹಾ ಪ್ರಳಯದ ದೃಶ್ಯವನ್ನು ಲೋಕವು ಕಾಣಲಿಗೆ. ಮನುಷ್ಯನು ದೇವರನು ಮರೆತು. ಭಕ್ತಿಮಾರ್ಗವನ್ನು ಉಪೇಕ್ಷಿಸಿ. ತಮ್ಮ ಪ್ರಯತ್ನ ಹಾಗೂ ಹೃದಯದ ಸಕಲ ಇಚ್ಛೆಗಳನ್ನು ಕೇವಲ ಲೌಕಿಕ ಆಡಂಬರಗಳಿಗಾಗಿ ಮೀಸಲಾಗಿರಿಸದ ಕಾರಣದಿಂದಾಗಿ ಇವೆಲ್ಲಾ ಸಂಭವಿಸುವುವು...........'ಒಬ್ಬ ಪ್ರವಾದಿಯನ್ನು ಕಳುಹಿಸದೆ ನಾವು ಜನರನ್ನು ಶಿಕ್ಷಿಸುವುದಿಲ್ಲ' ಎಂದು ದೇವನು ಪವಿತ್ರ ಖುರ್‌ಆನಿನಲ್ಲಿ (17:16) ಹೇಳಿರುವನು. ಪಶ್ಚಾತ್ತಾಪ ಪಡುವವರು ರಕ್ಷಣೆಯನ್ನು ಹೊಂದುವರು..........

ಎಲೈ ಯುರೋಪಿನ ಜನಾಂಗಗಳೇ. ನೀವು ಸುರಕ್ಷಿತರಲ್ಲ. ಎಲೈ ಏಷ್ಯಾದ ಜನಾಂಗಗಳೇ ನೀವು ಸಹ ವಿಮುಕ್ತರಲ್ಲ. ಎಲೈ ದ್ವೀಪವಾಸಿಗಳೇ. ನಿಮ್ಮ ಸ್ವಯಂಕೃತ ದೇವರುಗಳು ಆ ದಿನದಂದು ನಿಮ್ಮ ರಕ್ಷಣೆಗೆ ಬರಲಾರವು. ದೊಡ್ಡ ದೊಡ್ಡ ನಗರಗಳು ನಾಶವಾಗುವುದನ್ನು ಮತ್ತು ಜನಭರಿತ ಪ್ರದೇಶಗಳು ಜನಶೂನ್ಯವಾಗುವ ಭವಿಷ್ಯದ ಚಿತ್ರವನ್ನು ನಾನು ಕಾಣುತ್ತಿದ್ದೇನೆ. ಆ ಸರ್ವಶಕ್ತನಾದ ದೇವನು ಒಂದು ದೀರ್ಘಕಾಲದ ವರೆಗೆ ಮೌನವಾಗಿದ್ದನು. ಅವನ ಮುಂದೆಯೇ ಹೇಯವಾದ ಅನೇಕ ಕೃತ್ಯಗಳು ನಡೆಯುತ್ತಿದ್ದರೂ ಅವನು ಸುಮ್ಮನಿದ್ದನು. ಆದರೆ ಇನ್ನೀಗ ಅವನು ಭಯಂಕರ ಸ್ವರೂಪದಿಂದ ತನ್ನ ಮುಖವನ್ನು ತೋರಿಸುವನು. ಕಿವಿ ಇದ್ದವರು ಕೇಳಿಕೊಳ್ಳಲಿ. ಅಂತಹ ಕಾಲವು ದೂರವಿಲ್ಲ! ಪ್ರವಾದಿ ನೂಹ್‌ರವರ ಕಾಲವು[*1] ನಿಮ್ಮ ಕಣ್ಣ ಮುಂದೆ ಪ್ರತ್ಯಕ್ಷವಾಗುವುದು. ಪ್ರವಾದಿ ಲೂತ್‌ರವರ ರಾಜ್ಯದಲ್ಲಿ ಸಂಭವಿಸಿದ್ದನ್ನು[*2] ನಿಮ್ಮ ಸ್ವಂತ ಕಣ್ಣುಗಳಿಂದ ಕಾಣುವಿರಿ. ಆದರೆ ದೇವರು ತನ್ನ ಕೋಪವನ್ನು ಪ್ರಕಟಿಸುವುದರಲ್ಲಿ ತಾಳ್ಮೆವಹಿಸುವವನಾಗಿದ್ದಾನೆ. ನಿಮ್ಮ ಮೇಲೆ ದಯಾದೃಷ್ಟಿಯನ್ನು ಬೀರುವಂತೆ ನೀವು ಅವನನ್ನು ಪಶ್ಚಾತ್ತಾಪದಿಂದ ಪ್ರಾರ್ಥಿಸಿರಿ."

(ಹಖೀಖತುಲ್ ವಹ್ಯ್ 1907, ಪುಟ 256 – 257)

— **ಹಝ್ರತ್ ಅಹ್ಮದ್**
ಅಹ್ಮದಿಯಾ ಸಂಘಟನೆಯ ಸ್ಥಾಪಕರು

---

*1 ಮಹಾ ಜಲಪ್ರಳಯ.

*2 ಸೆಡೋಮ್ ಗಮೋರಾ ಎಂಬಲ್ಲಿ ಸಂಭವಿಸಿದ ಭೀಕರ ಭೂಕಂಪಗಳು.

— ಸಂಪಾದಕ

## ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು

1. ನಿಮ್ಮ ಪೈಕಿ ಅತಿ ಒಳ್ಳೆಯ ಸತ್‌ಸ್ವಭಾವಿ ನಿಮ್ಮಲ್ಲಿ ಉತ್ತಮನು.

2. ಅಂತಿಮ ವಿಚಾರ ದಿನದಂದು ಸತ್ಯವಿಶ್ವಾಸಿಯ ತಕ್ಕಡಿಯಲ್ಲಿ ಸತ್‌ಸ್ವಭಾವಕ್ಕಿಂತ ಭಾರವಾದುದು ಬೇರೆ ಯಾವುದೂ ಇಲ್ಲ. ನೀಚ ಮಾತುಗಳನ್ನಾಡುವ ದುಸ್ವಭಾವಿಯೊಂದಿಗೆ ಅಲ್ಲಾಹನು ಕೋಪಿಸುವನು.

3. ಒಬ್ಬ ಸತ್ಯವಿಶ್ವಾಸಿಗೆ ತನ್ನ ಉತ್ತಮ ಸ್ವಭಾವ ದಿಂದ (ಸದಾ) ವ್ರತವನ್ನನುಷ್ಠಿಸುವವನ ಮತ್ತು ಪ್ರಾರ್ಥನೆ ಮಾಡುವವನ ಪದವಿಗಳನ್ನು ಗಳಿಸಲು ಸಾಧ್ಯ.

4. ತರ್ಕವನ್ನು ಕೈಬಿಡುವವನಿಗೆ ಸ್ವರ್ಗದ ಒಂದು ಬದಿಯಲ್ಲಿ ಒಂದು ಮನೆ ದೊರೆಯುವ ಆಶ್ವಾಸನೆ ಯನ್ನು ನಾನು ನೀಡುತ್ತೇನೆ– ಯಥಾರ್ಥದಲ್ಲಿ ಆತನು ಸತ್ಯಕ್ಕಾಗಿ ವಾದಿಸುತ್ತಾನಾದರೂ ಸಹ. ಅದೇ ಪ್ರಕಾರವೇ ಸುಳ್ಳನ್ನು ಬಿಟ್ಟುಬಿಡುವವನಿಗೆ ಸ್ವರ್ಗದ ಮಧ್ಯದಲ್ಲಿ ಒಂದು ಮನೆ ದೊರಕುವ ಭರವಸೆಯನ್ನು ನೀಡುತ್ತೇನೆ– ಆತನು ಸುಳ್ಳು ಹೇಳುವುದು ತಮಾಷೆ ಗಾಗಿಯಾದರೂ ಕೂಡ. ಉತ್ತಮ ಸ್ವಭಾವಿಗೆ ಸ್ವರ್ಗದ ಉನ್ನತ ಭಾಗದಲ್ಲಿ ಒಂದು ಮನೆ ಲಭ್ಯವಾಗುವ ವಾಗ್ದಾನವನ್ನು ನಾನು ನೀಡುತ್ತೇನೆ.

5. ಅಂತಿಮ ವಿಚಾರ ದಿನದಂದು ನನಗೆ ಅತಿಹೆಚ್ಚು ಇಷ್ಟವುಳ್ಳವರೂ ಸ್ಥಾನದಲ್ಲಿ ನನಗೆ ಹೆಚ್ಚು ಸಮೀಪವುಳ್ಳ ವರೂ ನಿಮ್ಮಲ್ಲಿ ಅತಿ ಉತ್ತಮ ಸ್ವಭಾವಿಗಳೇ ಆಗಿರು ತ್ತಾರೆ. ಬಡಾಯಿಕೋರರೂ ಜನರ ಮೇಲೆ ಸುಳ್ಳಾ ರೋಪಗಳನ್ನು ಹೊರಿಸುವವರೂ ದುರಹಂಕಾರಿಗಳೂ ಆ ದಿನದಂದು ಅತ್ಯಂತ ತಿರಸ್ಕಾರಕ್ಕೆ ಪಾತ್ರರೂ ನನ್ನಿಂದ ಅತ್ಯಂತ ದೂರ ಸರಿಸಲ್ಪಟ್ಟವರೂ ಆಗಿರುತ್ತಾರೆ. ★


# ಮರದ ಅಳತೆ ಪುಸ್ತಕಗಳು

**★ EMPEES TIMBER CALCULATOR (Metric System)**

ಮೆಟ್ರಿಕ್ ಪದ್ಧತಿಯಲ್ಲಿ 50 ಸೆ. ಮೀ.ನಿಂದ 5 ಮೀಟರ್ ವರೆಗಿನ ದಪ್ಪದ ದಿಮ್ಮಿಗಳಅಳತೆಯ ಸಿದ್ಧಪಟ್ಟಿ ರೂ. 60–00

**★ TIMBER CALCULATOR (Cubic Feet)**

13 ಇಂಚು ಮೊದಲ್ಗೊಂಡು 14 ಅಡಿ ವರೆಗೆ ದಪ್ಪವಿರುವ ಮರದ ದಿಮ್ಮಿಗಳ ಅಳತೆಯ ಸಿದ್ಧಪಟ್ಟಿ ರೂ 25–00

**★ EMPEES TIMBER CALCULATOR (Cubic Feet System)**

ಘನ ಅಡಿ ಪ್ರಮಾಣದಲ್ಲಿ ಮರದ ದಿಮ್ಮಿಗಳ ಅಳತೆ ಸಿದ್ಧಪಟ್ಟಿ – ಕೊಯ್ದ ಸೈಜುಗಳ ಅಳತೆ ಸಿದ್ಧಪಟ್ಟಿ – ಘನ ಮೀಟರ್‌ನಿಂದ ಘನ ಅಡಿಗೆ ಮತ್ತು ಘನ ಅಡಿಯಿಂದ ಘನ ಮೀಟರ್‌ಗೆ ಪರಿವರ್ತನ ಸಿದ್ಧಪಟ್ಟಿ ರೂ. 60–00

ಎಲ್ಲ ಪುಸ್ತಕಗಳಿಗೂ ಅಂಚೆವೆಚ್ಚ ಉಚಿತ. ಪುಸ್ತಕ ಪಡೆಯಲು ಅದರ ಮೌಲ್ಯವನ್ನು ಕೆಳಗಿನ ವಿಳಾಸಕ್ಕೆ M. O. ಮೂಲಕ ಕಳುಹಿಸಿರಿ.

**Jubilee Printing Press**
**10-23-1008 Ansari Road, Bunder, Mangalore - 575 001**

# ದೇವನೂ ಸೃಷ್ಟಿಯೂ

★ ಎಂ. ಮುಹಮ್ಮದ್ ಯೂಸುಫ್ ಎಂ. ಎ., ಬಿ. ಎಲ್.

## ದೇವಾಸ್ತಿತ್ವ

ಎಲ್ಲಾ ಸೃಷ್ಟಿಗಳ ಅಂತಿಮವಾದ 'ಕಾರಣ' ದೇವನೇ ಆಗಿದ್ದಾನೆಂದು ಪವಿತ್ರ ಖುರ್‌ಆನ್ ಸಾರುತ್ತದೆ. ಮಾತ್ರವಲ್ಲ, ಎಲ್ಲಾ ಸೃಷ್ಟಿಯೂ ಅವನಿಂದಲೇ ಉದ್ಭವಿಸುತ್ತದೆಂದು ಸಹ ಅದು ವ್ಯಕ್ತಗೊಳಿಸುತ್ತದೆ. ಪವಿತ್ರ ಖುರ್‌ಆನ್ ಆ ಬಗ್ಗೆ ಹೀಗೆ ಹೇಳುತ್ತದೆ: "ದೇವನೇ ಆದ್ಯನೂ ಅಂತ್ಯನೂ" (57 : 4). ಈ ಬ್ರಹ್ಮಾಂಡದಲ್ಲಿರುವ ಪ್ರತಿಯೊಂದು ಸೃಷ್ಟಿಯ ನೆಲೆ ನಿಲ್ಲುವಿಕೆ ದೇವನನ್ನು ಆಶ್ರಯಿಸಿಕೊಂಡಿರುತ್ತದೆ. ಹಾಗೆಯೇ ಎಲ್ಲಾ ಜೀವಜಾಲಗಳ ತಿರೋಧಾನ ಸಂಭವಿಸುವುದು ಸಹ ದೈವಿಕ ನಿಯಮಗಳಿಗೆ ಅನುಸಾರವಾಗಿಯಾಗಿದೆ. ಈ ಪ್ರಪಂಚದ ನೆಲೆನಿಲ್ಲುವಿಕೆ ದೇವನು ಇಚ್ಛಿಸಿರದಿರುತ್ತಿದ್ದರೆ ಅದು ಅಸ್ತಿತ್ವವನ್ನು ಪಡೆಯುತ್ತಿರಲಿಲ್ಲ. ಈ ಪ್ರಪಂಚದ ನಾಶಕ್ಕೆ ಬೇಕಾದ ನಿಯಮಗಳನ್ನು ದೇವನು ರೂಪಿಸಿಲ್ಲವಾಗಿದ್ದರೆ ಈ ಪ್ರಪಂಚವು ನಶೀಕರಣಕ್ಕೆ ಗುರಿಯಾಗಲಾರದು. ಇದರಿಂದ ಸ್ಪಷ್ಟವಾಗುವ ವಾಸ್ತವಾಂಶವೇನೆಂದರೆ ಸೃಷ್ಟಿ – ಸ್ಥಿತಿ – ಲಯಗಳು ಕೆಲವು ದೈವಿಕ ನಿಯಮಗಳನ್ನು ಆಶ್ರಯಿಸಿಕೊಂಡಿವೆ. ದೈವಿಕ ನಿಯಮಗಳಿಗೆ ಅನುಗುಣವಾಗಿ ಸೃಷ್ಟಿ – ಲಯ ಎಲ್ಲವೂ ನಡೆಯುತ್ತಿವೆ. ಕ್ರಮಬದ್ಧವಾಗಿರುವ ಈ ಪ್ರಪಂಚದ ಪ್ರವರ್ತನೆಯೇ ಅದರ ಮರೆಯಲ್ಲಿ ಅತಿ ಬುದ್ಧಿಶಾಲಿಯಾದ ಒಂದು ಶಕ್ತಿ ವರ್ತಿಸುತ್ತದೆಂದು ಸಾರುತ್ತದೆ. ಈ ಬುದ್ಧಿಶಾಲಿಯಾದ ಶಕ್ತಿಯು ವರ್ತನೆಯು ಈ ಪ್ರಪಂಚಕ್ಕೆ ಓರ್ವ ನಿಯಾಮಕನೂ ಕರ್ತನೂ ಇದ್ದಾನೆಂದು ಸಾರುತ್ತದೆ. ಈ ವಾಸ್ತವಾಂಶವನ್ನು ಪವಿತ್ರ ಖುರ್‌ಆನ್ ದೇವಾಸ್ತಿತ್ವಕ್ಕೆ ಒಂದು ಪುರಾವೆಯಾಗಿ ಹೇಳುತ್ತದೆ. ಈ ಬಗ್ಗೆ ಖುರ್‌ಆನ್ ಹೇಳುವುದನ್ನು ನೋಡಿರಿ:

"ಆಕಾಶ ಭೂಮಿಗಳ ಕರ್ತನಾದ ಮಹೋನ್ನತನಾದ ದೇವನಿಗೆ ಓರ್ವ ಪುತ್ರನಿದ್ದಾನೆಂದು ಆರೋಪಿಸುವುದು ಎಷ್ಟು ಅಸಮಂಜಸವಾಗಿದೆ!–ಆ ಮಹೋನ್ನತನಿಗೆ ಪತ್ನಿಯಾಗಲಿ ಇಲ್ಲದಿರುವಾಗ; ಮಾತ್ರವಲ್ಲ ಸಕಲ ವಸ್ತುಗಳು ಅವನ ಸೃಷ್ಟಿಯಾಗಿರುವಾಗ; ಎಲ್ಲಾ ವಸ್ತುಗಳ ಕುರಿತಿರುವ ಜ್ಞಾನ ಅವನಿಗೆ ಮಾತ್ರವಾಗಿರುವಾಗ (ಈ ಆರೋಪಣೆ ಅರ್ಥಶೂನ್ಯವೇ ಆಗಿದೆ.) ನಿಮ್ಮ ರಕ್ಷಕನಾದ ದೇವನು ಮಹೋನ್ನತನು. ಅವನ ಹೊರತು ಬೇರೊಬ್ಬ ಸೃಷ್ಟಿಕರ್ತನಾಗಲಿ ಪರಿಪಾಲಕನಾಗಲಿ ಈ ಪ್ರಪಂಚಕ್ಕಿಲ್ಲ. ಎಲ್ಲವುಗಳ ಸೃಷ್ಟಿಕರ್ತನಾದ ಮಹೋನ್ನತನಾದ ದೇವನು. ಆದ್ದರಿಂದ ನೀವು ಅವನನ್ನೇ ಆರಾಧಿಸಿರಿ. ಎಲ್ಲಾ ವಸ್ತುಗಳ ನಿಯಾಮಕನೂ ಸಂರಕ್ಷಕನೂ ಅವನೇ ಆಗಿದ್ದಾನೆ." (6 : 102, 103)

ಎಲ್ಲಾ ಸೃಷ್ಟಿಗೂ ಆದಿಕಾರಣ ದೇವನೇ ಆಗಿದ್ದಾನೆಂದು ಮೇಲಿನ ವಾಕ್ಯ ಸ್ಪಷ್ಟಪಡಿಸುತ್ತದೆ. ದೇವನು ಎಲ್ಲವುಗಳ ಸೃಷ್ಟಿಕರ್ತನೂ ಪರಿಪಾಲಕನೂ ಆಗಿರುವಾಗ ಬೇರೊಬ್ಬನ ಆಶ್ರಯ ದೇವನಿಗೆ ಅವಶ್ಯವಿಲ್ಲವೆಂಬುದು ಸುಸ್ಪಷ್ಟವಷ್ಟೇ. ಈ ಪರಮಸತ್ತೆ ಶಾಶ್ವತವಾದುದರಿಂದ ದೇವನಾಮ ಎಂದೆಂದಿಗೂ ನೆಲೆಗೊಳ್ಳುತ್ತದೆ.

ದೇವನು ಮನುಷ್ಯನನ್ನು ಸೃಷ್ಟಿಸಿದ್ದು ಮಾತ್ರವಲ್ಲ; ಅವನ ಅಭಿವೃದ್ಧಿಗೆ ಬೇಕಾದ ಎಲ್ಲಾ ಏರ್ಪಾಡುಗಳನ್ನು ಸಿದ್ಧಪಡಿಸಿಟ್ಟಿದ್ದಾನೆ. ಬಲಹೀನತೆಯಿಂದಲೂ ಕೀಳ್ಮಟ್ಟದಿಂದಲೂ ಶಕ್ತಿಯೆಡೆಗೂ ಅಭಿವೃದ್ಧಿಯೆಡೆಗೂ ಅವನನ್ನು ಕೊಂಡೊಯ್ಯಲು ಎಲ್ಲಾ ಮಾರ್ಗಗಳನ್ನು ದೇವನು ಈ ಪ್ರಪಂಚದಲ್ಲಿ ಸಿದ್ಧಗೊಳಿಸಿಟ್ಟಿದ್ದಾನೆ. ಈ ವಾಸ್ತವಾಂಶದೆಡೆಗೆ ಪವಿತ್ರ ಖುರ್‌ಆನ್ ನಮ್ಮ ಗಮನವನ್ನು ಸೆಳೆದಿದೆ. ದೇವನ ಹೊರತು ಅಂತಿಮವಾದ ಬೇರೊಂದು ಸತ್ತೆಯಿಲ್ಲವೆಂದೂ ಆ ಪರಮ ಶಕ್ತಿಯೇ

ಈ ಬ್ರಹ್ಮಾಂಡವನ್ನು ಸೃಷ್ಟಿಸಿದೆಯೆಂದೂ ಮನುಷ್ಯ ರಾಶಿ ದೇವನ ಮುಂದೆ ಸಮಾನರೆಂದೂ ಪವಿತ್ರ ಖುರ್‌ಆನ್ ವ್ಯಕ್ತಪಡಿಸುತ್ತದೆ. ಅವೆಲ್ಲವನ್ನೂ ದೇವನೇ ಸೃಷ್ಟಿಸಿದನು ಹಾಗೂ ಅವೆಲ್ಲವುಗಳ ಅಭಿವೃದ್ಧಿಯ ಮಾರ್ಗ ನಿರ್ದೇಶಗಳನ್ನು ದೇವನೇ ಮಾಡಿರುವನೆಂಬ ಸಂಗತಿ ಚಿಂತಿಸುವವರಿಗೆ ಮನಗಾಣಲು ಪ್ರಯಾಸವಿಲ್ಲ. ಆದುದರಿಂದ ಎಲ್ಲಾ ಮನುಷ್ಯ ಜಾತಿ ದೇವನನ್ನೇ ಆರಾಧಿಸಬೇಕೆಂದೂ ಅದು ಅವರ ಕರ್ತವ್ಯವೆಂದೂ ವ್ಯಕ್ತಪಡಿಸಲಾಗಿದೆ. ಏಕೆಂದರೆ, ಈ ಬ್ರಹ್ಮಾಂಡವನ್ನು ನಿಯಂತ್ರಿಸುವುದು ದೇವನೇ ಆಗಿರುವನು.

ಈ ಪ್ರಪಂಚದಲ್ಲಿರುವ ಸಕಲ ರಹಸ್ಯಗಳನ್ನೂ ದೇವನು ಅರಿಯುತ್ತಾನೆಂದು ಪವಿತ್ರ ಖುರ್‌ಆನ್ ಕಲಿಸುತ್ತದೆ. ದೇವನ ಅರಿವಿಗೆ ಹೊರತಾದ ಏನೂ ಈ ಪ್ರಪಂಚದಲ್ಲಿ ನಡೆಯುವುದಿಲ್ಲ. ಪವಿತ್ರ ಖುರ್‌ಆನ್ ಹೇಳುವುದನ್ನು ನೋಡಿರಿ: "ಅವನ ಅರಿವು ಆಕಾಶ ಭೂಮಿಗಳ ಪರಿಧಿಗಳ ವರೆಗೆ ವ್ಯಾಪಿಸಿಕೊಂಡಿರುತ್ತದೆ." (2:256)

ಎಲ್ಲಾ ಸೃಷ್ಟಿಗಳ ಅಂತಿಮವಾದ ಕಾರಣ ದೇವನೇ ಆಗಿದ್ದಾನೆಂದು ಪವಿತ್ರ ಖುರ್‌ಆನ್ ಸಾರುತ್ತದೆ. ಅವನು ಭೌತಿಕವಾದ ಅನುಭೂತಿಗೆ ಅತೀತನಾಗಿದ್ದಾನೆಂದು ಪವಿತ್ರ ಖುರ್‌ಆನ್ ಹೇಳುತ್ತದೆ. "ಭೌತಿಕ ಕಣ್ಣುಗಳಿಗೆ ದೇವನನ್ನು ದರ್ಶಿಸಲಿಕ್ಕೆ ಸಾಧ್ಯವಿಲ್ಲ" (6:104) ಎಂದು ಅದು ಘೋಷಿಸುತ್ತದೆ. ಅವನು ಎಲ್ಲಾ ಭೌತಿಕ ಪದಾರ್ಥಗಳಿಂದ ವ್ಯತ್ಯಸ್ತನಾಗಿದ್ದಾನೆ. ಆದ್ದರಿಂದ ಪಂಚೇಂದ್ರಿಯಗಳ ಸಹಾಯದಿಂದ ಮಾತ್ರ ದೇವನನ್ನು ಗ್ರಹಿಸಲು ಸಾಧ್ಯವಿಲ್ಲ. ದೇವನೆಂದು ಹೇಳುವ ಆ ಪರಮ ಸತ್ತೆ ಸ್ಪಷ್ಟವಾಗಿಯೂ ಅಲ್ಲದೆಯೂ ಪ್ರತ್ಯಕ್ಷಗೊಳ್ಳುವನಾದರೂ, ಸಾಧಾರಣ ಗತಿಯಲ್ಲಿ ಮಾಂಸಚಕ್ಷುಸ್ಸುಗಳಿಗೆ ಅನುಭವವೇದ್ಯವಾಗದೆ ಮರೆಯಲ್ಲಿರುತ್ತಾನೆ. ಈ ಪ್ರಪಂಚವು ದೇವನಿದ್ದಾನೆಂಬುದಕ್ಕೆ ಅನಿಷೇಧ್ಯವಾದ ಒಂದು ಪುರಾವೆಯಾಗಿ ಉದಾಹರಿಸಲ್ಪಡುತ್ತದೆ. ಪ್ರಪಂಚದಲ್ಲೆಲ್ಲೂ ಗೋಚರವಾಗುವ ಪರಿಪೂರ್ಣವಾದ ವ್ಯವಸ್ಥೆ ಮತ್ತು ಅನ್ಯೂನವಾದ ಏರ್ಪಾಡು, ಪ್ರಪಂಚದ ಸೃಷ್ಟಿಕರ್ತನಾದ ಒಬ್ಬ ದೇವನಿರಬೇಕೆಂಬ ಅಥವಾ ಇರಬಹುದೆಂಬ ಒಂದು ಊಹೆಯೆಡೆಗೆ ನಮ್ಮನ್ನು ಕೊಂಡೊಯ್ಯುತ್ತದೆ. ಆದರೂ ಅದು ಸೃಷ್ಟಿಕರ್ತನಿಗೆ ಸಂಬಂಧಿಸಿದ ಒಂದು ನಿಶ್ಚಯ ಜ್ಞಾನದೆಡೆಗೂ ದೃಢ ವಿಶ್ವಾಸದೆಡೆಗೂ ಕೊಂಡೊಯ್ಯಲು ಪರ್ಯಾಪ್ತವಲ್ಲ. ಸಕಲಕ್ಕೂ ಅಂತಿಮ ಕಾರಣನಾಗಿರುವ ಆ ಅನಶ್ವರ ಶಕ್ತಿಯ ಇರುವಿಕೆಗೆ ಇಂತಹ ಊಹೆಗಳು ಸೂಚಿಪಲಕಗಳಾಗಿ ನಿಲ್ಲುತ್ತವೆ ಎಂದು ಹೇಳಬಹುದು. ಹಾಗೆಯೇ ಅದ್ಭುತಕರವಾದ ಕ್ರಮದಲ್ಲಿ ಪ್ರವರ್ತಿಸುತ್ತಿರುವ ಪ್ರಪಂಚ ಈ ದಾರಿಯಲ್ಲಿ ಬೆಳಕು ಬೀರುವ ದೃಷ್ಟಾಂತಗಳಾಗಿವೆ. ಅಸಂಖ್ಯಾತ ಆಕಾಶಗೋಳಗಳ ಮತ್ತು ನಕ್ಷತ್ರಜಾಲಗಳ ಸುವ್ಯವಸ್ಥಿತವಾದ ಪ್ರವರ್ತನೆಯನ್ನು ಕಾಣುವಾಗ ಚಿಂತನಾಶೀಲನಾದ ಮನುಷ್ಯನ ಮನಸ್ಸಿನಲ್ಲಿ ಉದಿಸಿಯೇಳುವ ವಿಚಾರಧಾರೆ ಅವನನ್ನು ಚಕಿತಗೊಳಿಸಿ ಪ್ರಪಂಚದ ಕರ್ತನಾಗಿ ಒಬ್ಬನಿರಬೇಕೆಂಬ ಅಭಿಮತದೆಡೆಗೆ ಅವನನ್ನು ಕೊಂಡೊಯ್ಯುತ್ತದೆ. ಆದರೆ ಇದು ಯಾವುದೂ ಪ್ರಪಂಚದ ಒಡೆಯನ ಕುರಿತು ದೃಢ ವಿಶ್ವಾಸ ಅವನಲ್ಲಿ ಮೂಡುವಂತೆ ಮಾಡಲು ಪರ್ಯಾಪ್ತವಲ್ಲ. ದೇವನಿದ್ದಾನೆಂದೂ ಅವನ ಶಕ್ತಿ ಎಲ್ಲಾ ವಸ್ತುಗಳಲ್ಲೂ ವ್ಯಾಪಿಸಿಕೊಂಡಿದೆಯೆಂದೂ ಇರುವ ಅಸಂದಿಗ್ಧವಾದ ವಿಶ್ವಾಸ ಮೂಡುವಂತೆ ಮಾಡಲು ಕೇವಲ ಜಗತ್ತಿನ ಮತ್ತು ಅದರ ವಸ್ತುಗಳ ಅಧ್ಯಯನ ಹಾಗೂ ನಿರೀಕ್ಷಣೆ ಮಾತ್ರ ಸಮರ್ಥವಲ್ಲ. ಉನ್ನತ ಶ್ರೇಣಿಯಲ್ಲಿರುವ ಖಗೋಳಶಾಸ್ತ್ರ ವಿದಗ್ಧರೂ ಮಹಾ ತತ್ವಚಿಂತಕರೂ ಭೌತಿಕ ಶಾಸ್ತ್ರವನ್ನು ಮಾತ್ರ ಅವಲಂಬಿಸಿ ಅವಿಶ್ರಾಂತ ಪರಿಶ್ರಮ ಮಾಡಿದರಾದರೂ ದೇವಾಸ್ತಿತ್ವದ ಬಗ್ಗೆ ಅವರು ಅತ್ಯಂತ ಅಸಂಬದ್ಧತೆ ಹಾಗೂ ತಪ್ಪುಭಾವನೆಯನ್ನು ಹೊಂದಿದ್ದಾರೆ. ಅಂತಹ ಭೌತಿಕ ಶಾಸ್ತ್ರಜ್ಞರ ಹಾಗೂ ದಾರ್ಶನಿಕರ ಅರಿವು ದೇವನಿದ್ದಾನೆಂಬ ವಾಸ್ತವಾಂಶವನ್ನು ಸಾಬೀತುಪಡಿಸಲು ಸಹಾಯಕವಾಗುವುದಾದರೂ ಅದು ಊಹಾಪೋಹಗಳೆಡೆಗೆ ಕೊಂಡೊಯ್ಯುವುದು ವಿನಾ ಸುನಿಶ್ಚಿತವಾದ ತೀರ್ಮಾನ ಕೈಗೊಳ್ಳುವಂತೆ ಮಾಡುವುದಿಲ್ಲ. ಸೂರ್ಯ ಚಂದ್ರಾದಿ ಗ್ರಹಗಳ ಮತ್ತು ಅಸಂಖ್ಯಾತ ನಕ್ಷತ್ರಗಳ ಸೃಷ್ಟಿ ಹಾಗೂ ಅವುಗಳ ಕ್ರಮಬದ್ಧ ಪ್ರವರ್ತನೆ, ಬೇರೆ ಅನೇಕ ಗ್ರಹಗಳ ನೆಲೆನಿಲ್ಲುವಿಕೆ, ಪ್ರಪಂಚವನ್ನು ನಿಯಂತ್ರಿಸುತ್ತಿರುವ ಅದ್ಭುತಕರವಾದ ನಿಯಮ ವ್ಯವಸ್ಥೆಗಳ ಅನ್ಯೂನತೆ ಎಲ್ಲವೂ ಮನುಷ್ಯನನ್ನು ಚಿಂತನಾಶೀ

ನನ್ನಾಗಿ ಮಾಡುವುದಲ್ಲದೆ, ಈ ಪ್ರಪಂಚದ ಕರ್ತನ ಬಗ್ಗೆ ಸುನಿಶ್ಚಿತವಾದ ವಿಶ್ವಾಸದಾರ್ಢ್ಯದೆಡೆಗೆ ಸಾಗಿಸಲು ಸಾಮರ್ಥ್ಯವುಳ್ಳದ್ದಾಗುವುದಿಲ್ಲ. ಬೇರೆ ಮಾತಿನಲ್ಲಿ ಹೇಳುವುದಾದರೆ, ಇವೆಲ್ಲವೂ ದೇವನೊಬ್ಬನಿರಬೇಕೆಂಬ ಊಹೆ ಮೂಡುವಂತೆ ಮಾಡಲು ಪರ್ಯಾಪ್ತವಷ್ಟೆ. ಅದೇ ಪ್ರಕಾರ, ಮನುಷ್ಯ ಶರೀರ ಮತ್ತು ಮನಸ್ಸಿನ ಅದ್ಭುತಕರವಾದ ರೀತಿಯಲ್ಲಿರುವ ರೂಪೀಕರಣ ಹಾಗೂ ಈ ಪ್ರಪಂಚದಲ್ಲಿ ಕಾಣಲ್ಪಡುವ ವಿಸ್ಮಯಕರವಾದ ವಿಶೇಷ ಶಕ್ತಿಗಳು ಎಲ್ಲವೂ ಸೃಷ್ಟಿಕರ್ತನೂ ನಿಯಾಮಕನೂ ಆದ ಒಬ್ಬ ದೇವನಿರಬೇಕೆಂಬ ಊಹೆಯೆಡೆಗೆ ಮಾತ್ರ ನಮ್ಮನ್ನು ಕೊಂಡೊಯ್ಯುತ್ತದೆ. ಈ ಊಹೆ ವಸ್ತುನಿಷ್ಠವಾದ ಸತ್ಯವನ್ನು ತೋರಿಸಿಕೊಡುವುದಿಲ್ಲ. ದೇವನನ್ನು ಹುಡುಕಿ ಹಿಡಿಯುವ ಬುದ್ಧಿಪರವೂ ವಿವೇಕಯುತವೂ ಆಗ ಮಾರ್ಗಗಳೆಲ್ಲವೂ ಆ ಪರಮಸತ್ಯವನ್ನು ಕಂಡುಹಿಡಿಯಲು ಸಂಪೂರ್ಣವಾದ ಹಾಗೂ ಸಕಲ ಸಂಶಯಗಳನ್ನು ದೂರೀಕರಿಸುವ ಮಾರ್ಗವಲ್ಲ. ಅದರ ಮೂಲಕ ವೈಚಾರಿಕವಾದ ಒಂದು ಆಸ್ತಿಕ ಪ್ರಜ್ಞೆ ಮಾತ್ರವೇ ಉಂಟಾಗಲು ಸಾಧ್ಯತೆಯಿದೆ. ಈ ಪ್ರಜ್ಞೆಯಾದರೋ ಒಬ್ಬ ಸತ್ಯಾನ್ವೇಷಿಯ ಆಧ್ಯಾತ್ಮಿಕ ತೃಷ್ಣೆಯನ್ನು ಶಮನಗೊಳಿಸಲು ಶಕ್ತವಾದ ಅಮೃತ ಪಾನೀಯವಲ್ಲ. ಮನುಷ್ಯನ ಅಂತರಾತ್ಮ ಕಾತರಗೊಂಡು ದರ್ಶಿಸಲು ಆಶಿಸುವ ಸಾಕ್ಷಾತ್ ಪರಮ ಸತ್ಯದ ಕುರಿತುಳ್ಳ ವಿಚಾರಾಧೀನವಾದ ಈ ಕೇವಲ ಪ್ರಜ್ಞೆ ಮನಸ್ಸಿಗೆ ಸಂತೃಪ್ತಿಯನ್ನಾಗಲಿ ಸಮಾಧಾನವನ್ನಾಗಲಿ ನೀಡಲು ಸಮರ್ಥವಲ್ಲ. ಪ್ರಕೃತಿಯ ಅಧ್ಯಯನ ಹಾಗೂ ವಿಚಾರ ವಿಚಿಂತನದ ಫಲವಾಗಿ ಸಿದ್ಧಿಸುವ ಈ ಪ್ರಜ್ಞೆ ದೈವಾಸ್ತಿತ್ವದ ಬಗ್ಗೆ ಅಪೂರ್ಣವಾದ ಅರಿವು ಮಾತ್ರವೇ ಆಗಿರುತ್ತದೆ. ಈ ಪರಿಮಿತವಾದ ತಿಳುವಳಿಕೆ ಎಂದಿಗೂ ಯಥಾರ್ಥವಾದ ದೈವಜ್ಞಾನವಾಗಲಾರದು. ಸಂದೇಹವೆಂಬ ಅಂಧಕಾರವನ್ನು ನೀಗಿಸಲು ಅದು ಪರ್ಯಾಪ್ತವೂ ಅಲ್ಲ.

ಒಟ್ಟಾರೆ, ಸರ್ವಶಕ್ತನಾದ ದೇವನು ಪ್ರಕೃತಿಯ ಅವನ ಕರ್ಮ ವೈಚಿತ್ರ್ಯಗಳಿಂದ ಸ್ವಯಂಪ್ರತ್ಯಕ್ಷನಾಗಿರುವ ಹಾಗೆಯೇ ತನ್ನ ವಚನಾಮೃತಗಳ ಮೂಲಕವೂ ಅವನ ಭಕ್ತದಾಸರಿಗೆ ಪ್ರಕಟಗೊಳ್ಳಬೇಕಾಗಿದೆ. ಹಾಗಿದ್ದರೆ ಮಾತ್ರವೇ ದೇವನ ಬಗ್ಗೆ ಸುದೃಢವಾದ 'ಇರುವಿಕೆ'ಯನ್ನು ನಮಗೆ ಒಪ್ಪಲು ಸಾಧ್ಯವಾಗುವುದು. ಪ್ರಕೃತಿಯ ಅವನ ಕರ್ಮವೈಚಿತ್ರ್ಯವನ್ನು ಮಾತ್ರ ಆಧಾರವಾಗಿಟ್ಟು ಅವನ ಅಸ್ತಿತ್ವದ ಕುರಿತು ಮಾಡುವ ಅನ್ವೇಷಣೆ ಎಂದಿಗೂ ಪರಿಪೂರ್ಣವಾಗಲಾರದು. ಅದೃಶ್ಯನಾದ ದೇವನು ತನ್ನ ಭಕ್ತದಾಸರಿಗೆ ಪ್ರಕಟಗೊಳ್ಳುವಾಗ ಮಾತ್ರವೇ ದೇವನೊಬ್ಬನಿದ್ದಾನೆಂಬ ಅರಿವೂ ವಿಶ್ವಾಸವೂ ಪರಿಪೂರ್ಣವಾಗುವುದು. ಹಾಗೆ ದೇವನ ಅಮೃತವಾಣಿ ಉಂಟಾಗುವಾಗ "ನಾನು ಇದ್ದೇನೆ" ಎಂಬ ಅವನ ದಿವ್ಯಶಬ್ದವು ಲೋಕದಲ್ಲೆಲ್ಲಾ ಪ್ರತಿಧ್ವನಿಸುತ್ತದೆ. ಆಗ ಬಲಹೀನರಾದ ಅವನ ಸೃಷ್ಟಿಗಳು ಅವನಿಂದ ಸಹಾಯ ಯಾಚಿಸಲು ಅವನನ್ನು ಸಮೀಪಿಸಿ ಅವನ ಅಭಯವನ್ನು ಬೇಡುತ್ತಾರೆ.

ದಿವ್ಯಾನುಭೂತಿಯಿಂದ ಮಾತ್ರವೇ ದೇವಾಸ್ತಿತ್ವದ ಕುರಿತು ಅಚಂಚಲವಾದ ವಿಶ್ವಾಸದಾರ್ಢ್ಯವು ಸಂಸಿದ್ಧವಾಗುವುದು ಎಂಬುದಾಗಿದೆ ಸತ್ಯ. ಅವಿಕಲವೂ ಅಚಂಚಲವೂ ಆದ ಪರಮಾರ್ಥ ಪ್ರಜ್ಞೆ ಕೇವಲ ಬುದ್ಧಿವಿಷಯಕವಾದ ವಿಚಾರ ಪ್ರದರ್ಶನದಿಂದ ಲಭ್ಯವಾಗದು. ಪ್ರಪಂಚದ ಯಾವುದಾದರೂ ಘಟನಾ ವೈಚಿತ್ರ್ಯವನ್ನು ನಿರೀಕ್ಷಿಸುವ ಮೂಲಕ ಸಿದ್ಧಿಸುವ ದೇವಾಸ್ತಿತ್ವ ಪ್ರಜ್ಞೆ ಅಪೂರ್ಣವಾದೊಂದು ಅರಿವು ಮಾತ್ರವಾಗಿದೆ. ಈ ಅರಿವು ದೇವನಿದ್ದಾನೆಂಬ ದೃಢವಿಶ್ವಾಸವನ್ನು ಮೂಡಿಸಲು ಪರ್ಯಾಪ್ತವಲ್ಲ. ಮಾತ್ರವಲ್ಲ, ಈ ಅನುಮಾನ ಜ್ಞಾನವನ್ನು ಪಡೆದ ಓರ್ವ ಚಿಂತಕನು ಚಿಂತನ ಮಾಡುತ್ತಲೇ ಇರುವ ಫಲವಾಗಿ ಅನಂತರ ಹೊಸತಾದ ಹಲವು ಸಂದೇಹಗಳು ಹುಟ್ಟುವುದರಿಂದ ಸಂದೇಹವಾದಿಯಾಗಲಿ ನಿಷೇಧವಾದಿಯಾಗಲಿ ಆಗಿ ಮಾರ್ಪಡಬಹುದು. ಏಕೆಂದರೆ ಸಂದೇಹಗಳನ್ನೆಲ್ಲಾ ಸಂಪೂರ್ಣವಾಗಿ ಹೋಗಲಾಡಿಸಲು ಸಮರ್ಥವಾದೊಂದು ದೃಢ ವಿಶ್ವಾಸವು ಅನುಮಾನಜ್ಞಾನದಿಂದ ಸಿದ್ಧಿಸಲಾರದು.

"ವಿಸ್ಮಯಕರವಾದ ವ್ಯವಸ್ಥೆಯಿಂದ ಕೂಡಿದ ಈ ಪ್ರಪಂಚಕ್ಕೆ ಒಬ್ಬ ಕರ್ತನಿರಬೇಕೆಂಬ ಅನುಮಾನಕ್ಕೂ ಯಥಾರ್ಥದಲ್ಲಿ ಅವನಿದ್ದಾನೆಂಬ ದೃಢಜ್ಞಾನಕ್ಕೂ ತಮ್ಮೊಳಗೆ ಬಹಳ ಅಂತರವಿದೆ. ಅನುಮಾನಜ್ಞಾನವಾದರೋ ಮನಸ್ಸಿಗೆ ಸರಿಯಾದ ಸಮಾಧಾನ ಮತ್ತು ಸಂತೃಪ್ತಿಯನ್ನು ನೀಡಲಿಕ್ಕಾಗಲಿ, ಸಂದೇಹಗಳನ್ನು

ಸಂಪೂರ್ಣವಾಗಿ ದೂರೀಕರಿಸಲಿಕ್ಕಾಗಲಿ ಪರ್ಯಾಪ್ತವಲ್ಲ. ದೇವನಿಗೆ ಸಂಬಂಧಿಸಿ ಪರಿಪೂರ್ಣವೂ ಪರಮಾರ್ಥವೂ ಆದ ಜ್ಞಾನಲಬ್ಧಿಗಾಗಿ ಮನುಷ್ಯನ ಸ್ವಾಭಾವಿಕವಾಗಿರುವ ದಾಹವನ್ನು ಶಮನಗೊಳಿಸಲಿಕ್ಕಾಗಲಿ ತದ್ವಿಷಯದಲ್ಲಿ ಅವನಲ್ಲುಂಟಾಗುವ ಸಂಶಯಗಳನ್ನು ನೀಗಿಸಲಿಕ್ಕಾಗಲಿ ಪರ್ಯಾಪ್ತವಾದ ಪಾನೀಯವಲ್ಲ ಅದು." (ಹಝ್ರತ್ ಅಹ್ಮದ್: "ಇಸ್ಲಾಂ ಮತ ತತ್ವ ಜ್ಞಾನ")

ಒಟ್ಟಾರೆ, ದಿವ್ಯಾನುಭೂತಿ ಮೂಲಕವಾಗಿದೆ ದೇವನ ಇರುವಿಕೆಯ ಕುರಿತು ಪರಿಪೂರ್ಣವಾದ ಅರಿವು ಸಿದ್ಧಿಸುವುದು. ಸಾವಿರಾರು ಪರಿಶುದ್ಧರು ಪೂರ್ವ ಕಾಲಗಳಲ್ಲಿ ದೇವವಚನವಾದ ಪ್ರಕಟನೆಗಳ ಮೂಲಕ ಅನುಗ್ರಹಿಸಲ್ಪಟ್ಟಿದ್ದಾರೆ. ಅಂತಹ ಮಹಾತ್ಮರುಗಳು ಅವರ ಅನುಭೂತಿಗಳ ಮೂಲಕ "ದೇವನಿದ್ದಾನೆ" ಎಂದು ಸಾಕ್ಷ್ಯವಹಿಸಿರುವರು. ಈ ಮಹಾಪುರುಷರುಗಳ ಆತ್ಮಾನುಭೂತಿ ದೇವಾಸ್ತಿತ್ವಕ್ಕೆ ತಕ್ಕುದಾದ ಸಾಕ್ಷ್ಯವಾಗಿದೆ. ವಿಚಾರಯುಕ್ತವಾದ ಭೌತಿಕ ಪುರಾವೆಗಳನ್ನು ಈ ಆಧ್ಯಾತ್ಮಿಕಾನುಭವಗಳು ಸ್ಥಿರೀಕರಿಸಿ ದೇವಾಸ್ತಿತ್ವವನ್ನು ಸಾಬೀತುಪಡಿಸುವ ಸಂಪೂರ್ಣ ಸಾಕ್ಷ್ಯಗಳಾಗಿ ನೆಲೆಗೊಳ್ಳುತ್ತವೆ. ಪ್ರವಾದಿಗಳೂ ಆಧ್ಯಾತ್ಮಿಕ ಗುರುಗಳಾದ ಯತಿವರ್ಯರುಗಳೆಲ್ಲಾ ದಿವ್ಯಾನುಭೂತಿ ತಮಗೆ ಸಿದ್ಧಿಸಿದೆಯೆಂದು ನುಡಿದು ತಮ್ಮ ದಿವ್ಯಾನುಭೂತಿಗಳೂ ತಮಗುಂಟಾದ ದರ್ಶನಗಳೂ ಪ್ರಕಟನೆಗಳೂ ದೇವಾಸ್ತಿತ್ವಕ್ಕೆ ಪುರಾವೆಗಳೆಂದು ಘೋಷಿಸಿದವರಾಗಿದ್ದಾರೆ. ಆ ಪುಣ್ಯಾತ್ಮರುಗಳ ಜೀವಿತಾನುಭವಗಳು ದೇವಾಸ್ತಿತ್ವವನ್ನು ಒಂದು ಸ್ಪಷ್ಟಸತ್ಯವೆಂದು ರುಜುಗೊಳಿಸಿ ಕಾಣಿಸಿ ಆಯಾಕಾಲದ ಜನರಿಗೆ ಈ ಪರಮಾರ್ಥವನ್ನು ಬೋಧಿಸಿಕೊಂಡು ಬಂದಿದ್ದಾರೆ. ಹೀಗೆ ಭೌತಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಇರುವ ಪುರಾವೆಗಳನ್ನು ಒಂದುಗೂಡಿಸುವಾಗ ದೇವಾಸ್ತಿತ್ವದ ಬಗೆಗಿನ ವಿಶ್ವಾಸ ಎಂದಿಗೂ ನಿರಾಕರಿಸಲು ಸಾಧ್ಯವಾಗದ ತರದಲ್ಲಿ ಬಲಗೊಳ್ಳುತ್ತದೆ.

ದೇವನ ಅಮೃತವಚನ ಮೂಲಕ ಕಳೆದ ಹಲವು ತಲೆಮಾರುಗಳಿಗೆ ಸೇರಿದ ಸಜ್ಜನರು ಅನುಗ್ರಹೀತರಾಗಿ, ಅವನ ಸರಿಯಾದ ಶಬ್ದ ಮೂಲಕ ಅವರು ದೇವಾಸ್ತಿತ್ವವನ್ನು ಅನುಭವಿಸರಿತ್ತಿದ್ದರೆಂದು ಒಪ್ಪಬಹುದಾದರೂ ಅಂತಹ ಅನುಭೂತಿಗಳೇನೂ ಆಧುನಿಕ ಕಾಲದಲ್ಲಿ ಸಿದ್ಧಿಸುವುದಿಲ್ಲವೆಂದು ಯಾರಾದರೂ ವಾದಿಸುವರಾದರೆ ಆ ಅಭಿಪ್ರಾಯಕ್ಕೆ ಬೆಲೆಕೊಡಲಾಗದು. ಹಾಗೆ ಕೆಲವರು ವಾದಿಸುವುದಾಗಲಿ ಭಾವಿಸುವುದಾಗಲಿ ಮಾಡುವುದಾದರೆ ಆ ಅಭಿಪ್ರಾಯ ತಪ್ಪು ಹಾಗೂ ಆಧಾರರಹಿತವಾಗಿದೆ. ಸನಾತನಾದ ದೇವನು ಪೂರ್ವಕಾಲಗಳಲ್ಲಿ ತನ್ನ ಭಕ್ತದಾಸರೊಡನೆ ಮಾತನಾಡಿಕೊಂಡಿರುತ್ತಿದ್ದರೆ ಅವನು ವರ್ತಮಾನ ಕಾಲದಲ್ಲೂ ಮಾತನಾಡುತ್ತಿದ್ದಾನೆ. ಪ್ರಾಮಾಣಿಕವಾಗಿಯೂ ಹೃತ್ಪೂರ್ವಕವಾಗಿಯೂ ಅವನನ್ನು ಅನ್ವೇಷಿಸುವ ಭಕ್ತಜನರನ್ನು ತನ್ನ ಪವಿತ್ರ ವಚನಾಮೃತಗಳಿಂದ ಅನುಗ್ರಹಿಸುತ್ತಲೂ ಇದ್ದಾನೆ. ದೇವಪ್ರೀತಿಗೆ ಪಾತ್ರರಾಗುವ ಭಕ್ತದಾಸರು ಅವರವರ ಆಧ್ಯಾತ್ಮಿಕ ಮಟ್ಟವನ್ನನುಸರಿಸಿ ದಿವ್ಯವಚನಾಮೃತವೆಂಬ ಊಟೆಯಿಂದ ತೃಪ್ತಿಯುಂಟಾಗುವಷ್ಟು ಪಾನಮಾಡುತ್ತಾರೆ. ದೈವಿಕ ಪ್ರಚೋದನೆಗಳ ಮೂಲಕವೂ ದೈವಿಕ ವಚನಗಳ ಮೂಲಕವೂ ಸಜ್ಜನರು ಅನುಗ್ರಹಿಸಲ್ಪಟ್ಟಿರುತ್ತಾರೆ. ಈ ಬಗೆಯ ಅನುಗ್ರಹದ ಕವಾಟ ಇಂದು ಸಹ ತೆರೆದಿರಿಸಲ್ಪಟ್ಟಿದೆ. ಸದ್ಧರ್ಮಿಗಳಾದ ಅನುಗ್ರಹೀತ ದಾಸರು ಇಂದು ಸಹ ದೇವಾನುಗ್ರಹಗಳನ್ನು ಪೂರ್ವಕಾಲದ ಅವನ ಯಥಾರ್ಥ ಭಕ್ತದಾಸರು ಅನುಭವಿಸಿಕೊಂಡಿದ್ದಂತೆಯೇ ಅನುಭವಿಸುತ್ತಿದ್ದಾರೆ. ದೇವಾಸ್ತಿತ್ವ ಕುರಿತ ಅನುಭವಯುತವೂ ಅಚಂಚಲವೂ ಆದ ಈ ಅರಿವು ದೈವಿಕ ಪ್ರಕಟನೆ ಮೂಲಕ ಲಭ್ಯವಾಗುತ್ತದೆ. ಈ ಅನುಭೂತಿಯು ದೇವವಿಶ್ವಾಸವನ್ನು ಸುದೃಢಗೊಳಿಸಲು ಪರ್ಯಾಪ್ತವಾಗಿದೆ.

ದೇವಾಸ್ತಿತ್ವದ ಬಗ್ಗೆ ಸರಿಯಾದ ಜ್ಞಾನ ಲಭಿಸಲಿಕ್ಕೆ ಪವಿತ್ರ ಖುರ್ಆನ್ ನಮಗೆ ಎರಡು ಮಾರ್ಗಗಳನ್ನು ತೋರಿಸಿಕೊಟ್ಟಿದೆ. ಒಂದನೆಯದಾಗಿ, 'ದೇವನಿದ್ದಾನೆ' ಎಂಬುದಕ್ಕೆ ಭೌತಿಕವಾದ ಪುರಾವೆಗಳು ಬುದ್ಧಿಗೂ ವಿಚಾರಕ್ಕೂ ಅನುಸಾರವಾಗಿ ಪ್ರಕೃತಿಯಲ್ಲಿ ತೋರ್ಪಡುವ ನಿಯಮಗಳಿಂದ ಲಭ್ಯವಾಗುವ ವೈಚಾರಿಕ ಅರಿವು. ಎರಡನೆಯದಾಗಿ ಆ ಪವಿತ್ರ ಗ್ರಂಥ ತೋರಿಸಿಕೊಡುವುದು ಆಧ್ಯಾತ್ಮಿಕ ಮಾರ್ಗವಾಗಿದೆ. ಎಂದರೆ, ದೈವಿಕ ಪ್ರಕಟನೆ ಮತ್ತು ಆಧ್ಯಾತ್ಮಿಕ ಸಂಬಂಧ ಮೂಲಕದ ಪ್ರಚೋದನೆಯನ್ನು ದೇವಾಸ್ತಿತ್ವದ ಪುರಾವೆಯಾಗಿ ಪವಿತ್ರ ಖುರ್ಆನ್ ಮುಂದಿಡುತ್ತದೆ.

ಈ ದಿವ್ಯಾನುಭೂತಿ ಮುಖೇನ ದೇವಾಸ್ತಿತ್ವ ಕುರಿತು ಸಿದ್ಧಿಸುವಂತಹ ಪರಿಪೂರ್ಣ ಜ್ಞಾನದ ಬಗ್ಗೆ ಅಹ್ಮದಿಯಾ ಸಂಘಟನೆಯ ಸಂಸ್ಥಾಪಕರಾದ ಹಝ್ರತ್ ಅಹ್ಮದ್‌ರವರು ಹೇಳುವುದು ಈ ಸಂದರ್ಭದಲ್ಲಿ ಗಮನಾರ್ಹವಾಗಿದೆ:

"ಪ್ರಕೃತಿಯಲ್ಲಿ ಗೋಚರಿಸಲ್ಪಡುವ ಕಾರ್ಯವಿಧಾನದಿಂದ ಸರ್ವಶಕ್ತನಾದ ದೇವನ ಅಸ್ತಿತ್ವ ಸ್ಪಷ್ಟಗೊಳ್ಳುವ ರೀತಿಯಲ್ಲೇ ಅವನು ವಚನಗಳ ಮೂಲಕವೂ ತನ್ನ ಇರುವಿಕೆಯನ್ನು ತನ್ನ ಭಕ್ತದಾಸರಿಗೆ ಅಭಿವ್ಯಕ್ತಿಗೊಳಿಸದಿದ್ದರೆ, ಕೇವಲ ಅವನ ಕರ್ಮಕುಶಲತೆಯನ್ನು ಕಂಡು ವೈಚಾರಿಕ ಆಸ್ತಿಕ ಭಾವನೆಯನ್ನು ಹೊಂದುವುದು ತೃಪ್ತಿಕರವಾಗಲಾರದು. ಉದಾಹರಣೆಗಾಗಿ, ಒಂದು ಕೋಣೆಯ ಬಾಗಿಲುಗಳೆಲ್ಲಾ ಒಳಗಿನಿಂದ ಮುಚ್ಚಲ್ಪಟ್ಟು ಕಾಣುವ ಪಕ್ಷದಲ್ಲಿ ಅವುಗಳನ್ನು ಒಳಗಿನಿಂದ ಮುಚ್ಚಿದ ಒಬ್ಬನು ಅಲ್ಲಿರಬೇಕೆಂದು ನಾವು ಭಾವಿಸುತ್ತೇವೆ. ಕಾರಣವೇನೆಂದರೆ ಒಳಗಿನ ಚಿಲಕ ಹೊರಗಿನಿಂದ ಹಾಕಲು ಸಾಧ್ಯವಿಲ್ಲವಷ್ಟೆ. ಆದರೆ ವರ್ಷಗಳು ಕಳೆದರೂ ಆ ಕೋಣೆಯಿಂದ ಯಾವ ಶಬ್ದವೂ ಕೇಳದಿದ್ದರೆ, ಹೊರಗಿನಿಂದ ಪುನಃ ಪುನಃ ಕರೆದರೂ ಯಾವ ಉತ್ತರವೂ ಲಭಿಸದಿದ್ದರೆ, ಅದರೊಳಗೆ ಯಾರೋ ಇದ್ದಾರೆಂಬ ವಿಚಾರವನ್ನು ನಾವು ಬದಲಾಯಿಸಬೇಕಾಗುತ್ತದೆ. ಮಾತ್ರವಲ್ಲ, ಅದರೊಳಗೆ ಯಾರೂ ಇಲ್ಲವೆಂದೂ ಅಜ್ಞಾತವಾದ ಯಾವುದೋ ಕಾರಣವಶಾತ್ ಒಳಗಿನ ಚಿಲಕ ಬಿದ್ದಿರಬೇಕೆಂದೂ ನಾವು ಅಭಿಪ್ರಾಯಪಡುತ್ತೇವೆ. ಈ ಪ್ರಪಂಚದ ಕರ್ತನಾದ ದೇವನ ಅಸ್ತಿತ್ವದ ಕುರಿತು ತತ್ವಶಾಸ್ತ್ರಜ್ಞರ ಅನ್ವೇಷಣೆ ಕೇವಲ ಪ್ರಕೃತಿಯ ಕರ್ಮಕೌಶಲ್ಯವೆಂಬ ಒಂದೇ ವಿಷಯವನ್ನು ಅವಲಂಬಿಸಿರುವುದರಿಂದ ಅವರಿಗುಂಟಾದ ಅನುಭವ ಸಹ ಇದೇ ಆಗಿದೆ. ಮಹಾಮಹಿಮನೂ ಜೀವಂತನೂ ಆಗಿರುವ ದೇವನನ್ನು, ಆಗೆದು ನೋಡಿದಾಗ ಮಣ್ಣಿನಡಿಯಲ್ಲಿ ಮಾತ್ರ ಕಾಣಬಹುದಾದ ಶವಶರೀರದಂತೆ ತಿಳಿದುಕೊಳ್ಳುವುದು ಮಹಾದೊಡ್ಡ ಪ್ರಮಾದವಾಗಿದೆ. ದೇವಾಸ್ತಿತ್ವ ಲೋಕಕ್ಕೆ ಬಹಿರಂಗವಾಗಲಿಕ್ಕೆ ಮನುಷ್ಯನ ಸಹಾಯ ಮತ್ತು ಪ್ರಯತ್ನ ಅಗತ್ಯವೆಂದಾದರೆ ನಾವು ಅವನ ಮೇಲಿಟ್ಟಿರುವ ಪ್ರತ್ಯಾಶೆಗಳೆಲ್ಲಾ ವ್ಯರ್ಥ. ಆದರೆ ಅನಾದ್ಯಂತನಾದ ದೇವನು ಆದಿಕಾಲದಿಂದಲೇ ತನ್ನ ಸ್ಪಷ್ಟ ಹಾಗೂ ಅನುಗ್ರಹದಾಯಕ ವಚನಗಳ ಮೂಲಕ ತನ್ನ ಇರುವಿಕೆಯನ್ನು ಬಹಿರಂಗಪಡಿಸಿ ಜನರನ್ನು ತನ್ನೆಡೆಗೆ ಕರೆಯುತ್ತಿದ್ದಾನೆ......... ಪೂರ್ವಕಾಲಗಳಲ್ಲಿ ದೇವನು ಮನುಷ್ಯರೊಡನೆ ಮಾತನಾಡುತ್ತಲೂ ತನ್ನ ಕುರಿತು ಅವರಿಗೆ ಅರಿವು ನೀಡುತ್ತಲೂ ಇದ್ದರೂ ಈಗ ಅವನು ಮಾತಾಡುವುದಿಲ್ಲವೆಂದು ಹೇಳುವುದು ಆಧಾರರಹಿತವಾಗಿದೆ. ಅವನ ಸಂಭಾಷಣೆ, ಸಂಬೋಧನೆ ಇತ್ಯಾದಿಗಳು ಯಾವುದಾದರೂ ಒಂದು ಪ್ರತ್ಯೇಕ ಕಾಲಕ್ಕೆ ಸೀಮಿತಗೊಂಡಿರುವುದು ಅಸಾಧ್ಯ. ಪೂರ್ವಕಾಲಗಳಲ್ಲಿ ಮಾತನಾಡುತ್ತಿದ್ದ ದೇವನು ಈಗಲೂ ಮಾತನಾಡುತ್ತಲೂ ಅವನನ್ನು ಅನ್ವೇಷಿಸುತ್ತಿರುವ ಭಕ್ತದಾಸರಿಗೆ ತನ್ನ ವಚನಗಳಿಂದ ಅನುಗ್ರಹಿಸುತ್ತಲೂ ಇದ್ದಾನೆ. ಅವನ ವರಪ್ರಸಾದಗಳ ಕವಾಟಗಳು ಪೂರ್ವಕಾಲಗಳಂತೆಯೇ ಈಗಲೂ ತೆರೆದಿರಿಸಲ್ಪಟ್ಟಿವೆ." (ಇಸ್ಲಾಂ ಮತ ತತ್ವಜ್ಞಾನ)

(ಸಶೇಷ)


# "ಯುಗರಶ್ಮಿ"ಗೆ ಚಂದಾದಾರರಾಗಿರಿ

ವಾರ್ಷಿಕ ಚಂದಾದರ : ರೂ. 8–00 (ಅಂಚೆ ಮೂಲಕ)

## ಇಸ್ಲಾಂ ಮತ್ತು ವಿಜ್ಞಾನ* – 5

# ಅಲ್ಲಾಹನ ವಚನಗಳು ಕೊನೆಗೊಳ್ಳುವಂತಿಲ್ಲ

—ಡಾ। ಅಬ್ದುಸ್ಸಲಾಂ

ತಾಂತ್ರಿಕ ವಿದ್ಯೆಯಲ್ಲಿ ಅತ್ಯಂತ ಉನ್ನತವಾದ ಪ್ರಾವೀಣ್ಯ ಗಳಿಸುವುದಕ್ಕೆ ನಮ್ಮ ಮುಂದೆ ಇರುವ ತಡೆಗಳು ಯಾವುವು? ಮುಖ್ಯವಾಗಿ ಅತ್ಯಂತ ಆಧುನಿಕವಾದ ಉನ್ನತ ವೈಜ್ಞಾನಿಕ ವಿದ್ಯೆಯನ್ನು ಗಳಿಸಲು ಅಡ್ಡಿ ಆತಂಕಗಳು ಯಾವುವು? ಏನೇ ಆಗಲಿ, ಕಳೆದ ಒಂದು ದಶಾಬ್ದ ಕಾಲದಲ್ಲಿ ಅರಬ್ ರಾಜ್ಯಗಳಲ್ಲಿ ತಾಂತ್ರಿಕ ಸೌಕರ್ಯಗಳನ್ನು ಸ್ಥಾಪಿಸಲಿಕ್ಕೆ ನಡೆದ ಪ್ರಯತ್ನಗಳು ಗಮನಾರ್ಹ. ಇಷ್ಟು ಅಲ್ಪ ಕಾಲದೊಳಗೆ ಇಷ್ಟು ದೊಡ್ಡ ಮಟ್ಟದಲ್ಲಿ ಧನವನ್ನೂ ಪರಿಶ್ರಮವನ್ನೂ ತೊಡಗಿಸಿದ ಸಂಭವ ಮಾನವ ಚರಿತ್ರೆಯಲ್ಲಿ **ಇದಕ್ಕೆ** ಮುಂಚೆ ಘಟಿಸಲಿಲ್ಲ.

1978ರ ವರೆಗೆ ಅರಬ್ ರಾಜ್ಯಗಳು ಪರಸ್ಪರವೂ ಅರಬ್ ರಾಜ್ಯಗಳು ಬೇರೆ ರಾಜ್ಯಗಳೊಂದಿಗೆ ಸೇರಿಕೊಂಡೂ ಬೃಹತ್ ತಾಂತ್ರಿಕ ಕರಾರುಗಳಿಗೋಸ್ಕರ 45,00,000 ಕೋಟಿ ರೂಪಾಯಿಗಳನ್ನು ವ್ಯಯಿಸಿವೆಯೆಂದು ಸಹ್ಲಾನ್ ಬೊಟ್ಟುಮಾಡಿದ್ದಾರೆ. ಹೈಡ್ರೋಕಾರ್ಬನ್, ಪೆಟ್ರೋ ಕೆಮಿಕಲ್ಸ್ (1,80,000 ಕೋಟಿ), ಸಿವಿಲ್ ನಿರ್ಮಾಣ, ಟ್ರಾನ್ಸ್‌ಪೋರ್ಟ್ (1,00,000 ಕೋಟಿ), ಉಕ್ಕು, ಔಷಧ ತಯಾರಿ, ಗೊಬ್ಬರ ಉತ್ಪಾದನೆ ಮುಂತಾದ ಕಾರ್ಖಾನೆಗಳು (50,000 ಕೋಟಿ) ಇತ್ಯಾದಿಗಳ ಕರಾರು ಇದರಲ್ಲಿ ಸೇರುತ್ತದೆ.

ದೌರ್ಭಾಗ್ಯವಶಾತ್, ಇವುಗಳಲ್ಲಿ ಹೆಚ್ಚಿನ ಯೋಜನೆಗಳು, ತಾಂತ್ರಿಕ ವಿದ್ಯೆಗಳನ್ನು ಅರಬ್ ರಾಷ್ಟ್ರಗಳಿಗೆ ಒದಗಿಸದೆ, ಸಂಪೂರ್ಣವಾಗಿ ಪಾಶ್ಚಾತ್ಯ ರಾಜ್ಯಗಳು ನಿರ್ಮಿಸಿ ತಂದು ಸ್ಥಾಪಿಸಿದ್ದಾಗಿವೆ. ಇವುಗಳ ನಿರ್ಮಾಣದಲ್ಲಾಗಲಿ ಆಡಳಿತದಲ್ಲಾಗಲಿ, ಕೆಲಸದಲ್ಲಾಗಲಿ ಅರಬಿಗಳಿಗೆ ಪಾಲಿರಲಿಲ್ಲ. 1976ರಲ್ಲಿ ತೈಲ ರಾಸಾಯನಿಕ ಕ್ಷೇತ್ರದಲ್ಲಿ ಜಾರಿಗೆ ಬಂದ 584 ಯೋಜನೆಗಳನ್ನು 83 ಅಂತಾರಾಷ್ಟ್ರೀಯ ಸಂಸ್ಥೆಗಳು ನಿರ್ಮಿಸಿ ನಡೆಸಿದುವೆಂದು **ಸಹ್ಲಾನ್ ಬಹಿರಂಗಗೊಳಿಸುತ್ತಾರೆ.** 16 ಯೂರಿಯಾ ಉತ್ಪಾದಕಾ ಕಾರ್ಖಾನೆಗಳ ಒಪ್ಪಂದಗಳಿದ್ದವು. ಒಂದೊಂದರಂತೆ, ಅಲ್ಜೀರಿಯಾ, ಈಜಿಪ್ಟ್, ಲಿಬಿಯ, ಸೌದಿ ಅರೇಬಿಯಾ, ಸುಡಾನ್, ಸಿರಿಯಾ, ಯು. ಎ. ಇ. ಎಂಬೀ ರಾಜ್ಯಗಳಲ್ಲೂ ಎರಡೆರಡರಂತೆ, ಇರಾಕ್, ಖತರ್ ಎಂಬೀ ರಾಜ್ಯಗಳಲ್ಲೂ ನಾಲ್ಕನ್ನು ಕುವೈತ್‌ನಲ್ಲೂ **ಸ್ಥಾಪಿಸಲಾಯಿತು. ಇಷ್ಟಾದರೂ** ಇಂದು ಸಹ, ಇವುಗಳ ಪೈಕಿ ಯಾವುದೇ ರಾಜ್ಯಕ್ಕಾಗಲಿ ಅರಬ್ ಲೋಕದ ಎಲ್ಲಾ ರಾಷ್ಟ್ರಗಳು ಒಂದುಗೂಡಿಯಾಗಲಿ, ಈ ತರದ ಒಂದು ಯೂರಿಯಾ ಉತ್ಪಾದಕಾ ಕಾರ್ಖಾನೆಯನ್ನಾಗಲಿ, ತೈಲಾಗಾರವನ್ನಾಗಲಿ ರೂಪಗೊಳಿಸಲಿಕ್ಕಾಗಲಿ, ಸ್ಥಾಪಿಸಲಿಕ್ಕಾಗಲಿ, ನಿರ್ಮಾಣ ಕೆಲಸ ಮಾಡಲಿಕ್ಕಾಗಲಿ, ಅಗತ್ಯ ಬಿದ್ದರೆ ಇವುಗಳ ತಾಂತ್ರಿಕ ವಿದ್ಯೆಯನ್ನು ಆಧುನೀಕರಿಸಲಿಕ್ಕಾಗಲಿ ಬೇಕಾದ ತಂತ್ರಜ್ಞಾನದ ಸಾಮರ್ಥ್ಯವಿಲ್ಲ.

### ಜಪಾನ್ ಮಾದರಿ

ಅದೇ ಸಮಯ, ಅರಬ್ ರಾಷ್ಟ್ರಗಳಿಗೆ ಹೆಚ್ಚು ಕಮ್ಮಿ ತುಲ್ಯವಾಗಿ ಜನಸಂಖ್ಯೆಯುಳ್ಳ ಹಾಗೂ ಪೆಟ್ರೋ ಕೆಮಿಕಲ್ಸ್ ತಂತ್ರಜ್ಞಾನ ರಂಗದಲ್ಲಿ 20 ವರ್ಷ ಮುಂಚೆ ಮಾತ್ರ ಪ್ರವೇಶಿಸಿದ ಜಪಾನನ್ನು ನೋಡಿರಿ. ಆರಂಭದಲ್ಲೇ ಪೆಟ್ರೋ ಕೆಮಿಕಲ್ಸ್ ಸ್ಥಾವರಗಳು ಆಮದು ಮಾಡಬೇಕೆಂದು ಜಪಾನ್ ತೀರ್ಮಾನಿಸಿತು. ಕಳೆದ 20 ವರ್ಷದಲ್ಲಿ ಜಪಾನಿನಲ್ಲಿ ನಿರ್ಮಿಸುವ ಪೆಟ್ರೋ ಕೆಮಿಕಲ್ ಸ್ಥಾವರಗಳ ಮೂರರಲ್ಲಿ ಒಂದನ್ನು ಆಮದು ಮಾಡಲಾಗುತ್ತದೆ. ಜಪಾನಿಗೆ ಅದಕ್ಕೆ ಬೇಕಾದ ಮಾನಸಿಕ

* ಮಾತೃಭೂಮಿ, ಮೇ 14–18, 1986.

ಸಿದ್ಧತೆ ಇತ್ತು; ಸಮರ್ಥರಾದ ಜನರಿದ್ದರು. ಒಂದು ನಿರ್ದಿಷ್ಟ ತಾಂತ್ರಿಕ ರಂಗದಲ್ಲಿ ತಜ್ಞರಿಲ್ಲವಾದರೆ, ಕೂಡಲೇ ಅಂತಹವರನ್ನು ಸಿದ್ಧಗೊಳಿಸುವ ಏರ್ಪಾಡನ್ನು ಅಲ್ಲಿ ಮಾಡಲಾಗುತ್ತದೆ. ಹಾಗೆ ಶಿಕ್ಷಣ ಪಡೆದವರು ತಾವೇನು ಮಾಡಬೇಕೆಂದು ಬಲ್ಲರು. ಯಾವಾಗ ವಿದೇಶಗಳಿಂದ ತಂತ್ರಜ್ಞಾನವನ್ನು ಕಲಿತು ತರಬೇಕೆಂದು ಅವರಿಗೆ ಗೊತ್ತಿದೆ.

ಸರಕಾರದ ಅಲಕ್ಷ್ಯ ಕಾರಣದಿಂದ ಈ ವಿಚಾರಗಳಲ್ಲಿ ಇಸ್ಲಾಮಿ ರಾಷ್ಟ್ರಗಳು ಹೇಗೆ ಹಿಂದಕ್ಕೆ ತಳ್ಳಲ್ಪಟ್ಟವು ಎಂದು ತೋರಿಸಲು ಒಂದು ಉದಾಹರಣೆಯನ್ನು ಹೇಳಬಹುದು. 1800ನೇ ಇಸವಿಯಲ್ಲಿ ಇಸ್ತಾಂಬುಲಿನ ಅಂದಿನ ಬ್ರಿಟಿಷ್ ಅಂಬಾಸಿಡರ್ ವಿಲಿಯಂ ಈಟ್ಟನ್ ಅಲ್ಲಿಯ ವಿಜ್ಞಾನ–ತಂತ್ರಜ್ಞಾನದ ಸ್ಥಿತಿಯ ಕುರಿತು ಹೀಗೆ ಬರೆದರು:

"ಹಡಗು ಓಡಿಸುವ ಬಗ್ಗೆಯಾಗಲಿ ಅಯಸ್ಕಾಂತವನ್ನು ಉಪಯೋಗಿಸುವ ಕುರಿತಾಗಲಿ ಯಾರಿಗೂ ಏನೂ ತಿಳುವಳಿಕೆ ಇಲ್ಲ. ವಿಕಸನ ಮತ್ತು ಪ್ರಗತಿಯ ಪ್ರಧಾನ ಮಾರ್ಗವಾದ ಸಂಚಾರವು ಕಠಿಣವಾದ ಧರ್ಮಗರ್ವದಿಂದ ಪೂರ್ಣವಾಗಿ ನಿಯಂತ್ರಿಸಲ್ಪಟ್ಟಿದೆ. ಅಧಿಕೃತ ಸ್ಥಾನಗಳಿಲ್ಲದ ಒಬ್ಬನು ವಿದೇಶಿಯರೊಡನೆ ಸಂಪರ್ಕ ಹೊಂದುವುದನ್ನು ಅಸೂಯೆಯಿಂದ ವೀಕ್ಷಿಸಲಾಗುತ್ತದೆ......... ಹಾಗೆ ಸಾಮಾನ್ಯ ವಿಜ್ಞಾನದ ಬಗ್ಗೆ ತಿಳುವಳಿಕೆಯಿದ್ದ ವ್ಯಕ್ತಿ ಅಜ್ಞಾತನಾಗಿರುತ್ತಾನೆ. ಫಿರಂಗಿಯಾ ಹಡಗು ನಿರ್ಮಾಣ ಇತ್ಯಾದಿಗಳಲ್ಲಿ ತೊಡಗಿದವರನ್ನು ಭ್ರಾಂತರಂತೆ ಕಾಣಲಾಗುತ್ತದೆ." ಆಧುನಿಕ ಕಾಲದಲ್ಲಿ ಸಹ ಸಂಪೂರ್ಣ ಪ್ರಸ್ತುತವಾದ ಒಂದು ದುರಂತ ಸೂಚನೆಯೊಂದಿಗೆ ಈಟ್ಟನ್ ಹೀಗೆ ಉಪಸಂಹಾರ ಮಾಡುತ್ತಾರೆ:

"ಉತ್ಪಾದನೆಯ ಆಯಾಸಕರವಾದ ಹೊಣೆಗಾರಿಕೆಯಿಂದ ತಮ್ಮನ್ನು ಹೊರತುಪಡಿಸಿಕೊಂಡು ಉಪಯುಕ್ತ ಹಾಗೂ ಬೆಲೆಬಾಳುವ ಸರಕುಗಳನ್ನು ತಮಗೆ ತಲಪಿಸುವವರೊಡನೆ ವ್ಯಾಪಾರ ಮಾಡಲು ಮಾತ್ರ ಅವರಿಗೆ ಆಸಕ್ತಿಯಿದೆ."

ಉತ್ಪಾದನೆಯಲ್ಲಿ ಸ್ವಯಂಪೂರ್ಣತೆಯನ್ನು ಗಳಿಸುವುದರ ಬಗ್ಗೆ ಅವಗಣನೆ ತೋರಿಸುವುದಕ್ಕೆ ಇಂದಿನ ಪ್ರಧಾನ ಕಾರಣವೇನು? ಇದಕ್ಕೆ ಉತ್ತರ, ಕೆಲವನ್ನು ಹೊರತುಪಡಿಸಿದರೆ, ಹೆಚ್ಚಿನ ಎಲ್ಲಾ ರಾಜ್ಯಗಳಲ್ಲೂ ಒಂದೇ ಬಗೆಯದ್ದಾಗಿದೆ. ತಾಂತ್ರಿಕ ರಂಗದ ಕುರಿತು ಯಾವುದೇ ಸಂಬಂಧವಿಲ್ಲದವರಾಗಿದ್ದಾರೆ ಆ ಬಗೆಗಿನ ನಿಯಮ–ನಿಬಂಧನೆಗಳನ್ನು ರೂಪೀಕರಿಸುವವರು. ಸೂತ್ರಧಾರಕರ ಮತ್ತು ಆಡಳಿತಾಧಿಕಾರಿಗಳ ಸ್ವರ್ಗವಾಗಿದೆ ನಮ್ಮ ರಾಜ್ಯಗಳು. ಆದರೆ ಇಲ್ಲಿ ತಂತ್ರಜ್ಞಾನ ವಿದಗ್ಧನಿಗೆ, ತೀರ್ಮಾನ ಮಾಡುವುದರಲ್ಲಿ ಪಾಲಿಲ್ಲ. ಉದಾಹರಣೆಗೆ, ಪಾಕಿಸ್ತಾನದಲ್ಲಿ ಹಿಂದಿನ ಮೂರು ವರ್ಷಗಳ ವರೆಗೆ ಯೋಜನಾ ಸಮಿತಿಯಲ್ಲಿ ವಿಜ್ಞಾನ–ತಂತ್ರಜ್ಞಾನ ವಿಭಾಗವಿರಲಿಲ್ಲ. ಇದಕ್ಕಿಂತಲೂ ಖೇದಕರವಾದ ವಿಚಾರವೇನೆಂದರೆ, ಬ್ರಿಟಿಷ್–ಇಂಡಿಯನ್ ಸಿವಿಲ್ ಸರ್ವೀಸ್ ಸಂಪ್ರದಾಯ ನೀಡಿದ ಕೆಲವು ತಪ್ಪು ತಿಳುವಳಿಕೆಗಳಾಗಿವೆ. ತೀರ್ಮಾನ ಮಾಡುವ ಸಾಮರ್ಥ್ಯ ತಾಂತ್ರಿಕ ತಜ್ಞನಿಗೆ ಇಲ್ಲವೆಂಬುದಾಗಿದೆ ಅವುಗಳಲ್ಲೊಂದು. ಇದಕ್ಕೆ ಕಾರಣ, ತಾಂತ್ರಿಕ ವಿದಗ್ಧನಿಗೆ "ವಿಶಾಲ ವೀಕ್ಷಣೆ" ಇಲ್ಲವಂತೆ!

ಸ್ವಯಂಪೂರ್ಣತೆಯಲ್ಲಿ ಅಧಿಷ್ಠಿತವಾದ ಪ್ರಗತಿ ಗಳಿಸಿದ ಜಪಾನ್, ಚೀನ, ಕೊರಿಯ, ಸ್ವೀಡನ್, ಫ್ರಾನ್ಸ್ ಎಂಬೀ ರಾಜ್ಯಗಳ ಸ್ಥಿತಿಯನ್ನು ನಾವು ಸಾಕಷ್ಟು ಗಮನಿಸಿಲ್ಲವೆಂದು ತೋರುತ್ತದೆ. ಇಲ್ಲೆಲ್ಲಾ ವಿಜ್ಞಾನಿ ಮತ್ತು ತಂತ್ರಜ್ಞಾನಿ ಸರಕಾರ ಮತ್ತು ಉದ್ಯಮದ ವಿಕಸನ ವ್ಯವಸ್ಥೆಯ ಚುಕ್ಕಾಣಿ ಹಿಡಿಯುವವರು. ತಮ್ಮೊಳಗಿನ ಸಂಪೂರ್ಣವಾದ ಐಕ್ಯ, ಅವರ ಪಾತ್ರ, ಪ್ರಾಮಾಣಿಕತೆ ಇತ್ಯಾದಿ ಸಾಕ್ಷಾತ್ಕರಿಸಲ್ಪಟ್ಟಿವೆ.

ಔದ್ಯಮಿಕ ಹಾಗೂ ವೈಜ್ಞಾನಿಕವಾದ ತಾಂತ್ರಿಕ ವಿದ್ಯೆಗಳಲ್ಲದೆ, ಕೃಷಿ, ಸಾಮಾನ್ಯ ಜನಾರೋಗ್ಯ, ಜೈವ ತಾಂತ್ರಿಕ ವಿದ್ಯೆ, ಶಕ್ತಿ ಸಂಪನ್ಮೂಲ, ವಿಜ್ಞಾನಾಧಿಷ್ಠಿತ ವಾರ್ತಾ ವಿನಿಮಯ, ಪ್ರತಿರೋಧ ಮೊದಲಾದ ಅನೇಕಾನೇಕ ರಂಗಗಳಿಗೆ ಸಂಬಂಧಿಸಿದ ವಿಜ್ಞಾನವಿದೆ. ಈ ರಂಗಗಳಲ್ಲೊಂದರಲ್ಲೂ–ಮುಖ್ಯವಾಗಿ ಪ್ರತಿರೋಧ ರಂಗದಲ್ಲಿ–ಕಥೆ ಏನೂ ವ್ಯತ್ಯಸ್ತವಲ್ಲವೆಂಬುದು ನಿರ್ಭಾಗ್ಯಕರ. ರಕ್ಷಣಾ ಅವಶ್ಯಕ್ಕಾಗಿ ಸಾಮಾಗ್ರಿಗಳನ್ನು

ವಿದೇಶಗಳಿಂದ ಆಮದುಮಾಡಿ ರಾಶಿಹಾಕಲು ಎಲ್ಲರೂ ತಯಾರು. ಆದರೆ, ರಕ್ಷಣಾ ಉಪಕರಣೋತ್ಪಾದನೆ, ರಕ್ಷಣಾ ತಾಂತ್ರಿಕ ಜ್ಞಾನ ಇತ್ಯಾದಿಗಳಿಗೆ ಯಾರೂ ಸಿದ್ಧರಿಲ್ಲ.

ಇಸ್ಲಾಮಿಕ ರಾಷ್ಟ್ರಗಳು ಎಂದಾದರೂ ಈ ನಿದ್ರೆಯಿಂದ ಎಚ್ಚರಗೊಳ್ಳುವುವೋ ಎಂದು ನೋವು ಕೂಡಿದ ಚಿಂತೆ ಹುಟ್ಟುತ್ತದೆ.

## ಉಪಸಂಹಾರ

ವಿಜ್ಞಾನ–ತಂತ್ರಜ್ಞಾನದ ಸೃಷ್ಟಿಗಾಗಿ ನಾನು ಇಷ್ಟರಮಟ್ಟಿಗೆ ಆವೇಶದಿಂದ ವಾದಿಸಲಿಕ್ಕೆ ಕಾರಣ ವೇನು? ತಿಳಿಯಲಿಕ್ಕಿರುವ ದಾಹವನ್ನು ಅಲ್ಲಾಹನು ನಮಗೆ ನೀಡಿರುವನು ಎಂಬುದು ಮಾತ್ರವಲ್ಲ ಇದಕ್ಕೆ ಕಾರಣ. ಇಂದಿನ ಪರಿಸ್ಥಿತಿಯಲ್ಲಿ ತಿಳುವಳಿಕೆಯೇ ಬಲವೆಂಬುದೂ ವೈಜ್ಞಾನಿಕ ಪ್ರಯೋಗ ಭೌತಿಕ ಪುರೋಗತಿಯ ಪ್ರಧಾನ ಮಾರ್ಗವಾದುದೂ ಮಾತ್ರವೇ ಅಲ್ಲ ಇದಕ್ಕೆ ಕಾರಣ.

ಈ ವಿಜ್ಞಾನದ ಬಹ್ವಂಶದ ಸೃಷ್ಟಿಕರ್ತರಾದ ಇತರ ರಾಷ್ಟ್ರಗಳ ಜನರು ನಮ್ಮೊಡನೆ ತೋರಿಸುವ ಅವಜ್ಞತೆಯನ್ನು ಅಂತಾರಾಷ್ಟ್ರ ಸಮುದಾಯದ ಒಬ್ಬ ಸದಸ್ಯನೆಂಬ ನೆಲೆಯಲ್ಲಿ ಅರಿತಿರುವುದಾಗಿದೆ ಇದಕ್ಕೆ ಒಂದು ಕಾರಣ. ಈ ಅಲಕ್ಷ್ಯಭಾವವನ್ನು ಅವರು ಮಾತಿನಲ್ಲಿ ಪ್ರಕಟಗೊಳಿಸುವುದಿಲ್ಲವಾದರೂ ಅದು ಇದೆಯೆಂಬುದರಲ್ಲಿ ಸಂದೇಹವಿಲ್ಲ.

ಕೆಲವು ವರ್ಷಗಳ ಮೊದಲು ಭೌತಶಾಸ್ತ್ರದಲ್ಲಿ ನೋಬಲ್ ಪ್ರಶಸ್ತಿಗಳಿಸಿದ ಓರ್ವ ಯುರೋಪಿಯನ್ ವಿಜ್ಞಾನಿ ನನ್ನೊಡನೆ ಹೇಳಿದ್ದನ್ನು ನಾನು ಜ್ಞಾಪಿಸುತ್ತೇನೆ:

"ಸಲಾಂ, ಮನುಷ್ಯನ ವಿಜ್ಞಾನ ಭಂಡಾರಕ್ಕೆ ಒಂದಂಶವಾದರೂ ಇಷ್ಟರ ವರೆಗೆ ಕೊಡುಗೆ ನೀಡದ ರಾಜ್ಯಗಳಿಗೆ ನಾವು ನೆರವಿತ್ತು ಅಲ್ಲಿನ ಜನರನ್ನು ಸಾಕಿ ಸಲಹಿ ಅವರ ಜೀವವುಳಿಸಬೇಕಾದುದು ಅವಶ್ಯವೆಂದು ನಿಮಗೆ ತೋಚುತ್ತದೆಯೇ?"

ಆತನು ಇದನ್ನು ಹೇಳಿರದಿದ್ದರೂ ಒಂದು ಆಸ್ಪತ್ರೆಯೊಳಗೆ ಹೋಗುವಾಗ ನನ್ನ ಸ್ವಾಭಿಮಾನಕ್ಕೆ ಬಹಳ ಧಕ್ಕೆಯುಂಟಾಗುತ್ತದೆ. ಕಾರಣವೇನೆಂದರೆ, ಪೆನ್ಸಿಲಿನ್‌ನಿಂದ ತೊಡಗಿ, ಇಂದಿನ ಯಾವುದೇ ಜೀವ ರಕ್ಷಾ ಔಷಧಿಯ ಉತ್ಪಾದನೆಯಲ್ಲಿ ಇಸ್ಲಾಮೀ ಸಮುದಾಯದ ಯಾವುದೇ ರಾಷ್ಟ್ರಕ್ಕೂ ಪಾಲಿಲ್ಲ. ನಮ್ಮ ಅನೇಕ ಧರ್ಮ ನಾಯಕರುಗಳಿಗೆ ಈ ವಿಚಾರ ತಿಳಿದಿತ್ತೆಂಬುದು ಖಚಿತ. ಆದ್ದರಿಂದಲೇ ಆಗಿರಬೇಕಲ್ಲವೇ, ಇಮಾಂ ಗಝ್ಝಾಲಿ ತನ್ನ ಮಹತ್ವಾದ ಇಹಾಯಉಲೂಮುದ್ದೀನ್ (ಧರ್ಮಾಧ್ಯಯನದ ಪುನರುಜ್ಜೀವನ) ಎಂಬ ಗ್ರಂಥದ ಪ್ರಥಮಾಧ್ಯಾಯದಲ್ಲಿ ಇಸ್ಲಾಮೀ ಸಮೂಹದ ವಿಕಾಸಕ್ಕೆ ಅವಶ್ಯಕವಾದ ಶಾಸ್ತ್ರಗಳಲ್ಲಾದರೂ (ವಿಶೇಷವಾಗಿ ಅವರು ವೈದ್ಯಶಾಸ್ತ್ರದ ಬಗ್ಗೆ ಹೇಳಿರುವರು) ಪರಿಣತಿ ಗಳಿಸುವರೆ ಮತ್ತು ಈ ವಿಜ್ಞಾನಗಳ ಸೃಷ್ಟಿಯ ಪ್ರಾಧಾನ್ಯತೆಗೆ ಒತ್ತುಕೊಟ್ಟಿದ್ದಾರೆ. ಅಂತಹ ಶಾಸ್ತ್ರಗಳನ್ನು ಗಹನವಾಗಿ ಅಧ್ಯಯನಮಾಡುವುದರ ಮತ್ತು ಅವುಗಳನ್ನು ವಿಕಾಸಗೊಳಿಸುವುದರ ಆವಶ್ಯಕತೆ ಸಮಾಜದ ಎಲ್ಲರ ಹೊಣೆಗಾರಿಕೆ ಎಂದು ಅವರು ಒತ್ತಿ ಹೇಳಿದರು. ಆದರೂ ಈ ಶಾಸ್ತ್ರದ ಪ್ರಯೋಗ ಇಡೀ ಸಮುದಾಯಕ್ಕೆ ಬೇಕಾಗಿ ಅದರ ಸದಸ್ಯರಲ್ಲಿ ಒಂದು ವಿಭಾಗದವರ ಮಾತ್ರ ಹೊಣೆಗಾರಿಕೆಯಾಗಿರಬೇಕೆಂದೂ ಅಲ್ಲವಾದರೆ ಇಡೀ ಸಮುದಾಯ ತಪ್ಪಿತಸ್ಥವಾಗುವುದೆಂದೂ ಗಝ್ಝಾಲಿ ಅಭಿಪ್ರಾಯಪಟ್ಟಿದ್ದರು.

ಎರಡು ಅಭಿಪ್ರಾಯಗಳೊಂದಿಗೆ ನಾನು ಉಪಸಂಹರಿಸುತ್ತೇನೆ. ಅರಿತುಕೊಳ್ಳಲಿಕ್ಕಿರುವ ತೃಷ್ಣೆಯ ಕುರಿತಾಗಿದೆ ಒಂದು.

ವಿಜ್ಞಾನ ಸಂಪಾದನೆ ಮತ್ತು ವಿಜ್ಞಾನ ಸೃಷ್ಟಿ ಪ್ರತಿಯೊಬ್ಬ ಮುಸ್ಲಿಮನ ಅನಿವಾರ್ಯ ಹೊಣೆಗಾರಿಕೆಯೆಂದು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರು ಹೇಳಿದ್ದು ನಾನು ಮೊದಲೇ ತೋರಿಸಿಕೊಟ್ಟಿದ್ದೇನಲ್ಲವೇ? ಸಾವಿರ ವರ್ಷ ಮೊದಲು ಗಝ್ನಿಯಲ್ಲಿ ಬೆಳಗಿದ ಅಲ್‌ಬರೂನಿಯ ವಿಚಾರ ಕೂಡ ನಾನು ಹೇಳಿದ್ದೇನೆ. ಬರೂನಿಯ ಅಂತ್ಯದ ಬಗ್ಗೆ ಓರ್ವ ಸಮಕಾಲೀನನು ಹೀಗೆ ಹೇಳಿದ್ದಾನೆ: "ಅವರನ್ನು ಕೊನೆಯದಾಗಿ ಭೇಟಿಯಾಗಲು ನಾನು

ಅವರ ವಸತಿಗೆ ಧಾವಿಸಿದೆ. ಅವರು ಇನ್ನು ಹೆಚ್ಚು ಸಮಯ ಬದುಕಿರಲಾರರೆಂದು ನನಗೆ ನೋಡಿದಾಕ್ಷಣ ಮನವರಿಕೆಯಾಯಿತು. ನಾನು ಬಂದ ವಿಚಾರವನ್ನು ಅವರಿಗೆ ತಿಳಿಸಿದಾಗ ಕಣ್ಣು ತೆರೆದು ಅವರು ಕೇಳಿದರು: 'ತಾವು ಇಂತಹವರಲ್ಲವೇ ?' ನಾನು ಉತ್ತರಿಸಿದೆ. ಆಗ ಅವರು ಹೇಳಿದರು: 'ವಾರಸು ಹಕ್ಕಿನ ಬಗ್ಗೆ ಒಂದು ಜಟಿಲ ಸಮಸ್ಯೆಗೆ ತಾವು ಪರಿಹಾರವನ್ನು ಕಂಡುಹಿಡಿದಿದ್ದೀರೆಂದು ಯಾರೋ ನನ್ನೊಡನೆ ಹೇಳಿದ್ದಾರೆ.' ಅದರ ನಂತರ ಅವರು ಪ್ರಸಿದ್ಧವಾದ ಒಂದು ಕಟ್ಟು ಕತೆಯ ಕುರಿತು ನನ್ನೊಡನೆ ಕೇಳಿದರು. ತಕ್ಷಣ ನಾನು ಹೇಳಿದೆ: 'ಅಬೂ ರೈಹಾನ್, ಈ ಸಂದರ್ಭದಲ್ಲಿ ತಾವೇನು ಈ ಕಟ್ಟುಕತೆಯ ಬಗ್ಗೆ ಕೇಳುತ್ತಿದ್ದೀರಿ ?' ಅದಕ್ಕೆ ಅಲ್‌ಬರೂನಿ ನೀಡಿದ ಉತ್ತರ ಇದಾಗಿತ್ತು: 'ಆ ಕುರಿತು ಅಜ್ಞನಾಗಿ ಸಾಯುವುದಕ್ಕಿಂತ ಆ ಅರಿವನ್ನು ಸಹ ಸಂಪಾದಿಸಿ ಸಾಯುವುದಲ್ಲವೇ ಉತ್ತಮ ?' ಅತೀವ ದುಃಖ ತುಂಬಿದ ಹೃದಯದಿಂದ ನಾನು ದಂತ ಕಥೆಯ ಉತ್ತರ ಹೇಳಿದೆನು. ನಾನು ಅನಂತರ ಅಲ್ಲಿ ನಿಲ್ಲಲಿಲ್ಲ. ಆದರೆ ಬರೂನಿಯ ಮನೆಬಾಗಿಲು ದಾಟುವುದಕ್ಕೆ ಮುಂಚಿತವಾಗಿಯೇ ಒಳಗಿನಿಂದ ಅಳುವ ಧ್ವನಿ ಕೇಳಿಸಿತು: "ಅಲ್ ಬರೂನಿ ಮೃತಪಟ್ಟರು."

ನನ್ನ ಕೊನೆಯ ಅಭಿಪ್ರಾಯವನ್ನು ನಾನು ಹೇಳಿಕೊಳ್ಳಲೇ ? ಪುನಃ ನಾನು ಪವಿತ್ರ ಖುರ್‌ಆನನ್ನು ಉದ್ಧರಿಸುತ್ತೇನೆ. ವಿಜ್ಞಾನ ರಂಗದಲ್ಲಿ ನಾನು ಸ್ವಯಂ ಅನುಭವಿಸಿದ ಅನಶ್ವರವಾದ ಆ ಅದ್ಭುತದ ಬಗ್ಗೆ ನನಗೆ ತಿಳಿದಿರುವ ಬೇರಾವುದಕ್ಕಿಂತಲೂ ಚೆನ್ನಾಗಿ ಪವಿತ್ರ ಖುರ್‌ಆನ್ ಹೇಳುತ್ತಿದೆ:

"ಈ ಭೂಮಿಯ ಸಕಲ ವೃಕ್ಷಗಳನ್ನು ಲೇಖನಿಗಳನ್ನಾಗಿ ಮಾಡಿ ಈ ಭೂಗೋಳದ ಸಮುದ್ರಗಳೂ ಬೇರೆ ಏಳು ಸಮುದ್ರಗಳೂ ತುಂಬಿದಷ್ಟು ಶಾಯಿಯಿಂದ ಬರೆದರೂ ಅಲ್ಲಾಹನ ವಚನಗಳು ಕೊನೆಗೊಳ್ಳಲಾರವು. ಅಲ್ಲಾಹನು ಸರ್ವಶಕ್ತನೂ ಸರ್ವಜ್ಞನೂ ಆಗಿದ್ದಾನೆ."

(ಮುಗಿಯಿತು)

ಭಾಷಾಂತರ : **ಮುಹಮ್ಮದ್ ಯೂಸುಫ್**


ಅಹ್ಮದಿಯಾ ಸಂಘಟನೆಯ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ

# ಮೈತ್ರಿ ಸಂದೇಶ

"......ಹಿಂದೂ ಮುಸ್ಲಿಂ ಮೈತ್ರಿಗಾಗಿ ನೀಡಿದ ಈ ಸಂದೇಶ ತುಂಬಾ ಮಹತ್ವದ್ದು, ಹಿಂದೂಗಳೂ ಮುಸ್ಲಿಮರೂ ಸಮಾನವಾಗಿ ಪರಿಶೀಲಿಸಬೇಕಾದ ಗ್ರಂಥವಿದು......" —ಉದಯವಾಣಿ

"......ಭಿನ್ನ ಧರ್ಮೀಯರಲ್ಲಿ ಮೈತ್ರಿ ಬೆಸೆಯಬಲ್ಲ ಲೇಖನ......" —ನವಭಾರತ

ಪುಟಗಳು : 48 ಬೆಲೆ : **ಒಂದೂವರೆ ರೂಪಾಯಿ** ಅಂಚೆ ವೆಚ್ಚ : **ಉಚಿತ**

ಬರೆಯಿರಿ : Secretary, Ahmadiyya Muslim Mission,
10-23-1008, Ansari Road, Bunder, Mangalore-575 001.

# ಹಜ್: ತ್ಯಾಗದ ಮಹಾ ಹಬ್ಬ

★ ಎಂ. ಕೆ. ಅಬ್ದುಲ್ ಖಾದಿರ್

ಹಜ್ ಇಸ್ಲಾಮಿನ ಪ್ರಧಾನ ಆರಾಧನಾ ಕರ್ಮಗಳಲ್ಲೊಂದಾಗಿದೆ. ಅನುಕೂಲವಿದ್ದವರು ಜೀವಿತದಲ್ಲಿ ಒಂದು ಸಲವಾದರೂ ಹಜ್ ಕರ್ಮಾನುಷ್ಠಾನ ಮಾಡಬೇಕೆಂದು ಇಸ್ಲಾಂ ಧರ್ಮ ಆದೇಶಿಸುತ್ತದೆ. ವೈಯಕ್ತಿಕ ಹಾಗೂ ಸಾಮೂಹಿಕವಾದ ಹಲವಾರು ಒಳಿತುಗಳು ಹಜ್ ಮೂಲಕ ಲಭಿಸುತ್ತವೆ.

ಯಾವ ಸ್ಥಳದಲ್ಲಿ ಏಕದೇವತ್ವ (ತೌಹೀದ್) ದ ಕಹಳೆಧ್ವನಿಯನ್ನು ಮೊಳಗಿಸಲು ಅನುಮತಿ ಇರಲಿಲ್ಲವೋ, ಯಾವೆಡೆಯಿಂದ ಏಕದೇವತ್ವದ ಸಂದೇಶವಾಹಕನನ್ನು ಅಟ್ಟಿ ಓಡಿಸಲಾಗಿತ್ತೋ ಅಲ್ಲಿ, ಹಜ್ ವೇಳೆಯಲ್ಲಿ ಜಗತ್ತಿನ ನಾನಾ ಕಡೆಗಳಿಂದ ಬಂದ ಲಕ್ಷಗಟ್ಟಲೆ ಜನರು ಸಮ್ಮೇಳಿಸಿ ಘಂಟಾಘೋಷ ಮಾಡುವ ಏಕದೇವತ್ವದ ಧ್ಯೇಯಮಂತ್ರಗಳ ಧ್ವನಿ ಮುಗಿಲು ಮುಟ್ಟುತ್ತದೆ. ಅವರ ದೇಶ, ಭಾಷೆ, ವೇಷಭೂಷಣ, ಸಂಸ್ಕೃತಿ, ಸ್ಥಿತಿಗತಿ, ಸ್ಥಾನಮಾನ ಎಲ್ಲವೂ ವ್ಯತ್ಯಸ್ತವಾಗಿದ್ದರೂ ಅವ್ಯಾವುದೂ ಅವರನ್ನು ಪರಸ್ಪರ ಬೇರ್ಪಡಿಸುವುದಿಲ್ಲ. ಬದಲಾಗಿ, ಅವರು ಒಂದುಗೂಡಿ ದೇವಮಹಾತ್ಮೆಗಳನ್ನು ಕೀರ್ತನಮಾಡಿ ಹಜ್‌ಕರ್ಮವನ್ನು ಅನುಷ್ಠಿಸುತ್ತಾರೆ. ಧನಿಕ – ದರಿದ್ರ, ಕೆಲಸದಾಳು – ಯಜಮಾನ, ರಾಜ – ಪ್ರಜೆ, ಕರಿಯ – ಬಿಳಿಯ ಎಲ್ಲರೂ ಒಂದೇ ತರದ ಎರಡು ವಸ್ತ್ರಗಳನ್ನು ಮಾತ್ರ ಧರಿಸಿಕೊಂಡು, ಒಂದೇ ಮಾತಾಪಿತರ ಮಕ್ಕಳಂತೆ, ಒಂದು ಡಿಪಾರ್ಟ್‌ಮೆಂಟ್‌ನ ಒಂದೇ ಗ್ರೇಡ್‌ನಲ್ಲಿರುವ ಉದ್ಯೋಗಿಗಳಂತೆ ಹಜ್ ಕರ್ಮಗಳನ್ನು ಅನುಷ್ಠಿಸುತ್ತಾರೆ. ಪರಸ್ಪರ ಕಾಣಲಿಕ್ಕೂ ಪರಿಚಯಗೊಳ್ಳಲಿಕ್ಕೂ ಜ್ಞಾನ ಮತ್ತು ಸಂಸ್ಕೃತಿಯನ್ನು ವಿನಿಮಯ ಮಾಡಲಿಕ್ಕೂ ಇದು ಸಹಾಯಕವಾಗುತ್ತದೆ. ಸಮುದಾಯದಲ್ಲಿ ಹಿಂದುಳಿದವರೆಂದು ಸ್ವಯಂ ಶಂಕಿಸುವವರನ್ನು ರೋಮಾಂಚಗೊಳಿಸುತ್ತದೆ. ಸಮತ್ವವೂ ಸಹೋದರತ್ವವೂ ವರ್ಧಿಸುತ್ತವೆ.

ಹಜ್ ತೀರ್ಥಾಟಕನು ಮಕ್ಕಾ ತಲಪುವಾಗಲೇ ಮುಹಮ್ಮದ್ ಪೈಗಂಬರ್ (ಸ) ಮತ್ತು ಅವರ ಆದಿಕಾಲದ ಅನುಯಾಯಿಗಳು ಅನುಭವಿಸಿದ ಕಷ್ಟಕೋಟಲೆಗಳನ್ನು ಕುರಿತು ಜ್ಞಾಪಿಸುತ್ತಾ, ಆ ಮಹಾಪುರುಷರು ಪವಿತ್ರ ಮಕ್ಕಾದಲ್ಲಿ ಉಂಟುಮಾಡಿದ ಮಹತ್ತರ ಪರಿವರ್ತನೆಗಳನ್ನು ಕಾಣುತ್ತಾನೆ. ಆಗ ಆತನ ಹೃದಯ ಭಕ್ತಿವಿಶ್ವಾಸಗಳಿಂದ ತುಂಬಿತುಳುಕುತ್ತದೆ. ಆತನು ಹಜ್‌ನ ಕೆಲವು ಕರ್ಮಗಳನ್ನು ನಿರ್ವಹಿಸುವಾಗ 4000 ವರ್ಷ ಮೊದಲು ಪ್ರವಾದಿ ಹಝ್ರತ್ ಇಬ್ರಾಹೀಂ (ಅ), ಅವರ ಸಹಧರ್ಮಿಣಿ ಹಝ್ರತ್ ಹಾಜಿರ (ರ) ಮತ್ತು ಪುತ್ರ ಹಝ್ರತ್ ಇಸ್ಮಾಈಲ್ (ಅ) ಮಾಡಿದ ಕೆಲವು ತ್ಯಾಗಗಳು ಆತನ ಸ್ಮೃತಿಪಟಲದಲ್ಲಿ ಮೂಡಿಬರುತ್ತವೆ.

ಬಹಳಷ್ಟು ಸಂಪತ್ತುಗಳ ಯಜಮಾನನಾಗಿದ್ದ ಹಝ್ರತ್ ಇಬ್ರಾಹೀಮ್‌ರಿಗೆ ವೃದ್ಧಾಪ್ಯವಾಗಿದ್ದರೂ ಒಂದು ಮಗುವಾಗಲಿ ಹುಟ್ಟಿರಲಿಲ್ಲ. ಒಂದು ಮಗುವಿಗೋಸ್ಕರ ಸರ್ವಶಕ್ತನಾದ ಅಲ್ಲಾಹನೊಡನೆ ಅವರು ಹೃದಯವಿದ್ರಾವಕವಾಗಿ ನಿರಂತರ ಪ್ರಾರ್ಥಿಸುತ್ತಿದ್ದರು. ಒಂದು ದಿನ ಆ ಮಹಾಪುರುಷರಿಗೆ ಒಬ್ಬ ಪುತ್ರನ ಬಗ್ಗೆ ಶುಭವಾರ್ತೆ ಲಭಿಸಿತು. ತನಗೆ ಹುಟ್ಟಿದ ಮಗುವಿಗೆ "ಇಸ್ಮಾಈಲ್" ಎಂದು ನಾಮಕರಣ ಮಾಡಲಾಯಿತು. ಹಾಗೆ ಆ ಕುಟುಂಬವು ಸಂತುಷ್ಟವಾಯಿತು.

ಆದರೆ ಮಗನು ತಂದೆಯ ಜೊತೆಯಲ್ಲಿ ಓಡಿ ನಡೆಯಲು ತೊಡಗಿದಾಗ, ಮಗನನ್ನು ಬಲಿಯರ್ಪಿಸುವುದಾಗಿ ಹಝ್ರತ್ ಇಬ್ರಾಹೀಂ ಕನಸಿನಲ್ಲಿ ಕಂಡರು.

ದೇವೇಚ್ಛೆಯನುಸರಿಸಿ ಏನನ್ನೇ ಆಗಲಿ ಮಾಡಬೇಕಾದುದು ತನ್ನ ಕರ್ತವ್ಯವೆಂದು ದೃಢವಾಗಿ ನಂಬಿದ್ದ ಆ ವಯೋವೃದ್ಧ ಮಹಾತ್ಮರು ತನ್ನ ಪುತ್ರನನ್ನು ಕರೆದು ಹೇಳಿದರು: "ನನ್ನ ಕಂದಾ, ನಿನ್ನನ್ನು ಬಲಿಕೊಡಬೇಕೆಂದು ಆಜ್ಞೆಯಾಗಿದೆ; ನೀನು ಏನು ಹೇಳುತ್ತೀ ?" ವಿಧೇಯತೆಯಿಂದ ಆ ಮಗನು ಹೇಳಿದನು: "ಅಪ್ಪಾ, ನಿಮ್ಮೊಡನೆ ಆದೇಶಿಸಿದಂತೆ ನೀವು ಮಾಡಿರಿ; ಸಂಪೂರ್ಣ ಕ್ಷಮಾಶೀಲನನ್ನಾಗಿ ಆಗ ತಮಗೆ ನನ್ನನ್ನು ಕಾಣಲು ಸಾಧ್ಯ." ಹಝ್ರತ್ ಇಬ್ರಾಹೀಂ ಪುತ್ರನನ್ನು ಬಲಿಗೊಡಲು ನಿರ್ಧರಿಸಿದರು. ಅದಕ್ಕೋಸ್ಕರ ಅವರು ಸನ್ನದ್ಧರಾದರು. ಆ ಸಂದರ್ಭದಲ್ಲಿ, ತಾನು ಉದ್ದೇಶಿಸಿದ ಪ್ರಕಾರದ ಬಲಿಯಲ್ಲ, ಅದಕ್ಕಿಂತಲೂ ಪ್ರಯಾಸಕರವಾದ ಇನ್ನೊಂದು ಬಲಿಯನ್ನು ನಡೆಸಬೇಕೆಂಬ ವಸ್ತುಸ್ಥಿತಿ ಅವರಿಗೆ ಮನವರಿಕೆಯಾಯಿತು.

ಆ ಬಳಿಕ ಹಝ್ರತ್ ಇಬ್ರಾಹೀಂ ತನ್ನ ಪತ್ನಿ ಹಾಜಿರ ಮತ್ತು ಪುತ್ರ ಇಸ್ಮಾಈಲ್ ಈರ್ವರನ್ನೂ ಕರೆದುಕೊಂಡು ಮನೆಯಿಂದ ಹೊರಟರು. ಹಝ್ರತ್ ಹಾಜಿರ ಯುವತಿಯೂ ಸುಂದರಿಯೂ ಪತಿವ್ರತೆಯೂ ಸುಶೀಲೆಯೂ ಆಗಿದ್ದರು. ಅವರು ಮೂವರೂ ದೂರದ ಒಂದು ಕಣಿವೆ ಪ್ರದೇಶವನ್ನು ತಲುಪಿದರು. ನಿರ್ಜನವೂ ಭಯಾನಕವೂ ಆಗಿತ್ತು ಆ ಪ್ರದೇಶ. ಮೇಲೆ ತೀಕ್ಷ್ಣವಾದ ತಾಪದಿಂದ ಪ್ರಜ್ವಲಿಸುತ್ತಿರುವ ಸೂರ್ಯ, ಕೆಳಗೆ ಸುಡುತ್ತಿರುವ ಮರಳಾರಣ್ಯ. ಒಂದು ಗುಟುಕು ನೀರಾಗಲಿ, ಏನಾದರೂ ಆಹಾರವಸ್ತುವಾಗಲಿ, ಯಾವೊಬ್ಬ ಮನುಷ್ಯನಾಗಲಿ ಅಲ್ಲೆಲ್ಲೂ ಇರಲಿಲ್ಲ. ಸ್ವಲ್ಪ ಖರ್ಜೂರವಿದ್ದ ಒಂದು ಬುತ್ತಿ ಮತ್ತು ಒಂದು ಚರ್ಮದ ಚೀಲದಲ್ಲಿ ಸ್ವಲ್ಪ ನೀರು ಮಾತ್ರ ಅವರ ವಶವಿತ್ತು. ಅದು ಆ ತಾಯಿಗೂ ಮಗನಿಗೂ ಬಹಳ ಸ್ವಲ್ಪ ಸಮಯಕ್ಕೆ ಮಾತ್ರ ಸಾಕಾಗಬಹುದು; ಅದು ಮುಗಿದ ಬಳಿಕ ಆಹಾರವಾಗಲಿ ನೀರಾಗಲಿ ಸಿಗಲು ಅಸಾಧ್ಯವೆಂಬ ವಿಚಾರವನ್ನು ನೆನೆದಾಗ ಹಝ್ರತ್ ಇಬ್ರಾಹೀಂ ಅವರಿಗೆ ತಾಳಲಾರದ ದುಃಖವುಂಟಾಯಿತು. ಆದರೆ, ದೇವೇಚ್ಛೆ ಅದೆಂದು ಭಾವಿಸಿ ಅವರು ಸಮಾಧಾನಪಟ್ಟು ಆ ತಾಯಿಯನ್ನೂ ಮಗನನ್ನೂ ಅಲ್ಲಿ ಬಿಟ್ಟು ಹಿಂತಿರುಗಿದರು. ಆಗ ಹಝ್ರತ್ ಹಾಜಿರ ಹಿಂದೆಯೇ ಹೋಗಿ ಕೇಳಿದರು: "ಕುಡಿಯಲಿಕ್ಕೆ ನೀರಾಗಲಿ, ತಿನ್ನಲಿಕ್ಕೆ ಆಹಾರವಾಗಲಿ ಸಿಗದ ಈ ಪ್ರದೇಶದಲ್ಲಿ ನನ್ನನ್ನೂ ಈ ಮಗುವನ್ನೂ ಬಿಟ್ಟು ಹೋಗುವುದು ದೇವಾಜ್ಞೆಯನುಸಾರವಾಗಿಯೋ ?" ಎರಡು ಸಲ ಪ್ರಶ್ನಿಸಿದರೂ ಅವರು ಉತ್ತರ ಕೊಡಲಿಲ್ಲ. ಪುನಃ ಅವರು ಕೇಳಿದರು. ಆಗಲೂ ಅವರಿಗೆ ಉತ್ತರ ಹೇಳಲು ಸಾಧ್ಯವಾಗಲಿಲ್ಲ. ಅವರು ಮೂಕನಂತೆ ಎರಡು ಕೈಗಳನ್ನೂ ಆಕಾಶದ ಕಡೆಗೆ ಎತ್ತಿ, ದೇವಾಜ್ಞೆಯಂತೆ ತಾನು ಹೀಗೆ ಮಾಡುತ್ತಿದ್ದೇನೆಂದು ಪತ್ನಿಗೆ ತಿಳಿಸಿದರು. ಆಗ ಆ ಧೀರ ವನಿತೆ ಹೀಗೆ ಹೇಳಿದರು: "ಹಾಗಿದ್ದರೆ ದೇವನು ನಮ್ಮ ಕೈಬಿಡಲಾರ." ಹಝ್ರತ್ ಇಬ್ರಾಹೀಂ ಅಲ್ಲಿಂದ ಕಣ್ಮರೆಯಾದರು.

ತಾಯಿ ಮತ್ತು ಮಗನ ಆಹಾರ ಮತ್ತು ನೀರು ಪೂರ್ತಿ ಮುಗಿಯಿತು. ಹಸಿವೆ ಮತ್ತು ಬಾಯಾರಿಕೆಯಿಂದ ಮಗನ ಒದ್ದಾಟ ಆರಂಭವಾಯಿತು. ಹಝ್ರತ್ ಹಾಜಿರ ಸಮೀಪವಿದ್ದ ಬೆಟ್ಟವನ್ನೇರಿ ಹತ್ತಿರದಲ್ಲಿ ಎಲ್ಲಾದರೂ ನೀರಾಗಲಿ, ಆಹಾರವಸ್ತುವಾಗಲಿ, ಮನುಷ್ಯ ಸುಳಿವಾಗಲಿ ಇವೆಯೋ ಎಂದು ನೋಡಿದರು. ಅವರಿಗೇನೂ ಕಾಣಲು ಸಾಧ್ಯವಾಗಲಿಲ್ಲ. ಅಲ್ಲಿಂದ ಅವರು ಇಳಿದು ಹತ್ತಿರವಿದ್ದ ಇನ್ನೊಂದು ಬೆಟ್ಟವನ್ನೇರಿ ನೋಡಿದರು. ಅಲ್ಲಿಯೂ ಏನೂ ಕಾಣಸಿಗಲಿಲ್ಲ. ಪುನಃ ಮೊದಲಿನ ಬೆಟ್ಟವನ್ನೇರಿದರು. ಹೀಗೆ ಸಫಾ – ಮರ್ವಾ ಬೆಟ್ಟಗಳನ್ನು ಅವರು ಹಲವು ಸಲ ಹತ್ತಿ ಇಳಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಕೊನೆಗೆ ಮೃತ್ಯು ದಾಡೆಯಲ್ಲಿ ಸಿಲುಕಿರುವ ತನ್ನ ಸುತನ ಅವಸ್ಥೆಯನ್ನು ನೋಡಿ ಅವರು ಕಂಗಾಲಾದರು. ಆ ಸಂದರ್ಭದಲ್ಲಿ ಕರುಣಾನಿಧಿಯಾದ ಅಲ್ಲಾಹನು ಅವರಿಗೆ ಹೀಗೆ ಅರುಹಿದನು: "ನೀನು ನಿನ್ನ ಪುತ್ರನ ಬಳಿಗೆ ಹೋಗು; ಅಲ್ಲಿ ನೀರಿದೆ." ಅವರು ಶೀಘ್ರವಾಗಿ ಮಗನ ಸಮೀಪಕ್ಕೆ ಧಾವಿಸಿದರು. ಆಗ ತಹತಹಿಸುತ್ತಾ ಅಳುತ್ತಿದ್ದ ಮಗುವಿನ ಪಾದದಡಿಯಲ್ಲಿ ನೀರಿನ ಬುಗ್ಗೆಯೊಂದು ಕಾಣಿಸಿತು. ಅಲ್ಲಿಂದ ಸ್ವಲ್ಪ ಮಣ್ಣನ್ನು ಕೆದಕಿದಾಗ ಅದೊಂದು ಕಿರು ತಟಾಕವಾಯಿತು. ಅದರಿಂದ ಅವರು ನೀರನ್ನು ಕುಡಿದರು. ಈರ್ವರ ನೀರಡಿಕೆಯೂ ದಣಿವೂ ಪರಿಹಾರವಾಯಿತು. ಈ ಚಿಲುಮೆಗೆ ಹಝ್ರತ್ ಹಾಜಿರ

"ಝುಂ ಝುಂ" ಎಂದು ನಾಮಕರಣ ಮಾಡಿದರು. "ಆನಂದಾತಿರೇಕದಿಂದ ಹಾಡಲ್ಪಡುವ ಗಾನ" ಎಂದಾಗಿದೆ ಅದರ ಅರ್ಥ. ಈಗಲೂ ಅದು ಇದೇ ಹೆಸರಿನಿಂದ ಕರೆಯಲ್ಪಡುತ್ತದೆ.

ಒಂದು ವ್ಯಾಪಾರಿ ಸಂಘ ದಾರಿ ತಪ್ಪಿ ಅಲ್ಲಿಗೆ ಬಂದು ತಲುಪಿತು. ಅವರು ನೀರಿಗಾಗಿ ಅಲೆದಾಡುತ್ತಿದ್ದರು. ಹಝ್ರತ್ ಹಾಜಿರ ಅವರಿಗೆ ನೀರು ಕೊಟ್ಟರು. ಅವರು ಆಹಾರವಸ್ತುಗಳನ್ನು ಹಝ್ರತ್ ಹಾಜಿರಾರಿಗೆ ಕೊಟ್ಟರು. ಕಡೆಗೆ, ಈ ಸ್ಥಳವನ್ನು ಬಿಟ್ಟುಹೋಗಲು ವ್ಯಾಪಾರಿ ಸಂಘಕ್ಕೆ ಮನಸ್ಸಾಗಲಿಲ್ಲ. ಸಂಘದ ನಾಯಕ ಹಝ್ರತ್ ಹಾಜಿರಾರ ಸನ್ನಿಧಿಗೆ ಬಂದು ಭಿನ್ನವಿಸಿದರು: "ನಮ್ಮನ್ನು ನಿಮ್ಮ ಪ್ರಜೆಗಳೆಂದು ಅಂಗೀಕರಿಸಿ ಈ ಸ್ಥಳದಲ್ಲಿ ವಾಸ ಹೂಡಲು ಅನುಮತಿ ನೀಡಬೇಕು." ಹಾಜಿರ ಅವರ ಕೋರಿಕೆಯನ್ನು ನೆರವೇರಿಸಿದರು. ಹಾಗೆ ಹಝ್ರತ್ ಇಸ್ಮಾಈಲ್ ಯವ್ವನವನ್ನು ತಲಪುವ ಮೊದಲೇ ಅಲ್ಲಾಹನು ಅವರಿಗೆ ಆಡಳಿತಾಧಿಕಾರವನ್ನು ಕೊಟ್ಟು ರಾಜನನ್ನಾಗಿ ಮಾಡಿದನು.

ಸೃಷ್ಟಿಕರ್ತನ ಇಚ್ಛೆಯನ್ನು ಈಡೇರಿಸುವುದು ಉತ್ತಮ ಸೃಷ್ಟಿಯಾದ ಮನುಷ್ಯನ ಕರ್ತವ್ಯವೆಂದು ಹಝ್ರತ್ ಇಬ್ರಾಹೀಂ ಮಾಡಿತೋರಿಸಿದರು. ತನ್ನ ಪ್ರೀತಿಯ ಪತ್ನಿ ಹಾಜಿರಾ ಮತ್ತು ವೃದ್ಧಾಪ್ಯದಲ್ಲಿ ಹುಟ್ಟಿದ ಪುತ್ರ ಇಸ್ಮಾಈಲ್, ಈರ್ವರನ್ನೂ ದೇವೇಚ್ಛೆಯನುಸಾರ ಪರಿತ್ಯಜಿಸಲು ಆ ಮಹಾಪುರುಷ ಒಂದಿಷ್ಟೂ ಹಿಂಜರಿಯಲಿಲ್ಲ. ಈ ಘಟನೆಯನ್ನು ಸ್ಮರಿಸಿಕೊಂಡು ಹಜ್ ತೀರ್ಥಾಟಕರಾದ ಹಾಜಿಗಳು ಸಫಾ–ಮರ್ವಾ ಬೆಟ್ಟಗಳ ಮಧ್ಯೆ ಏಳು ಸಲ ಅತ್ತಿಂದಿತ್ತ ಓಡುತ್ತಾರೆ.

ಹಝ್ರತ್ ಇಬ್ರಾಹೀಮ್‌ರವರ ಇಂತಹ ಸತ್ಕರ್ಮಗಳ ಫಲವಾಗಿ ಆ ಮಹಾಪುರುಷರನ್ನು ಅಲ್ಲಾಹನು ಹಲವು ರೀತಿಯಲ್ಲಿ ಅನುಗ್ರಹಿಸಿದರು. ಅಸಂಖ್ಯಾತ ಸಂತಾನಗಳನ್ನು ನೀಡಿದನು. ಅವರಲ್ಲಿ ಹಲವರನ್ನು ಅವನ ವರಪ್ರಸಾದಗಳಿಂದ ಅನುಗ್ರಹಿಸಿದನು. ಹಝ್ರತ್ ಇಬ್ರಾಹೀಂ ಮತ್ತು ಕುಟುಂಬವನ್ನು ಅನುಗ್ರಹಿಸಿದ ಪ್ರಕಾರ, ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರವರನ್ನೂ ಕುಟುಂಬವನ್ನೂ ಅನುಗ್ರಹಿಸಲಿಕ್ಕಾಗಿ ದಿನಾಲೂ ಅನೇಕ ಬಾರಿ ಪ್ರಾರ್ಥಿಸಲಿಕ್ಕೆ ಮುಸ್ಲಿಮರಿಗೆ ಆದೇಶ ನೀಡಲಾಗಿದೆ. ಅವರು ಪ್ರಾರ್ಥಿಸಲೂ ಇದ್ದಾರೆ. ಅದರಿಂದಲೇ ಹಝ್ರತ್ ಇಬ್ರಾಹೀಮ್‌ರಿಗೆ ಲಭಿಸಿದ ಅನುಗ್ರಹ ಅಳೆಯಲಾಗದಷ್ಟೆಂದು ವ್ಯಕ್ತವಾಗುತ್ತದೆ.

ಅಲ್ಲಾಹನಿಗೆ ಜೀವಿತವನ್ನು ಬಲಿಯರ್ಪಿಸುವವರು ಸದಾಕಾಲ ಜೀವಿಸುತ್ತಿರುವುದು ಹೇಗೆಂದು ಈ ಚರಿತ್ರೆಯಿಂದ ಹಜ್ ತೀರ್ಥಾಟಕರು ಮನಗಾಣುತ್ತಾರೆ. ಹಾಗೆ ಬಂಧುಬಳಗವನ್ನು ಅಲ್ಲಾಹನಿಗಾಗಿ ತೊರೆಯುವ ಸನ್ಮನಸ್ಸು ಮತ್ತು ಸ್ವಜೀವನವನ್ನೇ ಅಲ್ಲಾಹನಿಗಾಗಿ ಬಲಿಯರ್ಪಿಸುವ ಸನ್ನದ್ಧತೆಯನ್ನು ಹಜ್ ಮೂಲಕ ಹಾಜಿಗಳು ಗಳಿಸುತ್ತಾರೆ.

ಸಂಕ್ಷಿಪ್ತವಾಗಿ, ಹಜ್ ಮನುಷ್ಯನ ಜೀವಿತಲಕ್ಷ್ಯವಾದ ಸೃಷ್ಟಿಕರ್ತನ ಆಜ್ಞೆಯನ್ನನುಸರಿಸುವುದಕ್ಕೆ ಆತನನ್ನು ಸಿದ್ಧಗೊಳಿಸುತ್ತದೆ. ಜ್ಞಾನ–ಸಂಸ್ಕೃತಿಗಳನ್ನು ವೃದ್ಧಿಗೊಳಿಸುತ್ತದೆ. ಲೋಕಜನ ಸಹೋದರ್ಯ ಮತ್ತು ಸಮತ್ವದ ಸಂದೇಶವನ್ನು ರೂಢಿಗೆ ತರಲು ಹಜ್‌ಗಿಂತ ಮಹತ್ತರವಾದ ಬೇರೆ ಕ್ರಮವಿಲ್ಲ.

ಓದಿರಿ :

## ಅಹ್ಮದಿಯಾ ಸಂದೇಶ

**ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ**

ಅಹ್ಮದಿಯರ ಧಾರ್ಮಿಕ ವಿಶ್ವಾಸಾಚಾರಗಳ ಸಂಕ್ಷಿಪ್ತ ರೂಪ

ಗ್ರಂಥಕರ್ತ : **ಹಝ್‌ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಬೆಲೆ : ರೂ. 1-00 ಅಂಚೆ ವೆಚ್ಚ : ಉಚಿತ

ಬರೆಯಿರಿ : ಅಹ್ಮದಿಯಾ ಮುಸ್ಲಿಂ ಮಿಶನ್

10–23–1008 ಅನ್ಸಾರಿ ರೋಡ್, ಬಂದರ್, ಮಂಗಳೂರು – 575 001.

### ಅಹ್ಮದಿಯಾ ಜಮಾಅತಿನ

# ಪ್ರಾರ್ಥನಾ ಸಮರಕ್ಕೆ ಆಹ್ವಾನ ಮತ್ತು ಅದರ ಹಿನ್ನೆಲೆ

—ಎಂ. ಪಿ. ಇಬ್ರಾಹಿಂ

يٰحسرةً علَى العباد ما يأتيهم من رسول الّا كانوا به يستهزءون

**"ನನ್ನ ದಾಸರ ದುರವಸ್ಥೆಯೇ! ಅವರಿಂದ ನಿರಾಕರಿಸಲ್ಪಟ್ಟು ಪರಿಹಾಸ್ಯಕ್ಕೆ ಗುರಿಯಾಗದೆ ಒಬ್ಬನೇ ಒಬ್ಬ ಪ್ರವಾದಿಯೂ ಅವರ ಬಳಿ ಬರುವುದಿಲ್ಲವಲ್ಲ!"**

**(ಪವಿತ್ರ ಖುರ್‌ಆನ್ 36 : 31)**

ಅಹ್ಮದಿಯಾ ಜಮಾಅತಿನ ಸ್ಥಾಪನೆಯಾಗಿ ಇದೀಗ ಒಂದು ನೂರು ವರ್ಷಗಳು ಪೂರ್ತಿಯಾಗುತ್ತಿದೆ. 1989ನೇ ಮಾರ್ಚ್ ತಿಂಗಳ 23ನೇ ದಿನಕ್ಕೆ ಅದು ತನ್ನ ಒಂದು ಶತಮಾನವನ್ನು ಪೂರ್ತಿಗೊಳಿಸಲಿದೆ. ಇಸ್ಲಾಂ ಧರ್ಮದ ಪುನರುತ್ಥಾನಕ್ಕಾಗಿ ತನ್ನ ನಂತರ 14ನೇ ಶತಮಾನದಲ್ಲಿ ಓರ್ವ ದಿವ್ಯಾತ್ಮರು ನಿಯೋಜಿತರಾಗಲಿರುವರೆಂದು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅವರು ಭವಿಷ್ಯ ನುಡಿದಿರುವ ಪ್ರಕಾರ, ಅಲ್ಲಾಹನು ತನ್ನನ್ನು ಲೋಕದ ಜನರ ಉದ್ಧಾರಕ್ಕಾಗಿ "ಇಮಾಂ ಮಹ್‌ದಿ" ಹಾಗೂ "ಮಸೀಹ್ ಮೌಊದ್" ಆಗಿ ನಿಯೋಜಿಸಿರುವನೆಂದು ವಾದಿಸಿದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರು ಸ್ಥಾಪಿಸಿದ ಸಂಘಟನೆಯೇ ಆಗಿದೆ ಅಹ್ಮದಿಯಾ ಜಮಾಅತ್ ಎಂಬುದು.

ಅಹ್ಮದಿಯಾ ಜಮಾಅತಿನ ಸ್ಥಾಪನೆಯು ಮೊದಲ್ಗೊಂಡು ಇದುವರೆಗೂ ಬಹುಸಂಖ್ಯಾತ ಮುಸ್ಲಿಂ ಜನಸಮೂಹವು ಅದನ್ನು ವಿರೋಧಿಸುತ್ತಲೇ ಬಂದಿದೆ. ಮುಸ್ಲಿಂ ಮತಪಂಡಿತರೂ ಇತರ ನೇತಾರರೂ ಈ ಜಮಾಅತಿನ ವಿರುದ್ಧ ಅವಿಶ್ರಾಂತ ಹೋರಾಡಿ ತಮ್ಮ ಜೀವನದ ಅಮೂಲ್ಯ ಸಮಯವನ್ನು ವ್ಯಯಮಾಡಿದ್ದಾರೆ. ದುರದೃಷ್ಟವಶಾತ್ ನಮ್ಮ ನೆರೆರಾಷ್ಟ್ರವಾದ ಪಾಕಿಸ್ತಾನವು ಈಗೀಗ ಅಹ್ಮದಿಯಾ ಜಮಾಅತಿನ ವಿರುದ್ಧ ಬಹಳ ಕಠಿಣವಾದ ನಿಲುವನ್ನು ತಳೆಯುತ್ತಿದೆ.

ಇಮಾಂ ಮಹ್‌ದಿಯು ಆಗಮನವಾದರೆ, ಅವರನ್ನು ಅತಿಹೆಚ್ಚು ವಿರೋಧಿಸುವವರು ಮುಸ್ಲಿಂ ಮತಪಂಡಿತರೇ ಆಗಿರುವರು ಎಂಬ ಭವಿಷ್ಯನುಡಿಗಳು ಈಗ ಅಚ್ಚುಕಟ್ಟಾಗಿ ನೆರವೇರಿರುವುದನ್ನು ನಾವು ಕಾಣುತ್ತಿದ್ದೇವೆ. ಮತ ಪಂಡಿತರೆಂದು ಕರೆಯಿಸಿಕೊಳ್ಳುವ ಅನೇಕ ವಿಖ್ಯಾತ ಮುಸ್ಲಿಂ ಮೌಲಾನಾಗಳು ಅಹ್ಮದಿಯಾ ಜಮಾಅತಿನ ವಿರುದ್ಧ ಅತ್ಯಂತ ನೀಚವಾದ ಧರ್ಮಬಾಹಿರವಾದ ಆಕ್ರಮಣವನ್ನು ನಡೆಸಿದ್ದಾರೆ. ಅದು ಹೆಚ್ಚು ಹೆಚ್ಚು ಉಗ್ರರೂಪದಲ್ಲಿ ಮುಂದುವರಿಯುತ್ತಲೂ ಇದೆ. ಅಹ್ಮದಿಯಾ ಜಮಾಅತಿನ ಸ್ಥಾಪಕರ ವಿರುದ್ಧ ಇಲ್ಲದ ಸುಳ್ಳು ಆರೋಪಗಳನ್ನು ಈ ಮತ ಪಂಡಿತರು ಮುಸ್ಲಿಂ ಜನಸಾಮಾನ್ಯರೆಡೆಯಲ್ಲಿ ಪ್ರಚಾರ ಮಾಡುತ್ತಾ ಮುಸಲ್ಮಾನರಿಗೆ ಆ ಜಮಾಅತಿನ ವಿರುದ್ಧ ಜಿಗುಪ್ಸೆ ಹುಟ್ಟುವಂತೆ ಮಾಡುತ್ತಿದ್ದಾರೆ. ಮತಪಂಡಿತರ ಈ ಅಪಪ್ರಚಾರಗಳು ಸತ್ಯಕ್ಕೆ ದೂರವಾದವುಗಳೂ ವಿದ್ವೇಷದ ಫಲವೂ ಆಗಿದೆಯೆಂದು ತಿಳಿಸುವ ಹಾಗೂ ಅಹ್ಮದಿಯ್ಯತ್ತಿನ ನಿಜವಾದ ವಿಶ್ವಾಸಾದರ್ಶಗಳನ್ನು ವಿವರಿಸುವ ಬರವಣಿಗೆಗಳೂ ಗ್ರಂಥಗಳೂ ಅಹ್ಮದಿಯಾ ಜಮಾಅತಿನ ಕಡೆಯಿಂದ ಪ್ರಕಟವಾದಲ್ಲಿ ತಮ್ಮ ಭಂಡವಾಳವು ಬಹಿರಂಗವಾಗುವುದೆಂದು ಭಯಪಟ್ಟು ಈ ಮುಲ್ಲಾಗಳು ಅಂತಹ ಕೃತಿಗಳನ್ನು ಓದಬಾರದೆಂದು ಕೂಡಾ ಜನಸಾಮಾನ್ಯರನ್ನು ತಡೆಯುತ್ತಾರೆ! ಈ ರೀತಿಯ ಘೋರ ಅನ್ಯಾಯವು ಪಾಕಿಸ್ತಾನದಲ್ಲಿ ಅದರ ಎಲ್ಲಾ ಸೀಮೆಗಳನ್ನೂ ಮೀರಿ ಅತ್ಯಂತ ಕರಾಳ ರೂಪವನ್ನು ತಳೆದಿದೆ. ಪಾಕಿಸ್ತಾನದ ಮುಸ್ಲಿಂ ಮತಪಂಡಿತರು ಅಹ್ಮದೀಯರ ವಿರುದ್ಧ ಸುಳ್ಳು ಆರೋಪಗಳನ್ನು ಹೊರಿಸಿ ಅಪಪ್ರಚಾರ ಮಾಡುವುದರಲ್ಲಿ ನ್ಯಾಯ ಧರ್ಮಗಳ ಎಲ್ಲಾ ಮೇರೆಗಳನ್ನೂ ಉಲ್ಲಂಘಿಸಿದ್ದಾರೆ.

ಇವೆಲ್ಲವೂ ಧಾರ್ಮಿಕ ಕ್ಷೇತ್ರದಲ್ಲಿ ನಡೆಯುತ್ತಿರುವ ಅತಿಕ್ರಮಣವಾದರೆ ಈ ಮೌಲಾನಾಗಳ ಕೈಗೊಂಬೆಯಾಗಿರುವ ಪಾಕಿಸ್ತಾನ ಸರಕಾರವು ಅಹ್ಮದೀಯರ ವಿರುದ್ಧ ತಾಂಡವ ನೃತ್ಯವಾಡಲು ತೊಡಗಿರುತ್ತದೆ. ಪಾಕ್ ಅಧ್ಯಕ್ಷ ಜನರಲ್ ಜಿಯಾಉಲ್ ಹಕ್ 1984ನೇ ಇಸವಿಯಲ್ಲಿ ಹೊರಡಿಸಿದ ಒಂದು ಸುಗ್ರೀವಾಜ್ಞೆಯು (Ordinance No. 20 of 1984) ಪಾಕಿಸ್ತಾನದಲ್ಲಿ ಅಹ್ಮದೀಯರಿಗೆ ಬದುಕನ್ನು ದುಸ್ಸಾಧ್ಯಗೊಳಿಸಿದೆ. ಸೇನಾಡಳಿತದ ಶಕ್ತಿಯುಪಯೋಗಿಸಿ, ಕಾನೂನಿನ ದಂಡ ಪ್ರಯೋಗದಿಂದ ಅಹ್ಮದೀಯರನ್ನು ದೌರ್ಜನ್ಯಕ್ಕೆ ಗುರಿಪಡಿಸುವುದು ಈ ಸುಗ್ರೀವಾಜ್ಞೆಯ ಉದ್ದೇಶವಾಗಿದೆ. ಈ ಅಧ್ಯಾದೇಶದ ಪ್ರಕಾರ ಪಾಕಿಸ್ತಾನದಲ್ಲಿ (ಮುಸ್ಲಿಮೇತರರಾದ ?) ಅಹ್ಮದಿಯಾ ಮುಸ್ಲಿಮರು ಯಾವುದೇ ಇಸ್ಲಾಮಿಕ ಆಚಾರ ಸಂಪ್ರದಾಯಗಳನ್ನು ಕೈಗೊಳ್ಳಬಾರದು. ಸಲಾಂ ಹೇಳಬಾರದು, ಮಸೀದಿಗಳಲ್ಲಿ ಅರ್ಝಾನ್ ಕರೆನೀಡಬಾರದು, ನಮಾಜು ಮಾಡಬಾರದು, ಅವರು ತಮ್ಮ ಮಸೀದಿಗಳನ್ನು "ಮಸ್ಜಿದ್" ಎಂಬ ಹೆಸರಿನಿಂದ ಕರೆಯಬಾರದು, ಮಸೀದಿಗಳಲ್ಲಾಗಲಿ ಇತರ ಯಾವುದೇ ಸ್ಥಳದಲ್ಲಾಗಲಿ ಅಹ್ಮದೀಯರು "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲು-ಲ್ಲಾಹ್" (ಆರಾಧನೆಗೆ ಅರ್ಹನು ಅಲ್ಲಾಹನು ಮಾತ್ರ, ಮುಹಮ್ಮದ್ ಅಲ್ಲಾಹನ ಪ್ರವಾದಿ) ಎಂಬ ಪವಿತ್ರ ಶಹಾದತ್ ಕಲಿಮವನ್ನು ಬರೆದಿಡಬಾರದು. ಕಲಿಮ ಉಚ್ಚರಿಸಬಾರದು. ಒಟ್ಟಿನಲ್ಲಿ, ಇಸ್ಲಾಮಿಕ ನಡೆನುಡಿಗಳನ್ನು ಅನುಸರಿಸಿಕೊಂಡು ತಾವು ಮುಸ್ಲಿಮರೆಂದು ಇತರರಿಗೆ ತೋರ್ಪಡಿಸುವ ಯಾವುದೇ ಕಾರ್ಯವನ್ನು ಮಾಡುವುದರಿಂದ ಪಾಕ್ ಅಧ್ಯಕ್ಷರ ಈ ಅಧ್ಯಾದೇಶವು ಅಹ್ಮದೀಯರನ್ನು ನಿಷೇಧಿಸುತ್ತದೆ. ಪ್ರಪಂಚದ ಎಲ್ಲ ಜನಾಂಗದವರೂ ಎಲ್ಲ ರಾಷ್ಟ್ರದವರೂ ಸತ್ಯಸಂಧತೆಗೆ ಹೆಚ್ಚು ಒತ್ತು ಕೊಡುತ್ತಿರುವ ಈ ಕಾಲದಲ್ಲಿ ಪಾಕಿಸ್ತಾನ ಸರಕಾರವು ಅಹ್ಮದೀಯರನ್ನು ಸುಳ್ಳು ಹೇಳುವಂತೆ ನಿರ್ಬಂಧಿಸುತ್ತಿರುವುದು ವಿಪರ್ಯಾಸವೇ ಸರಿ. ಸರ್ವಾತ್ಮನಾ ಮುಸ್ಲಿಮರಾಗಿರುವ ಅಹ್ಮದೀಯರು ತಮ್ಮನ್ನು ಮುಸ್ಲಿಮರೆಂದು ಹೇಳಬಾರದಾಗಿ ಅಲ್ಲಿನ ಅಧ್ಯಾದೇಶವು ಅವರನ್ನು ಒತ್ತಾಯಪಡಿಸುತ್ತದೆ. ಅವರು "ನಾವು ಮುಸ್ಲಿಮರು" ಎಂದು ಹೇಳಿಕೊಳ್ಳುವಂತಿಲ್ಲ. ಈ ಅಧ್ಯಾದೇಶವನ್ನು ಉಲ್ಲಂಘಿಸುವವರಿಗೆ ಐದು ಸಾವಿರ ರೂಪಾಯಿಗಳ ವರೆಗೆ ದಂಡ ಮತ್ತು 3 ವರ್ಷಗಳ ವರೆಗೆ ಜೈಲು ಶಿಕ್ಷೆಯನ್ನು ನೀಡಬಹುದಾಗಿ ದಂಡ ಸಂಹಿತೆಯಲ್ಲಿ ಸಹ ತಿದ್ದುಪಡಿ ಮಾಡಲಾಗಿದೆ. ಮಾನವೀಯ ಮೌಲ್ಯಗಳನ್ನು ಸಾರಾಸಗಟು ಧ್ವಂಸಗೊಳಿಸಿದ ಈ ಅಧ್ಯಾದೇಶವು ಅಹ್ಮದೀಯರಿಗೆ ಪಾಕಿಸ್ತಾನದಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನೂ ಮಾನವೀಯ ಹಕ್ಕುಗಳ ಪ್ರಾಥಮಿಕ ಅಗತ್ಯಗಳನ್ನು ಕೂಡ ನಿರಾಕರಿಸಿದ ಒಂದು ರಾಕ್ಷಸೀಯ ಕಾನೂನಾಗಿದೆ.

ಭುಟ್ಟೋರ ಆಡಳಿತ ಕಾಲದಲ್ಲಿಯೇ ಪಾಕಿಸ್ತಾನದಲ್ಲಿ ಒಂದು ಸಂವಿಧಾನ ತಿದ್ದುಪಡಿ ಮೂಲಕ ಅಹ್ಮದೀಯರನ್ನು "ಮುಸ್ಲಿಮರಲ್ಲ" ಎಂದು ಘೋಷಿಸಲಾಗಿತ್ತು. ಜ। ಜಿಯಾರ ಈ ಅಮಾನವೀಯ ಅಧ್ಯಾದೇಶವನ್ನು ಉಲ್ಲಂಘಿಸಿದರೆಂಬ ಕಾರಣಕ್ಕಾಗಿ ಅಹ್ಮದೀಯರನ್ನು ಅಲ್ಲಿ ದಸ್ತಗಿರಿ ಮಾಡಿ ಅವರ ಮೇಲೆ ಮೊಕದ್ದಮೆ ಹೂಡಲಾಗುತ್ತದೆ ಹಾಗೂ ಅವರನ್ನು ಜೈಲುಗಳಿಗೆ ತಳ್ಳಲಾಗುತ್ತದೆ. ಕೆಲವೆಡೆ ಅಹ್ಮದೀಯರ ಮಸ್ಜಿದ್‌ಗಳನ್ನು ನೆಲಸಮ ಗೊಳಿಸಲಾಗುತ್ತದೆ. ಕೆಲವೆಡೆ ಮಸ್ಜಿದ್‌ಗಳಲ್ಲಿ ಬರೆದಿಟ್ಟ لا اله الا الله محمد رسول الله (ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್) ಎಂಬ ಪವಿತ್ರ ಕಲಿಮದ ಮೇಲೆ ಟಾರು ಬಳಿಯಲಾಗುತ್ತದೆ. ಮತ್ತೆ ಕೆಲವು ಕಡೆ ಈ ರಾಕ್ಷಸರು ನಿರಪರಾಧಿಗಳಾದ ಅಹ್ಮದಿಯರನ್ನು ಕೊಂದು ತಮ್ಮ ರಕ್ತ ದಾಹವನ್ನು ತೀರಿಸಿಕೊಳ್ಳುತ್ತಾರೆ. ಆದರೆ, ಈ ಅನ್ಯಾಯಕಾರರ ಮೇಲೆ ಸರಕಾರವು ಯಾವುದೇ ಕಾನೂನು ಕ್ರಮ ಕೈಗೊಳ್ಳುವುದಿಲ್ಲ. ಈ ಘೋರ ಅನ್ಯಾಯವು ಅದರ ಎಲ್ಲಾ ಸೀಮೆಗಳನ್ನೂ ಮೀರಿ ಎಲ್ಲಿಯ ವರೆಗೆ ಮುಂದುವರಿಯಿತೆಂದರೆ, ಅದನ್ನು ನಿಲ್ಲಿಸುವಂತೆ ಅಂತಾರಾಷ್ಟ್ರೀಯ ಆ್ಯಮ್ನೆಸ್ಟಿ ಸಂಘಟನೆಯು ಪಾಕ್ ಸರಕಾರವನ್ನು ಒತ್ತಾಯಿಸಬೇಕಾದ ಪ್ರಸಂಗ ನಿರ್ಮಾಣವಾಯಿತು! ಆ್ಯಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯು ತನ್ನ 1987ರ ವರದಿಯಲ್ಲಿ ಈ ರೀತಿ ಹೇಳಿದೆ: "ಅಹ್ಮದಿಯಾ ಪಂಥವನ್ನು ಆಚರಿಸುವುದರ ವಿರುದ್ಧ (ಪಾಕಿಸ್ತಾನ ಸರಕಾರವು ಹೇರಿರುವ ನಿಷೇಧವನ್ನು ಉಲ್ಲಂಘಿಸಿದರೆಂಬುದಕ್ಕಾಗಿ ಅಹ್ಮದಿಯಾ ಸಮು

ದಾಯದ ಅನೇಕ ಸದಸ್ಯರನ್ನು ಬಂಧಿಸಲಾಯಿತು. ನ್ಯಾಯಾಲಯಗಳು ಅನೇಕರಿಗೆ ಸಾರ್ವಜನಿಕ ಛಡಿಯೇಟಿನ ಶಿಕ್ಷೆ ಮತ್ತು ಇನ್ನು ಕೆಲವರಿಗೆ ಮರಣದಂಡನೆ ಶಿಕ್ಷೆ ವಿಧಿಸಿದವು................

"ತಮ್ಮನ್ನು ಮುಸ್ಲಿಮರೆಂದು ಕರೆದುಕೊಂಡದ್ದಕ್ಕಾಗಿ ಅಥವಾ ಪ್ರಾರ್ಥನೆಯಲ್ಲಿ ಮುಸ್ಲಿಂ ಆಚರಣೆಯನ್ನು ಬಳಸಿಕೊಂಡದ್ದಕ್ಕಾಗಿ ಅಹ್ಮದಿಯಾ ಸಮುದಾಯದ ಸದಸ್ಯರ ಬಂಧನ ಅವ್ಯಾಹತವಾಗಿ ಮುಂದುವರಿಯಿತು. ಬಂಧಿತರಲ್ಲಿ ಇಬ್ಬರು ಸಹೋದರರು ಅಂಗಡಿ ಮಾಲಿಕರು. ಅವರ ಅಂಗಡಿಗಳಲ್ಲಿ ಬಳಸಲಾದ ರಶೀದಿ ಪುಸ್ತಕದ ಮೇಲುಗಡೆ 'ದಯಾಮಯ ಹಾಗೂ ಕರುಣಾಳುವಾದ ದೇವರ ಹೆಸರಿನಲ್ಲಿ' ಎನ್ನುವ ವಿಶೇಷಣವಿದ್ದುದೇ ಅವರ ಬಂಧನಕ್ಕೆ ಕಾರಣ! ಅವರಿಬ್ಬರಿಗೂ ಐದು ವರ್ಷ ಜೈಲು ಶಿಕ್ಷೆ ವಿಧಿಸಲಾಯಿತು." (ಆ್ಯಮ್ನೆಸ್ಟಿ ಇಂಟರ್‌ನ್ಯಾಷನಲ್–ಘೋರ ಘಟನೆಗಳ ವರದಿ–ತರಂಗ 14 ಆಗಸ್ಟ್ 1988).

ಅನೇಕ ಸುಳ್ಳು ಮೊಕದ್ದಮೆಗಳಲ್ಲಿ ಅಹ್ಮದೀಯರನ್ನು ಸಿಲುಕಿಸುವ ಪ್ರಯತ್ನ ಕೂಡ ಪಾಕಿಸ್ತಾನದಲ್ಲಿ ನಡೆಯುತ್ತಿದೆ. ಮೌಲಾನಾ ಅಸ್ಲಂ ಖುರೈಷಿ ಎಂಬ ಹೆಸರಿನ ಓರ್ವ ವ್ಯಕ್ತಿ 1983ರಲ್ಲಿ ಪಾಕಿಸ್ತಾನದಲ್ಲಿ ಅಪ್ರತ್ಯಕ್ಷರಾದರು. ಎಷ್ಟು ಶೋಧ ನಡೆಸಿಯೂ ಅವರ ಇರುವಿಕೆಯ ಬಗ್ಗೆ ಯಾರಿಗೂ ಏನೂ ತಿಳಿಯಲಿಲ್ಲ. ಈ ಮೌಲವಿಯು ಅಹ್ಮದೀಯರ ಪಕ್ಕಾ ವಿರೋಧಿಯಾದ ಕಾರಣ ಅವರೇ ಈ ಮೌಲವಿಯನ್ನು ಸಂಹರಿಸಿರಬೇಕೆಂದು ಪಾಕಿಸ್ತಾನದಲ್ಲಿಡೀ ವದಂತಿ ಹಬ್ಬಿಸಲಾಯಿತು. ವದಂತಿಯು ಕಾಲಕ್ರಮೇಣ ವಾಸ್ತವ ರೂಪದಲ್ಲೆಂಬಂತೆ ಪ್ರಸರಿಸಲಾರಂಭವಾಯಿತು. ಅಹ್ಮದಿಯಾ ಜಮಾಅತಿನ ಈಗಿನ ಇಮಾಮರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಅವರ ಸೂಚನೆಯಂತೆ ಈ ಮೌಲಾನಾರನ್ನು ಅಪಹರಿಸಿ ಕೊಂಡೊಯ್ದ ನಂತರ ವಧಿಸಲಾಗಿದೆ ಎಂದು ಮೊಕದ್ದಮೆ ಸಹ ಹೂಡಲಾಯಿತು. ಈ ಕೊಲೆಯ ಆರೋಪದ ಮೇರೆಗೆ ಅಹ್ಮದಿಯಾ ಖಲೀಫರನ್ನು ಬಂಧಿಸಿ ಜೈಲಿಗೆ ಕಳುಹಿಸಬೇಕೆಂಬುದು ವಿರೋಧಿಗಳ ಬೇಡಿಕೆಯಾಗಿತ್ತು.

ಈ ರೀತಿ ತಮ್ಮಿಂದ ಸಾಧ್ಯವಾದ ಎಲ್ಲಾ ತರದ ದೌರ್ಜನ್ಯ, ಅತ್ಯಾಚಾರಗಳನ್ನು ಅಹ್ಮದೀಯರ ವಿರುದ್ಧ ಮಾಡಲಾದರೂ ಕೂಡ ಈ ಎಲ್ಲಾ ಹಿಂಸೆಗಳನ್ನು ತಮ್ಮ ನೇತಾರರಾದ ಖಲೀಫರ ನಿರ್ದೇಶದಂತೆ ಅಹ್ಮದೀಯರು ಅತ್ಯಂತ ತಾಳ್ಮೆಯಿಂದ ಸಹಿಸಿಕೊಂಡು ಬಂದಿದ್ದಾರೆ. ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅವರ ತತ್ತ್ವೋಪದೇಶಗಳ ಪ್ರಕಾರ ಅಭೂತಪೂರ್ವ ಸಹನೆಯನ್ನು ಪ್ರದರ್ಶಿಸಿ ಪಾಕಿಸ್ತಾನದ ಅಹ್ಮದೀಯರು ಇತಿಹಾಸ ನಿರ್ಮಿಸಿದ್ದಾರೆ. ಆದರೆ, ಇದೆಷ್ಟು ಕಾಲ ಮುಂದುವರಿಯಬೇಕು? ಈ ಅನ್ಯಾಯ, ದೌರ್ಜನ್ಯ, ಹಿಂಸಾಚಾರಕ್ಕೆ ಕೊನೆಯಿಲ್ಲವೇ?

ಅಹ್ಮದಿಯಾ ಜಮಾಅತಿನ ಇಮಾಮರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಅವರು ಈ ವಿವಾದವನ್ನು ಸರ್ವಲೋಕಗಳ ಪರಿಪಾಲಕನಾದ ಸರ್ವಶಕ್ತನಾದ ಅಲ್ಲಾಹನ ನ್ಯಾಯಾಲಯದಲ್ಲಿ ಸಮರ್ಪಿಸುತ್ತಾ 1988ನೇ ಜೂನ್ 10ರಂದು ವಿಶ್ವದ ಎಲ್ಲಾ ಅಹ್ಮದಿಯಾ ವಿರೋಧಿಗಳನ್ನೂ ವಿಶೇಷತಃ ಪಾಕಿಸ್ತಾನದ ಆಡಳಿತಾಧಿಕಾರಿಗಳನ್ನೂ ತಥಾಕಥಿತ ಶರೀಅತ್ ಕೋರ್ಟಿನ ನ್ಯಾಯಾಧೀಶರುಗಳನ್ನೂ ಅಹ್ಮದಿಯ್ಯತ್ತಿನ ವಿರುದ್ಧ, ಇಲ್ಲದ ಸುಳ್ಳುಗಳನ್ನು ಸೃಷ್ಟಿಸಿ ಜನರೆಡೆಯಲ್ಲಿ ವಿದ್ವೇಷದ ವಿಷಜ್ವಾಲೆ ಹಬ್ಬಿಸುತ್ತಿರುವ ಸಕಲ 'ಉಲಮಾ' ವರ್ಗದವರನ್ನೂ ಸಂಬೋಧಿಸುತ್ತಾ ಅಹ್ಮದಿಯಾ ಜಮಾಅತಿನ ಕಡೆಯಿಂದ ಒಂದು "ಮುಬಾಹಲ ಚಾಲೆಂಜ್"* ಘೋಷಿಸಿದರು.

---

* 'ಮುಬಾಹಲ' ಅಂದರೆ, ಸತ್ಯ–ಅಸತ್ಯಗಳ ನಿರ್ಣಯಕ್ಕಾಗಿ ನಡೆಸುವ ಪ್ರಾರ್ಥನಾ ಸಮರವಾಗಿದೆ. ಪವಿತ್ರ ಖುರ್‌ಆನಿನಲ್ಲಿ ಇದರ ಕುರಿತು ಪ್ರಸ್ತಾಪವಿದೆ (3 : 62). ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರೊಂದಿಗೆ ಧಾರ್ಮಿಕ ವಿಷಯದಲ್ಲಿ ವಾದ–ವಿವಾದ ನಡೆಸಲು ನಜ್ರಾನಿನಿಂದ 60 ಸದಸ್ಯರನ್ನೊಳಗೊಂಡ ಕ್ರೈಸ್ತ ಮತಪಂಡಿತರ ಒಂದು ಸಂಘವು ಮದೀನಕ್ಕೆ ಆಗಮಿಸಿತು. ಪೈಗಂಬರರ ಪ್ರವಾದಿತ್ವ, ಇಸ್ಲಾಂ ಧರ್ಮದ ಸತ್ಯತೆ, ಯೇಸು ಕ್ರಿಸ್ತರ ದೇವತ್ವ ಮೊದಲಾದ ವಿಷಯಗಳಲ್ಲಿ ಸುದೀರ್ಘವಾಗಿ ಪೈಗಂಬರರೊಡನೆ ವಾದ-ವಿವಾದ ನಡೆಸಿಯೂ ಅವರಿಗೆ ಸತ್ಯವನ್ನು ಮನದಟ್ಟು ಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಎಲ್ಲಾ ರೀತಿಯ ಪುರಾವೆಗಳನ್ನು ವಿವರಿಸಿದ ಬಳಿಕವೂ ಸತ್ಯವನ್ನು ಗ್ರಹಿಸಿಕೊಳ್ಳಲು ವಿಫಲರಾದ ಫಾದರ್ ಅಬ್ದುಲ್ ಮಸೀಹ್ ಎಂಬವರ ನೇತೃತ್ವದ ಆ ತಂಡದೊಡನೆ ಕೊನೆಯದಾಗಿ ಹಝ್ರತ್ ಪೈಗಂಬರರು ಪವಿತ್ರ ಖುರ್‌ಆನ್ ನಿರ್ದೇಶಿಸುವ ಪ್ರಾರ್ಥನಾ ಸಮರದ

ವಿಶ್ವ ಅಹ್ಮದಿಯಾ ಸಂಘಟನೆಯು ಪರವಾಗಿ ಅದರ ಇಮಾಮರು ಪಂಥಾಹ್ವಾನದ ಈ ಘೋಷಣೆಯನ್ನು ಲೋಕದ ಮುಂದೆ ಸಮರ್ಪಿಸುವಾಗ ಅದರ ಸವಿಸ್ತಾರವಾದ ವಿವರಣೆಯನ್ನೂ "ಮುಬಾಹಲಕ್ಕೆ" ಕರೆ ನೀಡಲು ಕಾರಣವಾದ ಹಿನ್ನೆಲೆಯನ್ನೂ ಜೂನ್ 3 ಮತ್ತು 10ನೇ ದಿನಾಂಕಗಳ ಶುಕ್ರವಾರದ ಖುತ್‌ಬಾಗಳಲ್ಲಿ ವಿವರಿಸಿದ್ದರು. ಅವುಗಳಿಂದ ಆಯ್ದ ಕೆಲವು ಭಾಗಗಳನ್ನು ಇಲ್ಲಿ ಉದ್ಧರಿಸುತ್ತೇನೆ:

"............ದುರದೃಷ್ಟದಿಂದ ಪಾಕಿಸ್ತಾನವು ಹಝ್ರತ್ ಇಮಾಂ ಮಹ್‌ದಿಯವರ ವಿರೋಧದ ಬಾವುಟವನ್ನು ಎತ್ತಿ ಹಿಡಿದಿದೆ. ಪಾಕಿಸ್ತಾನದ ನತದೃಷ್ಟ ಅಧ್ಯಕ್ಷ (ಜ। ಜಿಯಾಉಲ್‌ಹಕ್)– ಮೊದಲು ಅವರೊಬ್ಬ ಸರ್ವಾಧಿಕಾರಿಯ ರೂಪದಲ್ಲಿ ಪ್ರತ್ಯಕ್ಷಗೊಂಡು ನಂತರ ಅಧ್ಯಕ್ಷಗಾದಿಯ ಮುಸುಕು ಹೊದ್ದು ಮತ್ತೆ ಪುನಃ ಅಧಿಕಾರ ಶಾಹಿತ್ವದ ಕಡೆ ತಿರುಗಿ, ಕೊನೆಗೆ (ಜುನೆಜೋ ಸರಕಾರವನ್ನು ವಿಸರ್ಜಿಸಿ ಚುನಾವಣೆ ಘೋಷಿಸಿದ) ಇತ್ತೀಚೆಗಿನ ಘಟನಾವಳಿಗಳಿಂದ ತಾನೊಬ್ಬ ಸರ್ವಾಧಿಕಾರಿಯೆಂದು ಬಹಿರಂಗ ಪಡಿಸಲು ಇಚ್ಛಿಸದ, ಆದರೆ ಸ್ವೇಚ್ಛಾಧಿಪತ್ಯದ ಕಡೆಗೆ ಸ್ಪಷ್ಟ ಹೆಜ್ಜೆಯನ್ನಿಡುತ್ತಿರುವ, ಆ ಮೂಲಕ ತನ್ನ ಅಧಿಕಾರವಧಿಯನ್ನು ವಿಸ್ತರಿಸಲು ಪ್ರಯತ್ನಿಸುತ್ತಿರುವ – ಅವರು ಹಝ್ರತ್ ಮಸೀಹ್ ಮೌಊದ್ (ಅ) ರವರ ಈ ಕಾಲದ ಅತಿದೊಡ್ಡ ಶತ್ರುವಾಗಿದ್ದಾರೆ. ಅವರೊಂದಿಗೆ ಅವರ ಸಹಕಾರಿಗಳಾಗಿರುವ ಉಲಮಾಗಳೂ ಕೂಡ ದುರುಕ್ತಿ ಮತ್ತು ನೀಚ ಮಾತುಗಳಲ್ಲಿ ಹದ್ದು ಮೀರಿದ್ದಾರೆ............ ಈ ವಿಷಯದಲ್ಲಿ ಮುಖ್ಯವಾದುದು ತಿಳುವಳಿಕೆಯ ವಿಚಾರವಾಗಿದೆ. ಇವರಿಗೆ ಸಂಗತಿಗಳ ತಿಳುವಳಿಕೆ ನೀಡಲು ನಾನು ಶಕ್ತಿಮೀರಿ ಶ್ರಮಿಸಿದ್ದೇನೆ. ನೀವು ನಿಮ್ಮ ಸ್ಥಾನಮಾನಗಳ ಮತ್ತು ನಿಮ್ಮ ಕರ್ತವ್ಯಗಳ ಕಡೆಗೆ ಗಮನ ಹರಿಸಿರಿ. ನಿಮ್ಮ ಸ್ವಂತ ವಿನಾಶಕ್ಕೆ ಆಹ್ವಾನ ನೀಡುವಂತಹ ಸಂಗತಿಗಳಲ್ಲಿ ನೀವು ವಿನಾಕಾರಣ ತಲೆಹಾಕಬೇಡಿರಿ ಎಂದು ನಾನು ಈ ಕೋಮಿನ ಜನರನ್ನು ಹಲವಾರು ವಿಧದಿಂದ ಉಪದೇಶಿಸಿ

---

ಈ 'ಮುಬಾಹಲ ಪಂಥಾಹ್ವಾನ'ವನ್ನು ಪ್ರಸ್ತಾಪಿಸಿದರು. ಪವಿತ್ರ ಖುರ್‌ಆನಿನ ವಚನ ಈ ರೀತಿಯಿದೆ: "ಬನ್ನಿರಿ,ನಮ್ಮ ಮಕ್ಕಳನ್ನೂ ನಿಮ್ಮ ಮಕ್ಕಳನ್ನೂ ನಾವು ಕರೆಯೋಣ, ನಮ್ಮ ಸ್ತ್ರೀಯರನ್ನೂ ನಿಮ್ಮ ಸ್ತ್ರೀಯರನ್ನೂ ನಮ್ಮ ಕಡೆಯ ಜನರನ್ನೂ ನಿಮ್ಮ ಕಡೆಯ ಜನರನ್ನೂ ನಾವು ಕರೆದುಕೊಂಡು 'ಅಸತ್ಯವಾದಿಗಳ ಮೇಲೆ ಅಲ್ಲಾಹನ ಶಾಪ ಬೀಳಲಿ' ಎಂದು ಪ್ರಾಮಾಣಿಕವಾಗಿಯೂ ವಿನಯಪೂರ್ವಕವಾಗಿಯೂ ಪ್ರಾರ್ಥಿಸುವ." (3 : 62) ಸತ್ಯವಾದಿಗಳಿಗೆ ಬೆಂಬಲ ನೀಡುವ ಸರ್ವಶಕ್ತನಾದ ಒಬ್ಬ ಜೀವಂತ ದೇವನ ಅಸ್ತಿತ್ವದಲ್ಲಿ ನಂಬಿಕೆಯಿರುವ ಧರ್ಮ ವಿಶ್ವಾಸಿಗಳಿಗೆ ಕೊನೆಯ ಹಾಗೂ ನಿರ್ಣಾಯಕ ಅಸ್ತ್ರವಾಗಿದೆ ಈ ಪ್ರಾರ್ಥನಾ ಸಮರ. ಈ ರೀತಿಯ ಪ್ರಾರ್ಥನಾ ಸಮರಕ್ಕೆ ಸನ್ನದ್ಧರಾದ ಉಭಯ ಪಕ್ಷಗಳ ಮಧ್ಯೆ ಸ್ಪಷ್ಟವಾದ ದೈವಿಕ ನಿರ್ಣಯವು ಪ್ರಕಟವಾಗಿ ಅಸತ್ಯವಾದಿಗಳು ನಾಶಹೊಂದಿದ ಅನೇಕ ಉದಾಹರಣೆಗಳು ಮತಚರಿತ್ರೆಯಿಂದ ನಮಗೆ ಲಭಿಸುತ್ತವೆ.

ಮುಬಾಹಲ ಅಂದರೆ, ಜಗನ್ನಿಯಾಮಕನೂ ಸರ್ವಶಕ್ತನೂ ಆದ ದೇವನ ನ್ಯಾಯಾಲಯದಲ್ಲಿ ಅಂತಿಮ ತೀರ್ಮಾನಕ್ಕಾಗಿ ಸಲ್ಲಿಸುವ ಒಂದು ಫಿರ್ಯಾದಿಯಾಗಿದೆ. ಸತ್ಯವನ್ನು ಬಹಿರಂಗಪಡಿಸಿ, ಸತ್ಯಪಕ್ಷವನ್ನು ಅನುಗ್ರಹಿಸಲಿಕ್ಕೂ ಅದೇ ರೀತಿ ಅಸತ್ಯವಾದಿಗಳ, ಸುಳ್ಳು ಸೃಷ್ಟಿಸಿ ಜನರನ್ನು ವಂಚಿಸುತ್ತಿರುವವರ ಮೇಲೆ ದೇವರ ಶಾಪವೆರಗಿ ಅವರು ನಾಶಹೊಂದಲಿಕ್ಕೂ ಹಾಗೆ ಸತ್ಯಾಸತ್ಯದ ಸ್ಪಷ್ಟ ವಿಂಗಡನೆಗಾಗಿ ದೇವರೊಡನೆ ಮೊರೆಯಿಡುವ ಒಂದು ಸಾಮೂಹಿಕ ಪ್ರಾರ್ಥನೆ. ಈ ಜಗತ್ತಿನ ಹಿಂದೆ ಒಬ್ಬ ಜೀವಂತ ದೇವನ ಅಸ್ತಿತ್ವವಿದೆಯೆಂಬ ಸತ್ಯವನ್ನು ಲೋಕಕ್ಕೆ ತೋರಿಸಿಕೊಡಬಲ್ಲ ಒಂದು ದಿವ್ಯ ಪ್ರಕ್ರಿಯೆಯಾಗಿದೆ ಮುಬಾಹಲ ಎಂಬುದು.

ಮುಬಾಹಲ ಪಂಥಾಹ್ವಾನದಲ್ಲಿ ಭಾಗಿಯಾಗುವವರು ಅವರವರ ಕಡೆಯ ಚಿಕ್ಕ–ದೊಡ್ಡ, ಸ್ತ್ರೀ–ಪುರುಷರೆಲ್ಲರನ್ನೂ ಒಟ್ಟು ಸೇರಿಸಿ ಒಂದು ಸ್ಥಳದಲ್ಲಿ ಹಾಜರಾಗಬೇಕೆಂಬ ನಿರ್ಬಂಧವಿಲ್ಲ. ವಿಶ್ವ ಅಹ್ಮದಿಯಾ ಜಮಾಅತಿನ ಕಡೆಯಿಂದ ಅದರ ಖಲೀಫಾರವರು ಆ ಜಮಾಅತಿನ ಎಲ್ಲಾ ಚಿಕ್ಕವರ, ದೊಡ್ಡವರ, ಸ್ತ್ರೀಯರ, ಪುರುಷರ ಪರವಾಗಿ ಮುಬಾಹಲ ಘೋಷಿಸಿ ಆಗಿದೆ. ಅಹ್ಮದಿಯಾ ಜಮಾಅತನ್ನು ಅಸತ್ಯವೆಂದು ನಂಬುವ, ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ)ರವರ ದೇವ ನಿಯೋಜಿತ ವಾದವನ್ನು ಅಲ್ಲಗಳೆಯುವ ಯಾರೇ ಆದರೂ ತಮ್ಮ ಸಮಾನ ಚಿಂತಕರಾದ ಚಿಕ್ಕ–ದೊಡ್ಡ ಹಾಗೂ ಬಂಧುಬಳಗದ ಎಲ್ಲರನ್ನೂ ಸೇರಿಸಿಕೊಂಡು ಈ ಪಂಥಾಹ್ವಾನ ಸ್ವೀಕರಿಸಿದ್ದಾಗಿ ಬಹಿರಂಗಪಡಿಸಿದರೆ. ಅವರು ಮುಬಾಹಲದಲ್ಲಿ ಪ್ರವೇಶಿಸಿದಂತೆ ಆಗುವುದು. ಲಭ್ಯವಿರುವ ಎಲ್ಲಾ ವಾರ್ತಾ ಮಾಧ್ಯಮಗಳ ಮೂಲಕ ಅವರದನ್ನು ಬಹಿರಂಗಪಡಿಸಿಕೊಂಡು, ದೇವರ ತೀರ್ಮಾನಕ್ಕಾಗಿ ಪ್ರತೀಕ್ಷಿಸಿರಬೇಕಾಗಿದೆ.

ನೋಡಿದೆ. ಎದುರು ಪಕ್ಷ ಗೌರವದೊಂದಿಗೆ ಸೌಮ್ಯವಾದ ರೀತಿಯಲ್ಲಿ ಮರ್ಯಾದೆಯಿಂದಲೂ ನಮ್ರತೆಯಿಂದಲೂ ಮಾತನಾಡಲು ಕಲಿಯಿರಿ. ದೇವನಿಯುಕ್ತನೆಂದು ವಾದಿಸುವ ಓರ್ವ ವ್ಯಕ್ತಿಯ ಸತ್ಯತೆಯು ನಿಮಗೆ ಮನವರಿಕೆಯಾಗದಿದ್ದ ಪಕ್ಷದಲ್ಲಿ ನೀವು ಮೌನವನ್ನವಲಂಬಿಸಿರಿ. ಅಥವಾ ನೀವು ಅವರನ್ನು ವಿರೋಧಿಸಬಯಸುವುದಿದ್ದರೂ ಸಹ ವಿರೋಧದಲ್ಲೂ ಮಾನ್ಯತೆಯ ಮಾರ್ಗವನ್ನು ಅವಲಂಬಿಸಿರಿ. ಆ ಬಗ್ಗೆ ಪವಿತ್ರ ಖುರ್‌ಆನ್ ಏನು ಮಾರ್ಗದರ್ಶನ ನೀಡಿದೆಯೋ ಅದನ್ನು ಕೈಬಿಡಬೇಡಿರಿ,...... ಆದುದರಿಂದ ಹೆಚ್ಚೆಂದರೆ ಈ ವ್ಯಕ್ತಿಯು ಅಲ್ಲಾಹನ ಕಡೆಯಿಂದ ಬಂದಿರುವ ಬಗ್ಗೆ ನಮಗೆ ಸಾಬೀತಾಗುವುದಿಲ್ಲ ಎಂದು ಮಾತ್ರ ಹೇಳಿರಿ. ಅಲ್ಲದೆ, ಸುಳ್ಳು ಆರೋಪಗಳನ್ನು ಹೊರಿಸಿ ದೌರ್ಜನ್ಯವೆಸಗಲು ನಿಮಗೆ ಹಕ್ಕು ಇರುವುದಿಲ್ಲ....... ನೀವು ಅಲ್ಲಾಹನನ್ನು ಭಯಪಡಿರಿ. ಬಹಳ ಎಚ್ಚರಿಕೆಯಿಂದಿರಿ. ಒಬ್ಬ ವಾದಿಯನ್ನು ನಿರಾಕರಿಸುವಲ್ಲಿ ಆತುರಪಡಬೇಡಿರಿ.

"ಈ ರೀತಿಯಿಂದೆಲ್ಲಾ ಮುಸಲ್ಮಾನರನ್ನು ನಾನು ಉಪದೇಶಿಸಿದ್ದೇನೆ. ಅಲ್ಲಾಹನು ನನಗೆ ಒದಗಿಸಿಕೊಟ್ಟ ಸಂದರ್ಭ ಮತ್ತು ಸಾಮರ್ಥ್ಯವನ್ನು ಪರಮಾವಧಿ ಉಪಯೋಗಿಸಿಕೊಂಡು ಹಲವಾರು ನಮೂನೆಯಲ್ಲಿ ನಾನು ಇವರನ್ನು ಉಪದೇಶಿಸಿದ್ದೇನೆ. ಕೆಲವು ವರ್ಷಗಳಿಂದ ನಿರಂತರವಾಗಿ ಈ ಜನರಿಗೆ ಮತ್ತು ಅವರ ಮುಂದಾಳುಗಳಿಗೆ ಹಾಗೂ ವಿರೋಧಿಸುವಲ್ಲಿ ಅನ್ಯಾಯ ವರ್ತಿಸುವ ವಿರೋಧಿ ನೇತಾರರಿಗೆ ಪವಿತ್ರ ಖುರ್‌ಆನ್ ನಿರ್ದೇಶಿಸುವ ಭಾಷೆಯಲ್ಲಿ, ಅದರ ಉಪದೇಶಗಳ ಬೆಳಕಿನಲ್ಲಿ ನಾನು ಮನವರಿಕೆ ನೀಡಲು ಪ್ರಯತ್ನಿಸಿದ್ದೇನೆ. ಆದರೆ, ಈ ಎಲ್ಲಾ ಮಾತುಗಳೂ ಕಿವುಡರಿಗೆ ಹೇಳಿದ ಮಾತುಗಳೆಂದು ಈಗ ಸಾಬೀತಾಗಿದೆ. ಯಾವ ವಿಧಾನದಿಂದಲೂ ಈ ಜನರು ತಮ್ಮ ವಿರೋಧದ ವಿದ್ವೇಷದಿಂದ ಹೊರಬರುವ ಲಕ್ಷಣ ಕಾಣುತ್ತಿಲ್ಲ. ಮಾತ್ರವಲ್ಲ, ಅವರಲ್ಲಿ ಕೆಲವರು ತಮ್ಮ ದುರ್ನಡತೆಗಳಲ್ಲಿ ಮತ್ತೂ ಹೆಚ್ಚು ಮುಂದುವರಿದು ಹದ್ದು ಮೀರಿ ವರ್ತಿಸಲು ತೊಡಗಿದ್ದಾರೆ,............

"ಆದುದರಿಂದ ಈಗ, ಈ ಶತಮಾನ ಕೊನೆಗೊಳ್ಳುವುದರ ಮುಂಚಿತವಾಗಿ ಈ ಜನರನ್ನು ಪವಿತ್ರ ಖುರ್‌ಆನ್ ನಿರ್ದೇಶಿಸುವ ಪ್ರಕಾರ 'ಮುಬಾಹಲ'ಕ್ಕಾಗಿ ಆಹ್ವಾನಿಸುವುದು ಅನಿವಾರ್ಯವಾಗಿದೆ. ಉಪದೇಶ ಮತ್ತು ವಾದ ವಿವಾದಗಳ ಬಾಗಿಲನ್ನು ಇವರೇ ಸ್ವಯಂ ಮುಚ್ಚಿಬಿಟ್ಟಿದ್ದಾರೆ. ಹಝ್ರತ್ ಮಸೀಹ್ ಮೌಊದ್ (ಅ) ಅವರನ್ನು ನಿಂದಿಸುವ ಮತ್ತು ನಿಕೃಷ್ಟಗೊಳಿಸುವ ಕೃತಿಗಳೂ ಪುಸ್ತಕಗಳೂ ದೇಶ ವಿದೇಶಗಳಲ್ಲಿ ವಿತರಿಸಲ್ಪಡುತ್ತಿವೆ. ಪಾಕಿಸ್ತಾನದಲ್ಲಿ ಈಗಂತೂ ಅಹ್ಮದಿಯ್ಯತ್ತಿನ ವಿರುದ್ಧ ಅತ್ಯಂತ ಅಪತ್ಕಾರಿ ನಿಲುವನ್ನು ತಳೆಯಲಾಗಿದೆ. ಅದರ ವಿರುದ್ಧ ಯಾವ ರೀತಿಯ ಅನ್ಯಾಯ, ಹಿಂಸೆ, ಅತ್ಯಾಚಾರ, ದೌರ್ಜನ್ಯ, ಅಪಪ್ರಚಾರಕ್ಕೂ ಅವರು ಹೇಸುವುದಿಲ್ಲ. ಅತ್ಯಂತ ನೀಚ ಸುಳ್ಳು ಆರೋಪಗಳನ್ನೊಳಗೊಂಡ ಪುಸ್ತಕಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಪ್ರಸಾರಗೊಳಿಸಲಾಗುತ್ತಿದೆ...........ಒಟ್ಟಿನಲ್ಲಿ ಅಲ್ಲಾಹನ ಶಾಪವನ್ನು ಆಹ್ವಾನಿಸುವ ಏನೆಲ್ಲಾ ವಿಧಾನಗಳಿವೆಯೋ ಅವೆಲ್ಲವನ್ನೂ ಅವರು ಸ್ವೀಕರಿಸಿದ್ದಾರೆ. ಆದುದರಿಂದ ಈಗ ತಿಳುವಳಿಕೆ ಹೇಳುವ ಕಾಲವು ಮೀರಿ ಹೋಗಿರುತ್ತದೆ. ಇವೆಲ್ಲಕ್ಕೂ ಮಿಗಿಲಾಗಿ, ಇವರ ಈ ಕ್ಷುದ್ರ ಕೃತಿಗಳಿಗೆ ಅಹ್ಮದಿಯಾ ಜಮಾಅತಿನ ಕಡೆಯಿಂದ ಉತ್ತರ ನೀಡುವ ಕೃತಿಗಳನ್ನು ಪ್ರಕಟಿಸಿ ಜನರಿಗೆ ಯಥಾರ್ಥದ ಅರಿವನ್ನುಂಟು ಮಾಡಲು ಪ್ರಯತ್ನಿಸಿದರೆ, ಅಂತಹ ಪುಸ್ತಕಗಳ ಪ್ರಕಾಶಕರನ್ನೂ ವಿತರಣೆ ಮಾಡುವವರನ್ನೂ ಬಂಧಿಸಲಾಗುತ್ತದೆ! ಪುಸ್ತಕಗಳಿಗೆ ಮುಟ್ಟುಗೋಲು ಹಾಕಲಾಗುತ್ತದೆ. ಈ ಕಳೆದ ಕೆಲವು ವರ್ಷಗಳಲ್ಲಿ ನೂರಾರು ಅಹ್ಮದಿಯಾ ಕೃತಿಗಳಿಗೂ ಕರ ಪತ್ರಗಳಿಗೂ ಪತ್ರಿಕೆಗಳಿಗೂ ಈ ರೀತಿ ಮುಟ್ಟುಗೋಲು ಹಾಕಲಾಗಿದೆ. ಸಾವಿರಾರು ಅಹ್ಮದೀಯರನ್ನು ದಸ್ತಗಿರಿ ಮಾಡಲಾಗಿದೆ. ಇಂತಹ ಕಠೋರ ಅನ್ಯಾಯವನ್ನು ಪಾಕಿಸ್ತಾನದಲ್ಲಿ ಅಹ್ಮದೀಯರ ವಿರುದ್ಧ ಮಾಡಲಾಗುತ್ತದೆ. ಆದುದರಿಂದ ಈಗ ಪವಿತ್ರ ಖುರ್‌ಆನ್ ಹೇಳುವಂತೆ لا حُجَّةَ بَيْنَنَا وَبَيْنَكُمْ 'ನಮ್ಮ ನಿಮ್ಮೊಳಗೆ ಸಮಜಾಯಿಶಿಯ ಯಾವುದೇ ಅಂಶವೂ ಇನ್ನು ಬಾಕಿ ಉಳಿದಿರುವುದಿಲ್ಲ' ಎಂಬ ಅವಸ್ಥೆ ಉಂಟಾಗಿರುತ್ತದೆ. ಈ ಪರಿಸ್ಥಿತಿ

ಉಂಟಾದ ನಂತರ 'ಮುಬಾಹಲ' ಪ್ರಾರ್ಥನೆಗಾಗಿ ಇವರನ್ನು ಆಮಂತ್ರಿಸುವ ವಿನಾ ಬೇರೆ ಯಾವ ಮಾರ್ಗವೂ ಇರುವುದಿಲ್ಲ.

"ಈ ಕುರಿತು ಮುಖ್ಯವಾಗಿ ತಿಳಿಯಬೇಕಾದ ಅಂಶವೆಂದರೆ, ಇಲ್ಲಿ ನಿಜವಾದ ವಾದಿ ನಾನೋ ಈ ಜಮಾಅತಿನ ಸದಸ್ಯರೋ ಆಗಿರುವುದಿಲ್ಲ. ವಾದಿ ಹಝ್ರತ್ ಮಸೀಹ್ ಮೌಊದ್ (ಅ) ಆಗಿರುತ್ತಾರೆ. ಆದರೆ, ಅವರ ಜಮಾಅತಿನ ಸದಸ್ಯರಾದ ನಾವೆಲ್ಲರೂ ಅವರನ್ನು ಪ್ರತಿನಿಧೀಕರಿಸಿಕೊಂಡು ನಮ್ಮ ಜೀವ, ಸ್ವತ್ತು ಹಾಗೂ ಅಭಿಮಾನಗಳನ್ನು ಇಲ್ಲಿ ಒತ್ತೆಯಿಡಲು ತಯಾರಾಗಬೇಕಾಗಿದೆ. ಈ ಜವಾಬ್ದಾರಿಕೆಯ ಪೂರ್ಣ ಪ್ರಜ್ಞೆಯೊಂದಿಗೆ ನಾನು ಹಝ್ರತ್ ಮಸೀಹ್ ಮೌಊದರ 'ಮುಬಾಹಲ'ದ ಆ ಸವಾಲನ್ನು ಈಗ ಲೋಕದ ಮುಂದೆ ಪುನರುಚ್ಚರಿಸುತ್ತೇನೆ. ಒಂದು ನೂರು ವರ್ಷಗಳ ಹಿಂದೆ ಧ್ವನಿಗೊಂಡ ಆ ಪಂಥಾಹ್ವಾನಕ್ಕೆ ಮಾರೊಡ್ಡಿದ ಅನೇಕಾನೇಕ ಮೌಲಾನಾಗಳೂ ಅವರ ಚೇಲಾಗಳೂ ಅಲ್ಲಾಹನ ಶಾಪದ ಬೆಂಕಿಯಲ್ಲಿ ಬಿದ್ದು ಸುಟ್ಟು ಬೂದಿಯಾಗಿದ್ದಾರೆ! ಆದರೂ ಕೆಲವರು ಮತ್ತೂ ತಮ್ಮ ದುಷ್ಟಚಾಳಿಯನ್ನು ಕೈಬಿಡಲಿಲ್ಲ. ಆದುದರಿಂದ ನಾನು ಈಗ ಪುನಃ ಆ ಧ್ವನಿಯನ್ನು ಎತ್ತುತ್ತೇನೆ" (ಖುತ್‌ಬ ಜುಮುಅ 3–6–88, "ಬದ್ರ್" ಉರ್ದು ವಾರಪತ್ರಿಕೆ 21–7–88)

1988ನೇ ಜೂನ್ ಹತ್ತನೆಯ ದಿನಾಂಕದಂದು ಅಹ್ಮದಿಯಾ ಜಮಾಅತಿನ ವತಿಯಿಂದ ಅದರ ಸರ್ವೋನ್ನತ ನೇತಾರ (ಖಲೀಫ)ರಾದ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು ಲೋಕದ ಮುಂದೆ ಬಹಿರಂಗಪಡಿಸಿದ ಮುಬಾಹಲ ಪಂಥಾಹ್ವಾನವನ್ನು ಮುದ್ರಿಸಿ ಪ್ರಪಂಚದ ನಾನಾ ಕಡೆಗಳಲ್ಲೂ ನಾನಾ ಭಾಷೆಗಳಲ್ಲೂ ಪ್ರಕಟಿಸಲಾಯಿತು, ವಿಶೇಷತಃ ಪಾಕಿಸ್ತಾನದ ಮನೆ ಮನೆಗಳಿಗೂ ಈ ಮುಬಾಹಲದ ಲಕ್ಷ ಗಟ್ಟಳೆ ಪ್ರತಿಗಳನ್ನು ವಿತರಿಸಲಾಯಿತು. 'ಖಾದಿಯಾನಿ ಖಲೀಫ' ಅವರು ಜನರಲ್ ಜಿಯಾರಿಗೂ ಶರೀಅತ್ ಕೋರ್ಟಿನ ನ್ಯಾಯಾಧೀಶರಿಗೂ ಇತರ ವಿರೋಧಿ ಉಲಮಾಗಳಿಗೂ ಮುಬಾಹಲದ ಪಂಥಾಹ್ವಾನ ನೀಡಿದ್ದಾರೆಂದು ಪಾಕಿಸ್ತಾನದ ಹೆಚ್ಚಿನ ಎಲ್ಲಾ ಪತ್ರಿಕೆಗಳಲ್ಲೂ ವಾರ್ತೆ ಪ್ರಕಟವಾದವು. ಮುಬಾಹಲ ಸವಾಲಿನ ಈ ಕಿರು ಕೃತಿಯನ್ನು ವಿತರಣೆ ಮಾಡಿದ ಕಾರಣಕ್ಕಾಗಿಯೂ ಪಾಕಿಸ್ತಾನದಲ್ಲಿ ನೂರಾರು ಅಹ್ಮದೀಯರನ್ನು ಬಂಧಿಸಲಾಯಿತು.

ಅಹ್ಮದಿಯಾ ಜಮಾಅತಿನ ಇಮಾಂ ಅವರು ಸತ್ಯಾಸತ್ಯ ವಿವೇಚನೆಯ ಫಿರ್ಯಾದಿಯನ್ನು ಸರ್ವಶಕ್ತನಾದ ಅಲ್ಲಾಹನ ನ್ಯಾಯಾಲಯದಲ್ಲಿ ಸಮರ್ಪಿಸಿ, ಎದುರಾಳಿಗಳಿಗೆ ತನ್ನ ಪ್ರಾರ್ಥನಾ ಸಮರದಲ್ಲಿ ಭಾಗಿಯಾಗಲು ಪಂಥಾಹ್ವಾನ ನೀಡಿದ ಬಳಿಕವಾದರೂ ಪಾಕಿಸ್ತಾನದಲ್ಲಿ ಅಹ್ಮದೀಯರ ಮೇಲೆ ನಡೆಯುತ್ತಿದ್ದ ದಬ್ಬಾಳಿಕೆಯೂ ಹಿಂಸಾಚಾರವೂ ನಿಲ್ಲಬಹುದೆಂದು ಭಾವಿಸಲಾಗಿತ್ತು, ಯಾಕೆಂದರೆ, "ಮುಬಾಹಲ" ಎಂಬುದು ಸಮಜಾಯಿಶಿಯ ಹಾಗೂ ವಾದ ವಿವಾದಗಳ ಎಲ್ಲಾ ಮಾರ್ಗಗಳೂ ನಿಷ್ಫಲವಾಗುವ ಸಂದರ್ಭಗಳಲ್ಲಿ ಸ್ವೀಕರಿಸುವಂತಹ ನಿರ್ಣಾಯಕವೂ ಅಂತಿಮವೂ ಆದ ಮಾರ್ಗವಾಗಿರುತ್ತದೆ. ಅಹ್ಮದಿಯಾ ಜಮಾಅತಿನ ವಿಶ್ವಾಸ ಆದರ್ಶಗಳನ್ನು ಮುಬಾಹಲದಲ್ಲಿ ಅತ್ಯಂತ ನೇರವಾಗಿಯೂ ಸ್ಪಷ್ಟವಾಗಿಯೂ ಉದ್ಘೋಷಿಸಲಾಗಿದೆ. ಅದಕ್ಕಿಂತ ಭಿನ್ನವಾದ ವಿಶ್ವಾಸಗಳನ್ನು ಅಹ್ಮದಿಯಾ ಜಮಾಅತ್ ಹೊಂದಿದೆಯೆಂದು ಭಾವಿಸುವ ಪ್ರಪಂಚದ ಯಾವನೇ ವ್ಯಕ್ತಿಗೂ ಅತ್ಯಂತ ಸುಲಭವಾದ ಹಾಗೂ ಸರಳವಾದ ಈ ಮಾರ್ಗವನ್ನು ಸ್ವೀಕರಿಸಿಕೊಂಡು ಮುಬಾಹಲದಲ್ಲಿ ಭಾಗಿಯಾಗಬಹುದು. ಅಥವಾ ತಮ್ಮ ವಿಶ್ವಾಸಗಳ ಬಗ್ಗೆಯೇ ಅಹ್ಮದೀಯರು ಸುಳ್ಳು ಹೇಳುತ್ತಿರುವರೆಂದು ನಂಬುವವರಿಗೂ ಕೂಡ "ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್" (ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ) ಎಂಬ ಮುಬಾಹಲದ ಪ್ರಾರ್ಥನೆಯನ್ನು ಪುನರಾವರ್ತಿಸಿಕೊಂಡು ಅಲ್ಲಾಹನ ತೀರ್ಮಾನವನ್ನು ಪ್ರತೀಕ್ಷಿಸಬಹುದು. ಆಗ ನಿರಪರಾಧಿಗಳಾದ ಅಹ್ಮದೀಯರ ಮೇಲೆ ದಬ್ಬಾಳಿಕೆ ನಡೆಸುವುದಾಗಲಿ ವಾದ ಕೋಲಾಹಲಗಳಿಗೆ ಮುನ್ನುಗ್ಗುವ ಆವಶ್ಯಕತೆಯಾಗಲಿ ಉಳಿಯುವುದಿಲ್ಲ. ಯಾರು ಸತ್ಯವಂತರೋ ಅವರನ್ನು ಅಲ್ಲಾಹನು ಅನುಗ್ರಹಿಸುವನು; ಯಾರು ಅಧರ್ಮದಲ್ಲಿ

ರುವರೋ ಅವರನ್ನು ಅಲ್ಲಾಹನು ಶಿಕ್ಷಿಸುವನು. ತೀರ್ಮಾನವನ್ನು ಅಲ್ಲಾಹನಿಗೆ ಬಿಟ್ಟು ಪ್ರಾರ್ಥನೆಯಲ್ಲಿ ತಲ್ಲೀನರಾಗಬೇಕಾದುದು ಮಾತ್ರ ಉಭಯ ಪಕ್ಷದವರೂ ಮಾಡಬೇಕಾದ ಕೆಲಸ. ಆದರೆ, ಪಾಕಿಸ್ತಾನದಲ್ಲಿ ನಡೆದದ್ದೇ ಬೇರೆ. "ಮುಬಾಹಲ" ಘೋಷಣೆ ಆದ ಬಳಿಕ ಪಾಕ್ ಸರಕಾರವೂ ಅಲ್ಲಿನ ಮೌಲಾನಾಗಳೂ ಅಹ್ಮದೀಯರ ವಿರುದ್ಧ ರುದ್ರ ರೂಪ ತಾಳಿದರು. ಹಿಂಸಾಚಾರ ಮತ್ತೂ ಊರ್ಜಿತಗೊಂಡವು. ಮುಬಾಹಲದ ಕೃತಿಯನ್ನು ವಿತರಣೆ ಮಾಡಿದ ಕಾರಣಕ್ಕಾಗಿ ಅಲ್ಲಿ ಅನೇಕ ಅಹ್ಮದೀಯರನ್ನು ಬಂಧಿಸಲಾಯಿತು. ದುರಹಂಕಾರಿಗಳಾದ ಮೌಲಾನಾಗಳು ಮುಬಾಹಲವನ್ನು ಅದರ ಶರ್ತದ ಪ್ರಕಾರ ನೇರವಾಗಿ ಸ್ವೀಕರಿಸುವುದನ್ನು ಬಿಟ್ಟು ತಮ್ಮ ಅತಿಕ್ರಮಣಕಾರಿ ನಿಲುವಿನಲ್ಲೇ ಮುಂದುವರಿಯ ತೊಡಗಿದರು. ಮುಗ್ಧ ಜನರು ಅಹ್ಮದೀಯರ ವಿರುದ್ಧ ತಿರುಗುವಂತಾಗಲು ಅಸಂಬದ್ಧವೂ ಕುಪ್ರಚೋದಿತವೂ ಆದ ಹೇಳಿಕೆಗಳನ್ನು ಅವರು ನೀಡತೊಡಗಿದರು. ಜ। ಜಿಯಾ ತನ್ನ ಹಿಂಸಾತ್ಮಕ ನಿಲುವಿನಲ್ಲಿ ಒಂದು ಹೆಜ್ಜೆ ಮುಂದುವರಿದರೇ ವಿನಾ ಅದನ್ನು ಕಡಿತಗೊಳಿಸಲಿಲ್ಲ.

ಅಹ್ಮದಿಯಾ ಜಮಾಅತಿನ ಖಲೀಫ ಅವರು ಪಾಕ್ ಅಧ್ಯಕ್ಷರನ್ನೂ ಅಲ್ಲಿನ ಮುಲ್ಲಾ ಮೌಲಾನಾಗಳನ್ನೂ ಮತ್ತೂ ಉಪದೇಶಿಸುತ್ತಲೇ ಇದ್ದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಆಗ, ಜ। ಜಿಯಾರ ಕುರಿತು ಹಝ್ರತ್ ಖಲೀಫಾ ಅವರು ತನ್ನ 1-7-88ರ ಖುತ್‌ಬಾ ಪ್ರವಚನದಲ್ಲಿ ಈ ರೀತಿ ಹೇಳಿದರು: "......ಪಾಕಿಸ್ತಾನದ ಅಧ್ಯಕ್ಷರ ಕುರಿತು ಹೇಳುವುದಾದರೆ, ನಾವು ಪ್ರತೀಕ್ಷೆಯಲ್ಲಿದ್ದೇವೆ – ನೋಡೋಣ, ಅಲ್ಲಾಹನ ವಿಧಿ ಅದೇನು ಪ್ರಕಟಿಸುತ್ತದೆ ಎಂದು..... ಆದರೆ, ಅವರು ಮುಬಾಹಲದ ಪಂಥಾಹ್ವಾನವನ್ನು ಸ್ವೀಕರಿಸಿದರೂ ಸ್ವೀಕರಿಸದೆ ಇದ್ದರೂ ಅವರು ಎಲ್ಲಾ ವಿರೋಧಿ ನೇತಾರರ ಮುಖಂಡರಾಗಿರುವುದರಿಂದ ಎಲ್ಲರಿಗಿಂತಲೂ ಹೆಚ್ಚಿನ ಪಾಪದ ಭಾರ ಆ ಒಬ್ಬ ವ್ಯಕ್ತಿಯ ಮೇಲೆ ನಿಕ್ಷಿಪ್ತವಾಗುತ್ತದೆ. ಅವರು ನಿರಪರಾಧಿಗಳಾದ ಅಹ್ಮದೀಯರ ಮೇಲೆ ದೌರ್ಜನ್ಯವೆಸಗಿದ್ದಾರೆ. ದೌರ್ಜನ್ಯದ ಹಿಂದೆ ಬಿದ್ದು ನಿಗಾ ಇಟ್ಟು ನೋಡುತ್ತಾರೆ-ತಾನು ಆಜ್ಞೆ ಮಾಡಿದ ಹಿಂಸಾಚಾರಗಳಿಗೆ ಅಹ್ಮದೀಯರನ್ನು ಗುರಿಪಡಿಸಲಾಗುತ್ತಿದೆಯೋ ಇಲ್ಲವೋ ಎಂದು. ಓರ್ವ ನಿರಪರಾಧಿ ಅಹ್ಮದಿಯು ಯಾವ ರೀತಿಯಲ್ಲಿ ಹಿಂಸೆಗೆ ಗುರಿಯಾಗಿ ಸಂಕಟಪಡುತ್ತಿದ್ದಾನೆಂದು ಅವರು ಕುತೂಹಲದಿಂದ ವೀಕ್ಷಿಸುತ್ತಿರುತ್ತಾರೆ. ಅದರ ಬಗ್ಗೆ ವರದಿಗಳು ತಲಪಿದ ಹೊರತು ಆ ಮನುಷ್ಯನಿಗೆ ಸಂತೃಪ್ತಿ ಉಂಟಾಗುವುದಿಲ್ಲ. ಆದುದರಿಂದ **ಅಂತಹ ವ್ಯಕ್ತಿಯು ಮುಬಾಹಲವನ್ನು ಬಹಿರಂಗವಾಗಿ ಸ್ವೀಕರಿಸಬೇಕಾದ ಅಗತ್ಯ ಇರುವುದಿಲ್ಲ.** ಅವರು ತನ್ನ ದೌರ್ಜನ್ಯ ಮತ್ತು ಅನ್ಯಾಯದ ಹಾದಿಯಲ್ಲಿ ಮುಂದುವರಿಯುತ್ತಿರುವುದೇ ಮುಬಾಹಲವನ್ನು ಸ್ವೀಕರಿಸಿದ್ದಾರೆಂಬುದಕ್ಕೆ ಪುರಾವೆಯಾಗಿದೆ." (ಖುತ್‌ಬ ಜುಮಾ 1–7–88)

ಅಂದರೆ, ಸಾಮಾನ್ಯ ನಿಯಮದಂತೆ ಎದುರು ಪಕ್ಷದವರು ಮುಬಾಹಲ ಪ್ರಾರ್ಥನೆಯಲ್ಲಿ ಪಾಲ್ಗೊಂಡರೆ ಮಾತ್ರವೇ ಅದು ಅವರಿಗೆ ಅನ್ವಯವಾಗುತ್ತದೆ. ತಾವು ಪ್ರಾರ್ಥನಾ ಸಮರದಲ್ಲಿ ಭಾಗಿಯಾಗಿರುವುದಾಗಿ ಅವರು ಸ್ವಯಂ ಸ್ಪಷ್ಟವಾಗಿ ಘೋಷಿಸಬೇಕು. ಇದು ಮುಬಾಹಲದ ಸಾಮಾನ್ಯ ತತ್ವವಾಗಿದೆ. ಆದರೆ, ಜಿಯಾರ ಮಟ್ಟಿಗೆ ಸರ್ವಸಾಮಾನ್ಯವಾದ ಈ ಶರ್ತವು ಅನ್ವಯವಾಗುವುದಿಲ್ಲವೆಂದೂ ಅಹ್ಮದೀಯರ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳನ್ನು ಮುಂದುವರಿಸುತ್ತಿರುವುದೇ ಅವರು ಈ ಪ್ರಾರ್ಥನಾ ಸಮರವನ್ನು ಸ್ವೀಕರಿಸಿದ್ದಾರೆಂದು ಗ್ರಹಿಸಲು ಪರ್ಯಾಪ್ತವೆಂದೂ ಮೇಲಿನ ಹೇಳಿಕೆಯಲ್ಲಿ ಅಹ್ಮದಿಯಾ ಖಲೀಫಾ ಸ್ಪಷ್ಟಪಡಿಸುತ್ತಾರೆ.[°] ಮೇಲಿನ ಹೇಳಿಕೆಯು ಅವರಿಗೆ ತಮ್ಮ ಹಿಂಸಾತ್ಮಕ ಮಾರ್ಗದಿಂದ ದೂರ ಸರಿಯಲು ಒಂದು ಅವಕಾಶವನ್ನು ನೀಡುವಂತಹದ್ದೂ ದೇವ ಶಿಕ್ಷೆಯನ್ನು ಭಯಪಟ್ಟು ಅನ್ಯಾಯದ ಮಾರ್ಗದಿಂದ ದೂರ ಸರಿಯಲು ಪ್ರೇರೇಪಿಸುವಂತಹದ್ದೂ ಕೂಡ ಆಗಿದೆ.

ಆದರೆ ಜಿಯಾ ಹಿಂಜರಿಯಲಿಲ್ಲ. ಅಹ್ಮದೀ

---

[°] ಇದು ಜನರಲ್ ಜಿಯಾ ವಿಮಾನಾಪಘಾತದಲ್ಲಿ ಸಾಯುವುದಕ್ಕಿಂತ ಒಂದೂವರೆ ತಿಂಗಳ ಮೊದಲೇ ನೀಡಲಾದ ಹೇಳಿಕೆ ಎಂಬುದನ್ನು ಗಮನದಲ್ಲಿಡಬೇಕಾಗಿದೆ.

ಯಂರ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡಿ ಅವರನ್ನು ಬಂಧನದಲ್ಲಿಟ್ಟು ಹಿಂಸಿಸುವುದೂ ಅವ್ಯಾಹತವಾಗಿ ಮುಂದುವರಿದಾಗ ಪಾಕ್ ಅಧ್ಯಕ್ಷರಿಗೆ ಎಚ್ಚರಿಕೆ ನೀಡುವ ರೂಪದಲ್ಲಿ ಅಹ್ಮದಿಯಾ ನೇತಾರ ಈ ರೀತಿ ಹೇಳಿದರು: "....ಅವರು ಆಕ್ರಮಣದ ಈ ಪರಂಪರೆಯನ್ನು ನಿಲ್ಲಿಸದಿದ್ದಲ್ಲಿ, ಯಾರ ನ್ಯಾಯಾಲಯದಲ್ಲಿ ನಾವು ನಮ್ಮ ಫಿರ್ಯಾದಿಯನ್ನು ಸಲ್ಲಿಸಿರುತ್ತೇವೋ ಆ ಅಲ್ಲಾಹನು ಅವರ ದೌರ್ಜನ್ಯಕಾರಕ ವರ್ತನೆಗಳಿಗೆ ತಕ್ಕ ಶಿಕ್ಷೆಯನ್ನು ನೀಡಲು ಸಮರ್ಥವಾಗಿದ್ದಾನೆ." ಮತ್ತೂ ಒಂದು ಅವಕಾಶ! ಅವರು ತನ್ನ ಆಕ್ರಮಣದ ಪರಂಪರೆಯನ್ನು ನಿಲ್ಲಿಸದಿದ್ದಲ್ಲಿ......ಎಂದು. ಆದರೆ, ಸರ್ವಾಧಿಕಾರಿಯಾಗಿದ್ದ ಜಿಯಾ! ಜಗತ್ತಿನ ಅತಿ ದೊಡ್ಡ ಶಕ್ತಿಗಳಲ್ಲೊಂದಾಗಿರುವ ಅಮೇರಿಕಾದ ಸಹಾಯ ಹಸ್ತದಲ್ಲಿ ಭ್ರಮಿತನಾದ ಜಿಯಾ! ಅವರಿಗೆ ದೇವರ ಭಯ ಅದೆಲ್ಲಿಂದ ಬರಬೇಕು? ಸರ್ವ ಜಗತ್ತಿನ ಒಡೆಯನಾದ, ಎಲ್ಲ ಸರ್ವಾಧಿಕಾರಿಗಳ ಮೇಲೂ ಸರ್ವಾಧಿಕಾರ ಹೊಂದಿರುವ ಸರ್ವಶಕ್ತನಾದ ಅಲ್ಲಾಹನ ಶಕ್ತಿ, ಸಾಮರ್ಥ್ಯಗಳ ಬಗ್ಗೆ ಜಿಯಾ ಒಂದಿಷ್ಟು ಪ್ರಜ್ಞೆ ತಂದುಕೊಂಡು ನಿರಪರಾಧಿಗಳಾದ ಅಹ್ಮದೀಯರನ್ನು ಅವರ ಪಾಡಿಗೆ ಬಿಡುತ್ತಿದ್ದರೆ!

ಆದರೆ, ಜಿಯಾಗೆ ಸ್ವಲ್ಪವೂ ನಾಟಲಿಲ್ಲ. ಬಂಡೆಕಲ್ಲಿನ ಮೇಲೆ ನೀರು ಸುರಿದಂತೆ. ಆಧುನಿಕ ಫಿರ್‌ಔನನ ಅವತಾರ! ಹಜ್ರತ್ ಖಲೀಫಾ ಅವರ ಉಪದೇಶಗಳನ್ನೂ ಎಚ್ಚರಿಕೆಗಳನ್ನೂ ಜ। ಜಿಯಾ ಒಂದಿಷ್ಟೂ ಲೆಕ್ಕಿಸಲಿಲ್ಲ. ಅಹ್ಮದೀಯರ ಮೇಲೆ ನಡೆಯುತ್ತಿದ್ದ ದೌರ್ಜನ್ಯ, ಅತ್ಯಾಚಾರ ತಡೆಯಿಲ್ಲದೆ ಮುಂದುವರಿಯಿತು. ಇನ್ನೂ ಶಕ್ತಿಯುತವಾಗಿ. ವಿಧಿ ನಿರ್ಣಯವನ್ನು ತಡೆಯಲು ಯಾರಿಂದ ತಾನೆ ಸಾಧ್ಯ? ಪ್ರವಾದಿ ಮೂಸಾ (ಅ) ಅವರ ಕಾಲದಲ್ಲಿ ದೇವಧಿಕ್ಕಾರಿಯಾಗಿದ್ದ ಸರ್ವಾಧಿಕಾರಿ ಚಕ್ರವರ್ತಿ ಫಿರ್‌ಔನ್ ಎಂಬವನನ್ನು ಅವನ ಸಮಸ್ತ ಸೇನಾಶಕ್ತಿಯ ಸಮೇತ ಸಮುದ್ರದಲ್ಲಿ ಮುಳುಗಿಸಿ ನಾಶಗೊಳಿಸಿದ ಅಲ್ಲಾಹನು ಅದೇ ರೀತಿಯ ಮತ್ತೊಂದು ದೃಷ್ಟಾಂತವನ್ನು ಈ ಕಾಲದ ಜನರಿಗೆ ಪ್ರಕಟಗೊಳಿಸಲು ತೀರ್ಮಾನಿಸಿದ್ದನು. ದಬ್ಬಾಳಿಕೆಯು ಮೇರೆಮೀರಿದಾಗ ದಿನಾಂಕ 12-8-88ರಂದು ಅಹ್ಮದಿಯಾ ಖಲೀಫಾ ಹಜ್ರತ್ ಅಮೀರುಲ್ ಮೂಅ್‌ಮಿನೀನ್ ಅವರು ಜ। ಜಿಯಾರಿಗೆ ಬಂದೆರಗಲಿರುವ ಶಿಕ್ಷೆಯ ಕುರಿತು ಈರೀತಿ ಹೇಳಿದರು:

> "ಅವರು ತನ್ನ ಹಿಂಸಾತ್ಮಕ ವರ್ತನೆಯಿಂದ ಹಿಮ್ಮೆಟ್ಟದೆ ಇರುವ ಕಾರಣ ಖಂಡಿತವಾಗಿಯೂ ಅಲ್ಲಾಹನ ವಿಧಿಯು ಅವರನ್ನು ಹಿಡಿಯಲಿದೆ. ನಿಶ್ಚಯವಾಗಿಯೂ ಅವರ ಮೇಲೆ ಶಿಕ್ಷೆ ಬಂದೆರಗಲಿದೆ."

ಅಹ್ಮದಿಯಾ ಇಮಾಮರು ಈ ರೀತಿ ಹೇಳಿ ಒಂದು ವಾರ ಪೂರ್ತಿಯಾಗುವುದಿಲ್ಲ, 17-8-88ರಂದು ಪ್ರಪಂಚವು ನಡುಕ ಹುಟ್ಟಿಸುವ ಒಂದು ವಾರ್ತೆಯನ್ನು ಆಲಿಸುತ್ತದೆ. ಎಲ್ಲರನ್ನೂ ದಿಗಿಲು ಬಡಿಸುವ, ವೈಮಾನಿಕ ತಂತ್ರಜ್ಞಾನದ ಎಲ್ಲಾ ವಿದಗ್ಧರನ್ನೂ ದಂಗುಬಡಿಸುವ ವಾರ್ತೆ! ನಾಲ್ಕು ಇಂಜಿನುಗಳನ್ನೊಳಗೊಂಡ. ಪ್ರಪಂಚದ ಅತ್ಯಂತ ಶಕ್ತಿಶಾಲಿ ವಿಮಾನಗಳ ಸಾಲಿಗೆ ಸೇರಿದ ಸಿ–130 ಹರ್ಕ್ಯುಲಸ್ ಸಾರಿಗೆ ವಿಮಾನದಲ್ಲಿ ವಾಯುಮಾರ್ಗವಾಗಿ ಸಂಚರಿಸುತ್ತಿದ್ದ ಜ। ಜಿಯಾ ತನ್ನ ಅನೇಕ ಸಹಾಯಕ ಸಹಕಾರಿಗಳೊಂದಿಗೆ ಧ್ವಂಸಗೊಂಡು ನುಚ್ಚುನೂರಾದರು!!

ಅವರು ಚಲಿಸುತ್ತಿದ್ದ ವಿಮಾನವು ಸಾಮಾನ್ಯ ನೆಲೆಯಲ್ಲಿ ದುರಂತಕ್ಕೀಡಾಗುವುದು ಸಾಧ್ಯವಿಲ್ಲವೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಜಿಯಾರಿಗೆ ಪಾರಿತೋಷಕವಾಗಿ ನೀಡಲಾಗಿದ್ದ ಮಾವಿನ ಹಣ್ಣುಗಳ ಬುಟ್ಟಿಯೊಳಗೆ ಬಾಂಬು ಇಡಲಾಗಿತ್ತೆಂದೂ ಆ ಬಾಂಬು ಸ್ಫೋಟಗೊಂಡುದೇ ದುರ್ಘಟನೆಗೆ ಕಾರಣವೆಂದೂ ಒಂದು ಗುಮಾನಿ ಇದೆ. ಭೂಮಿಯಿಂದಲೇ ಕ್ಷಿಪಣಿ ಪ್ರಯೋಗಿಸಿ ವಿಮಾನವನ್ನು ಹೊಡೆದುರುಳಿಸಲಾಯಿತೆಂದು ಮತ್ತೆ ಕೆಲವರು ಅನುಮಾನಿಸುತ್ತಾರೆ. ಆದರೆ, ಜಿಯಾರ ಪತನಕ್ಕೆ ಕಾರಣವಾದ ವಿಮಾನಾಪಘಾತ ಹೇಗೆ ಸಂಭವಿಸಿತೆಂದು ನಿಖರವಾಗಿ ಹೇಳಲು ಅಮೇರಿಕಾದ ಪರಿಣತ ತಜ್ಞರನ್ನೊಳಗೊಂಡ ಸಂಶೋಧನಾ ತಂಡಕ್ಕಾಗಲಿ ಇತರ ಯಾರಿಗೇ ಆಗಲಿ ಇದುವರೆಗೆ ಸಾಧ್ಯವಾಗಲಿಲ್ಲ. ಮಾನವ ಹಸ್ತಕ್ಷೇಪವೆಂದು ಶಂಕಿ

ಸಲು ಎಡೆಯಿರದಂತಹ ಹಾಗೂ ದೇವ ಶಿಕ್ಷೆಯೆಂದು ಸ್ಪಷ್ಟವಾಗಿ ಪ್ರಕಟವಾಗುವ ರೀತಿಯ ಶಿಕ್ಷೆಯು ಬಂದೆರಗಲಿ ಎಂಬ ಮುಬಾಹಲ ಪ್ರಾರ್ಥನೆಯ ವಾಕ್ಯವನ್ನು ನಾವು ಇಲ್ಲಿ ಮತ್ತೊಮ್ಮೆ ನೆನಪಿಸುತ್ತೇವೆ. ಕ್ಷಿಪಣಿಯಾಗಲಿ ಬಾಂಬಾಗಲಿ ಅಲ್ಲ. ಅದು ಜಗನ್ನಿಯಾಮಕನಾದ ಅಲ್ಲಾಹನ ರಿಮೋಟ್ ಕಂಟ್ರೋಲರ್ ಪ್ರಯೋಗದಿಂದ ಧ್ವಂಸಗೊಂಡಿದೆ! ಪಾಕ್ ಅಧ್ಯಕ್ಷ ಜನರಲ್ ಜಿಯಾ ಉಲ್ ಹಕ್ ಅವರ ದುರ್ಮರಣವು ಮುಬಾಹಲ ಪ್ರಾರ್ಥನೆಗೆ ಉತ್ತರವಾಗಿ ಸರ್ವಶಕ್ತನಾದ ಅಲ್ಲಾಹನು ಪ್ರಕಟಪಡಿಸಿದ ಒಂದು ದಿವ್ಯ ದೃಷ್ಟಾಂತವಾಗಿದೆ ಎಂದು ಅಹ್ಮದಿಯಾ ಜಮಾಅತ್ ದೃಢವಾಗಿ ನಂಬುತ್ತದೆ.

ಈ ಮಧ್ಯೆ ಅತಿ ಪ್ರಧಾನವಾದ ಮತ್ತೊಂದು ದೃಷ್ಟಾಂತವೂ ಪ್ರಕಟವಾಯಿತು.

ಅಹ್ಮದಿಯಾ ಜಮಾಅತಿನ ಕಡೆಯಿಂದ ಮುಬಾಹಲ ಪಂಥಾಹ್ವಾನವು ಪ್ರಕಟಿಸಲ್ಪಟ್ಟು, ಸರಿಯಾಗಿ ಒಂದು ತಿಂಗಳು ಕಳೆಯುವಷ್ಟರಲ್ಲೇ ಅಂದರೆ ಜುಲಾಯಿ 10ನೇ ತಾರೀಕಿನಂದು, 5 ವರ್ಷಗಳ ಹಿಂದೆ ಅಪ್ರತ್ಯಕ್ಷರಾಗಿದ್ದ ಹಾಗೂ ಅಹ್ಮದಿಯಾ ಖಲೀಫರ ಪ್ರೇರೇಪಣೆಯಿಂದ ಸಂಹರಿಸಲ್ಪಟ್ಟಿದ್ದಾರೆಂದು ಗುಲ್ಲೆಬ್ಬಿಸಲಾಗಿದ್ದ ಮೌಲಾನಾ ಅಸ್ಲಂ ಖುರೈಶಿ ಇದ್ದಕ್ಕಿದ್ದಂತೆ ಪಾಕಿಸ್ತಾನದಲ್ಲಿ ಪ್ರತ್ಯಕ್ಷರಾಗುತ್ತಾರೆ! ಅವರು ಪಂಜಾಬ್ ಪೋಲೀಸ್ ಮಹಾನಿರ್ದೇಶಕರ ಜತೆ ಪತ್ರಕರ್ತರ ಮುಂದೆ ಹಾಗೂ ಟಿ.ವಿ.ಯಲ್ಲಿ ಹಾಜರಾಗಿ ತಾನು ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಬೇಸರಗೊಂಡು ಊರು ಬಿಟ್ಟು ಇರಾನಿಗೆ ಹೋಗಿದ್ದೆನೆಂದೂ ಈ ಕಳೆದ ವರ್ಷಗಳಲ್ಲಿ ಇರಾನ್ ಸೇನೆಯಲ್ಲಿದ್ದುದಾಗಿಯೂ ತನ್ನ ಅಪ್ರತ್ಯಕ್ಷತೆಯಿಂದ ಯಾರಿಗಾದರೂ - ವಿಶಿಷ್ಟವಾಗಿ ತನ್ನ ವಿರೋಧಿಗಳಾದ ಕಾದಿಯಾನಿಗಳಿಗೆ - ಏನಾದರೂ ತೊಂದರೆಗಳುಂಟಾಗಿದ್ದಲ್ಲಿ ಅದಕ್ಕಾಗಿ ತಾನು ದುಃಖಿಸುತ್ತಿರುವುದಾಗಿಯೂ ಪ್ರಸ್ತಾಪಿಸಿದರು. ಮೌಲಾನಾ ಅಸ್ಲಂ ಖುರೈಶಿಯನ್ನು ಅಹ್ಮದಿಯಾ ಖಲೀಫರ ನಿರ್ದೇಶದಂತೆ ಸಂಹರಿಸಲಾಗಿದೆಯೆಂದು ಇಡೀ ಪಾಕಿಸ್ತಾನದಲ್ಲಿ ಪ್ರಚಾರ ಮಾಡಿ ಈ ಕಾರಣಕ್ಕೆ ಅಹ್ಮದೀಯರನ್ನು ಮತ್ತಷ್ಟು ಹಿಂಸೆಗೆ ಗುರಿಪಡಿಸಲಾಗುತ್ತಿತ್ತು. "ಮೌಲಾನಾ ಅಸ್ಲಂ ಖುರೈಶಿಯ ಕೊಲೆಗಾರ ಮಿರ್ಝಾ ತಾಹಿರ್ ಅಹ್ಮದ್ ಎಂಬುದು ರುಜುವಾತಾಗದ ಪಕ್ಷದಲ್ಲಿ ಸರಕಾರವು ನನ್ನನ್ನು ಸಾರ್ವಜನಿಕ ಸ್ಥಳದಲ್ಲಿ ಗುಂಡಿಟ್ಟು ಕೊಲ್ಲುವುದು ನನಗೆ ಸಮ್ಮತವಾಗಿರುವುದು" ಎಂಬುದಾಗಿ ಸಹ ಮಂಜೂರ್ ಅಹ್ಮದ್ ಚಿನಿಯೋಟಿ ಎಂಬ ಓರ್ವ ಮೌಲಾನಾ ಹೇಳಿದ್ದರು ! ಇದೀಗ ಅಸ್ಲಂ ಖುರೈಶಿಯನ್ನು ಜೀವಂತ ಹಾಜರುಪಡಿಸಿ ಸರ್ವಶಕ್ತನಾದ ಅಲ್ಲಾಹನು ಅಹ್ಮದೀಯರ ಪರ ತನ್ನ ತೀರ್ಮಾನವನ್ನು ನೀಡಿರುತ್ತಾನೆ. 'ಸತ್ತು ಹೋದ' ಈ ಮೌಲಾನಾ ಬದುಕಿ ಉಳಿದದ್ದು ಅಲ್ಲಾಹನ ಅತಿ ಮಹತ್ತಾದ ಒಂದು ದೃಷ್ಟಾಂತವಾಗಿದೆ ಎಂದು ಅಹ್ಮದಿಯಾ ಜಮಾಅತ್ ಲೋಕದ ಮುಂದೆ ಸಾರುತ್ತದೆ.

ಈ ರೀತಿಯಾಗಿ, ಅಹ್ಮದಿಯಾ ಖಲೀಫರು ಮುಬಾಹಲ ಪಂಥಾಹ್ವಾನವನ್ನು ಸಾರಿದ ಎರಡು ತಿಂಗಳಲ್ಲೇ ಅಲ್ಲಾಹನು ಅತಿ ಮಹತ್ತಾದ ಎರಡು ದಿವ್ಯ ದೃಷ್ಟಾಂತಗಳನ್ನು ಪ್ರಕಟಗೊಳಿಸಿ ತಾನು ಅಹ್ಮದಿಯಾ ಜಮಾಅತಿನ ಬೆಂಬಲಕ್ಕಿರುವುದಾಗಿ ಲೋಕಕ್ಕೆ ತೋರಿಸಿಕೊಟ್ಟಿರುತ್ತಾನೆ. 'ಸತ್ತಿದ್ದ' ಓರ್ವ ವಿರೋಧಿಯನ್ನು ಬದುಕಿಸಿದ ಚಮತ್ಕಾರ ಒಂದಾದರೆ, ಫಿರ್‌ಔನನಂತೆ ಮರಣವನ್ನು ಮರೆತು ರಾರಾಜಿಸುತ್ತಿದ್ದ ಸರ್ವಾಧಿಕಾರಿಯಾಗಿದ್ದ ಮತ್ತೋರ್ವ ವಿರೋಧಿಯನ್ನು ಸಾಯಿಸಿ ತೋರಿಸಿದ ದೃಷ್ಟಾಂತವು ಇನ್ನೊಂದಾಗಿತ್ತು. ಈ ಮಹತ್ವಪೂರ್ಣ ದೃಷ್ಟಾಂತಗಳನ್ನು ಪ್ರಕಟಪಡಿಸಿದ ಅಲ್ಲಾಹನಿಗೆ ಜಗತ್ತಿನ ಎಲ್ಲಾ ಅಹ್ಮದೀಯರೂ ಕೃತಜ್ಞತೆಯೊಂದಿಗೆ ಸಾಷ್ಟಾಂಗವೆರಗುತ್ತಾರೆ. ಒಂದು ವರ್ಷದೊಳಗೆ ಇನ್ನೂ ಏನೇನೆಲ್ಲಾ ಅದ್ಭುತ ದೃಷ್ಟಾಂತಗಳನ್ನು ಆ ಸರ್ವಶಕ್ತನು ಪ್ರಕಟಪಡಿಸಲಿರುವನೋ ಅವನೇ ಬಲ್ಲನು. ಕಣ್ಣಿರುವವರು ಕಾಣಲಿ ; ದೃಷ್ಟಾಂತಗಳಿಂದ ಪಾಠ ಕಲಿಯಲಿ.

ಕಡೆಯದಾಗಿ, ಅಹ್ಮದಿಯಾ ಜಮಾಅತಿನ ವಿರೋಧಿಗಳಾದ ಎಲ್ಲರೊಡನೆಯೂ ನಾವು ಹೇಳಬಯಸುವುದೇನೆಂದರೆ, ನೀವು ಅಹ್ಮದಿಯಾ

ಜಮಾಅತನ್ನು ಒಂದು ನೂರು ವರ್ಷಗಳಿಂದಲೂ ವಿರೋಧಿಸುತ್ತಾ ಬಂದಿರುತ್ತೀರಿ. ಇಲ್ಲಸಲ್ಲದ ಸುಳ್ಳು ಆರೋಪಗಳನ್ನು ಅದರ ಮೇಲೆ ಮಾಡಿರುತ್ತೀರಿ. ವಾದ-ಪ್ರತಿವಾದಗಳೂ ಲೇಖನ-ಪ್ರತಿಲೇಖನಗಳೂ ಬಹಳಷ್ಟು ಆದವು. ನಿಮಗೆ ಇದರಿಂದೆಲ್ಲಾ ಏನು ಪ್ರಯೋಜನವುಂಟಾಯಿತು ? ಸಾಧ್ಯವಿರುವ ಸಂದರ್ಭಗಳಲ್ಲೆಲ್ಲಾ ಶಾರೀರಿಕ ಹಿಂಸೆಗಳನ್ನು ಕೂಡ ನೀಡಿದಿರಿ. ನಮ್ಮೊಡನಿರುವ ವಿರೋಧದ ಕಾರಣದಿಂದ ನೀವು ಪವಿತ್ರ ಖುರ್‌ಆನ್ ನಿರ್ದೇಶಿಸುವ ಎಲ್ಲಾ ನೀತಿ ನಿಯಮಗಳನ್ನೂ ಉಲ್ಲಂಘಿಸಿ ನಮ್ಮ ಮೇಲೆ ದೌರ್ಜನ್ಯ ಎಸಗಿದ್ದೀರಿ. ರಾಜ್ಯಾಧಿಕಾರದ ಶಕ್ತಿಯಿಂದಲೂ ಬಂದೂಕಿನ ಬಲದಿಂದಲೂ ಈ ಜಮಾಅತನ್ನು ನಿರ್ಮೂಲನ ಮಾಡಿ ಬಿಡಬಹುದೆಂದು ಗ್ರಹಿಸಿ ಅದಕ್ಕೂ ಪ್ರಯತ್ನಿಸಿದಿರಿ. ಆದರೂ ಏನೂ ಪ್ರಯೋಜನವಾಗಲಿಲ್ಲ. ಏಕಪಕ್ಷೀಯವಾದ ಈ ಎಲ್ಲಾ ದೌರ್ಜನ್ಯಗಳ ಹೊರತಾಗಿಯೂ ಅಹ್ಮದಿಯ್ಯಾ ಜಮಾಅತ್ ಪೂರ್ವೋತ್ತರ ಅಭಿವೃದ್ಧಿಯನ್ನೇ ಹೊಂದುತ್ತಾ ಬಂದಿದೆ. ಆದುದರಿಂದ ಇನ್ನೂ ಇದೇ ಹಾದಿಯಲ್ಲಿ ಮುಂದುವರಿಯುವುದರಲ್ಲಿ ಅರ್ಥವಿಲ್ಲ. ನಮ್ಮ ನಿಮ್ಮೊಳಗಿನ ಈ ವಿವಾದವನ್ನು ನಾವು ಈಗ ಅಲ್ಲಾಹನ ನ್ಯಾಯಾಲಯಕ್ಕೆ ಕೊಂಡೊಯ್ದಿರುತ್ತೇವೆ. ಇದರಿಂದ ನಿಮಗೂ ಸಹ ಹಾದಿಯು ಸುಗಮಗೊಂಡಂತಾಗಿರಬಹುದು. ಅಹ್ಮದಿಯ್ಯಾ ಜಮಾಅತನ್ನು ವಿರೋಧಿಸುವ ಕಾರ್ಯದಲ್ಲಿ ನೀವು ಪ್ರಾಮಾಣಿಕರಾಗಿದ್ದರೆ, ಅಹ್ಮದಿಯ್ಯಾ ಜಮಾಅತ್ ಒಂದು ಅಸತ್ಯ ಜಮಾಅತ್ ಎಂದೂ ಅದರ ಸ್ಥಾಪಕರಾದ ಹಜ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಓರ್ವ ಸುಳ್ಳುಗಾರನೆಂದೂ ಸುಳ್ಳು ಪ್ರವಾದಿಯೆಂದೂ ನೀವು ಮನಃಪೂರ್ವಕವಾಗಿಯೂ ದೃಢವಾಗಿಯೂ ನಂಬುವುದಿದ್ದರೆ ಹಾಗೂ ಅಹ್ಮದಿಯ್ಯಾ ಜಮಾಅತಿನ ಮೇಲೆ ನೀವು ಹೊರಿಸುತ್ತಿರುವ ಆರೋಪಗಳ ಬಗ್ಗೆ ನಿಮ್ಮ ನಿಲುವು ಸತ್ಯವಾದುದೆಂದೂ ನೀವು ಗ್ರಹಿಸುವುದಿದ್ದರೆ ಬರಹ ಮೂಲಕ ಮುಬಾಹಲದಲ್ಲಿ ಏರ್ಪಡುವ ನಮ್ಮ ಆಮಂತ್ರಣವನ್ನು ನೀವು ಸ್ವೀಕರಿಸಬಹುದಾಗಿದೆ. ಅತ್ಯಂತ ಸುಲಭವಾದ ಈ ಮಾರ್ಗವನ್ನು ಬಿಟ್ಟು ಮತ್ತೂ ಇಲ್ಲಸಲ್ಲದ ನೆಪಗಳನ್ನು ಹೇಳುತ್ತಾ ಅನಗತ್ಯವಾದ ಚರ್ಚೆಯಲ್ಲಿಯೇ ಮುಂದುವರಿಯುವುದು ಹಾಗೂ ಅಸಂಬದ್ಧಗಳನ್ನೂ ಆರೋಪಗಳನ್ನೂ ಪುನರಾವರ್ತಿಸುತ್ತಲೇ ಇರುವುದು ಸಭ್ಯತೆಯ ಲಕ್ಷಣವಲ್ಲ. ಆದುದರಿಂದ. ಅಹ್ಮದಿಯ್ಯಾ ಜಮಾಅತಿನ ಸತ್ಯತೆಯನ್ನು ಪ್ರಾಮಾಣಿಕವಾಗಿ ನಿರಾಕರಿಸುವ ಯಾರೇ ಆದರೂ ಅಹ್ಮದಿಯ್ಯಾ ನೇತಾರರಿಂದ ಘೋಷಿಸಲ್ಪಟ್ಟ ಮುಬಾಹಲದ ದ್ವಿತೀಯ ಪಕ್ಷವಾಗಲು ತಯಾರಾಗಿ ಅದನ್ನು ಸ್ವೀಕರಿಸಲು ಮುಂದೆ ಬರಬೇಕಾಗಿದೆ. ಆದರೂ ಚೆನ್ನಾಗಿ ಯೋಚಿಸಿದ ಬಳಿಕ ಮಾತ್ರವೇ ಈ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆಂದೂ ದುಡುಕಬಾರದಾಗಿಯೂ ನಾವು ವಿನಂತಿಸುತ್ತೇವೆ. ಯಾಕೆಂದರೆ, ನಮ್ಮ ವಿರೋಧಿಗಳಿಗೆ ಶಿಕ್ಷೆ ಲಭಿಸುವುದು ನಮಗೆ ಸಂತೋಷವನ್ನುಂಟುಮಾಡುವುದಿಲ್ಲ. ಅವರು ಸರಿದಾರಿಗೆ ಬರಬೇಕಾದುದೇ ನಮ್ಮ ಆಶೆಯಾಗಿದೆ. ❁

ಓದಿರಿ :

# ಅಹ್ಮದಿಯ್ಯಾ ಸಂದೇಶ

ಮುಸ್ಲಿಮರನ್ನು ಸಂಬೋಧಿಸಿ ಬರೆದ ಒಂದು ಉಪನ್ಯಾಸ
ಅಹ್ಮದಿಯ್ಯರ ಧಾರ್ಮಿಕ ವಿಶ್ವಾಸಾಚಾರಗಳ ಸಂಕ್ಷಿಪ್ತ ರೂಪ

ಗ್ರಂಥಕರ್ತ : **ಹಜ್ರತ್ ಮಿರ್ಝಾ ಬಶೀರುದ್ದೀನ್ ಮಹಮೂದ್ ಅಹ್ಮದ್**

ಬೆಲೆ : **ರೂ. 1-00**

ಅಂಚೆ ವೆಚ್ಚ : **ಉಚಿತ**

ಬರೆಯಿರಿ : ಅಹ್ಮದಿಯ್ಯಾ ಮುಸ್ಲಿಂ ಮಿಶನ್
10-23-1008 ಅನ್ಸಾರಿ ರೋಡ್, ಬಂದರ್. ಮಂಗಳೂರು - 575 001.

# ಮುಬಾಹಲ ಪಂಥಾಹ್ವಾನ

**ಅಹ್ಮದಿಯಾ ಜಮಾಅತಿನ ಸತ್ಯತೆಯನ್ನು ನಿರಾಕರಿಸುವ ಜಗತ್ತಿನ ಎಲ್ಲಾ ವಿರೋಧಿಗಳಿಗೆ ಜಾಗತಿಕ ಅಹ್ಮದಿಯಾ ಜಮಾಅತಿನ ಪರವಾಗಿ ಅದರ ಖಲೀಫಾರಿಂದ ಬಹಿರಂಗ "ಮುಬಾಹಲ" (ಪ್ರಾರ್ಥನಾ ಸಮರ) ಪಂಥಾಹ್ವಾನದ ಘೋಷಣೆ**

"ಇಸ್ಲಾಂ ನಮ್ಮ ಧರ್ಮ" ಎಂಬ ತಮ್ಮ ವಾದ ಮತ್ತು ವಿಶ್ವಾಸವನ್ನು ಬಹಿರಂಗಪಡಿಸುವ ಧಾರ್ಮಿಕ ಸ್ವಾತಂತ್ರ್ಯ ಹಾಗೂ ಮಾನವೀಯ ಮೂಲಭೂತ ಹಕ್ಕನ್ನು ಪಾಕಿಸ್ತಾನ ಸರಕಾರವು ಅಹ್ಮದಿಯಾ ಜಮಾಅತ್‌ನಿಂದ ಅಪಹರಿಸಿದ ಮೊದಲ್ಗೊಂಡು ನಿರಂತರವಾಗಿ ಆ ಸರಕಾರದ ಆಶ್ರಯದಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ಸುಳ್ಳು ಹಾಗೂ ದುಷ್ಪ್ರೇರಕವಾದ ಅಪಪ್ರಚಾರಗಳನ್ನು ಅಂತಾರಾಷ್ಟ್ರೀಯವಾಗಿ ಹರಡಿಸಲಾಗುತ್ತಿದೆ. ಪವಿತ್ರ ಖುರ್‌ಆನಿನ ಉಪದೇಶಗಳನ್ನು ಸ್ಪಷ್ಟವಾಗಿ ಉಲ್ಲಂಘಿಸುತ್ತಾ ಅಹ್ಮದಿಯತನ್ನು "ಖಾದಿಯಾನಿಯತ್" ಮತ್ತು "ಮಿರ್ಝಾಯಿಯತ್" ಎಂಬ ಅಡ್ಡ ಹೆಸರುಗಳಿಂದ ಕರೆಯಲಾಗುತ್ತಿದೆ. ಇಲ್ಲದ ಧಾರ್ಮಿಕ ನಂಬಿಕೆಗಳನ್ನು ಅಹ್ಮದಿಯಾ ಜಮಾಅತಿನದೆಂದು ಅವರು ಸುಳ್ಳು ಸುಳ್ಳೇ ಆರೋಪಿಸುತ್ತಾರೆ. ಅವರು ಹೀಗೆ ಆರೋಪಿಸುತ್ತಿರುವುದು ಖಂಡಿತ ಅಹ್ಮದಿಯಾ ಜಮಾಅತಿನ ಧರ್ಮವಾಗಿರುವುದಿಲ್ಲ.

ಸುಳ್ಳು ಮತ್ತು ಮಿಥ್ಯಾರೋಪದ ಪ್ರಚಾರದಂತಹ ಈ ಜಾಗತಿಕ ಅಭಿಯಾನದಲ್ಲಿ ಪಾಕಿಸ್ತಾನದ ಅಧ್ಯಕ್ಷ ಜಿಯಾ ಉಲ್‌ಹಕ್‌ರಿಗೆ ಸಹಾಯಕ ಹಸ್ತರಾಗಿ ಮುಸ್ಲಿಮ್ ವಿದ್ವಾಂಸರ ಕೆಲವು ವಿಶಿಷ್ಟ ಗುಂಪುಗಳು ನಾಮುಂದು ತಾಮುಂದು ಎಂಬಂತೆ ವರ್ತಿಸುತ್ತಿವೆ. ಇದೇ ರೀತಿ ವಿವಿಧ ಹಂತಗಳಲ್ಲಿ ಸರಕಾರದ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಮಾತ್ರವಲ್ಲ ತಥಾಕಥಿತ "ಶರೀಅತ್ ಕೋರ್ಟ್"ನ ನ್ಯಾಯಾಧೀಶರು ಕೂಡ ಈ ಕಾರ್ಯಕ್ರಮವನ್ನು ಕೃತಿಗಿಳಿಸುವುದರಲ್ಲಿ ಬಹಿರಂಗ ಪಾತ್ರ ವಹಿಸಿರುತ್ತಾರೆ.

ಸುಳ್ಳು ಮತ್ತು ಮಿಥ್ಯಾರೋಪದ ಈ ಜಾಗತಿಕ ಪ್ರಚಾರವನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು:

**ಪ್ರಥಮ ಭಾಗ:** ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಎಲ್ಲಾ ವಿಧದ ಕೆಟ್ಟ ಆರೋಪಗಳಿಗೆ ಗುರಿಪಡಿಸುವುದು. ಅವರ ಎಲ್ಲಾ ವಾದಗಳನ್ನು ಸುಳ್ಳೆಂದು ಹೇಳುವುದು. ಅವರನ್ನು ಸುಳ್ಳು ಸೃಜಿಸುವವನೆಂದೂ ಅಲ್ಲಾಹನ ಬಗ್ಗೆ ಸುಳ್ಳು ಹೇಳುವವನೆಂದೂ ದಜ್ಜಾಲ್ ಮತ್ತು ಮೋಸಗಾರನೆಂದೂ ಹೇಳುವುದು. ಅವರದಲ್ಲದ ವಿಶ್ವಾಸಗಳನ್ನು ಸೃಷ್ಟಿಸಿ ಅವರ ವಿಶ್ವಾಸಗಳೆಂದು ಆರೋಪಿಸುವುದು.

**ದ್ವಿತೀಯ ಭಾಗ:** ಎರಡನೆಯದು ಅಹ್ಮದಿಯಾ ಜಮಾಅತಿನ ವಿರುದ್ಧ ಸುಳ್ಳು ಸುಳ್ಳಾದ ಆರೋಪಗಳನ್ನು ಮಾಡುವುದು ಮತ್ತು ಅದರ ವಿರುದ್ಧ ಕೇಡನ್ನು ಪ್ರಚೋದಿಸುವ ಸುಳ್ಳು ಪ್ರಚಾರಗಳನ್ನು ಮಾಡುವುದಕ್ಕೆ ಸಂಬಂಧಿಸಿದೆ. ಅಹ್ಮದಿಯಾ ಜಮಾಅತ್ ಎಂದಿಗೂ ತನ್ನ ವಿಶ್ವಾಸವೆಂದು ಅಂಗೀಕರಿಸಿರದ ವಿಶ್ವಾಸಗಳನ್ನು ಅದರ ವಿಶ್ವಾಸಗಳೆಂದು ಪ್ರಚಾರಗೊಳಿಸಲಾಗುತ್ತಿದೆ. ಇದೇ ರೀತಿ ಅಹ್ಮದಿಯಾ ಜಮಾಅತಿನ ಮತ್ತು ಅದರ ಇಮಾಮರ ವಿರುದ್ಧ ಅತ್ಯಂತ ಘೋರ ಅಪರಾಧಗಳನ್ನು ಆರೋಪಿಸಿ ಪಾಕಿಸ್ತಾನದಲ್ಲೂ ವಿದೇಶ ರಾಷ್ಟ್ರಗಳಲ್ಲೂ ಪ್ರಚಾರಗೊಳಿಸುತ್ತಾ ಅಪಮಾನಕ್ಕೆ ಗುರಿಪಡಿಸುವ ಪ್ರಯತ್ನ ನಡೆಯುತ್ತದೆ.

ಹೀಗೆ ದೀರ್ಘ ಕಾಲದಿಂದ ಈ ಏಕಪಕ್ಷೀಯ ದೌರ್ಜನ್ಯ ನಡೆಯುತ್ತಿದ್ದು ಇದು ಕೊನೆಗೊಳ್ಳುವುದಾಗಿ ಕಂಡು ಬರುತ್ತಿಲ್ಲ. ಅಹ್ಮದಿಯಾ ಜಮಾಅತ್ ಎಲ್ಲಾ ವಿಧದಲ್ಲೂ ಸಹನೆಯನ್ನು ತೋರಿಸುತ್ತಾ ಈ ಏಕ ಪಕ್ಷೀಯ ದೌರ್ಜನ್ಯವನ್ನು ನಿರಂತರವಾಗಿ ಅಲ್ಲಾಹನ ತೃಪ್ತಿಗಾಗಿ ಧೈರ್ಯದಿಂದ ಸಹಿಸಿಕೊಂಡು ಬಂದಿದೆ. ದೌರ್ಜನ್ಯಕಾರರಿಗೆ ಸತ್ಯವನ್ನು ಮನದಟ್ಟು ಮಾಡಿಕೊಡಲು ಶಾಂತ ರೀತಿಯಲ್ಲಿ ಎಲ್ಲಾ ಬಗೆಯ ಪ್ರಯತ್ನ ಮಾಡಲಾಯಿತು. ಅಹ್ಮದಿಯಾ ಜಮಾಅತಿನ ವಿರೋಧಿಗಳ ಪ್ರಮುಖರಿಗೆ ಎಲ್ಲಾ ವಿಧದಲ್ಲಿ ಸಂಗತಿಗಳನ್ನು ವಿವರಿಸಿ ಕೊಡಲಾಯಿತು. ಅವರನ್ನು ಅವರ ಈ ಕೃತ್ಯಗಳ ಪರಿಣಾಮಗಳ ಬಗ್ಗೆ ಎಚ್ಚರಿಸಲಾಯಿತು. ಮತ್ತೂ ಸ್ಪಷ್ಟವಾಗಿ, "ನೀವು ಮಾಡುತ್ತಿರುವ ಈ ದೌರ್ಜನ್ಯ ಕೇವಲ ಅಹ್ಮದಿಯೂ ಜಮಾಅತಿನ ವಿರುದ್ಧವಾಗಿರುವುದಿಲ್ಲ; ಲೋಕ ಮುಸ್ಲಿಮ್ ಸಮಾಜದ ಮೇಲೆಯೂ ವಿಶೇಷವಾಗಿ ಪಾಕಿಸ್ತಾನದ ಜನತೆಯ ಮೇಲೆಯೂ ನಿಮ್ಮ ದೌರ್ಜನ್ಯದ ಫಲವುಂಟಾಗುವುದು. ನೀವು ಮೋಸ ಹಾಗೂ ಮಿಥ್ಯಾರೋಪದ ಮೂಲಕ ಅವರನ್ನೆಲ್ಲಾ ನಿಮ್ಮೊಂದಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಸೇರಿಸಿಕೊಂಡು ಅವರನ್ನು ಕೂಡ ಅಲ್ಲಾಹನ ಕೋಪಕ್ಕೆ ಪಾತ್ರರನ್ನಾಗಿ ಮಾಡುತ್ತಿರುವಿರಿ. ದಿನಂಪ್ರತಿ ಪಾಕಿಸ್ತಾನದ ಬಡಜನರ ಮೇಲೆ ಉಂಟಾಗುತ್ತಿರುವ ಹೊಸ ಹೊಸ ವಿಪತ್ತುಗಳಿಗೆ ಯಥಾರ್ಥ ಹೊಣೆಗಾರರು ನೀವೇ ಆಗಿದ್ದೀರಿ ಹಾಗೂ ಈ ವಿಪತ್ತುಗಳು ಅಲ್ಲಾಹನ ವರ್ಧಿಸುತ್ತಿರುವ ಕೋಪವನ್ನು ಪ್ರತಿಬಿಂಬಿಸುವ ಕನ್ನಡಿಯಾಗಿದೆ" ಎಂದು ಅವರಿಗೆ ಮುನ್ನೆಚ್ಚರಿಕೆ ನೀಡಲಾಯಿತು. ಆದರೆ ದೌರ್ಜನ್ಯಕಾರರು ತಮ್ಮ ಕೈಗಳನ್ನು ತಡೆದಿಟ್ಟುಕೊಳ್ಳುವುದಕ್ಕೆ ಪ್ರತಿಯಾಗಿ ಹಿಂಸಾಚಾರ ಮತ್ತು ಅತ್ಯಾಚಾರಗಳಲ್ಲಿ ಇನ್ನಷ್ಟು ಮುಂದುವರಿಯುತ್ತಾ ಹೋದರು. ಈ ಸಂಗತಿ ಈಗ ಎಂತಹ ಸ್ಥಿತಿಗೆ ತಲಪಿದೆಯೆಂದರೆ ಅಹ್ಮದಿಯಾ ಜಮಾಅತ್ ಈ ದೌರ್ಜನ್ಯಗಳನ್ನು ಇನ್ನು ಮುಂದೆ ಸಹಿಸಲಾರದು ಎಂಬ ಪರಿಸ್ಥಿತಿ ಉಂಟಾಗಿದೆ. ಆದುದರಿಂದ ದೀರ್ಘಕಾಲದ ಸಹನೆ, ಆಲೋಚನೆ ಮತ್ತು ಪ್ರಾರ್ಥನೆಗಳ ನಂತರ ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರ (ಇಮಾಮ್) ಆಗಿರುವ ನಾನು ಹೀಗೆ ತೀರ್ಮಾನ ಮಾಡಿರುವೆನು:

ಅಹ್ಮದಿಯಾ ಜಮಾಅತನ್ನು ಅಲ್ಲಗಳೆಯುವ ಮತ್ತು ಉದ್ದೇಶಪೂರ್ವಕವಾಗಿ ಈ ಅನ್ಯಾಯಗಳಲ್ಲಿ ಭಾಗಿಗಳಾಗಿರುವ ಎಲ್ಲಾ ವಿಭಾಗಗಳಿಗೆ ಸೇರಿದ ಜನರನ್ನು ಪವಿತ್ರ ಖುರ್‌ಆನಿನ ಉಪದೇಶಗಳಿಗನುಸಾರವಾಗಿ ಬಹಿರಂಗವಾದ **ಮುಬಾಹಲ** (ಪ್ರಾರ್ಥನಾ ಸಮರ)ಕ್ಕೆ ಪಂಥಾಹ್ವಾನ ನೀಡುತ್ತಾ "ಅಲ್ಲಾಹನು ತನ್ನ ಮಹತ್ತರವಾದ ಪ್ರಕಾಶದಿಂದ ದೌರ್ಜನ್ಯಕಾರರ ಮತ್ತು ದೌರ್ಜನ್ಯ ಪೀಡಿತರ ಮಧ್ಯೆ ಪ್ರತ್ಯಕ್ಷವಾದ ವ್ಯತ್ಯಾಸವನ್ನು ಸ್ಪಷ್ಟಪಡಿಸಲಿ" ಎಂಬ ಪ್ರಾರ್ಥನೆಯೊಂದಿಗೆ ಈ ವಿವಾದವನ್ನು ನಾನು ಅಲ್ಲಾಹನ ನ್ಯಾಯಾಲಯದಲ್ಲಿ ನಿವೇದಿಸುವೆನು.

ನಾವು ಅಹ್ಮದಿಯಾ ಜಮಾಅತಿನ ವಿರೋಧಿಗಳ ಮಿಥ್ಯಾರೋಪಗಳನ್ನು ಎರಡು ವಿಭಾಗಗಳಾಗಿ ವಿಂಗಡಿಸಿ ಎರಡೂ ಬಗೆಯ ಮುಬಾಹಲ (ಪ್ರಾರ್ಥನಾ ಸಮರ)ದ ಪಂಥಾಹ್ವಾನವನ್ನು ಪ್ರಕಟಿಸುತ್ತಿದ್ದೇವೆ. ಅಹ್ಮದಿಯಾ ಜಮಾಅತನ್ನು ಅಲ್ಲಗಳೆಯುವ ಮತ್ತು ಅದನ್ನು ಅವಿಶ್ವಾಸಿಗಳ ಸಂಘಟನೆಯೆಂದು ಮಿಥ್ಯಾರೋಪ ಮಾಡುವ ಪ್ರತಿಯೊಬ್ಬ ವ್ಯಕ್ತಿಯನ್ನು, ಈ ಎರಡು ಪಂಥಾಹ್ವಾನಗಳಲ್ಲಿ ಯಾವುದನ್ನು ಬೇಕಾದರೂ ಸ್ವೀಕರಿಸಿ ಬಹಿರಂಗವಾಗಿ ಅದನ್ನು ಪ್ರಕಟಿಸುವಂತೆ ಈ ಮೂಲಕ ಆಮಂತ್ರಿಸಲಾಗುತ್ತಿದೆ. ಸಾಮಾನ್ಯ ಮುಸ್ಲಿಮರು ಮತ್ತು ಅಹ್ಮದಿಯಾ ಜಮಾಅತಿನ ಕುರಿತು ಸ್ವತಃ ಏನೂ ತಿಳಿಯದೆ ಅಹ್ಮದಿಯಾ ಜಮಾಅತಿನ ಬಗ್ಗೆ ಅಪಪ್ರಚಾರಗಳನ್ನು ಮಾತ್ರ ದೃಢವಾಗಿ ನಂಬಿ ಈ ಜಮಾಅತಿನ ವಿರುದ್ಧ ಹೋರಾಡಲು ಸನ್ನದ್ಧರಾದವರು ಹಾಗೂ ಇತರ ಜನಸಾಮಾನ್ಯರು ಕೂಡ ಅಲ್ಲಾಹನಿಂದ ಪ್ರಕಟವಾಗುವ ತೀರ್ಮಾನಗಳ ಪ್ರಕಾಶದಲ್ಲಿ ಸತ್ಯಸಂಧರ ಮತ್ತು ಸುಳ್ಳುಗಾರರ ಮಧ್ಯೆ ವ್ಯತ್ಯಾಸವನ್ನು ಇದರ ಮೂಲಕ ಗುರುತಿಸುವಂತಾಗಲಿ.

# ಪಂಥಾಹ್ವಾನ – 1

ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ರ ಅನುಯಾಯಿಗಳಲ್ಲಿ ಆಗಮಿಸಲಿದ್ದ ಮಸೀಹ್ ಮತ್ತು ಮಹ್‌ದಿ ತಾನೆಂದು ವಾದಿಸಿದ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅವರು ಸತ್ಯಸಂಧರೋ ಅಥವಾ ಸುಳ್ಳುಗಾರನೋ ಎಂಬ ವಿಷಯದ ಬಗ್ಗೆ ಹೊಸದಾಗಿ ಯಾವುದೇ ಪಂಥಾಹ್ವಾನ ನೀಡುವ ಅಗತ್ಯವಿಲ್ಲ. ಅಹ್ಮದಿಯಾ ಜಮಾಅತಿನ ಸ್ಥಾಪಕರ ಸ್ವಂತ ನುಡಿಗಳಲ್ಲೇ ಎಲ್ಲಾ ಕಾಲಕ್ಕೂ ಅನ್ವಯವಾಗುವ ರೀತಿಯ ಒಂದು ತೆರೆದ ಪಂಥಾಹ್ವಾನವೇ ಇದೆ.

ನಾವು ಎಲ್ಲಾ ವಿರೋಧಿಗಳನ್ನೂ ಮಿಥ್ಯಾರೋಪ ಹೊರಿಸುವವರನ್ನೂ ಈ ಪಂಥಾಹ್ವಾನವನ್ನು ಓದಿ ಗಾಢವಾಗಿ ಚಿಂತಿಸಿ ಇದರ ಅಂತಿಮ ಪರಿಣಾಮಗಳ ಬಗ್ಗೆ ತಿಳಿದುಕೊಂಡು ಅದನ್ನು ಸ್ವೀಕರಿಸಲು ಧೈರ್ಯದಿಂದ ಸನ್ನದ್ಧರಾಗಿರುವರೋ ಎಂಬುದನ್ನು ತೀರ್ಮಾನಿಸಲು ಆಮಂತ್ರಿಸುತ್ತೇವೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರ ಮಾತಿನಲ್ಲಿ ಆ ಪಂಥಾಹ್ವಾನ ಈ ರೀತಿಯಾಗಿದೆ:

ನಾನು ಸುಳ್ಳು ಹೇಳುವವನೆಂದೂ ಮೋಸಗಾರನೆಂದೂ ಸುಳ್ಳು ಸೃಜಿಸುವವನೆಂದೂ ಭಾವಿಸುವ ಮತ್ತು ನಾನು ಮಸೀಹ್ ಮೌಊದ್ (ವಾಗ್ದಾನ ನೀಡಲ್ಪಟ್ಟ ಮಸೀಹ್) ಎಂದು ವಾದಿಸಿದುದರ ಬಗ್ಗೆ ನನ್ನನ್ನು ಅಲ್ಲಗಳೆಯುವ ಹಾಗೂ ನನಗೆ ಅಲ್ಲಾಹನಿಂದ ಅವತೀರ್ಣವಾದ ಸಂದೇಶವಾಣಿಗಳನ್ನು ನಾನೇ ಸೃಜಿಸಿದುದೆಂದು ಯೋಚಿಸುವ ಯಾರೇ ಆದರೂ - ಮುಸ್ಲಿಮನಾಗಿರಲಿ, ಹಿಂದುವಾಗಿರಲಿ ಅಥವಾ ಬೇರೆ ಯಾವುದೇ ಧರ್ಮಾನುಯಾಯಿಯಾಗಿರಲಿ - ಆತನು ನನ್ನ ವಿರುದ್ಧ ಬರಹ ಮೂಲಕ ಮುಬಾಹಲ ಪ್ರಕಟಿಸಲಿ. ಎಂದರೆ ಆತನು ಅಲ್ಲಾಹನ ಮುಂದೆ ಪ್ರತಿಜ್ಞೆ ಮಾಡಿ ಕೆಲವು ಪತ್ರಿಕೆಗಳಲ್ಲಿ ಹೀಗೆ ಪ್ರಕಟಿಸಲಿ: 'ನಾನು ದೇವರ ಪ್ರಮಾಣ ಮಾಡಿ ಹೇಳುತ್ತೇನೆ: ತಾನು ಮಸೀಹ್ ಮೌಊದ್ ಎಂದು ವಾದಿಸುವ ಈ ವ್ಯಕ್ತಿ (ಇಲ್ಲಿ ನನ್ನ ಹೆಸರು ಸ್ಪಷ್ಟವಾಗಿ ಬರೆಯಲಿ) ಯಥಾರ್ಥದಲ್ಲಿ ಸುಳ್ಳು ಹೇಳುವವನಾಗಿದ್ದಾನೆ ಎಂದು ನನಗೆ ಚೆನ್ನಾಗಿ ತಿಳಿದು ಬಂದಿದೆ. ಆತನು ತನ್ನ ಗ್ರಂಥದಲ್ಲಿ ಬರೆದಿರುವ, ಆತನಿಗೆ ದೇವರಿಂದ ಅವತೀರ್ಣಗೊಂಡುದೆಂದು ಹೇಳಲಾಗುವ ವಚನಗಳು ದೇವ ವಚನಗಳಲ್ಲ; ಅವು ಆತನೇ ಸೃಷ್ಟಿಸಿದವುಗಳಾಗಿವೆ. ನಾನು ಆತನನ್ನು ಪರಿಪೂರ್ಣವಾಗಿ ವೀಕ್ಷಿಸಿ ಮತ್ತು ಆಲೋಚಿಸಿ ಆತನು ಸುಳ್ಳು ಸೃಷ್ಟಿಸುವವನೆಂದೂ ಸುಳ್ಳು ಹೇಳುವವನೆಂದೂ ದಜ್ಜಾಲನೆಂದೂ ದೃಢವಾಗಿ ಗ್ರಹಿಸುತ್ತೇನೆ. ಓ ಸರ್ವಶಕ್ತನಾದ ದೇವ, ಈ ವ್ಯಕ್ತಿ ಯಥಾರ್ಥವಾಗಿ ಸತ್ಯವಂತನಾಗಿದ್ದರೆ ಮತ್ತು ಈತನು ಸುಳ್ಳು ಹೇಳುವವನೂ ಸುಳ್ಳು ಸೃಜಿಸುವವನೂ ಅವಿಶ್ವಾಸಿಯೂ ಧರ್ಮಭ್ರಷ್ಟನೂ ಅಲ್ಲವಾಗಿದ್ದರೆ ಆತನನ್ನು ಅಲ್ಲಗಳೆದ ಕಾರಣಕ್ಕಾಗಿ ಮತ್ತು ಆತನನ್ನು ಅಪಮಾನಿಸಿದ್ದಕ್ಕಾಗಿ ಯಾವುದಾದರೂ ಕಠಿಣ ಶಿಕ್ಷೆ ನನ್ನ ಮೇಲೆ ಬಂದೆರಗುವಂತೆ ಮಾಡು. ಹೀಗಲ್ಲವಾದರೆ ಆತನನ್ನು ಶಿಕ್ಷೆಗೆ ಗುರಿಪಡಿಸು—ಆಮೀನ್ (ಹಾಗೆಯೇ ಆಗಲಿ).' ಹೊಸ ದೃಷ್ಟಾಂತ ಅಪೇಕ್ಷಿಸುವ ಎಲ್ಲರಿಗೂ ಈ ಬಾಗಿಲು ತೆರೆದಿರುತ್ತದೆ."

(ಹಖೀಖತುಲ್ ವಹೀ–ರೂಹಾನಿ ಖಝಾಯಿನ್ ಸಂಪುಟ 22, ಪುಟ 71-72.)

ಅಹ್ಮದಿಯಾ ಜಮಾಅತಿನ ಸ್ಥಾಪಕರು ಈಗ ಈ ಲೋಕದಲ್ಲಿಲ್ಲದ ಕಾರಣ ಮುಬಾಹಲದ ಪಂಥಾಹ್ವಾನ ಸ್ವೀಕರಿಸಲಿಚ್ಛಿಸುವವರ ಮುಂದೆ ಅವರನ್ನು ಪ್ರತಿನಿಧಿಸುವ ಯಾವುದಾದರೂ ಪಕ್ಷವಿರುವುದು ಅತ್ಯಾವಶ್ಯಕವಾಗಿದೆ.

ಆದುದರಿಂದ ನಾನು ಮತ್ತು ಅಹ್ಮದಿಯಾ ಜಮಾಅತ್ ಈ ಜವಾಬ್ದಾರಿಯನ್ನು ತೆರೆದ ಹೃದಯದಿಂದಲೂ ದೃಢ ವಿಶ್ವಾಸದಿಂದಲೂ ಪೂರ್ಣವಾಗಿ ಸ್ವೀಕರಿಸಿರುವುದನ್ನು ಈ ಮೂಲಕ ಘೋಷಿಸುತ್ತೇನೆ.

## ಸಂಥಾಹ್ವಾನ – 2

ವಿರೋಧಿಗಳಿಂದ "ಖಾದಿಯಾನಿ" ಅಥವಾ "ಮಿರ್ಝಾಯಿ" ಎಂದು ಕರೆಯಲ್ಪಡುವ ಅಹ್ಮದಿಯಾ ಜಮಾಅತಿನವರು ಈ ಕೆಳಗಿನ ವಿಶ್ವಾಸಗಳನ್ನು ಹೊಂದಿದ್ದಾರೆಂದು ಶತ್ರುಗಳು ನಿರಂತರವಾಗಿ ಲೋಕದ ಜನರಲ್ಲಿ ಅಪಪ್ರಚಾರ ಮಾಡುತ್ತಿದ್ದಾರೆ:

**1.** ಅಹ್ಮದಿಯಾ ಜಮಾಅತಿನವರು ಆದರ ಸ್ಥಾಪಕರಾದ ಮಿರ್ಝಾ ಗುಲಾಮ್ ಅಹ್ಮದರ ಬಗ್ಗೆ –

* ಅವರು ದೇವರು, ದೇವರ ಮಗ, ದೇವರ ಪಿತನೆಂದು ನಂಬುತ್ತಾರೆ.
* ಹಝ್‌ರತ್ ಮುಹಮ್ಮದ್ ಪೈಗಂಬರ್ (ಸ) ಮತ್ತು ಇತರ ಎಲ್ಲಾ ಪ್ರವಾದಿಗಳಿಗಿಂತ ಅವರು ಶ್ರೇಷ್ಠರೆಂದು ನಂಬುತ್ತಾರೆ.
* ಅವರಿಗೆ ಅವತೀರ್ಣವಾದ ದೇವಸಂದೇಶಗಳ ಮುಂದೆ ಹದೀಸು ವ್ಯರ್ಥವೆಂದು ನಂಬುತ್ತಾರೆ.
* ಅವರು ಪ್ರಾರ್ಥಿಸುತ್ತಿದ್ದ ಕೋಣೆ (ಬೈತುದ್ದಿಕ್‌ರ್) ಪವಿತ್ರ ಕಅಬಕ್ಕಿಂತ ಹೆಚ್ಚು ಶ್ರೇಷ್ಠವೂ ಗೌರವಾರ್ಹವೂ ಆಗಿದೆಯೆಂದು ನಂಬುತ್ತಾರೆ.
* ಅವರು ಜನಿಸಿದ ಊರು ಖಾದಿಯಾನ್ ಮಕ್ಕದ ಸಮಾನ ಸ್ಥಾನ ಪಡೆದಿದೆಯೆಂದು ನಂಬುತ್ತಾರೆ.
* ಖಾದಿಯಾನ್‌ಗೆ ವರ್ಷದಲ್ಲಿ ಒಂದು ಸಲ ಹೋಗುವುದು ಎಲ್ಲಾ ಪಾಪಗಳು ಕ್ಷಮಿಸಲ್ಪಡಲು ಕಾರಣವಾಗುವುದೆಂದು ಸಹ ಅವರು ನಂಬುತ್ತಾರೆ.
* ಪವಿತ್ರ ಕಅಬಕ್ಕೆ ಹಜ್ ಯಾತ್ರೆ ಮಾಡುವ ಬದಲಾಗಿ ಖಾದಿಯಾನದಲ್ಲಿ ಅವರು ಆರಂಭಿಸಿದ ವಾರ್ಷಿಕ ಸಮ್ಮೇಳನದಲ್ಲಿ ಪಾಲುಗೊಳ್ಳುವುದು ಹಜ್‌ಗೆ ಸಮವೆಂದು ಅವರು ನಂಬುತ್ತಾರೆ.

ನಾನು ಜಾಗತಿಕ ಅಹ್ಮದಿಯಾ ಜಮಾಅತಿನ ಸರ್ವೋನ್ನತ ನೇತಾರನೆಂಬ ನೆಲೆಯಲ್ಲಿ ಈ ಎಲ್ಲಾ ಆರೋಪಗಳು ಸಂಪೂರ್ಣ ಸುಳ್ಳೆಂದೂ ಸ್ಪಷ್ಟವಾದ ಸುಳ್ಳು ಸೃಷ್ಟಿಯೆಂದೂ ಮೇಲೆ ಆರೋಪಿಸಲಾದ ನಂಬಿಕೆಗಳಲ್ಲಿ ಒಂದನ್ನೂ ಅಹ್ಮದಿಯಾ ಜಮಾಅತ್ ಹೊಂದಿಲ್ಲವೆಂದೂ ಘೋಷಿಸುತ್ತೇನೆ.

لعنة الله على الكاذبين

**(ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್) – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ.**

**2.** ಅಹ್ಮದಿಯಾ ಜಮಾಅತಿನ ಸ್ಥಾಪಕರ ವಾದಗಳನ್ನು ನಿರಾಕರಿಸುವುದರೊಂದಿಗೆ ಅವರನ್ನು ಲೋಕದ ಜನರು. ವಿಶೇಷವಾಗಿ ಮುಸ್ಲಿಮರು ದ್ವೇಷಿಸುವಂತೆ ಮಾಡಲು ಈ ಕೆಳಗಿನ ದುಷ್ಟ ಆರೋಪಗಳನ್ನು ಅವರ ಮೇಲೆ ಹೊರಿಸಲಾಗುತ್ತಿದೆ:

* ಅವರು ಪ್ರವಾದಿತ್ವ ಸಮಾಪ್ತಿಯನ್ನು ಸ್ಪಷ್ಟವಾಗಿ ನಿರಾಕರಿಸಿದ್ದಾರೆ.

* ಪವಿತ್ರ ಖುರ್‌ಆನಿನ ಪಠ್ಯದಲ್ಲೂ ಅರ್ಥದಲ್ಲೂ ಹಸ್ತಕ್ಷೇಪ ಮಾಡಿದ್ದಾರೆ.
* ಹರ್‌ರತ್ ಪೈಗಂಬರರ ಸಮಾಧಿ ಸ್ಥಳವನ್ನು ನಿಕೃಷ್ಟ ಮತ್ತು ಹಾವು ಚೇಳುಗಳ ಸ್ಥಳವೆಂದು ಅವರು ಹೇಳಿದ್ದಾರೆ.
* ಹರ್‌ರತ್ ಇಮಾಮ್ ಹುಸೈನರನ್ನು ನಿಂದಿಸಿದ್ದಾರೆ. ಅವರ ಸ್ಮರಣೆಯನ್ನು ಅಮೇಧ್ಯ ರಾಶಿಯೆಂದು ಹೇಳಿದ್ದಾರೆ.
* ಕಳ್ಳ ಪ್ರವಾದಿಗಳ ಚರಿತ್ರೆಯನ್ನು ಅಧ್ಯಯನ ಮಾಡಿ ಪ್ರವಾದಿತ್ವದ ವಾದ ಮಾಡಿದ್ದಾರೆ.
* ಬ್ರಿಟಿಷರ ಪ್ರೇರಣೆಯಿಂದ ಜಿಹಾದ್ ಬಗ್ಗೆ ಇಸ್ಲಾಮಿನ ಉಪದೇಶಗಳನ್ನು ರದ್ದುಗೊಳಿಸಿದ್ದಾರೆ.
* ತಾನು ಶರೀಅತ್ ತಂದ ಪ್ರವಾದಿಯೆಂದೂ ಹೊಸ ಶರೀಅತ್ ತಂದುದಾಗಿಯೂ ವಾದಿಸಿದ್ದಾರೆ. ಪವಿತ್ರ ಖುರ್‌ಆನ್‌ಗೆ ಪ್ರತಿಯಾಗಿ ಅಹ್ಮದಿಯರಿಗೆ "ತದ್‌ಕಿರ" ಎಂಬ ಗ್ರಂಥವಿದೆ. ಅದಕ್ಕೆ ಅವರು ಪವಿತ್ರ ಖುರ್‌ಆನಿಗೆ ಸಮಾನವಾದ ಸ್ಥಾನ ನೀಡುತ್ತಾರೆ.

ನಾನು ಅಹ್ಮದಿಯಾ ಜಮಾಅತಿನ ಇಮಾಮ್ ಎಂಬ ನೆಲೆಯಲ್ಲಿ ಈ ಎಲ್ಲಾ ಆರೋಪಗಳನ್ನು ಸಂಪೂರ್ಣ ಸುಳ್ಳೆಂದೂ ಶತ್ರುಗಳು ಸೃಜಿಸಿದ ಸುಳ್ಳು ಆರೋಪಗಳೆಂದೂ ಇವುಗಳಲ್ಲಿ ಒಂದು ಆರೋಪ ಸಹ ಸತ್ಯವಲ್ಲವೆಂದೂ ಘೋಷಿಸುತ್ತೇನೆ.

لعنة الله على الكاذبين

(ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್) – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ.

3. ಅಹ್ಮದಿಯಾ ಜಮಾಅತಿನ ಸ್ಥಾಪಕರ ವ್ಯಕ್ತಿತ್ವದ ಮೇಲೆ ಕೆಸರೆರಚಲು ಹೀಗೆಯೂ ಆರೋಪಿಸಲಾಗುತ್ತಿದೆ:

* ಅವರು ಮೋಸಗಾರ ಮತ್ತು ವಿಶ್ವಾಸ ವಂಚಕರಾಗಿದ್ದರು.
* ಅವರು ಮನೆಯ ಹಣ ದುರ್ವ್ಯಯ ಮಾಡಿದುದರಿಂದ ಅವರ ತಂದೆ ಅವರನ್ನು ಮನೆಯಿಂದ ಹೊರ ಹಾಕಿದ್ದರು.
* ಅವರ ಹೆಚ್ಚಿನ ಭವಿಷ್ಯವಾಣಿಗಳು ಮತ್ತು ತಥಾಕಥಿತ ದೈವಿಕ ಸಂದೇಶಗಳು ಬರೇ ಸುಳ್ಳು ಸೃಷ್ಟಿಗಳು.
* ಬ್ರಿಟಿಷ್ ಸರಕಾರ ಅವರಿಗೆ ಲಕ್ಷಾಂತರ ಎಕ್ರೆ ಜಮೀನು ನೀಡಿತ್ತು.

ನಾನು ಜಾಗತಿಕ ಅಹ್ಮದಿಯಾ ಜಮಾಅತಿನ ಪ್ರತಿನಿಧಿಯಾಗಿ ಇವುಗಳೆಲ್ಲಾ ಸುಳ್ಳೆಂದೂ ಮಿಥ್ಯಾಪವಾದಗಳೆಂದೂ ಘೋಷಿಸುತ್ತೇನೆ.

لعنة الله على الكاذبين

(ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್) – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ.

**4.** ಅಹ್ಮದಿಯಾ ಜಮಾಅತಿನ ಮೇಲೆ ಸಾಮಾನ್ಯವಾಗಿ ಈ ಆರೋಪಗಳನ್ನು ಮಾಡಲಾಗುತ್ತಿದೆ:

* ಅಹ್ಮದಿಯಾ ಜಮಾಅತ್ ಬ್ರಿಟಿಷರು ನೆಟ್ಟ ಗಿಡವಾಗಿದೆ.
* ಅದು ಮುಸ್ಲಿಮ್ ಸಮುದಾಯದ ಶತ್ರುವಾಗಿದೆ.
* ಅದು ಲೋಕದ ಮುಸ್ಲಿಮರಿಗೆ ಕ್ಯಾನ್ಸರ್ ರೂಪದಲ್ಲಿದೆ.
* ಅದು ಬ್ರಿಟಿಷರ ಮತ್ತು ಯೆಹೂದ್ಯರ ಮುಸ್ಲಿಮ್ ವಿರೋಧಿ ಒಳಸಂಚುಗಳ ಒಂದು ಭಾಗವಾಗಿದೆ.
* ಅದು ಇಸ್ರಾಯೇಲ್ ರಾಜ್ಯ ಮತ್ತು ಯೆಹೂದ್ಯರ ಏಜೆಂಟ್ ಆಗಿದೆ.
* ಅದು ಅಮೇರಿಕದ ಏಜೆಂಟ್ ಆಗಿದೆ.
* ಈ ಜಮಾಅತ್ ಗುಪ್ತ ಮಾತುಕತೆ ನಡೆಸಿ ರಶ್ಯಾದೊಂದಿಗೆ ಸಂಬಂಧ ಸ್ಥಾಪಿಸಿದೆ.
* ಇಸ್ರಾಯೇಲ್ ಸೈನ್ಯದಲ್ಲಿ ಇವರ ಇರುವಿಕೆಯು ಒಂದು ಬಹಿರಂಗ ಸತ್ಯವಾಗಿದೆ.
* ಅಹ್ಮದಿಯಾ ಜಮಾಅತ್‌ಗೆ ಸೇರಿದವರು ವಿಧ್ವಂಸಕ ಚಟುವಟಿಕೆಗಳಿಗಾಗಿ ಇಸ್ರಾಯೇಲ್‌ನಲ್ಲಿ ತರಬೇತಿ ಪಡೆಯುತ್ತಿದ್ದಾರೆ.
* ಆರು ನೂರು ಪಾಕಿಸ್ತಾನಿ ಖಾದಿಯಾನಿಗಳು ಇಸ್ರಾಯೇಲ್ ರಾಜ್ಯದ ಸೈನ್ಯದಲ್ಲಿದ್ದಾರೆ.
* ಜರ್ಮನಿಯಲ್ಲಿ ನಾಲ್ಕು ಸಾವಿರ ಖಾದಿಯಾನಿಗಳು ಗೆರಿಲ್ಲಾ ಯುದ್ಧದ ತರಬೇತಿ ಪಡೆಯುತ್ತಿದ್ದಾರೆ.

ನಾನು ಅಹ್ಮದಿಯಾ ಜಮಾಅತಿನ ಇಮಾಮ್ ಎಂಬ ನೆಲೆಯಲ್ಲಿ ಈ ಎಲ್ಲಾ ಆರೋಪಗಳು ಸುಳ್ಳೆಂದೂ ಇವು ಸುಳ್ಳಲ್ಲದೆ ಇನ್ನೇನೂ ಅಲ್ಲವೆಂದೂ ಘೋಷಿಸುತ್ತೇನೆ.

لعنة الله على الكاذبين

(ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್) – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ.

**5.** ಮೇಲಿನ ಆರೋಪಗಳಲ್ಲದೆ ಅಹ್ಮದಿಯಾ ಜಮಾಅತಿನ ವಿರುದ್ಧ ಈ ಕೆಳಗಿನ ಅತ್ಯಂತ ನಿಷ್ಠುರವಾದ ಆರೋಪಗಳನ್ನು ಸಹ ಮಾಡಲಾಗುತ್ತಿದೆ:

* ಅಹ್ಮದಿಯರ ಕಲಿಮ ಬೇರೆ. ಅವರು ಮುಸ್ಲಿಮರು ಉಚ್ಚರಿಸುವ ಕಲಿಮ ಉಚ್ಚರಿಸುವುದಿಲ್ಲ.
* ಅಹ್ಮದಿಯರು "ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್" ಎಂದು ಕಲಿಮ ಉಚ್ಚರಿಸುತ್ತಿರುವುದು ಮುಸ್ಲಿಮರನ್ನು ಮೋಸಗೊಳಿಸುವ ಉದ್ದೇಶದಿಂದ. ಅವರು "ಮುಹಮ್ಮದ್" ಎಂದು ಹೇಳುವುದರ ಉದ್ದೇಶ "ಮಿರ್ಝಾ ಗುಲಾಂ ಅಹ್ಮದ್" ಎಂದಾಗಿದೆ.
* ಅಹ್ಮದಿಯರು ಪವಿತ್ರ ಖುರ್‌ಆನ್ ಹಾಗೂ ಹಜ್ರತ್ ಮುಹಮ್ಮದ್ ಪೈಗಂಬರ್ (ಸ) ಪ್ರತಿಪಾದಿಸಿದ ದೇವರಲ್ಲಿ ನಂಬಿಕೆಯಿಡುವುದಿಲ್ಲ.
* ಅಹ್ಮದಿಯರು ನಂಬುವ ಮಲಾಯಿಕ (ದಿವ್ಯದೂತರು) ಪವಿತ್ರ ಖುರ್‌ಆನ್ ಮತ್ತು ಹದೀಸ್ ವಿವರಿಸುವ ಮಲಾಯಿಕ (ದಿವ್ಯದೂತರು) ಅಲ್ಲ.
* ಖಾದಿಯಾನಿಗಳಿಗೆ ಬೇರೆಯೇ ಪ್ರವಾದಿಗಳಿದ್ದಾರೆ.

* ಅವರ ಆರಾಧನೆಗಳು ಇಸ್ಲಾಮೀ ಆರಾಧನೆಗಳಿಗಿಂತ ಭಿನ್ನವಾಗಿವೆ.
* ಅವರ ಹಜ್ ಸಹ ಬೇರೆ.
* ಒಟ್ಟಾರೆ ಹೇಳುವುದಾದರೆ, ಇಸ್ಲಾಮಿನ ಎಲ್ಲಾ ಮೂಲಭೂತ ವಿಶ್ವಾಸಗಳಲ್ಲಿ ಖಾದಿಯಾನಿಗಳು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರ್ (ಸ)ರ ನಡವಳಿಕೆಗಳಿಗಿಂತ ಭಿನ್ನರಾಗಿದ್ದಾರೆ.

ನಾನು ಜಾಗತಿಕ ಅಹ್ಮದಿಯಾ ಜಮಾಅತಿನ ಇಮಾಮ್ ಎಂಬ ನೆಲೆಯಲ್ಲಿ ಈ ಆರೋಪಗಳು ಸಂಪೂರ್ಣ ಸುಳ್ಳೆಂದೂ ಅವುಗಳಲ್ಲಿ ಒಂದು ಸಹ ಸತ್ಯವಲ್ಲವೆಂದೂ ಘೋಷಿಸುತ್ತೇನೆ.

لعنة الله على الكاذبين

**(ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್) – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ.**

**6.** ಪಾಕಿಸ್ತಾನದಲ್ಲಿ ಅಹ್ಮದಿಯರ ವಿರುದ್ಧ ವರ್ಗೀಯ ಮತ್ತು ಜನಾಂಗೀಯ ವಿದ್ವೇಷವನ್ನು ಹಬ್ಬಿಸಲು ಈ ರೀತಿ ಅಪಪ್ರಚಾರ ಮಾಡಲಾಗುತ್ತಿದೆ:

* ಪಾಕಿಸ್ತಾನ ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿ ಅಸ್ತಿತ್ವಕ್ಕೆ ಬಂದಿತೆಂಬುದು ಅಹ್ಮದಿಯರ ವಿಶ್ವಾಸವಾಗಿದೆ.
* ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್ (ಅಹ್ಮದಿಯರ ಎರಡನೆಯ ಖಲೀಫ) ಪಾಕಿಸ್ತಾನವನ್ನು ಒಡೆಯಲು ಪ್ರತಿಜ್ಞೆ ಮಾಡಿದ್ದರು.
* ಅಖಂಡ ಭಾರತದ ಬಗ್ಗೆ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದರ ಭವಿಷ್ಯವಾಣಿಯನ್ನು ಈಡೇರಿಸಲು ಎಲ್ಲಾ ಅಹ್ಮದಿಯರು ಪ್ರಯತ್ನಿಸುತ್ತಿದ್ದಾರೆ.
* ಪಾಕಿಸ್ತಾನದ ಪ್ರಧಾನ ಮಂತ್ರಿ ಲಿಯಾಖತ್ ಅಲಿ ಖಾನ್‌ರನ್ನು ಕೊಂದದ್ದು ಒಬ್ಬ ಖಾದಿಯಾನಿ.
* ಖಾದಿಯಾನಿಗಳು ದೇಶದಲ್ಲಿ ಆಂತರಿಕ ಕಲಹದ ಯೋಜನೆಗಳನ್ನು ಸಿದ್ಧಪಡಿಸಿರುವರು.
* ಖಾದಿಯಾನಿಗಳು ಪಾಕಿಸ್ತಾನದ ಏಕತೆ ಮತ್ತು ಸಮಗ್ರತೆ ವಿರುದ್ಧ ನಿರಂತರ ಒಳಸಂಚುಗಳಲ್ಲಿ ಮಗ್ನರಾಗಿರುವರು.
* ದೇಶದಲ್ಲಿ ಈಗಿರುವ ಅಶಾಂತ ಪರಿಸ್ಥಿತಿ ಖಾದಿಯಾನಿಗಳ ಸಂಚುಗಳ ಪರಿಣಾಮವಾಗಿದೆ.
* ಕರಾಚಿಯ ಗಲಭೆಗಳ ಹಿಂದೆ ಖಾದಿಯಾನಿಗಳ ಕೈವಾಡವಿದೆ.
* ಕರಾಚಿಯಲ್ಲಿ ಕರ್ಫ್ಯೂ ಅವಧಿಯಲ್ಲಿ ಖಾದಿಯಾನಿಗಳು ಅಂಗಡಿಗಳನ್ನು ಸುಟ್ಟುಹಾಕಿದರು.
* ಬಾದಶಾಹಿ ಮಸ್‌ಜಿದ್ ಸಂಭವ (ದೇವಬಂದಿಗಳಿಗೂ ಬರೇಲವಿಗಳಿಗೂ ಪರಸ್ಪರ ಜಗಳವಾದುದು) ಖಾದಿಯಾನಿಗಳ ಒಳಸಂಚಿನ ಫಲವಾಗಿದೆ.
* ಖಾದಿಯಾನಿಗಳು ಐನೂರು ಮತಪಂಡಿತರನ್ನು ಕೊಲೆ ಮಾಡುವ ಯೋಜನೆ ಹಾಕಿರುತ್ತಾರೆ.
* ದೇಶದಲ್ಲಿ ಬಾಂಬುಗಳ ಸ್ಫೋಟ, ಜನಾಂಗೀಯ ಗಲಭೆ, ಭಾಷೆಗೆ ಸಂಬಂಧಿಸಿದ ದ್ವೇಷಗಳು ಮತ್ತು ವಿಧ್ವಂಸಕ ಘಟನೆಗಳ ಹಿಂದೆ ಖಾದಿಯಾನಿಗಳ ಕೈವಾಡವಿದೆ.
* ಓಝೋರಿ ಕ್ಯಾಂಪಿನ ಸ್ಫೋಟ ಖಾದಿಯಾನಿ ಅಧಿಕಾರಿಗಳು ಮಾಡಿಸಿದರು.

* ಈ ಅನಾಹುತಕ್ಕೆ ಎರಡುದಿನಗಳ ಮೊದಲೇ ಖಾದಿಯಾನಿಗಳು ಈ ಪ್ರದೇಶವನ್ನು (ರಾವಲ್‌ಪಿಂಡಿ ಮತ್ತು ಇಸ್ಲಾಮಾಬಾದ್) ಬಿಟ್ಟುಹೋಗಿದ್ದರು.
* ಅಹ್ಮದಿಯಾ ಕೇಂದ್ರವಾದ ರಬ್ವಾದಲ್ಲಿ ರಶ್ಯಾ ನಿರ್ಮಿತ ಆಯುಧಗಳು ಬಹು ಸಂಖ್ಯೆಯಲ್ಲಿ ಶೇಖರಿಸಲ್ಪಟ್ಟಿವೆ.
* ಖಾದಿಯಾನಿಗಳು ರಬ್ವಾದಲ್ಲಿ ರಶ್ಯಾ ನಿರ್ಮಿತ ಆಯುಧಗಳಿಂದ ದೇಶದಲ್ಲಿ ವಿಧ್ವಂಸಕ ಕಾರ್ಯಗಳನ್ನು ನಡೆಸಲು ಯುವಕರಿಗೆ ತರಬೇತು ನೀಡುತ್ತಿದ್ದಾರೆ.
* ಖಾದಿಯಾನಿ ಅಧಿಕಾರಿಯೊಬ್ಬರು ಪಾಕಿಸ್ತಾನದ ಅಣುರಹಸ್ಯಗಳನ್ನು ಗುಪ್ತವಾಗಿ ಇಸ್ರಾಯೇಲ್ ರಾಜ್ಯಕ್ಕೆ ಹಸ್ತಾಂತರಿಸಿದ್ದಾರೆ.

ನಾನು ಜಾಗತಿಕ ಅಹ್ಮದಿಯಾ ಜಮಾಅತಿನ ಇಮಾಮ್ ಎಂಬ ನೆಲೆಯಲ್ಲಿ ಈ ಎಲ್ಲಾ ಆರೋಪಗಳನ್ನು ಆದಿಯಿಂದ ಅಂತ್ಯದ ವರೆಗೆ ಸುಳ್ಳು ಮತ್ತು ಕೃತ್ರಿಮ ಸೃಷ್ಟಿಯೆಂದೂ ಅವುಗಳಲ್ಲಿ ಒಂದಿಷ್ಟು ಸತ್ಯವಾದರೂ ಇಲ್ಲವೆಂದೂ ಘೋಷಿಸುತ್ತೇನೆ.

لعنة الله على الكاذبين

**(ಲಅ್‌ನತುಲ್ಲಾಹಿ ಅಲಲ್ ಕಾಧಿಬೀನ್) – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ.**

**7.** ಅಹ್ಮದಿಯಾ ಜಮಾಅತಿನ ಇಮಾಮ್ ಆದ ನನ್ನ ವಿರುದ್ಧ ಈ ಕೆಳಗಿನ ಅಪವಾದಗಳನ್ನು ಪ್ರಚಾರಗೊಳಿಸಲಾಗುತ್ತಿದೆ:

ಅಹ್ಮದಿಯಾ ಜಮಾಅತಿನ ಈಗಿನ ಇಮಾಮ್–

* ಅಸ್ಲಮ್ ಖುರೈಶಿ ಎಂಬ ಒಬ್ಬ ವ್ಯಕ್ತಿಯ ಅಪಹರಣ ಮತ್ತು ಕೊಲೆಯಲ್ಲಿ ಭಾಗಿಯಾಗಿದ್ದಾರೆ.
* ಅಮುಸ್ಲಿಂ ಸರಕಾರಗಳ ಹಸ್ತಕರಾಗಿದ್ದಾರೆ.
* ಸುಳ್ಳು ಹೆಸರಿನಿಂದ ಮತ್ತು ವ್ಯಾಜ ಪಾಸ್‌ಪೋರ್ಟ್ ಮೂಲಕ ಕುಟುಂಬ ಸಮೇತ ಪಾಕಿಸ್ತಾನದಿಂದ ಪರಾರಿಯಾಗಿದ್ದಾರೆ.
* ಲಂಡನ್‌ನಲ್ಲಿ ರಶ್ಯಾದ ರಾಯಭಾರಿಯೊಂದಿಗೆ ದೀರ್ಘ ಸಂಭಾಷಣೆ ನಡೆಸಿದ್ದಾರೆ.
* ನೋಬಲ್ ಬಹುಮಾನ ಗಳಿಸಿದ ಡಾಕ್ಟರ್ ಅಬ್ದುಸ್ಸಲಾಮ್‌ರವರ ಜೊತೆಯಲ್ಲಿ ಇಸ್ರಾಯೇಲ್ ರಾಜ್ಯದಲ್ಲಿ ಪ್ರವಾಸ ಮಾಡಿದ್ದಾರೆ.

ನಾನು ಅಹ್ಮದಿಯಾ ಜಮಾಅತಿನ ಇಮಾಮ್ ಎಂಬ ನೆಲೆಯಲ್ಲಿ ಈ ಎಲ್ಲಾ ಆರೋಪಗಳನ್ನು ಸಂಪೂರ್ಣ ಸುಳ್ಳೆಂದೂ ಮಿಥ್ಯಾರೋಪಗಳೆಂದೂ ಅವುಗಳಲ್ಲಿ ಯಾವುದೇ ಸತ್ಯವಿಲ್ಲವೆಂದೂ ಘೋಷಿಸುತ್ತೇನೆ.

لعنة الله على الكاذبين

**(ಲಅ್‌ನತುಲ್ಲಾಹಿ ಅಲಲ್ ಕಾಧಿಬೀನ್) – ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ.**

ಅಹ್ಮದಿಯಾ ಜಮಾಅತಿನ ವಿರುದ್ಧ ಮೇಲಿನ ಆರೋಪಗಳು ಸುಳ್ಳೆಂದಾದರೆ ಹಾಗೂ ಅಹ್ಮದಿಯಾ ವಿಶ್ವಾಸಗಳು ವಿರೋಧಿಗಳು ಮೇಲಿನಂತೆ ಆಕ್ಷೇಪಿಸುವ ರೀತಿಯಲ್ಲಿ ಇಲ್ಲವೆಂದಾದರ ಮತ್ತೆ ಅಹ್ಮದಿಯಾ ಜಮಾಅತಿನ ವಾದದ ಪ್ರಕಾರ ಅವರ ವಿಶ್ವಾಸಗಳು ಯಾವುವು ? ಎಂಬ ಒಂದು ಪ್ರಶ್ನೆಯು ಇಲ್ಲಿ ಸ್ವಾಭಾವಿಕವಾಗಿ ಉದ್ಭವವಾಗುತ್ತದೆ.

ನಾನು ಜಾಗತಿಕ ಅಹ್ಮದಿಯಾ ಜಮಾಅತಿನ ಪ್ರಾತಿನಿಧ್ಯ ವಹಿಸುತ್ತಾ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರ ಮಾತುಗಳನ್ನು ಪುನರಾವರ್ತಿಸುತ್ತೇನೆ. ಅವುಗಳು ಅಹ್ಮದಿಯಾ ವಿಶ್ವಾಸಗಳ ಬಗ್ಗೆ ಉಜ್ವಲ ಪ್ರಕಾಶ ಬೀರುತ್ತವೆ. ನಾನು ಅಹ್ಮದಿಯಾ ಜಮಾಅತಿನ ವಿರೋಧಿಗಳಿಗೆ ಪುನಃ ಪಂಥಾಹ್ವಾನ ನೀಡುತ್ತೇನೆ: ಈ ಕೆಳಗೆ ವಿವರಿಸಿರುವುದು ಯಥಾರ್ಥವಾಗಿ ನಾವು ಹೊಂದಿರುವ ವಿಶ್ವಾಸಗಳಲ್ಲವೆಂದು ಅವರು ಗ್ರಹಿಸುವುದಾದರೆ, ಇವುಗಳೆಲ್ಲಾ ನಮ್ಮ ವಿಶ್ವಾಸಗಳೆಂದು ನಾವು ಸುಳ್ಳು ಹೇಳುತ್ತಿರುವುದಾಗಿ ಸ್ಪಷ್ಟವಾಗಿ ಘೋಷಿಸಲಿ. ಅನಂತರ لعنة الله على الكاذبين (ಲಅ್‌ನತುಲ್ಲಾಹಿ ಅಲಲ್ ಕಾಡಿಬೀನ್) ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ ಎಂದು ಹೇಳಲಿ.

ಅಹ್ಮದಿಯಾ ಜಮಾಅತಿನ ಸ್ಥಾಪಕರು ಹೀಗೆ ಹೇಳುತ್ತಾರೆ;

"ಅಲ್ಲಾಹನ ಹೊರತು ಬೇರೆ ಆರಾಧ್ಯನಿಲ್ಲವೆಂದೂ ನಮ್ಮ ನೇತಾರರಾದ ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಅವನ ಪ್ರವಾದಿಯೆಂದೂ ಖಾತಮುಲ್ ಅಂಬಿಯಾ ಎಂದೂ ನಾವು ನಂಬುತ್ತೇವೆ. ಮಲಾಯಿಕ (ದಿವ್ಯದೂತರು) ಇರುವುದು ಸತ್ಯವೆಂದೂ ಮೃತರು ಪುನರುಜ್ಜೀವಿಸಲ್ಪಡುವುದು ಸತ್ಯವೆಂದೂ ಅಂತಿಮ ವಿಚಾರಣೆ ಸತ್ಯವೆಂದೂ ಸ್ವರ್ಗ ಸತ್ಯವೆಂದೂ ನರಕ ಸತ್ಯವೆಂದೂ ನಾವು ನಂಬುತ್ತೇವೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳಿದುದು ಮತ್ತು ನಮ್ಮ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವ ಸಲ್ಲಮರು ಹೇಳಿದುದು ಮೇಲೆ ವಿವರಿಸಲಾದ ನಮ್ಮ ವಿಶ್ವಾಸಗಳ ಪ್ರಕಾರ ಸತ್ಯವಾಗಿವೆ. ಇಸ್ಲಾಮಿನ ಈ ಶರೀಅತಿನಲ್ಲಿ ಯಾರಾದರೂ ಅಲ್ಪವಾದರೂ ಹೆಚ್ಚು ಕಮ್ಮಿ ಮಾಡಿದರೆ ಮತ್ತು ಕಡ್ಡಾಯಗೊಳಿಸಿರುವುದನ್ನು ಬಿಟ್ಟುಬಿಡುವಂತೆಯೂ ಅಥವಾ ನಿಷಿದ್ಧಗೊಳಿಸಿರುವುದನ್ನು ಕೈಗೊಳ್ಳುವಂತೆಯೂ ಮಾಡಲು ಪ್ರಯತ್ನಿಸಿದರೆ ಅಂತಹ ವ್ಯಕ್ತಿ ಅವಿಶ್ವಾಸಿಯೂ ಇಸ್ಲಾಮ್‌ನಿಂದ ದೂರ ಸರಿದವನೂ ಆಗಿರುವನು. ಮತ್ತು ನಾವು ನಮ್ಮ ಜಮಾಅತ್‌ನವರಿಗೆ ಉಪದೇಶಿಸುತ್ತೇವೆ: 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಎಂಬ ಪವಿತ್ರ ಕಲಿಮದ ಮೇಲೆ ವಿಶ್ವಾಸ ಹೊಂದಬೇಕು ಹಾಗೂ ಅದೇ ವಿಶ್ವಾಸ ಹೊಂದಿರುವ ಸ್ಥಿತಿಯಲ್ಲಿಯೇ ಮೃತರಾಗಬೇಕು. ಪವಿತ್ರ ಖುರ್‌ಆನಿನಿಂದ ಸತ್ಯವೆಂದು ಸಾಬೀತಾಗುವ ಎಲ್ಲಾ ಪ್ರವಾದಿಗಳನ್ನೂ ಗ್ರಂಥಗಳನ್ನೂ ನಂಬಬೇಕು. ಉಪವಾಸ, ಪ್ರಾರ್ಥನೆ, ಝಕಾತ್, ಹಜ್ ಮತ್ತು ಅಲ್ಲಾಹನೂ ಅವನ ಪೈಗಂಬರರೂ ನಿಶ್ಚಿತಪಡಿಸಿರುವ ಎಲ್ಲಾ ಕಡ್ಡಾಯ ಕಾರ್ಯಗಳನ್ನು ಕಡ್ಡಾಯವೆಂದು ಗ್ರಹಿಸಿ, ಅದೇ ರೀತಿ ಎಲ್ಲಾ ನಿಷಿದ್ಧ ಕಾರ್ಯಗಳನ್ನು ನಿಷಿದ್ಧವೆಂದು ಗ್ರಹಿಸಿ ಪರಿಪೂರ್ಣವಾಗಿ ಇಸ್ಲಾಮ್ ಧರ್ಮದಲ್ಲಿ ಕೃತಿಶೀಲರಾಗಬೇಕು. ಹಿಂದೆ ಗತಿಸಿ ಹೋದ ಸಚ್ಚಾರಿತ್ರ್ಯವಂತರಾದವರು ವಿಶ್ವಾಸ ಸಂಬಂಧವಾಗಿ ಹಾಗೂ ನಡವಳಿಕೆಗಳ ಬಗ್ಗೆ ಯಾವೆಲ್ಲಾ ಕಾರ್ಯಗಳ ಕುರಿತು ಐಕ್ಯಮತವನ್ನು ಹೊಂದಿದ್ದರೋ ಮತ್ತು ಅಹ್ಲುಸುನ್ನತ್ [ಪೈಗಂಬರ್ (ಸ)ರ ನಡವಳಿಕೆಗಳನ್ನು ಅನುಸರಿಸುವವರು] ಯಾವೆಲ್ಲಾ ಸಂಗತಿಗಳನ್ನು ಒಮ್ಮತದಿಂದ ಇಸ್ಲಾಮ್ ಧರ್ಮಕ್ಕೆ ಸಂಬಂಧವಾದುದೆಂದು ಹೇಳುತ್ತಾರೋ ಅವುಗಳನ್ನೆಲ್ಲಾ ನಂಬುವುದು ನಿಮಗೆ ಕಡ್ಡಾಯವಾಗಿರುತ್ತದೆ. ಇದುವೇ ನಮ್ಮ ಧರ್ಮ ಎಂಬುದರ ಬಗ್ಗೆ ನಾವು ಆಕಾಶವನ್ನೂ ಭೂಮಿಯನ್ನೂ ಸಾಕ್ಷಿಯಾಗಿ ಮಾಡಿರುವೆವು."

(ಅಯ್ಯಾಮುಸ್ಸುಲ್‌ಹ್ – ರೂಹಾನಿ ಖಝಾಯಿನ್ ಸಂಪುಟ 18, ಪುಟ 323)

"ನಾನು ಯಾವಾಗಲೂ ಆಶ್ಚರ್ಯಚಕಿತನಾಗಿ ನೋಡುತ್ತಿದ್ದೇನೆ: ಈ ಅರಬಿ ಪ್ರವಾದಿ, ಅವರ ಹೆಸರು ಮುಹಮ್ಮದ್ (ಸಾವಿರ ಸಾವಿರ ದುರೂದ್ ಮತ್ತು ಸಲಾವ್ ಅವರ ಮೇಲೆ ಸುರಿಯಲಿ) ಎಂತಹ ಉನ್ನತ ಅಂತಸ್ತನ್ನು ಪಡೆದ ಪ್ರವಾದಿಯಾಗಿರುವರು! ಅವರ ಉನ್ನತ ಸ್ಥಾನದ ಕೊನೆ ಎಲ್ಲಿಯೆಂದು ತಿಳಿಯಲು ಸಾಧ್ಯವಿಲ್ಲ. ಅವರ ಪವಿತ್ರ ಪ್ರಭಾವದ ಅಂದಾಜು ಮಾಡುವುದು ಸಹ ಮನುಷ್ಯನಿಂದ ಸಾಧ್ಯವಾಗುವ ಕೆಲಸವಲ್ಲ. ಪಶ್ಚಾತ್ತಾಪದ ಸಂಗತಿಯೇನೆಂದರೆ ಅವರ ಸತ್ಕೃತೆಯನ್ನು ಯಾವ ರೀತಿ ಗುರುತಿಸಲಾಗಲಿಲ್ಲವೋ ಅದೇ ರೀತಿ ಅವರ ಸ್ಥಾನಮಾನ ಸಹ ಗುರುತಿಸಲ್ಪಟ್ಟಿಲ್ಲ. ಏಕದೇವಾರಾಧನೆ ಲೋಕದಿಂದ ಕಣ್ಮರೆಯಾಗಿದ್ದಾಗ ಅದನ್ನು ಮರಳಿ ಲೋಕಕ್ಕೆ ತಂದ ಪಹಲ್ವಾನರು ಅವರೇ ಆಗಿದ್ದಾರೆ. ಅವರು ಅಲ್ಲಾಹನೊಂದಿಗೆ ಅತ್ಯಂತ ಉನ್ನತ ಮಟ್ಟದ ಪ್ರೀತಿಯನ್ನು ಹೊಂದಿದ್ದರು. ಮಾನವರ ಹಿತಾಕಾಂಕ್ಷೆಯಲ್ಲಿ ಅತ್ಯುನ್ನತ ಮಟ್ಟವನ್ನು ತಲಪಿ ಅವರ ಜೀವ ಕರಗಿತು. ಅಲ್ಲಾಹನಿಗೆ ಅವರ ಹೃದಯದ ರಹಸ್ಯ ತಿಳಿದಿದ್ದುದರಿಂದ ಅವರಿಗೆ ಎಲ್ಲಾ ಪ್ರವಾದಿಗಳ ಮೇಲೆಯೂ ಹಿಂದಿನ ಮತ್ತು ಮುಂದಿನ ಎಲ್ಲರ ಮೇಲೆಯೂ ಶ್ರೇಷ್ಠತೆಯನ್ನು ಅನುಗ್ರಹಿಸಿದನು. ಅವರ ಅಭಿಲಾಷೆಗಳನ್ನು ಅವರ ಜೀವಿತದಲ್ಲಿಯೇ ಈಡೇರಿಸಿ ಕೊಟ್ಟನು. ಅವರೇ ಎಲ್ಲಾ ವಿಧದ ಅನುಗ್ರಹಗಳ ಒರತೆಯಾಗಿದ್ದಾರೆ. ಯಾವನೇ ವ್ಯಕ್ತಿ ಹಝ್ರತ್ ಪೈಗಂಬರ್ (ಸ)ರಿಂದ ಅನುಗ್ರಹ ಗಳಿಸಿದುದನ್ನು ಒಪ್ಪಿಕೊಳ್ಳದೆ ತನ್ನ ಯಾವುದಾದರೂ ಶ್ರೇಷ್ಠತೆಯನ್ನು ವಾದಿಸುವನಾದರೆ ಆತನು ಮನುಷ್ಯನಲ್ಲ, ಸೈತಾನನ ಸಂತಾನಕ್ಕೆ ಸೇರಿದವನಾಗಿದ್ದಾನೆ. ಏಕೆಂದರೆ ಪ್ರತಿಯೊಂದು ಅನುಗ್ರಹದ ಕೀಲಿಕೈಗಳು ಅವರಿಗೆ ನೀಡಲ್ಪಟ್ಟಿವೆ. ಪ್ರತಿಯೊಂದು ಜ್ಞಾನದ ಖಜಾನೆಯನ್ನು ಅವರಿಗೆ ಕೊಡಲಾಗಿದೆ. ಯಾರು ಅವರಿಂದ ಏನನ್ನೂ ಪಡೆದುಕೊಳ್ಳುವುದಿಲ್ಲವೋ ಆತನು ಶಾಶ್ವತವಾಗಿ ದೈವಿಕ ಅನುಗ್ರಹಗಳಿಂದ ವಂಚಿತನಾಗುತ್ತಾನೆ. ನಾವು ಎಂತಹವರಾಗಿದ್ದೇವೆ? ನಮ್ಮ ವಾಸ್ತವಿಕತೆಯಾದರೂ ಏನು? ಯಥಾರ್ಥವಾದ ಏಕದೇವಾರಾಧನೆಯು ಪಾಠ ಅವರ ಮೂಲಕವೇ ನಾವು ಪಡೆದೆವು ಎಂಬುದನ್ನು ಒಪ್ಪಿಕೊಳ್ಳದಿದ್ದರೆ ನಾವು ಅನುಗ್ರಹದ ಬಗ್ಗೆ ಕೃತಜ್ಞತೆ ತೋರಿಸಲಿಲ್ಲವೆಂದಾಗುವುದು. ಜೀವಂತನಾಗಿರುವ ಅಲ್ಲಾಹನ ಗುರುತು ಇದೇ ಪರಿಪೂರ್ಣ ಪ್ರವಾದಿಯ ಮೂಲಕ ಮತ್ತು ಅವರ ಪ್ರಕಾಶದಿಂದ ನಮಗೆ ದೊರಕಿದೆ, ಅಲ್ಲಾಹನ ಮುಖವನ್ನು ನಾವು ನೋಡುವಂತೆ, ಅವನಿಂದ ಸಂಬೋಧಿಸಲ್ಪಡುವ, ಅವನೊಂದಿಗೆ ಮಾತನಾಡುವ ಭಾಗ್ಯವು ಅದೇ ಮಹಾನ್ ಪ್ರವಾದಿಯ ಮೂಲಕ ನಮಗೆ ಲಭಿಸಿತು."

(ಹಕೀಖತುಲ್ ವಹೀ – ರೂಹಾನಿ ಖಝಾಯಿನ್ ಸಂಪುಟ 22, ಪುಟ 118-119)

ಮೇಲೆ ವಿವರಿಸಲಾದುದು ಅಹ್ಮದಿಯಾ ಜಮಾಅತಿನ ವಿಶ್ವಾಸ ಹಾಗೂ ಧರ್ಮವಾಗಿದೆ. ಅಲ್ಲದೆ, ಅಹ್ಮದಿಯಾ ಜಮಾಅತಿನ ಸ್ಥಾಪಕರ ವಾಸ್ತವಿಕ ಸ್ಥಾನವೇನೆಂದು ಸಹ ಇದರಿಂದ ಸ್ಪಷ್ಟವಾಗುತ್ತದೆ. ಯಾವನೇ ವ್ಯಕ್ತಿ ಇದರ ಹೊರತಾಗಿ ಬೇರೆ ಯಾವುದಾದರೂ ಧರ್ಮವನ್ನು ಅಹ್ಮದಿಯಾ ಜಮಾಅತಿನ ಧರ್ಮವೆಂದು ಆರೋಪಿಸುವ ದುಸ್ಸಾಹಸ ಮಾಡುವುದಾದರೆ ಆತನು ಸಂಪೂರ್ಣವಾಗಿ ದೌರ್ಜನ್ಯ ಮತ್ತು ಮಿಥ್ಯಾಪವಾದ ಮಾಡುವವನಾಗಿದ್ದಾನೆ, ಅಹ್ಮದಿಯಾ ಜಮಾಅತಿನ ಇಮಾಮ್ ಎಂಬ ನೆಲೆಯಲ್ಲಿ ನಾನು ಹೀಗೆ ಆಹ್ವಾನ ನೀಡುತ್ತೇನೆ:

ಯಾರಾದರೂ ಒಬ್ಬ ವ್ಯಕ್ತಿ ಮೇಲಿನ ವಿವರಗಳನ್ನು ಓದಿದ ನಂತರ ಸಹ ತನ್ನ ವಿರೋಧಿ ನಿಲುವಿನಲ್ಲಿ ನೆಲೆನಿಂತರೆ ಮತ್ತು ಸುಳ್ಳು ಹೇಳುವುದನ್ನು ನಿಲ್ಲಿಸದಿದ್ದರೆ ಅಂತಹವನು ಪಾಕಿಸ್ತಾನ ಸರಕಾರಕ್ಕೆ ಸಂಬಂಧಿಸಿದವನಾಗಿದ್ದರೂ ಅಥವಾ ಬೇರೆ ಯಾವುದಾದರೂ ಸರಕಾರಕ್ಕೆ ಸಂಬಂಧಿಸಿದವನಾಗಿದ್ದರೂ, ರಾಬಿತ ಆಲಮೆ ಇಸ್ಲಾಮಿಗೆ ಸಂಬಂಧಿಸಿದವನಾಗಿದ್ದರೂ ಅಥವಾ ಮತಪಂಡಿತರ ಯಾವುದೇ ಗುಂಪಿಗೆ ಸೇರಿದವನಾಗಿದ್ದರೂ, ಯಾವುದೇ ರಾಜಕೀಯ ಪಕ್ಷದೊಂದಿಗೆ ಸಂಬಂಧ ಏರಿಸಿದವನಾದರೂ ಅಥವಾ ರಾಜಕೀಯೇತರ ವ್ಯಕ್ತಿಯಾಗಿದ್ದರೂ ಆತನು ಯಾವುದಾದರೂ ಗುಂಪಿನ ಪ್ರತಿನಿಧಿಯಾಗಿ ನನ್ನ ಮುಬಾಹಲದ ಆಹ್ವಾನವನ್ನು ಸ್ವೀಕರಿಸಲಿ. ಮತ್ತು ಈ ಕೆಳಗಿನ ಪ್ರಾರ್ಥನೆಯಲ್ಲಿ

ನನ್ನೊಂದಿಗೆ ಸೇರಲಿ. ಹಾಗೂ ತನ್ನ ಕುಟುಂಬದ ಸ್ತ್ರೀಯರನ್ನೂ ಪುರುಷರನ್ನೂ ಮಕ್ಕಳನ್ನೂ ಆತನೊಂದಿಗೆ ಸಹಮತವನ್ನು ಸೂಚಿಸುತ್ತಿರುವ ಆತನ ಎಲ್ಲಾ ಅನುಚರರನ್ನೂ ತನ್ನೊಂದಿಗೆ ಸೇರಿಸಿಕೊಳ್ಳಲಿ. ಅಂತಹವನು ನನ್ನ ಎದುರು ಪಕ್ಷವಾಗಿ ಈ ಪಂಥಾಹ್ವಾನಕ್ಕೆ ಸಹಿ ಹಾಕಲಿ ಮತ್ತು ಅದನ್ನು ಬಹಿರಂಗವಾಗಿ ಪ್ರಕಟಪಡಿಸಲಿ. ಸಾಧ್ಯವಿರುವ ಎಲ್ಲಾ ಸುದ್ದಿ ಮಾಧ್ಯಮಗಳ ಮೂಲಕ ಅದರ ಪ್ರಸಾರ ಮಾಡಲಿ.

## ಪ್ರಾರ್ಥನೆ

ಓ ಸರ್ವಶಕ್ತನೂ ಸರ್ವಸಮರ್ಥನೂ ಅಗೋಚರವಾದುದನ್ನು ಮತ್ತು ಪ್ರತ್ಯಕ್ಷವಾಗಿರುವುದನ್ನು ಬಲ್ಲವನೂ ಆದ ಅಲ್ಲಾಹನೇ, ನಿನ್ನ ಶ್ರೇಷ್ಠತೆ, ನಿನ್ನ ಅಗಾಧತೆ, ನಿನ್ನ ಗೌರವ ಮತ್ತು ನಿನ್ನ ಹಿರಿಮೆಯ ಪ್ರಮಾಣಮಾಡಿ ಹಾಗೂ ನಿನ್ನ ಅಭಿಮಾನದಲ್ಲಿ ಆಣೆಯಿಟ್ಟುಕೊಂಡು ನಿನ್ನಿಂದ ನಾವು ಬೇಡಿಕೊಳ್ಳುತ್ತೇವೆ: ಮೇಲೆ ವಿವರಿಸಲಾದ ವಾದಗಳಲ್ಲಿ ಯಾರ ವಾದ ಸತ್ಯವಾಗಿದೆಯೋ ಅವರ ಮೇಲೆ ಇಹ ಪರ ಲೋಕಗಳ ಕೃಪೆಗಳನ್ನು ಸುರಿಸು. ಅವರ ಎಲ್ಲಾ ಕಷ್ಟಗಳನ್ನು ದೂರೀಕರಿಸು. ಅವರ ಸತ್ಯವನ್ನು ಜಗತ್ತಿನಲ್ಲೆಲ್ಲಾ ಪ್ರಕಾಶಮಾನಗೊಳಿಸು. ಅವರಿಗೆ ನೀನು ಅನುಗ್ರಹಗಳ ಮೇಲೆ ಅನುಗ್ರಹಗಳನ್ನು ಕೊಡು. ಅವರ ಮಧ್ಯದಿಂದ ಎಲ್ಲಾ ವಿಧದ ಕಲಹಗಳನ್ನೂ ಎಲ್ಲಾ ವಿಧದ ಕೇಡುಗಳನ್ನೂ ದೂರೀಕರಿಸು. ಅವರೊಂದಿಗೆ ಸಂಬಂಧಿಸಿರುವ ಎಲ್ಲಾ ಚಿಕ್ಕವರಿಗೂ ದೊಡ್ಡವರಿಗೂ, ಹೆಣ್ಣು ಗಂಡುಗಳಿಗೂ ಒಳ್ಳೆಯ ನಡವಳಿಕೆ ಮತ್ತು ಸೌಶೀಲ್ಯವನ್ನು ದಯಪಾಲಿಸು ಹಾಗೂ ಅವರಿಗೆ ನೈಜ ಭಯ ಭಕ್ತಿ ಅನುಗ್ರಹಿಸು. ನಿನ್ನ ಸಾಮೀಪ್ಯ ಮತ್ತು ನಿನ್ನ ಪ್ರೀತಿಯ ಕುರುಹುಗಳನ್ನು ಮೊದಲಿಗಿಂತ ಹೆಚ್ಚು ಹೆಚ್ಚಾಗಿ ಪ್ರಕಟಗೊಳಿಸುತ್ತಾ ಇರು. ನೀನು ಅವರ ಜೊತೆಗಿರುವೆ ಎಂದೂ ಅವರ ಸಹಾಯಕ್ಕೆ ಮತ್ತು ಬೆಂಬಲಕ್ಕೆ ನಿಂತಿರುವೆಯೆಂದೂ ಲೋಕ ನೋಡಲಿ. ಅವರ ನಡವಳಿಕೆ, ಅವರ ಸ್ವಭಾವಗಳು, ಅವರ ಏಳುವಿಕೆ ಅವರ ಕುಳಿತುಕೊಳ್ಳುವಿಕೆ ಮತ್ತು ಅವರ ಜೀವಿತ ವಿಧಾನದಿಂದ, ಅದು ಅಲ್ಲಾಹನ ಜನರ ಜಮಾಅತ್ ಎಂದೂ ಅಲ್ಲಾಹನ ವಿರೋಧಿಗಳ ಮತ್ತು ಸೈತಾನರ ಜಮಾಅತ್ ಅಲ್ಲವೆಂದೂ ಲೋಕ ಚೆನ್ನಾಗಿ ತಿಳಿದುಕೊಳ್ಳುವಂತಾಗಲಿ.

ಓ ಅಲ್ಲಾಹ್. ನಿನ್ನ ದೃಷ್ಟಿಯಲ್ಲಿ ಯಾವ ಪಕ್ಷ ಸುಳ್ಳುಗಾರರದು ಮತ್ತು ಮಿಥ್ಯಾರೋಪ ಮಾಡುವವರದು ಆಗಿದೆಯೋ ಅವರ ಮೇಲೆ ಒಂದು ವರ್ಷದೊಳಗೆ ನಿನ್ನ ಕೋಪವನ್ನು ಪ್ರಕಟಗೊಳಿಸು. ನೀನು ಅಂತಹವರಿಗೆ ಅಪಮಾನ ಮತ್ತು ನೀಚಾವಸ್ಥೆಯ ಹೊಡೆತ ನೀಡಿ ಅವರನ್ನು ನಿನ್ನ ಶಿಕ್ಷೆಯ ಹಾಗೂ ನಿನ್ನ ಸರ್ವೋನ್ನತೆಯ ದೃಷ್ಟಾಂತವನ್ನಾಗಿ ಮಾಡು. ನೀನು ಅಂತಹವರನ್ನು ನಿನ್ನ ಶಿಕ್ಷೆಯ ಬೀಸುಗಲ್ಲಿನಲ್ಲಿ ಅರೆದುಬಿಡು. ಅವರಿಗೆ ವಿಪತ್ತುಗಳ ಮೇಲೆ ವಿಪತ್ತು ಬಂದೆರಗುವಂತೆ ಮಾಡು. ಅವರ ಮೇಲೆ ಆಪತ್ತುಗಳ ಮೇಲೆ ಆಪತ್ತುಗಳನ್ನು ಇಳಿಸು. ಈ ಆಪತ್ತುಗಳಲ್ಲಿ ಯಾವುದೇ ವ್ಯಕ್ತಿಯ ದುಷ್ಕೃತ್ಯ, ವಿರೋಧ, ಅಥವಾ ದ್ವೇಷದ ಹಸ್ತಕ್ಷೇಪವುಂಟಾಗಲಿಲ್ಲವೆಂದೂ ಆದರೆ ಅಲ್ಲಾಹನ ಅಭಿಮಾನ ಮತ್ತು ಸಾಮರ್ಥ್ಯದ ಕೈ ಈ ಎಲ್ಲಾ ಆಶ್ಚರ್ಯಕರ ಕಾರ್ಯಗಳನ್ನು ಮಾಡಿ ತೋರಿಸುತ್ತಿವೆಯೆಂದೂ ಲೋಕ ಚೆನ್ನಾಗಿ ನೋಡಿ ತಿಳಿದುಕೊಳ್ಳುವಂತಾಗಲಿ. ನೀನು ಸುಳ್ಳುಗಾರರ ಗುಂಪಿಗೆ ಕೊಡುವ ಶಿಕ್ಷೆಯಲ್ಲಿ ಈ ಮುಬಾಹಲಕ್ಕೆ ಸೇರಿದ ಯಾವುದೇ ಗುಂಪಿನ ಮೋಸದ ಮತ್ತು ವಂಚನೆಯ ಕೈವಾಡ ಉಂಟಾಗದಿರಲಿ. ಅದು ಕೇವಲ ನಿನ್ನ ಕೋಪ ಮತ್ತು ನೀನು ನೀಡುವ ಪ್ರತಿಫಲದ ಸಂಕೇತವಾಗಿರಲಿ. ಇದರಿಂದ ಸತ್ಯವಂತರ ಮತ್ತು ಮೋಸಗಾರರ ಮಧ್ಯೆ ಭಿನ್ನತೆ ಚೆನ್ನಾಗಿ ಸ್ಪಷ್ಟವಾಗಲಿ. ಹಾಗೂ ಸತ್ಯ ಮತ್ತು ಅಸತ್ಯದ ಮಧ್ಯೆ ವ್ಯತ್ಯಾಸ ಪ್ರಕಟವಾಗಲಿ. ದೌರ್ಜನ್ಯಗಾರರ ಮತ್ತು ದೌರ್ಜನ್ಯ ಪೀಡಿತರ ಮಾರ್ಗಗಳು ಬೇರೆ ಬೇರೆಯಾಗಿ ಕಾಣಲ್ಪಡಲಿ. ಭಯಭಕ್ತಿಯ ಬೀಜವನ್ನು ತನ್ನ ಹೃದಯದಲ್ಲಿ ಹೊಂದಿರುವವನಿಗೆ ಮತ್ತು ನಿಷ್ಠೆಯಿಂದ ಸತ್ಯವನ್ನು ಹುಡುಕುತ್ತಿರುವ ಕಣ್ಣುಗಳಿಗೆ ಈ ಸಂಭವಗಳು ಸಂಶಯಾಸ್ಪದವಾಗದಿರಲಿ. ಸತ್ಯ ಯಾರ ಬಳಿಯಲ್ಲಿದೆಯೆಂದು ಮತ್ತು ಸತ್ಯ ಯಾರ ಬೆಂಬಲಕ್ಕೆ

ನಿಂತಿದೆಯೆಂದು ಪ್ರತಿಯೊಬ್ಬ ವಿವೇಕಶಾಲಿಗೆ ಚೆನ್ನಾಗಿ ತಿಳಿಯುವಂತಾಗಲಿ. (ಆಮೀನ್, ಯಾರಬ್ಬಲ್ ಆಲಮೀನ್– ಹಾಗೆಯೇ ಆಗಲಿ ಓ ಸರ್ವಲೋಕಗಳ ಪ್ರಭೂ.)

ಹೀಗೆ ಪ್ರಾರ್ಥಿಸುವ ನಾವು :

ಪ್ರಥಮ ಪಕ್ಷ

ಮಿರ್ಝಾ ತಾಹಿರ್ ಅಹ್ಮದ್ ಇಬ್ನು ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

(ಜಾಗತಿಕ ಅಹ್ಮದಿಯಾ ಜಮಾಅತಿನ ಇಮಾಮ್)

ಶುಕ್ರವಾರ 10ನೇ ಜೂನ್ 1988.

ದ್ವಿತೀಯ ಪಕ್ಷ

ಅಹ್ಮದಿಯಾ ಜಮಾಅತಿನ ಸ್ಥಾಪಕರನ್ನು ಅಲ್ಲಗಳೆಯುವ ಮತ್ತು ನಿಷೇಧಿಸುವ ಎಲ್ಲಾ ವಿರೋಧಿಗಳು ತಮಗುಂಟಾಗ ಬಹುದಾದ ಅಂತಿಮ ಪರಿಣಾಮಗಳ ಬಗ್ಗೆ ತಿಳಿದುಕೊಂಡು ಸಂಪೂರ್ಣ ಆತ್ಮ ಸಂತೋಷದಿಂದ ಹಾಗೂ ಪೂರ್ಣ ಜವಾಬ್ದಾರಿಕೆ ವಹಿಸಿಕೊಂಡು ಈ ಮುಬಾಹಲದ ದ್ವಿತೀಯ ಪಕ್ಷವಾಗಬಹುದು.

---


ಕನ್ನಡ, ಇಂಗ್ಲಿಷ್, ಮಲಯಾಳಂ, ಅರಬಿ, ಉರ್ದು ಮತ್ತು ಪಾರ್ಸಿ ಭಾಷೆಗಳಲ್ಲಿ
ಅಂದವಾದ ಮುದ್ರಣಕ್ಕಾಗಿ

ಜೂಬಿಲಿ ಪ್ರಿಂಟಿಂಗ್ ಪ್ರೆಸ್

**Jubilee Printing Press**

ജൂബിലി പ്രിൻറിംഗ് പ്രസ്സ്

جوبلی پرنٹنگ پریس

*Quality Printers in :*
*KANNADA, ENGLISH, MALAYALAM, ARABIC, URDU, and PERSIAN*

**Ansari Road, Bunder**
**MANGALORE - 575 001.**
Phone : 32039

## 'ಸನ್ಮಾರ್ಗ'ಕ್ಕೆ ಉತ್ತರ

# ಮುಬಾಹಲ ಮತ್ತು ಭವಿಷ್ಯವಾಣಿಗಳು

—ಇಬ್ನು ಅಬ್ದುಲ್ಲ.

'ಸನ್ಮಾರ್ಗ' ವಾರ ಪತ್ರಿಕೆ ದಿನಾಂಕ 6–12 ನವಂಬರ್ 1988ರ ಸಂಚಿಕೆಯಲ್ಲಿ ಪ್ರಕಟವಾದ "ಝಿಯಾರ ಮರಣ ಮತ್ತು ಕಾದಿಯಾನೀ ವಾರ್ತೆ" ಎಂಬ ಲೇಖನವನ್ನು ಇಲ್ಲಿ ಪರಾಮರ್ಶಿಸಲಾಗುತ್ತಿದೆ.

ಅಹ್ಮದಿಯಾ ಜಮಾಅತಿನ ಮತ್ತು ಅದರ ಸ್ಥಾಪಕರ ವಿರುದ್ಧ ಆದಿಯಿಂದ ಅಂತ್ಯದ ವರೆಗೂ ವಿದ್ವೇಷದ ವಿಷಜ್ವಾಲೆಯನ್ನು ಹೊರ ಹೊಮ್ಮುತ್ತಿರುವ ಹಾಗೂ ಒಂದು ನೂರು ವರ್ಷಗಳಿಂದಲೂ ಅಹ್ಮದಿಯಾ ವಿರೋಧಿಗಳು ಪುನರಾವರ್ತಿಸಿ ಹೇಳುತ್ತಾ ಬಂದಿರುವ ಅದೇ ಸುಳ್ಳು ಆರೋಪಗಳನ್ನೂ ಸುಳ್ಳು ವಾರ್ತೆಗಳನ್ನೂ ಮತ್ತೊಮ್ಮೆ ಅಚ್ಚುಮಾಡಿದ 'ಸನ್ಮಾರ್ಗ'ದ ಈ ಲೇಖನ – ಅದರ ಮೊತ್ತಮೊದಲಿನ ವಾಕ್ಯವೇ ಒಂದು ಅಂತಾರಾಷ್ಟ್ರೀಯ ಸುಳ್ಳು ವಾರ್ತೆಯಾಗಿರುವುದು ಕಾಕತಾಳೀಯವಾದರೂ ನಮಗೆ ಅದು ಏನೂ ಆಶ್ಚರ್ಯವನ್ನುಂಟುಮಾಡಲಿಲ್ಲ. ಯಾಕೆಂದರೆ, ಓರ್ವ ಸತ್ಯ ಪ್ರವಾದಿಯಿಂದ ಸ್ಥಾಪಿತವಾದ ಅಹ್ಮದಿಯ್ಯತ್ತನ್ನು ವಿರೋಧಿಸುವವರಿಗೆ ಸುಳ್ಳಿನ ಮರೀಚಿಕೆಯಲ್ಲದೆ ಬೇರೆ ಯಾವ ಮಾರ್ಗಗಳೂ ಇರುವುದಿಲ್ಲವೆಂಬುದು ಒಂದು ಕಟುಸತ್ಯ. "ಕಳೆದ ಆಗಸ್ಟ್ 20ರಂದು ಪಾಕಿಸ್ತಾನದ ಅಧ್ಯಕ್ಷ ಜನರಲ್ ಝಿಯಾವುಲ್ ಹಕ್ ವಿಮಾನ ದುರಂತದಲ್ಲಿ ನಿಧನರಾದರು" ಎಂಬ ವಾಕ್ಯದೊಂದಿಗೆ ಲೇಖನವು ಪ್ರಾರಂಭವಾಗುತ್ತದೆ!

ಲೇಖನದಲ್ಲಿರುವ ಹೆಚ್ಚಿನ ಎಲ್ಲಾ ಸಂಗತಿಗಳೂ ಅಪ್ಪಟ ಸುಳ್ಳಿನ ಕಂತೆಗಳಾಗಿರುವಾಗ ಜಿಯಾರ ಮರಣದ ದಿನಾಂಕವು ಅದೇಕೆ ಸತ್ಯವಾಗಬೇಕು? ಜನರಲ್ ಜಿಯಾರು ಗತಿಸಿದ್ದು – ಅಲ್ಲ, ಜಗನ್ನಿಯಾಮಕನಾದ ಅಲ್ಲಾಹನ ಶಾಪಾಗ್ನಿಗೆ ತುತ್ತಾಗಿ ಬೆಂದು ಬೂದಿಯಾದದ್ದು 1988ನೇ ಆಗಸ್ಟ್ ತಿಂಗಳ 17ನೇ ತಾರೀಕಿನಂದು ಎಂಬುದು ಇಡೀ ಪ್ರಪಂಚಕ್ಕೆ ತಿಳಿದಿರುವ ಒಂದು ಸತ್ಯವೆಂದಾದರೆ, ಅದೇಕೆ ಮೂರು ದಿವಸಗಳ ಆಯುಷ್ಯವನ್ನು ಇಸ್ಲಾಮಿನ ಈ 'ವೀರ ಸೇನಾನಿ'ಗೆ 'ಸನ್ಮಾರ್ಗ' ದವರು ಕೊಡುಗೆ ನೀಡಿದ್ದಾರೆ ಎಂದು ನಮಗೆ ಅರ್ಥವಾಗುವುದಿಲ್ಲ.

ಅಹ್ಮದಿಯಾ ಜಮಾಅತಿನ ವತಿಯಿಂದ ಪ್ರಕಟಿಸಲಾದ, ಹಝ್ರತ್ ಖಲೀಫತುಲ್ ಮಸೀಹ್ ಅವರು ಈ ಕಳೆದ ಜೂನ್ 10ರಂದು ಘೋಷಿಸಿದ "ಮುಬಾಹಲ ಪಂಥಾಹ್ವಾನ"ಕ್ಕೆ ಪ್ರತಿಕ್ರಿಯೆಯ ರೂಪದಲ್ಲಿ ಸದರಿ ಲೇಖನವು ಬರೆಯಲ್ಪಟ್ಟಿದ್ದರೆ, ಅದಕ್ಕೆ ಸತ್ಯಾನ್ವೇಷಿಗಳಾದ ಸಾರ್ವಜನಿಕರ ಬಳಿ ಏನೇನೂ ಬೆಲೆಯಿರುವುದಿಲ್ಲ. ಕಾರಣ. ಮುಬಾಹಲವನ್ನು ನೇರವಾಗಿ ಸ್ವೀಕರಿಸಿಕೊಂಡು ತಮ್ಮ ಪ್ರಾಮಾಣಿಕತೆಯನ್ನು ರುಜುಗೊಳಿಸುವ ಬದಲು, ಮೊದಲಿನಿಂದಲೂ ಅಹ್ಮದಿಯಾ ವಿರೋಧಿಗಳು ಅನುಸರಿಸುತ್ತಾ ಬಂದಿರುವ ಅದೇ ವಕ್ರಮಾರ್ಗವನ್ನು ಹಿಡಿದು ಜನರನ್ನು ಮೋಸಗೊಳಿಸುವ ಚಾಳಿಯು ಇನ್ನು ಸಹ ನಡೆಯಬಹುದೆಂದು ತಿಳಿಯುವುದರಲ್ಲಿ ಅರ್ಥವಿಲ್ಲ. ಲೇಖನದಲ್ಲಿ ವಿವರಿಸಲಾದ ವಿಚಾರಗಳನ್ನು ಪರಾಮರ್ಶಿಸಲಾಗಿ ನಮಗೆ ಲೇಖಕ ಪಿ. ಪಿ. ಅಬ್ದುಲ್ ರಹ್ಮಾನ್ ಅವರೊಡನೆಯೂ 'ಸನ್ಮಾರ್ಗ' ಬಂಧುಗಳೊಡನೆಯೂ ಬಹಳ ಕನಿಕರ ತೋರುತ್ತದೆ. ಅಹ್ಮದಿಯಾ ಜಮಾಅತಿನ ವಿರುದ್ಧ ಮೊದಲಿನಿಂದಲೂ ಆರೋಪಿಸುತ್ತಾ ಬಂದಿರುವ ಅದೇ ಸುಳ್ಳು ಆರೋಪಗಳು. ಅದೇ ಸುಳ್ಳು ವಿವರಣೆಗಳು. ಅದೇ ಅಪಹಾಸ್ಯದ ಧಾಟಿ. ಅವುಗಳಿಗೆ ಅಹ್ಮದಿಯಾ ಜಮಾಅತಿನ ಕಡೆಯಿಂದ ಎಷ್ಟೋ ಸಾರಿ ಉತ್ತರ ನೀಡಲಾಗಿದ್ದರೂ ಮತ್ತೆ ಅದೇ ಆರೋಪಗಳು. ಮೊದಲು ಎಷ್ಟು ಜನ ಇದೇ ರೀತಿ ಹೇಳಿದ್ದರು! ಹೊಸತಾಗಿ ಯಾರೂ ಏನನ್ನೂ ಹೇಳುವುದಿಲ್ಲವೇಕೆ? ಸ್ವಂತ ಕಂಠವನ್ನು ಯಾರೂ ಯಾಕೆ ಉಪಯೋಗಿಸುವುದಿಲ್ಲ?

ಸ್ವತಂತ್ರವಾಗಿಯೂ ಶಾಂತವಾಗಿಯೂ ಯಾರೂ ಸ್ವಯಂ ಚಿಂತನೆ ನಡೆಸುವುದಿಲ್ಲವೇಕೆ? ಹಿಂದಿನವರು ಹೇಳಿದರು – ಕಾದಿಯಾನಿಗಳು ಅಂಥವರು, ಇಂಥವರು ಎಂದು. ಕೋಲೆಬಸವಣ್ಣನಂತೆ ನೀವು ಸಹ ಅದನ್ನೇ ಹಾಡಿದಿರಿ – ಕಾದಿಯಾನಿಗಳು ಅಂಥವರೇ ಎಂದು! ಆದರೆ, ತೆರೆದ ಹೃದಯದಿಂದ, ವಿವೇಚನಾ ಬುದ್ಧಿಯಿಂದ ಸತ್ಯವನ್ನು ತಿಳಿಯಲು ಯಾರಾದರೂ ಪ್ರಯತ್ನಿಸಿರುವರೇ? ಗುಂಪು ಸೇರಿದಲ್ಲಿ ಗಯಾಳನೂ ಗಟ್ಟಿಗನು. ಆ ರೀತಿ ಗಟ್ಟಿಗನಾಗುವುದರಲ್ಲಿ ಪುರುಷಾರ್ಥವಿಲ್ಲ. ಗುಂಪಿನಿಂದ ಬೇರ್ಪಟ್ಟು ನಿಂತು, ಕಾರ್ಯಕ್ಷಮತೆಯಿಂದ ಚಿಂತನೆ ನಡೆಸಿ, ವಸ್ತುನಿಷ್ಠವಾದ ಅಧ್ಯಯನದ ಮೂಲಕ ಸತ್ಯವನ್ನು ಕಂಡುಹಿಡಿಯಬೇಕಾದುದು ಮನುಷ್ಯ ಧರ್ಮ. "ಸತ್ಯಾನ್ವೇಷಕರು" ಎಂದು ಹೇಳಿಕೊಳ್ಳುತ್ತಿರುವವರಿಗೆ ಹಾಗೆ ಮಾಡಬೇಕಾದ ಜವಾಬ್ದಾರಿಕೆಯಿಲ್ಲವೇ? ಇಸ್ಲಾಂ ಧರ್ಮವು ಸಹಿಷ್ಣುತೆಯ ಧರ್ಮವಾಗಿದೆ. ಸತ್ಯಾನ್ವೇಷಣೆಗೆ ಪ್ರೋತ್ಸಾಹ ನೀಡುವ ಧರ್ಮವೂ ಇಸ್ಲಾಂ ಆಗಿದೆ.

ಸನ್ಮಾರ್ಗವು ಪ್ರಕಟಿಸಿದ ಪಿ. ಪಿ. ಅಬ್ದುಲ್ ರಹ್ಮಾನರ ಲೇಖನದ ಆದ್ಯಂತ ಅಸಂಬದ್ಧಗಳೂ ಅಸತ್ಯಗಳೂ ತುಂಬಿ ತುಳುಕುತ್ತಿವೆ. ಅಸಹಿಷ್ಣುತೆ ಅದರಲ್ಲಿ ತಾಂಡವವಾಡುತ್ತಿದೆ. ಪವಿತ್ರ ಖುರ್‌ಆನ್ ನಿರ್ದೇಶಿಸುವ "ನೀವು ಇತರರನ್ನು ಅಡ್ಡ ಹೆಸರುಗಳಿಂದ ಕರೆಯಬೇಡಿರಿ" ಎಂಬ ಆಜ್ಞೆಯನ್ನು ಧೀರೋದಾತ್ತವಾಗಿ ಉಲ್ಲಂಘಿಸಿಕೊಂಡು ಲೇಖನದ ಉದ್ದಕ್ಕೂ ಅಹ್ಮದಿಯಾ ಜಮಾಅತನ್ನು ಮತ್ತು ಅಹ್ಮದೀಯರನ್ನು "ಕಾದಿಯಾನಿ ಧರ್ಮ"ವೆಂದೂ "ಕಾದಿಯಾನಿಗಳು" ಎಂದೂ ಕರೆಯಲಾಗಿದೆ.

ಹಜ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರು ಭವಿಷ್ಯ ನುಡಿದ 'ಮರಣ ವಾರ್ತೆಯ ಕರಿಯಾದಿ'ಯನ್ನು ಲೇಖಕ ಅಬ್ದುಲ್ ರಹ್ಮಾನ್ ವಿವರಿಸುತ್ತಾರೆ. ಮೊದಲಿನಿಂದಲೂ ಹೇಳುತ್ತಾ ಬಂದಿರುವ ಅದೇ ಹಳೆಯ ಲಾವಣಿಗಳು. ಅದೇ ರಾಗ, ಅದೇ ಪಲ್ಲವಿ. ಸುಳ್ಳನ್ನು ಮತ್ತೆ ಮತ್ತೆ ಪುನರಾವರ್ತಿಸಿದರೆ, ಅದು ಸತ್ಯವಾಗಿ ಮಾರ್ಪಡುತ್ತದೆ ಎಂಬ ಗೀಬಲ್ಸ್ ತತ್ವಶಾಸ್ತ್ರದಲ್ಲಿ ನಂಬಿಕೆಯಿರುವವರು ಈಗಲೂ ಬದುಕಿದ್ದಾರೆಂದು ಅನುಮಾನ ಬರುತ್ತದೆ. ಆದರೆ, ಅದಕ್ಕೆ ಇಸ್ಲಾಂ ಧರ್ಮದಲ್ಲಿ ಸ್ಥಾನವಿಲ್ಲವೆಂಬುದನ್ನು ಅರಿಯಬೇಕು. ಮೌಲವಿ ಸನಾವುಲ್ಲಾ ಅಮೃತಸರಿ, ಮುಹಮ್ಮದ್ ಹುಸೈನ್ ಬಟಾಲವಿ, ಜಾಫರ್ ಸಟ್ಲಿ, ಫಾದರ್ ಅಬ್ದುಲ್ಲಾ ಆಥಂ, ಪಂಡಿತ್ ಲೇಖ್‌ರಾಮ್, ಮುಹಮ್ಮದೀ ಬೇಗಂಳ ತಂದೆ ಮತ್ತು ಆಕೆಯ ಪತಿ– ಇವರೆಲ್ಲಾ 'ಕರಿ ಯಾದಿ'ಯಲ್ಲಿ ಸೇರಿದವರಾದರೂ "ಈ ಪೈಕಿ ಯಾರೂ ಭವಿಷ್ಯ ಹೇಳಿದ ರೀತಿಯಲ್ಲಿ ನಿಧನರಾಗಿಲ್ಲ" ಎಂದು ಲೇಖಕರು ಹೇಳುತ್ತಾರೆ.

ಸುಳ್ಳು, 'ಸನ್ಮಾರ್ಗ'ದವರೇ, ನೀವು ಸುಳ್ಳು ಹೇಳುತ್ತಿದ್ದೀರಿ. "ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ" (ಪ. ಖು. 3 : 62). ಸನಾವುಲ್ಲಾ ಅಮೃತಸರಿ ತಾನು ಪ್ರಾರ್ಥನಾ ಸಮರಕ್ಕೆ ತಯಾರಿಲ್ಲವೆಂದು ಹೇಳಿ ನುಸುಳಿಕೊಂಡ ವ್ಯಕ್ತಿಯಾಗಿದ್ದಾರೆ. ಮುಹಮ್ಮದ್ ಹುಸೈನ್ ಬಟಾಲವಿ ಎಂಬವರು ಪ್ರಾರ್ಥನಾ ಸಮರವನ್ನು ಸ್ವೀಕರಿಸಲು ಮುಂದೆ ಬಂದವರಲ್ಲ. ಫಾದರ್ ಅಬ್ದುಲ್ಲಾ ಆಥಂ ಮಿರ್ಝಾ ಸಾಹೇಬರ ಭವಿಷ್ಯವಾಣಿಗೆ ಬಲಿಯಾಗಿ ಅಸುನೀಗಿದರು. ಪಂಡಿತ್ ಲೇಖ್‌ರಾಮ್ ನಿಗದಿಪಡಿಸಲಾದ ದಿನಾಂಕದಂದೇ ವಧಿಸಲ್ಪಟ್ಟು ಪರಲೋಕ ಸೇರಿದರು. ಮುಹಮ್ಮದೀ ಬೇಗಮರ ತಂದೆ ಅಹ್ಮದ್ ಬೇಗ್ ಎಂಬವರು ಭವಿಷ್ಯವಾಣಿ ಜಾರಿಗೊಂಡ ಆರು ತಿಂಗಳ ಒಳಗಾಗಿ ಅಸುನೀಗಿದರು. ಇದನ್ನು ಕಂಡು ಭಯವಿಹ್ವಲರಾಗಿ ಪಶ್ಚಾತ್ತಾಪಗೊಂಡ ಮುಹಮ್ಮದೀ ಬೇಗಮರ ಪತಿ ಸುಲ್ತಾನ್ ಮುಹಮ್ಮದ್ ಬೇಗ್ "ಪಶ್ಚಾತ್ತಾಪ ಪಟ್ಟು ಹಿಂದಿರುಗುವಿರಾದರೆ, ಅಲ್ಲಾಹನೂ ದಯೆಯೊಂದಿಗೆ ವರ್ತಿಸುವನು" ಎಂಬ ಭವಿಷ್ಯವಾಣಿಯ ನಿಬಂಧನೆಯಂತೆ ಶಿಕ್ಷೆಯಿಂದ ಪಾರಾದರು. "ಹಜ್ರತ್ ಅಹ್ಮದ್ ಅವರಲ್ಲಿ ನಾನು ಸಂಪೂರ್ಣವಾಗಿ ವಿಶ್ವಾಸ ಹೊಂದಿದ್ದೇನೆ" ಎಂದು ನಂತರ ಸುಲ್ತಾನ್ ಮುಹಮ್ಮದ್ ಹೇಳಿದ್ದಾರೆ.

ಇನ್ನು, ಲೇಖಕರ 'ಕರಿ ಯಾದಿ'ಯನ್ನು ಒಂದೊಂದಾಗಿ ಪರಿಶೀಲಿಸುವ. ಅಹ್ಮದಿಯಾ ಪತ್ರಿಕೆಗಳಲ್ಲೂ ಇತರ ಪ್ರಕಟಣೆಗಳಲ್ಲೂ ಇವುಗಳಿಗೆ ಮೊದಲು ಎಷ್ಟೋ ಸಲ ಉತ್ತರಿಸಲಾಗಿದೆ. ಆದರೂ "ಮುಬಾಹಲ" ಜಾರಿಯಲ್ಲಿರುವ ಈ ನಿರ್ಣಾಯಕ

ವೇಳೆಯಲ್ಲಿ "ಯುಗರಶ್ಮಿ" ಓದುಗರ ತಿಳುವಳಿಕೆಗಾಗಿ ಅದನ್ನು ಬಹಳ ಸಂಕ್ಷಿಪ್ತವಾಗಿ ಇಲ್ಲಿ ಉಲ್ಲೇಖಿಸ ಬಯಸುತ್ತೇನೆ.

## ಮೌಲವಿ ಸನಾವುಲ್ಲಾ ಅಮೃತಸರಿ

ಇವರು ಅಹ್ಮದಿಯಾ ಜಮಾಅತಿನ ಕಡುವೈರಿಯಾಗಿದ್ದರು. ಅಹ್ಲೆಹದೀಸ್ ವಿಭಾಗದ ನೇತಾರನಾಗಿದ್ದ ಇವರಿಗೆ "ಅಹ್ಲೆಹದೀಸ್" ಎಂಬ ಒಂದು ಪತ್ರಿಕೆಯೂ ಇತ್ತು. ಇವರು ಅಹ್ಮದಿಯ್ಯತ್ತಿನ ವಿರುದ್ಧ ಹಾಗೂ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರ ವಿರುದ್ಧ ನಿರಂತರವಾಗಿ ಅತಿನೀಚವೂ ನಿಕೃಷ್ಟವೂ ಆದ ಕುಪ್ರಚಾರಗಳನ್ನು ಮಾಡುತ್ತಿದ್ದರು. ಸುಳ್ಳು ಆರೋಪಗಳನ್ನು ಪ್ರಚಾರ ಪಡಿಸುತ್ತಿದ್ದರು. ಭಾಷಣಗಳ ಮೂಲಕವೂ ಬರವಣಿಗೆಗಳ ಮೂಲಕವೂ ಸ್ವಂತ ಪತ್ರಿಕೆಯಲ್ಲಿ ಲೇಖನಗಳನ್ನು ಬರೆದೂ ಈ ಮೌಲವಿಯವರು ಹಝ್ರತ್ ಅಹ್ಮದರ ವಿರುದ್ಧ ಬಹಳಷ್ಟು ಕಾದಾಡಿದ ವ್ಯಕ್ತಿಯಾಗಿದ್ದಾರೆ. ಸಹನೆಯು ಎಲ್ಲಾ ಎಲ್ಲೆಗಳೂ ಮೀರಿದಾಗ ಹಝ್ರತ್ ಅಹ್ಮದ್ (ಅ) ಮೌಲವಿ ಸನಾವುಲ್ಲಾರನ್ನು ಮುಬಾಹಲ ಪ್ರಾರ್ಥನೆಗೆ ಆಹ್ವಾನಿಸಿದರು:

"ನನ್ನನ್ನು ವಿರೋಧಿಸುತ್ತಿರುವ ಇವರೆಲ್ಲರೂ ನನ್ನ ಮುಬಾಹಲದ ಪಂಥಾಹ್ವಾನವನ್ನು ಸ್ವೀಕರಿಸುವರಾದರೆ, ಅದರ ನಂತರ ಒಂದು ವರ್ಷದೊಳಗಾಗಿ ಇವರ ಮೇಲೆ ಯಾವುದಾದರೂ ಮಹಾವಿಪತ್ತು ಬಂದೆರಗದೆ ಇದ್ದರೆ, ಹಾಗೆ ರಂಗ ಪ್ರವೇಶ ಮಾಡುವ ಸಾವಿರವೋ ಎರಡು ಸಾವಿರವೋ ಜನರಲ್ಲಿ ಒಬ್ಬರಾದರೂ ಉಳಿಯುವ ಪಕ್ಷದಲ್ಲಿ ನಾನು ಒಬ್ಬ ಸುಳ್ಳುವಾದಿಯೆಂದು ಸಾಬೀತಾಗುವುದು."

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರ ಧೀರೋದಾತ್ತವಾದ ಮುಬಾಹಲ ಘೋಷಣೆ! ಮೌಲವಿ ಸನಾವುಲ್ಲಾರನ್ನು ಈ ಮುಬಾಹಲ ಸ್ವೀಕರಿಸಲು ಮುಂದೆ ಬರುವಂತೆ ವಿಶಿಷ್ಟವಾಗಿ ಆಹ್ವಾನಿಸಲಾಗಿತ್ತು. "ಮೌಲವಿ ಸನಾವುಲ್ಲಾ ಸಾಹಿಬ್ ಅಮೃತ್ಸರೀ ಕೆ ಸಾಥ್ ಆಖಿರೀ ಫೈಸಲ" (ಮೌಲವಿ ಸನಾವುಲ್ಲಾ ಸಾಹೇಬರೊಂದಿಗೆ ಕೊನೆಯ ತೀರ್ಮಾನ) ಎಂಬ ಹೆಸರಿನಲ್ಲಿ ಒಂದು ಬಹಿರಂಗ ಪ್ರಕಟಣೆಯನ್ನೇ ಹೊರಡಿಸಿ ಮಿರ್ಝಾ ಸಾಹೇಬರು ಆ ಮೌಲವಿಯನ್ನು ಮುಬಾಹಲಕ್ಕೆ ಆಹ್ವಾನಿಸಿದ್ದರು. ಆದರೆ, ಸನಾವುಲ್ಲಾ ಈ ಆಮಂತ್ರಣವನ್ನು ಸ್ವೀಕರಿಸಲು ತಯಾರಾಗಲಿಲ್ಲ. ಬದಲಾಗಿ, ಬಹಿರಂಗ ಹೇಳಿಕೆಗಳ ಮೂಲಕವೂ ತನ್ನ ಪತ್ರಿಕೆ "ಅಹ್ಲೆಹದೀಸ್" ಮೂಲಕವೂ ಅವರು ಮುಬಾಹಲದಲ್ಲಿ ಭಾಗವಹಿಸುವುದನ್ನು ಸ್ಪಷ್ಟವಾಗಿ ನಿರಾಕರಿಸಿದರು:

"ನೀವು ಬರೆದಿರುವ ಸಂಗತಿಗಳು ನನಗೆ ಸ್ವೀಕಾರಾರ್ಹವಲ್ಲ."

(ಅಹ್ಲೆಹದೀಸ್ 26-4-1907)

"ಸುಳ್ಳು ಹೇಳುವವರು, ಮೋಸಗಾರರು, ಕಲಹ ಸೃಷ್ಟಿಸುವವರು ಮೊದಲಾದ ಧರ್ಮ ನಿಷೇಧಿಗಳಿಗೆ ಸಹ ಅಲ್ಲಾಹನು ದೀರ್ಘಾಯುಸ್ಸು ನೀಡುತ್ತಿರುವನು; ಯಾಕೆಂದರೆ ಅವರು ಆ ಕಾಲಾವಧಿಯಲ್ಲಿ ಮತ್ತೂ ಹೆಚ್ಚು ಕೆಟ್ಟಕಾರ್ಯಗಳನ್ನು ಮಾಡಲಿಯೆಂದು."

(ಅಹ್ಲೆಹದೀಸ್ 31-7-1907)

ಅಕಟಾ! ಮುಬಾಹಲ ಅರ್ಥಹೀನವೆಂದೂ ಸುಳ್ಳುವಾದಿಗಳಿಗೆ ಅಲ್ಲಾಹನು ದೀರ್ಘಾಯುಸ್ಸು ನೀಡುತ್ತಿರುವನೆಂದೂ ಸತ್ಯವಾದಿಗಳು ಬೇಗದಲ್ಲೇ ಸಾಯುತ್ತಾರೆಂದೂ ಈ ಹೇಳಿಕೆಗಳ ಮೂಲಕ ಮೌಲವಿ ಸನಾವುಲ್ಲಾ ಸ್ಪಷ್ಟಪಡಿಸಿದ್ದಾರೆ! ತನ್ನ ಈ ನಿಲುವನ್ನು ನ್ಯಾಯೀಕರಿಸಲು ಅವರು ಮತ್ತೂ ಬರೆದರು – "ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಓರ್ವ ಸತ್ಯವಾದಿಯಾಗಿದ್ದರು. ಮುಸೈಲಿಮ ಕದ್ದಾಬನಿಗಿಂತ ಮೊದಲೇ ಅವರು ಮರಣ ಹೊಂದಿದರು. ಮುಸೈಲಿಮ ಓರ್ವ ಸುಳ್ಳುವಾದಿಯಾಗಿದ್ದರೂ ಸತ್ಯವಾದಿಯ ನಂತರ ಆತ ಮೃತನಾದ."

(ಮುರಖಿಯೆ ಕಾದಿಯಾನಿ ಪುಟ–7)

ಸಂಕ್ಷಿಪ್ತವಾಗಿ ಹೇಳುವುದಾದರೆ, ಮೌಲವಿ ಸನಾವುಲ್ಲಾ ಸಾಹೇಬರು ಮುಬಾಹಲವನ್ನು ಸ್ಪಷ್ಟವಾಗಿ ನಿರಾಕರಿಸುತ್ತಾ ಸುಳ್ಳುವಾದಿಯೇ ಹೆಚ್ಚುಕಾಲ ಬದುಕುತ್ತಾರೆ ಎಂಬ ಸಿದ್ಧಾಂತವನ್ನು ಎತ್ತಿಹಿಡಿದರು. ಹಝ್ರತ್ ಮುಹಮ್ಮದ್ ಪೈಗಂಬರ್ ಮತ್ತು ಮುಸೈಲಿಮ ಕದ್ದಾಬ್ ಇವರ ಉದಾಹರಣೆಯನ್ನು ನೀಡಿ ಅವರು ತನ್ನ ನಿಲುವನ್ನು ಸ್ಪಷ್ಟಪಡಿಸಿದರು.

ಮರಣವು ಸತ್ಯದೊಂದಿಗೆ ಸಂಬಂಧಪಟ್ಟದ್ದಲ್ಲ ಎಂಬುದು ಸರಿಯಾದರೂ ಓರ್ವ ಪ್ರವಾದಿತ್ವ ವಾದಿಯು ಸತ್ಯವನ್ನು ತಿಳಿದುಕೊಳ್ಳಬೇಕಾದ ನಿರ್ಣಾಯಕ ಘಟ್ಟದಲ್ಲಿ ವಾದ–ವಿವಾದಗಳೆಲ್ಲವೂ ನಿಷ್ಫಲವಾಗುವ ಕೊನೆಯ ಹಂತದಲ್ಲಿ, ವಾದಿಯು ಸತ್ಯವಂತನೋ ಸುಳ್ಳುಗಾರನೋ ಎಂದು ತಿಳಿಯಲು ಪವಿತ್ರ ಖುರ್‌ಆನ್ ತೋರಿಸಿಕೊಟ್ಟ ಅಂತಿಮ ತೀರ್ಮಾನವಾದ ಮುಬಾಹಲದಲ್ಲಿ ಭಾಗವಹಿಸುವವರ ಮೇಲೆ ಸತ್ಯವು ಪ್ರಕಟವಾಗುವುದೆಂಬ ಪವಿತ್ರ ಖುರ್‌ಆನಿನ ಬೋಧನೆಯನ್ನು ಮೌಲವಿಯವರು ಗ್ರಹಿಸದೆ ಹೋದದ್ದು ವಿಚಿತ್ರವಾಗಿದೆ. ಹಝ್ರತ್ ಅಹ್ಮದರ ಮುಬಾಹಲವನ್ನು ಸನಾವುಲ್ಲಾ ಸಾಹೇಬರು ಸ್ವೀಕರಿಸಲಿಲ್ಲ ಎಂಬ ಕಾರಣದಿಂದಲೇ ಮುಬಾಹಲದ ನಿಬಂಧನೆಗಳು ಅವರಿಗೆ ಅನ್ವಯವಾಗುವುದಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅವರು ನಜ್ರಾನದ ಕ್ರೈಸ್ತ ಪಂಡಿತರನ್ನು ಮುಬಾಹಲಕ್ಕೆ ಆಮಂತ್ರಿಸಿದರು. ಆದರೆ, ಅವರು ಅದನ್ನು ಸ್ವೀಕರಿಸಲಿಲ್ಲ. "ಅವರೇನಾದರೂ ಮುಬಾಹಲ ಪಂಥಾಹ್ವಾನವನ್ನು ಸ್ವೀಕರಿಸಿರುತ್ತಿದ್ದರೆ, ಅಲ್ಲಾಹನ ಕೋಪಾಗ್ನಿಯು ಒಂದು ವರ್ಷದೊಳಗಾಗಿ ಅವರನ್ನು ಧ್ವಂಸಮಾಡಿ ಬಿಡುತ್ತಿತ್ತು" ಎಂದು ಪೈಗಂಬರರು ನಂತರ ಹೇಳಿದರು. ಆದರೆ, ಮುಬಾಹಲ ಸ್ವೀಕರಿಸದ ಕಾರಣ ಆ ರೀತಿ ಸಂಭವಿಸಲಿಲ್ಲ. ಸನಾವುಲ್ಲಾರ ಸ್ಥಿತಿಯೂ ಹಾಗೆಯೇ ಆಯಿತು. ಪರಸ್ಪರ ಪ್ರಾರ್ಥನಾ ಸಮರಕ್ಕೆ ತಾನು ತಯಾರಿಲ್ಲವೆಂದು ಹೇಳಿ ಅವರು ಜಾರಿಕೊಂಡರು. ಆದರೆ, ಇಲ್ಲಿ ನೆನಪಿಡಬೇಕಾದ ವಿಷಯವೇನೆಂದರೆ, ಪವಿತ್ರ ಖುರ್‌ಆನ್ ಉಲ್ಲೇಖಿಸುವ ಮುಬಾಹಲ ಕ್ರಮಕ್ಕೆ ವಿರುದ್ಧವಾದ ರೀತಿಯಲ್ಲಿ ಒಂದು ನವೀನ ಸಿದ್ಧಾಂತವನ್ನು ಸನಾವುಲ್ಲಾ ಮುಂದಿಡುತ್ತಾರೆ. ಅದೇನೆಂದರೆ, ಸತ್ಯವಾದಿ ಬೇಗನೇ ಸಾಯುವನು, ಸುಳ್ಳುಗಾರನಿಗೆ ಅಲ್ಲಾಹು ದೀರ್ಘಾಯುಸ್ಸು ನೀಡುವನು ಎಂಬುದೇ.

ಏನು ಸಂಭವಿಸಿತು ಎಂಬುದು ನಮಗೆ ತಿಳಿದಿದೆ. ಮುಹಮ್ಮದ್ ಪೈಗಂಬರ್ (ಸ) ರವರ ಶಿಷ್ಯರೂ ಸತ್ಯವಾದಿಯೂ ಆಗಿದ್ದ ಮಿರ್ಝಾ ಸಾಹೇಬರು ಸನಾವುಲ್ಲಾ ಬದುಕಿರುವಾಗಲೇ ದಿವಂಗತರಾದರು. ಸನಾವುಲ್ಲಾ ಸಾಹೇಬರಾದರೆ, ಬಹು ದೀರ್ಘ ಕಾಲದವರೆಗೆ ಬದುಕಿ ತಾನು ಮುಸ್ಸೈಲಿಮನ ಅನುಯಾಯಿಯೆಂದೂ ಸುಳ್ಳುಗಾರನೆಂದೂ ಸ್ವಯಂ ಸಾಬೀತುಪಡಿಸಿ ನಿರಾಶೆಯ ಮರಣ ಪಡೆದರು.

## ಮುಹಮ್ಮದ್ ಹುಸೇನ್ ಬಟಾಲವಿ

ಇವರು ಸಹ ಅಹ್ಲೆಹದೀಸ್ ವರ್ಗದ ಓರ್ವ ಬಹುದೊಡ್ಡ ಪಂಡಿತ. ಮೊದಲು ಮಿರ್ಝಾ ಸಾಹೇಬರ ಸಂಗಡಿಗನಾಗಿದ್ದರು. ಮಿರ್ಝಾ ಸಾಹೇಬರ ಇಸ್ಲಾಂ ಧರ್ಮ ಸೇವೆಯನ್ನು ಮೆಚ್ಚಿ ಅವರನ್ನು ಹಾಡಿ ಹೊಗಳಿದ ವ್ಯಕ್ತಿ. ಹಝ್ರತ್ ಮಿರ್ಝಾ ಸಾಹೇಬರು ಬರೆದ ವಿಖ್ಯಾತವಾದ "ಬರಾಹೀನೆ ಅಹ್ಮದಿಯಾ" ಎಂಬ ಬೃಹತ್ ಗ್ರಂಥಕ್ಕೆ ಸಮೀಕ್ಷೆ ಬರೆದ ಪಂಡಿತ. ಗ್ರಂಥ ಸಮೀಕ್ಷೆಯಲ್ಲಿ ಅವರು ಮಿರ್ಝಾ ಸಾಹೇಬರನ್ನು ಬಾನೆತ್ತರಕ್ಕೆ ಹೊಗಳಿದ್ದರು. "ಇಸ್ಲಾಮಿನ ಚರಿತ್ರೆಯಲ್ಲೇ ಇದಕ್ಕೆ ಸಮಾನವಾದ ಬೇರೊಂದು ಗ್ರಂಥವಿಲ್ಲ" ಎಂದು ಕೂಡ ಅವರು ಬರೆದಿದ್ದರು.

ಆದರೆ, ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು, ತಾನು ಅಲ್ಲಾಹನಿಂದ ನಿಯೋಜಿತನಾದ ಮಹ್‌ದಿ-ಮಸೀಹ್ ಆಗಿರುವೆನೆಂದು ಸಾರಿದಾಗ ಈ ಮೌಲವಿ ತಿರುಗಿಬಿದ್ದರು. ಹಝ್ರತ್ ಅಹ್ಮದರನ್ನೂ ಅಹ್ಮದಿಯಾ ಜಮಾಅತನ್ನೂ ಅವರು ಕಟುವಾಗಿ ವಿರೋಧಿಸತೊಡಗಿದರು. ಈ ಘಟ್ಟದಲ್ಲಿ ಮೌಲವಿ ಸಾಹೇಬರನ್ನು ಒಂದು ವಿಚಾರದೋಷ ಬಾಧಿಸಿತು. ಬರಾಹೀನೆ ಅಹ್ಮದಿಯಾ ಎಂಬ ಗ್ರಂಥಕ್ಕೆ ನಿರೂಪಣೆ ಬರೆಯುವ ಮೂಲಕ ತಾನಲ್ಲವೇ ಮಿರ್ಝಾರನ್ನು ಗಗನಕ್ಕೇರಿಸಿದ್ದು. ವಾಗ್ದತ್ತ ಮಸೀಹ್ ಎಂದು ವಾದಿಸಲು ಅದೇ ಅವರಿಗೆ ಪ್ರಚೋದನೆ ನೀಡಿರಬೇಕು. ಆದುದರಿಂದ ತಾನೇ ಅದಕ್ಕೆ ಒಂದು ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಮೌಲವಿ ಬಟಾಲವಿ ಸಾಹೇಬರು ದೃಢ ಪ್ರತಿಜ್ಞೆ ಕೈಗೊಂಡರು: "ಮಿರ್ಝಾನನ್ನು ಉನ್ನತಕ್ಕೇರಿಸಿದ್ದು ನಾನು. ನಾನೇ ಅವನನ್ನು ಕೆಳಗಿಳಿಸುವೆನು."

ಆದರೆ, ಸರ್ವಶಕ್ತನಾದ ಅಲ್ಲಾಹನು ಮತ್ತೊಂದು ರೀತಿಯ ಪ್ರತಿಜ್ಞೆ ಸ್ವೀಕರಿಸಿದ್ದನು ಎಂಬುದನ್ನು ಬಹುಶಃ ಈ ಮೌಲವಿ ಆಗ ತಿಳಿದಿರಲಿಕ್ಕಿಲ್ಲ.

إنّي مُهينٌ من أراد إهانتك

ನಿನ್ನನ್ನು ಅಪಮಾನಿಸಲು ಬಯಸುವವನನ್ನು ಖಂಡಿತವಾಗಿಯೂ ನಾನು ಅಪಮಾನಕ್ಕೆ ಗುರಿಪಡಿಸುವೆನು.

ಅಲ್ಲಾಹನ ಈ ದಿವ್ಯ ತೀರ್ಮಾನವನ್ನು ಹಝ್ರತ್ ಮಿರ್ಝಾ ಸಾಹೇಬರು ಲೋಕದ ಮುಂದಿಟ್ಟರು. ಏನು ಸಂಭವಿಸಿತೆಂದು ಪರಿಶೀಲಿಸುವ. ಮಿರ್ಝಾ ಸಾಹೇಬರನ್ನು ಅಪಮಾನಿಸಲಿಕ್ಕೂ ಅವರನ್ನು 'ಕೆಳಗಿಳಿಸಲಿಕ್ಕೂ' ಪ್ರತಿಜ್ಞಾಬದ್ಧರಾದ ಮೌಲವಿ ಬಟಾಲವಿ ತನ್ನ ಕೆಲಸವನ್ನು ಪ್ರಾರಂಭಿಸಿದರು. ಅದುವರೆಗೆ ಯಾರೂ ಹೇಳಿಲ್ಲದ ರೀತಿಯ ಅತ್ಯಂತ ಕೆಟ್ಟ ಆರೋಪಗಳನ್ನೂ ನೀಚ ಮಾತುಗಳನ್ನೂ ನಿಂದನೆಗಳನ್ನೂ ಮಿರ್ಝಾ ಸಾಹೇಬರಿಗೆದುರಾಗಿ ಈ ಮೌಲವಿ ಪ್ರಕಟಿಸತೊಡಗಿದರು. ತನ್ನ ಇಶಾಅತುಸ್ಸುನ್ನ ಎಂಬ ಪತ್ರಿಕೆಯನ್ನೂ ಇತರ ಮಾಧ್ಯಮಗಳನ್ನೂ ಅವರು ಇದಕ್ಕಾಗಿ ಬಳಸಿದರು. ಹಝ್ರತ್ ಅಹ್ಮದರನ್ನು ನೀಚವಾದ ಅಶ್ಲೀಲ ಶಬ್ದಗಳಿಂದ ಬೈದು ಭಂಗಿಸತೊಡಗಿದರು. ಹಿಜರಿ 14ನೇ ಶತಮಾನದಲ್ಲಿ ಉದಯಿಸಿದ ಇಮಾಂ ಮಹ್‌ದಿಯನ್ನು ಕಾಫಿರ್ ಎಂದು ಘೋಷಿಸುವ ಒಂದು 'ಕುಫ್ರ್ ಫತ್ವಾ' (ಧರ್ಮ ಭ್ರಷ್ಟತೆಯ ವಿಧಿ)ಯನ್ನು ಅವರು ತಾನೇ ಬರೆದು ಸಿದ್ಧಪಡಿಸಿದರು. ಈ ಕುಫ್ರ್ ಫತ್ವಾವನ್ನು ಹಿಡಿದು ಇಂಡಿಯಾ ದೇಶದಲ್ಲಿಡೀ ಸಂಚರಿಸಿ, ಸಾಲದ್ದಕ್ಕೆ ಪವಿತ್ರ ಮಕ್ಕಾ ಮದೀನಗಳಿಗೂ ಪ್ರಯಾಣ ಬೆಳೆಸಿ ಇನ್ನೂರರಷ್ಟು ಪ್ರಸಿದ್ಧ ಮೌಲಾನಾಗಳಿಂದ ಅದರಲ್ಲಿ ಸಹಿಗಳನ್ನು ಸಂಗ್ರಹಿಸಿ ಅದನ್ನು ದೇಶ ವಿದೇಶಗಳಲ್ಲಿ ಪ್ರಚಾರಪಡಿಸಿದರು. ಆ ಫತ್ವಾದ ಪ್ರಕಾರ ಮಿರ್ಝಾ ಸಾಹೇಬರು ಕಾಫಿರ್, ಅವರ ಅನುಯಾಯಿಗಳೆಲ್ಲರೂ ಕಾಫಿರ್, ಮಿರ್ಝಾ ಸಾಹೇಬರೂ ಅವರ ಅನುಯಾಯಿಗಳೂ ಕಾಫಿರ್ ಅಲ್ಲವೆಂದು ನಂಬುವವರೂ ಕೂಡ ಕಾಫಿರ್ ಆಗುತ್ತಾರೆ.

ಮತಭ್ರಷ್ಟತೆಯ ಈ ವಿಧಿಯನ್ನು ಸರ್ವತ್ರ ಪ್ರಚಾರಪಡಿಸಲಾಯಿತು. ತಾನು ಮಾಡಬೇಕಾದ ಕೆಲಸಗಳನ್ನೆಲ್ಲಾ ಬಹಳ ಚಾಕಚಕ್ಯತೆಯಿಂದ ಮೌಲವಿ ಸಾಹೇಬ್ ಮಾಡಿ ಮುಗಿಸಿದ್ದಾರೆ. ಇನ್ನು ಬರಲಿರುವುದು ಮಿರ್ಝಾರ ಅಧಃಪತನದ ಕಾಲ!

ಆದರೆ, ಮೌಲವಿ ಸಾಹೇಬರು ಅಲ್ಲಾಹನ ಎಚ್ಚರಿಕೆಯನ್ನು ಗಮನಿಸಲಿಲ್ಲ. ಅವರೊಂದಿಗೆ ಸಹಕರಿಸಿದ ಇತರ ಮೌಲಾನಾಗಳೂ ಅಲ್ಲಾಹನ ವಚನಗಳ ಕಡೆ ಗಮನ ಹರಿಸಲಿಲ್ಲ.

"ತಾನು ಮತ್ತು ತನ್ನ ಪ್ರವಾದಿಗಳು ಜಯಗಳಿಸುವರು ಎಂಬುದು ಅಲ್ಲಾಹನು ಬರೆದಿಟ್ಟ ತೀರ್ಮಾನವಾಗಿದೆ." (58 : 22)

"ನಿಶ್ಚಯವಾಗಿಯೂ ನಿಮಗೆ ಮೊದಲು ಸಹ ಪ್ರವಾದಿಗಳು ಪರಿಹಾಸಕ್ಕೆ ಗುರಿಯಾಗಿದ್ದಾರೆ. ಆದರೆ, ಅವರು ಏನನ್ನು ಹೇಳಿ ಅಪಹಾಸ್ಯ ಮಾಡುತ್ತಿದ್ದರೋ ಆ ಸಂಗತಿಗಳು ಪರಿಹಾಸಕರ ಮೇಲೆಯೇ ತಿರುಗಿ ಬಿದ್ದುವು. ನೀವು ಭೂಮಿಯ ಮೇಲೆ ಸಂಚರಿಸಿ ನೋಡಿರಿ, ಸತ್ಯನಿಷೇಧಿಗಳ ಅಂತಿಮ ಫಲ ಹೇಗಿತ್ತೆಂಬುದನ್ನು ತಿಳಿಯಿರಿ." (6 : 11, 12)

ಪವಿತ್ರ ಖುರ್‌ಆನಿನ ಉಜ್ವಲವಾದ ಈ ತಾಕೀತು ಮೌಲವಿ ಬಟಾಲವಿ ಸಾಹೇಬರನ್ನು ಹೇಗೆ ಆವರಿಸಿತು ಎಂಬುದಕ್ಕೆ ಚರಿತ್ರೆಯು ಸಾಕ್ಷಿ ಹೇಳುತ್ತದೆ. ಅವರು ಒಂದು ಕಾಲದಲ್ಲಿ ತನ್ನವರಿಂದಲೂ ಅನ್ಯರಿಂದಲೂ ಅತ್ಯಂತ ಆದರಿಸಲ್ಪಡುತ್ತಿದ್ದ ಓರ್ವ ವ್ಯಕ್ತಿಯಾಗಿದ್ದರು. ಈ ಮೌಲವಿಯವರು ದಾರಿಯಲ್ಲಿ ನಡೆದು ಹೋಗುತ್ತಿರುವಾಗ ಜನರು ಜಾತಿ ಮತ ಭೇದವಿಲ್ಲದೆ ಅವರನ್ನು ವಂದಿಸುತ್ತಿದ್ದರು. ವ್ಯಾಪಾರ ಸ್ಥಳಗಳಲ್ಲಿ ಕೂತಿರುವವರು ಸಹ ಅದರನ್ನು ಕಂಡಾಕ್ಷಣ ಗೌರವದಿಂದ ಎದ್ದು ನಿಲ್ಲುತ್ತಿದ್ದರು. ಅವರಿಗೆ ಜನಕೋಟಿಗಳ ಬೆಂಬಲವಿತ್ತು. ಸರಕಾರಿ ವರ್ತುಲಗಳಲ್ಲಿ ಬಹಳಷ್ಟು ಸ್ವಾಧೀನಶಕ್ತಿಯೂ ಇತ್ತು. ಇತರ ಮುಸ್ಲಿಂ ಪಂಗಡದ ಮೌಲವಿಗಳ ಮಧ್ಯೆ ಒಂದು ವಿಶಿಷ್ಟವಾದ ವ್ಯಕ್ತಿತ್ವವೂ ಸ್ವಂತ ಮುದ್ರಣಾಲಯವೂ ತನ್ನದೇ ಸಂಪಾದಕೀಯದಲ್ಲಿ ಪ್ರಕಟವಾಗುವ ಸ್ವಂತ ಪತ್ರಿಕೆಯೂ ಸಾಲದ್ದಕ್ಕೆ ತಾನೇ ನಾಯಕನಾಗಿರುವ ಒಂದು ಪಂಗಡದ ಮುಸ್ಲಿಂ ಸಮೂಹವೂ ಶಿಷ್ಯಗಣವೂ ಪರಿಚಾರಕ ವರ್ಗವೂ ಎಲ್ಲಾ ಇದ್ದವು. ಜನರೆಡೆಯಲ್ಲಿ ಅವರಿಗಿದ್ದ ಸ್ಥಾನ ಮಾನಗಳನ್ನು ಮನ್ನಿಸಿ ಗವರ್ನರ್ ಜನರಲ್ ಕೂಡ ಅವರಿಗೆ ತನ್ನ ಆತಿಥ್ಯವನ್ನು ನೀಡಿ ಗೌರವಿಸಿದ್ದರು. ಆದರೆ, ಮಿರ್ಝಾ ಸಾಹೇಬರ ವಿರುದ್ಧ

ಈ ಮೌಲವಿ "ಕುಫ್ರ್‌ಫತ್ವಾ" ಪ್ರಕಟಿಸುತ್ತಲೇ ಆತ್ಯಾಶ್ಚರ್ಯಕರವೆಂಬಂತೆ ವಾತಾವರಣದಲ್ಲಿ ಒಂದು ಅನಿರೀಕ್ಷಿತ ಬದಲಾವಣೆ ಉಂಟಾಯಿತು. ಅವರು ಗಳಿಸಿದ್ದ ಜನಪ್ರೀತಿ ಕುಂದತೊಡಗಿತು. ಯಾವುದೇ ಪ್ರತ್ಯೇಕ ಕಾರಣವಿಲ್ಲದೆಯೇ ಜನರಿಗೆ ಅವರ ಮೇಲಿದ್ದ ಗೌರವವು ಮಾಯವಾಗತೊಡಗಿತು. ಅವರ ಸ್ವಂತದವರಾದ ಅಹ್ಲೆಹದೀಸಿನವರು ಕೂಡ ಅವರನ್ನು ತಿರಸ್ಕರಿಸಿಬಿಟ್ಟರು. ಯಾವ ಸಮುದಾಯದ ಬೆಂಬಲದಿಂದ ಇಮಾಂ ಮಹ್‌ದಿಯನ್ನು ಅವರು ಕಾಫಿರ್ ಎಂದು ಹೇಳಿದರೋ ಅದೇ ಸಮುದಾಯವು ಆ ಮೌಲವಿಯನ್ನು ಕಾಫಿರ್ ಎಂದು ಘೋಷಿಸಿತು. ಅವರು ತನ್ನ 'ಆಧ್ಯಾತ್ಮಿಕ ಪುತ್ರ' ಎಂಬ ಪದವಿ ನೀಡಿ ಗೌರವಿಸಿದ್ದ ಸನಾವುಲ್ಲಾ ಅಮೃತಸರಿಯವರ ಬಾಯಿಯಿಂದಲೇ ಅತೀ ಕಠೋರವಾದ ಬೈಗುಳನ್ನು ಮೌಲಾನಾರಿಗೆ ಬಹಿರಂಗವಾಗಿ ಕೇಳಬೇಕಾಯಿತು. ಏನಾಶ್ಚರ್ಯ! ಎಂಥಹ ಪತನ! ಸರ್ವರಿಂದಲೂ ಪೂಜ್ಯ ಭಾವನೆಯಿಂದ ಆದರಿಸಲ್ಪಡುತ್ತಿದ್ದ ವ್ಯಕ್ತಿತ್ವವು ಪುಜ್ಜವಾಗಿ ಮಾರ್ಪಟ್ಟ ಒಂದು ಕರುಣಾಜನಕ ಅಧಃಪತನ! ಮೊದಲು ಜನರು ಅವರ ಕೈಗಳನ್ನು ಹಿಡಿದು ವಂದಿಸುತ್ತಿದ್ದರು. ಈಗ ಜನರು ಅವರನ್ನು ಕಾಣುತ್ತಲೇ ಅಪಶಕುನವೆಂಬಂತೆ ತಲೆಮರೆಸಿಕೊಳ್ಳುತ್ತಾರೆ. ಎಲ್ಲೆಲ್ಲೂ ಅವರು ಒಬ್ಬಂಟಿಗನೇ. ಮೌಲಾನಾರ ಪತ್ನಿ ಅವರನ್ನು ಬಿಟ್ಟು ಸ್ವತಂತ್ರಳಾದರು. ಅವರ ಸ್ವಂತ ಮಕ್ಕಳೂ ಕೂಡ ಅವರಿಗೆ ವಿರುದ್ಧವಾಗಿ ಸ್ವರವೆತ್ತಿದಾಗ ಅವರಲ್ಲಿ ಒಬ್ಬೊಬ್ಬರ ಹೆಸರೆತ್ತಿ ಹೇಳುತ್ತಾ, ಅವರ್‍ಯಾರೂ ತನ್ನ ಮಕ್ಕಳಲ್ಲವೆಂದು ಹೇಳಬೇಕಾದ ಗತಿಗೇಡು ಅವರಿಗೆ ಬಂದೊದಗಿತು. ಅವರ ಒಬ್ಬ ಮಗ ಇಸ್ಲಾಂ ಧರ್ಮವನ್ನೇ ತ್ಯಜಿಸಿದ. ತನ್ನ ಜೀವಿತ ಕಾಲದಲ್ಲೇ ತನಗೆ ಸಂಭವಿಸುತ್ತಿರುವ ಈ ಪತನವನ್ನು ಕಂಡುಕೊಂಡೇ ಮೌಲವಿಯವರು ಜೀವಚ್ಛವದಂತೆ ಬದುಕುತ್ತಲೇ ಇದ್ದರು. ಸರ್ವರಿಂದಲೂ ಉಪೇಕ್ಷಿಸಲ್ಪಟ್ಟು ತನ್ನ ಮನೆಯವರಿಗೂ ಹೆಂಡತಿ ಮಕ್ಕಳಿಗೂ ಯಾರಿಗೂ ಬೇಡವಾದ ಒಂದು ನಿಂದ್ಯವಸ್ತುವಾಗಿ ಅವರು ಮಾರ್ಪಟ್ಟರು. ಕೊನೆಗೆ, ಅವರು ಮೃತರಾದಾಗ, ಅಲ್ಲಾಹನ ಶಾಪ ಅಲ್ಲಿಯೂ ಅವರನ್ನು ಬೆನ್ನುಬಿಡಲಿಲ್ಲ. ಮರ್ಯಾದಸ್ಥ ಮುಸಲ್ಮಾನರನ್ನು ದಫನ ಮಾಡುವ ಸಾರ್ವಜನಿಕ ಸ್ಮಶಾನವು ಅವರಿಗೆ ನಿರಾಕರಿಸಲ್ಪಟ್ಟಿತು. ಕಡೆಗೆ, ಅವರ ಭೌತಿಕ ಅವಶೇಷವನ್ನು ವೇಶ್ಯಾವಾಟಿಕೆ ಮೊದಲಾದ ನೀಚಕೃತ್ಯದ ಸ್ತ್ರೀಯರನ್ನು ಹೂಳಲು ಮೀಸಲಾಗಿಟ್ಟ ರುದ್ರಭೂಮಿಯಲ್ಲಿ ದಫನ ಮಾಡಲಾಯಿತು! ಇಲ್ಲಿ, ಮೇಲೆ ಉದ್ಧರಿಸಿದ ಅಲ್ಲಾಹನ ಪವಿತ್ರ ವಚನದ ಕೊನೆಯ ಭಾಗವನ್ನು ನಾವು ಮತ್ತೊಮ್ಮೆ ನೆನಪಿಸುತ್ತೇವೆ:

"ನೀವು ಲೋಕದಲ್ಲಿ ಸಂಚರಿಸಿ ಸತ್ಯನಿಷೇಧಿಗಳ ಅಂತಿಮ ಫಲ ಹೇಗೆ ಇತ್ತೆಂಬುದನ್ನು ತಿಳಿದುಕೊಳ್ಳಿರಿ."

ಬಟಾಲವಿ ಮೌಲವಿಯ ಮರಣದ ಬಗ್ಗೆಯೂ 'ಸನ್ಮಾರ್ಗ'ದಲ್ಲಿ ಸುಳ್ಳನ್ನೇ ಬರೆಯಲಾಗಿದೆ: "1920ರಲ್ಲಿ 52 ವಯಸ್ಸಿನ ಮುಹಮ್ಮದ್ ಹುಸೈನ್ ಬಟಾಲವಿ ಮರಣ ಹೊಂದಿದಾಗಲೂ ಅದು ಆ ಭವಿಷ್ಯದ ಸಾಕ್ಷಾತ್ಕಾರವೆಂದು ಕಾದಿಯಾನಿ ಪತ್ರಿಕೆ ವ್ಯಾಖ್ಯಾನಿಸಿತ್ತು." ಇದು ಅಪ್ಪಟವಾದ ಸುಳ್ಳು. "ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ" (3 : 62). 1920ನೇ ಇಸವಿಯಲ್ಲಿ ಮೌಲವಿ ಬಟಾಲವಿಗೆ 52 ವರ್ಷ ಪ್ರಾಯವಂತೆ! 'ಸನ್ಮಾರ್ಗ'ದವರೇ, ಅವರು ಮಿರ್ಝಾ ಸಾಹೇಬರ ಹೆಚ್ಚು ಕಮ್ಮಿ ಸಮಪ್ರಾಯಸ್ಥರು ಎಂಬುದನ್ನು ತಿಳಿಯಿರಿ. 'ಸನ್ಮಾರ್ಗ'ದ ಲೇಖನದಲ್ಲಿರುವ ಸಂಗತಿಗಳಲ್ಲಿ ಹೆಚ್ಚಿನವು ಸುಳ್ಳಾಗಿರುವಾಗ, ಜಿಯಾರ ಮರಣದ ದಿನಾಂಕವೇ ಸುಳ್ಳಾಗಿರುವಾಗ, ಬಟಾಲವಿಯ ವಯಸ್ಸು ಮಾತ್ರ ಏಕೆ ಸತ್ಯವಾಗಿರಬೇಕು ?

### ಫಾದರ್ ಅಬ್ದುಲ್ಲ ಆಥಂ:

ಇಸ್ಲಾಂ ಧರ್ಮದ ಬದ್ಧ ಶತ್ರು. ಇಸ್ಲಾಂ ಧರ್ಮವನ್ನೂ ಹಝ್ರತ್ ಮುಹಮ್ಮದ್ ಪೈಗಂಬರ್ (ಸ) ಅವರನ್ನೂ ಅತ್ಯಂತ ಕಠೋರವಾಗಿಯೂ ನೀಚವಾಗಿಯೂ ಆಕ್ಷೇಪಣೆ ಮಾಡುತ್ತಿದ್ದ ಓರ್ವ ಪಾದ್ರಿ. ಆ ಕಾಲದಲ್ಲಿ ಕ್ರೈಸ್ತ ಮಿಶನರಿಗಳೂ ಪಂಡಿತರೂ ಇಸ್ಲಾಂ ಧರ್ಮದ ಮೇಲೆ ಕ್ರೂರವಾದ ಆಕ್ರಮಣ ನಡೆಸುತ್ತಿದ್ದರು. ಪೈಗಂಬರರನ್ನು ಅತ್ಯಂತ ನೀಚವಾಗಿ ಚಿತ್ರೀಕರಿಸಿ ಪ್ರಪಂಚದ ಎಲ್ಲಾ ಕಡೆಗಳಲ್ಲೂ ಪ್ರಚಾರಮಾಡುತ್ತಿದ್ದರು. ಹಿಜರಿ 13ನೇ ಶತಮಾನದ ಕೊನೆಯ ಭಾಗದಲ್ಲಂತೂ ಕ್ರೈಸ್ತ ಪಂಡಿತರ ಈ ಆಕ್ರಮಣವು ಅದರ ಪರಾಕಾಷ್ಠೆಗೆ ಏರಿತ್ತು. ಮುಲ್ಲಾ ಮೌಲಾನಾಗಳು

ಹೊಂದಿದ್ದ ಕೆಲವು ಅಸಂಬದ್ಧ ವಿಶ್ವಾಸಗಳೂ ಮುಸ್ಲಿಮ ರೆಡೆಯಲ್ಲಿ ಪ್ರಚಲಿತವಾಗಿದ್ದ ಕೆಲವು ಅಂಧ ವಿಶ್ವಾಸಗಳೂ ಕ್ರೈಸ್ತರನ್ನು ಈ ರೀತಿ ಇಸ್ಲಾಮಿಗೆ ವಿರುದ್ಧವಾಗಿ ಆಕ್ರಮಣ ನಡೆಸಲು ದಾರಿ ಮಾಡಿಕೊಟ್ಟಿತ್ತು. ಕ್ರೈಸ್ತ ಮಿಶನರಿಗಳು ಈ ರೀತಿ ಪ್ರಚಾರಮಾಡುತ್ತಿದ್ದರು: ಮುಹಮ್ಮದ್ ಪೈಗಂಬರ್ ಒಬ್ಬ ಸಾಮಾನ್ಯ ಮನುಷ್ಯ ನಂತೆ ಜನಿಸಿ, ಬದುಕಿ, ಮೃತಹೊಂದಿದ ವ್ಯಕ್ತಿ. ಆದರೆ, ಯೇಸುಕ್ರಿಸ್ತ (ಈಸಾ)ರ ಜನನವೂ ಜೀವನವೂ ಅವರು ಇಂದು ಕೂಡ ಮೃತರಾಗದೆ ಆಕಾಶಲೋಕದಲ್ಲಿ ಬದುಕಿ ಇರುವುದೂ ಅವರು ಒಬ್ಬ ಸಾಮಾನ್ಯನಲ್ಲವೆಂದೂ ದೇವಸುತನೆಂದೂ ತಿಳಿಸಿಕೊಡುತ್ತದೆ. ಇನ್ನು ಕೊನೆಯ ಕಾಲದಲ್ಲಿ ಮುಸ್ಲಿಮರನ್ನೂ ಒಳಗೊಂಡಂತೆ ಸಮಸ್ತ ರನ್ನೂ ಒಂದೇ ಏಟಿಗೆ ಸರಿದಾರಿಗೆ ತರಲು (ಮುಹಮ್ಮದ್ ಪೈಗಂಬರರಿಗೂ ಸಾಧ್ಯವಾಗದ ಕೆಲಸ ಮಾಡಲು) ಯೇಸುಕ್ರಿಸ್ತರೇ ಪುನಃ ಬರಬೇಕು. ಪೈಗಂಬರರು ಬರುವಂತಿಲ್ಲ. ಆದುದರಿಂದ ಮುಸ್ಲಿಮರ ನಂಬಿಕೆಗಳ ಪ್ರಕಾರವೇ ಯೇಸುಕ್ರಿಸ್ತರು ಪೈಗಂಬರರಿಗಿಂತ ಶ್ರೇಷ್ಠನೆಂದೂ ಲೋಕಕಲ್ಯಾಣಕ್ಕೆ ಅವರನ್ನು ನಂಬುವುದೇ ಏಕಮಾತ್ರ ದಾರಿಯೆಂದೂ ಶಕ್ತಿಯುತವಾಗಿ ಕ್ರೈಸ್ತ ಮಿಶನರಿಗಳು ಪ್ರಚಾರ ಮಾಡಿದರು. ಮುಸ್ಲಿಂ ಮುಲ್ಲಾಗಳು ನೀಡಿದ ಬೆತ್ತದಿಂದಲೇ ಅವರು ಮುಸ್ಲಿಮರನ್ನು ಹೊಡೆಯುತ್ತಿದ್ದರು. ಕ್ರೈಸ್ತರ ಈ ಪ್ರಚಾರದ ಫಲವಾಗಿ ಅಸಂಖ್ಯಾತ ಮುಸ್ಲಿಮರು ಇಸ್ಲಾಂ ಧರ್ಮವನ್ನು ತ್ಯಜಿಸಿ ಕ್ರೈಸ್ತ ಧರ್ಮವನ್ನು ಸೇರಿದರು. ಸಾಮಾನ್ಯ ಜನರು ಮಾತ್ರವಲ್ಲ; ದೊಡ್ಡ ದೊಡ್ಡ ಮೌಲಾನಾಗಳೇ ಕ್ರೈಸ್ತ ಮತ ಪಂಡಿತರಾಗಿ ಮಾರ್ಪಟ್ಟು, ಇಸ್ಲಾಂ ಧರ್ಮದ ಮೇಲೆ ಧಾಳಿ ಮಾಡತೊಡಗಿದರು. ಇಸ್ಲಾಂ ಧರ್ಮಕ್ಕೆ ವಿದಾಯ ಹೇಳಿ ಕ್ರೈಸ್ತ ಧರ್ಮ ಸ್ವೀಕರಿಸಿದ ಅನಂತರ ಇಸ್ಲಾಂ ಧರ್ಮವನ್ನೇ ಅತಿ ನೀಚವಾಗಿ ಆಕ್ಷೇಪಿಸಲು ಕಂಕಣಬದ್ಧವಾದ ದಜ್ಜಾಲ್ ಸಮೂಹದ ಓರ್ವ ಸದಸ್ಯನೇ ಫಾದರ್ ಅಬ್ದುಲ್ಲ ಅಥಂ ಎಂಬವರು. ಈ ದಜ್ಜಾಲನ ಮರೆಯಲ್ಲಿ ನಿಂತುಕೊಂಡು 'ಸನ್ಮಾರ್ಗ'ವು ಹಝ್ರತ್ ಮಿರ್ಝಾ ಸಾಹೇಬರನ್ನು ಟೀಕಿಸಲು ಮುಂದಾದುದು ದೌರ್ಭಾಗ್ಯವೇ ಸರಿ.

ಹಝ್ರತ್ ಅಹ್ಮದ್(ಅ) ಅವರು ಈಸಾ ಮಸೀಹರ ಸದೃಶನಾಗಿ ಅವತರಿಸಿದವರಾಗಿದ್ದಾರೆ. ಅವರು ಇಮಾಂ ಮಹ್‌ದಿ ಮತ್ತು ವಾಗ್ದತ್ತ ಮಸೀಹ್ ಆಗಿರು ವರು. ಪೈಗಂಬರರ ಭವಿಷ್ಯವಾಣಿಯ ಪ್ರಕಾರ 14ನೇ ಶತಮಾನದಲ್ಲಿ ಅವತರಿಸಿದ ಧರ್ಮ ಸಂರಕ್ಷಕ. ಅವರು ಶಿಲುಬೆಯನ್ನು ಮುರಿಯುವರು, ದಜ್ಜಾಲ್ ಸಮೂಹವನ್ನು ನಿರ್ಮೂಲನ ಮಾಡುವರು, ಮುಸ್ಲಿಮರೆಡೆಯಲ್ಲಿ ಬೇರೂರಿರುವ ಅಂಧ ವಿಶ್ವಾಸಗಳನ್ನು ಹೋಗಲಾಡಿಸಿ ಯಥಾರ್ಥ ಇಸ್ಲಾಂ ಧರ್ಮದ ಪುನರ್ ಪ್ರತಿಷ್ಠಾಪನೆ ಮಾಡುವರು–ಎಂದೆಲ್ಲಾ ಅವರ ಕುರಿತು ಪೈಗಂಬರರು ಭವಿಷ್ಯ ನುಡಿದಿದ್ದಾರೆ.

ಇಸ್ಲಾಂ ಧರ್ಮವು ಅತ್ಯಂತ ದೊಡ್ಡ ಆಪತ್ತಿನಲ್ಲಿ ಸಿಲುಕಿದ್ದ ಈ ಸಂದಿಗ್ಧ ಕಾಲದಲ್ಲಿ ಹಝ್ರತ್ ಅಹ್ಮದರನ್ನು ಇಸ್ಲಾಮಿನ ರಕ್ಷಣೆಗಾಗಿ ಅಲ್ಲಾಹನು ಕಳುಹಿಸಿದನು. ಅವರು ಘೋಷಿಸಿದರು:–ಯೇಸು ದೇವರಲ್ಲ. ದೇವ ಪುತ್ರನೂ ಅಲ್ಲ. ಕ್ರೈಸ್ತರು ಪ್ರಚಾರ ಮಾಡುತ್ತಿರುವಂತಹ ಹಾಗೂ ಮುಸ್ಲಿಮರು ಅಂಗೀಕರಿಸುತ್ತಿರುವಂತಹ ತಥಾಕಥಿತ ಅದ್ಭುತ ಕಾರ್ಯಗಳು (ಅಂದರೆ ಪಕ್ಷಿಗಳನ್ನು ಸೃಷ್ಟಿಸುವುದು, ಅಂಧರನ್ನೂ ರೋಗಿಗಳನ್ನೂ ಸ್ಪರ್ಶ ಮಾತ್ರದಿಂದ ಗುಣಪಡಿಸುವುದು, ಎರಡು ಸಾವಿರ ವರ್ಷಗಳಿಂದಲೂ ಅನ್ನಾಹಾರಗಳಿಲ್ಲದೆ ಅಂತರಿಕ್ಷದಲ್ಲಿ ಬದುಕಿರುವುದು ಇತ್ಯಾದಿ) ಬರೇ ಮಿಥ್ಯಾ ವಿಶ್ವಾಸಗಳೇ ಹೊರತು ಧರ್ಮ ಗ್ರಂಥಗಳಿಂದ ಸಾಬೀತಾಗುವಂಥದ್ದಲ್ಲ. ಅವರು ಓರ್ವ ಪ್ರವಾದಿಯಾಗಿದ್ದರು. ಇಸ್ರಾಯೀಲ್ ಮನೆತನದವರನ್ನು ದೇವರ ಸತ್ಯ ಸಂದೇಶದ ಕಡೆಗೆ ಆಹ್ವಾನಿಸಲು ನಿಯೋಜಿತರಾದ ಸತ್ಯವಂತನಾದ ಓರ್ವ ಪ್ರವಾದಿ. ಪಿತೃರಹಿತವಾದ ಅವರ ಜನನವು ಒಂದು ದೃಷ್ಟಾಂತವಾಗಿದ್ದರೂ ಅದು ಅಸಂಭವನೀಯವಾದುದಲ್ಲ. ಅವರು ದೇವಾಂಶ ಸಂಭೂತನಲ್ಲ. ಇತರ ಎಲ್ಲಾ ಪ್ರವಾದಿಗಳಂತೆಯೇ ಅವರು ಕೂಡ ಓರ್ವ ಮನುಷ್ಯನಾಗಿದ್ದರು. ತಾಯಿಯ ಗರ್ಭದಲ್ಲಿ ಹುಟ್ಟಿ, ಈ ಭೂಮಿಯಲ್ಲಿ ಜನಿಸಿ, ಬೆಳೆದು, ಇತರರಂತೆ ತಿಂದು ಕುಡಿದು, ಈ ಲೋಕದಲ್ಲೇ ಮರಣ ಹೊಂದಿದ ಓರ್ವ ಪ್ರವಾದಿ.

ಹಜ್ರತ್ ಈಸಾ(ಅ) ಅವರು ದೇವರ ಸಂದೇಶವನ್ನು ಯೆಹೂದ್ಯರೆಡೆಯಲ್ಲಿ ಸಾರಿದಾಗ ಆ ಜನರು ಅವರನ್ನು ವಿರೋಧಿಸಿದರು. ದೇವರಿಂದ ಕಳುಹಿಸಲ್ಪಡುವ ಎಲ್ಲಾ ಪ್ರವಾದಿಗಳನ್ನೂ ಆಯಾ ಕಾಲದ ಜನರು ವಿರೋಧಿಸಿದಂತೆಯೇ ಯೆಹೂದ್ಯರು ಅವರನ್ನು ಪೀಡಿಸಿ, ಅವರ ಮೇಲೆ ಸುಳ್ಳು ಅಪವಾದಗಳನ್ನು ಹೊರಿಸಿ ಕೊನೆಗೆ ಶಿಲುಬೆಯಲ್ಲಿ ಹಾಕಿ ಕೊಲ್ಲಲು ತೀರ್ಮಾನಿಸಿದರು. ಆದರೆ, ಸರ್ವಶಕ್ತನಾದ ಅಲ್ಲಾಹನು ಯೇಸು ಮಸೀಹಾರನ್ನು ಶಿಲುಬೆಯ ಮರಣದಿಂದ ಪಾರು ಮಾಡಿದನು. ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟು ನಂತರ ಕೆಲವು ದಿವಸಗಳ ಬಳಿಕ ಆ ಊರನ್ನೇ ಬಿಟ್ಟು ಪೂರ್ವ ದೇಶಕ್ಕೆ ಪ್ರಯಾಣ (ಹಿಜ್ರತ್) ಮಾಡಿದರು. ನಂತರ ದೇವ ಸಂದೇಶವನ್ನು ಸಾರುತ್ತಾ 120 ವರ್ಷ ಪ್ರಾಯದವರೆಗೂ ಬದುಕಿದ್ದು ಭಾರತದ ಕಾಶ್ಮೀರದಲ್ಲಿ ಪ್ರಕೃತಿ ಸಹಜವಾಗಿ ಮರಣ ಹೊಂದಿದರು.

ಇದೇ ಯೇಸುಕ್ರಿಸ್ತರ ಕಥೆ. ಮುಹಮ್ಮದ್ ಪೈಗಂಬರರಿಗಿಂತಲೂ ಶ್ರೇಷ್ಠನೆಂದು ಬಗೆಯ ಬಹುದಾದಂತಹ ಯಾವುದೇ ವಿಶೇಷತೆಯೂ ಯೇಸುಕ್ರಿಸ್ತರಿಗಿಲ್ಲ. ಹಜ್ರತ್ ಮುಹಮ್ಮದ್ ಪೈಗಂಬರರು ಲೋಕಾನುಗ್ರಹಿಯಾಗಿದ್ದಾರೆ. ಸಮಸ್ತ ಜಗತ್ತಿಗೂ ಸಂದೇಶವಾಹಕನಾಗಿ ಆವಿರ್ಭವಿಸಿದವರು. ಅವರು ತಂದ ಸಂದೇಶಕ್ಕೆ ರಾಜ್ಯಗಳ ಪರಿಧಿಯಿಲ್ಲ. ಜನಾಂಗಗಳ ಪರಿಮಿತಿಯಿಲ್ಲ. ಆ ಸಂದೇಶಕ್ಕೆ ಕಾಲಮಿತಿಯಿಲ್ಲ. ಎಲ್ಲರಿಗೂ ಅನ್ವಯವಾಗುವಂತಹ, ಲೋಕಾಂತ್ಯದವರೆಗೂ ಜಾರಿಯಲ್ಲಿರುವ ದಿವ್ಯ ಸಂದೇಶವನ್ನು ತಂದವರು ಮುಹಮ್ಮದ್ ಪೈಗಂಬರ್ ಆಗಿದ್ದಾರೆ. ಪೈಗಂಬರರೊಡನೆ ಯೇಸುಕ್ರಿಸ್ತರನ್ನು ಹೋಲಿಸುವುದೇ ಸಾಧ್ಯವಿಲ್ಲ.

ಮಿರ್ಜಾ ಗುಲಾಂ ಅಹ್ಮದ್ ಅವರು ಖಾದಿಯಾನದಿಂದ ಘೋಷಿಸಿದ ಈ ಧ್ವನಿಯು ಇಡೀ ಜಗತ್ತಿನಲ್ಲಿ ಪ್ರತಿಧ್ವನಿಸಿತು. ದಿಗ್ವಿಜಯದಲ್ಲಿ ತೊಡಗಿದ್ದ ಕ್ರೈಸ್ತ ಲೋಕವು ನಡುಗಿತು, ಇಸ್ಲಾಂ ಧರ್ಮದ ಹಾಗೂ ಮುಹಮ್ಮದ್ ಪೈಗಂಬರರ ಸತ್ಯತೆಯನ್ನೂ ಶ್ರೇಷ್ಠತೆಯನ್ನೂ ಸಾಬೀತುಗೊಳಿಸುವ ಅನೇಕ ಬೃಹತ್ ಗ್ರಂಥಗಳನ್ನೇ ಮಿರ್ಜಾ ಸಾಹೇಬರು ರಚಿಸಿದರು. ಸಂಭಾಷಣೆಗಳನ್ನು ಏರ್ಪಡಿಸಿದರು. ಭಾಷಣಗಳ ಮೂಲಕ ಇದನ್ನು ಘೋಷಿಸಿದರು. ವಾದ–ಪ್ರತಿವಾದಗಳನ್ನು ನಡೆಸಿದರು. ನಿರಂತರವಾದ ಆಹ್ವಾನದಿಂದಲೂ ವಾದವಿವಾದಗಳಿಂದಲೂ ಕ್ರೈಸ್ತ ಧರ್ಮದ ಮೇಲೆ ಇಸ್ಲಾಂ ಧರ್ಮದ ವಿಜಯವನ್ನು ಸಂಸ್ಥಾಪಿಸಲು ಮಾಡಲು ಮಿರ್ಜಾ ಸಾಹೇಬರಿಗೆ ಸಾಧ್ಯವಾಯಿತು.

ಇಸ್ಲಾಂ ಧರ್ಮವನ್ನೂ ಪೈಗಂಬರರನ್ನೂ ಅತೀ ನೀಚವಾದ ಮಾತುಗಳಿಂದ ಅಧಿಕ್ಷೇಪಿಸುತ್ತಿದ್ದ 'ಸನ್ಮಾರ್ಗ'ದವರ ಈ ಫಾದರ್ ಅಬ್ದುಲ್ಲ ಆಥಂ ಸ್ವಾಭಾವಿಕವಾಗಿಯೇ ಮಿರ್ಜಾ ಸಾಹೇಬರ ಅತಿ ದೊಡ್ಡ ಶತ್ರುವಾಗಿ ಮಾರ್ಪಟ್ಟರು. 1893ರಲ್ಲಿ ಅಮೃತಸರದಲ್ಲಿ ಅತಿ ಗಂಭೀರವಾದ ಒಂದು ವಾದ–ಪ್ರತಿವಾದ ನಡೆಯಿತು. ಕ್ರೈಸ್ತ–ಮುಸ್ಲಿಂ ಸಂವಾದ. ಕ್ರೈಸ್ತ ಧರ್ಮದ ಕಡೆಯಿಂದ ಫಾದರ್ ಅಬ್ದುಲ್ಲ ಆಥಂ; ಸಹಾಯಕರಾಗಿ ಫಾದರ್ ತೋಮಸ್ ಹಾವೆಲ್, ಫಾದರ್ ಠಾಕುರ್‌ದಾಸ್ ಮೊದಲಾದವರು. ಇಸ್ಲಾಂ ಧರ್ಮದ ಪರವಾಗಿ ಹಜ್ರತ್ ಮಿರ್ಜಾ ಗುಲಾಂ ಅಹ್ಮದ್ ಅಲೈಹಿಸ್ಸಲಾಂ. 15 ದಿನಗಳ ಕಾಲ ಮುಂದುವರಿದ ಪ್ರಸಿದ್ಧವಾದ ಈ ವಾದ–ಪ್ರತಿವಾದದಲ್ಲಿ ಕ್ರೈಸ್ತ ಪಂಡಿತರ ಸಂಘ ಮತ್ತು ಅದರ ನೇತಾರ ಫಾದರ್ ಅಬ್ದುಲ್ಲ ಆಥಂ ಅತೀ ದಯನೀಯವಾದ ರೀತಿಯಲ್ಲಿ ಪರಾಭವಗೊಂಡರು. ಯೇಸುಕ್ರಿಸ್ತರಿಗೆ ಉಂಟೆಂದು ಹೇಳಲಾಗುತ್ತಿದ್ದ ಪೈಗಂಬರರಿಗಿಂತಲೂ ಮಿಗಿಲಾದ ಯಾವ ಶ್ರೇಷ್ಠತೆಯನ್ನೂ ಸಾಬೀತುಗೊಳಿಸಲು ಅವರಿಂದ ಸಾಧ್ಯವಾಗಲಿಲ್ಲ. ಹಜ್ರತ್ ಮುಹಮ್ಮದ್ ಪೈಗಂಬರ್ (ಸ) ಲೋಕಾನುಗ್ರಹಿಯಾಗಿಯೇ ಪ್ರಜ್ವಲಿಸಿದರು.

ಆದರೆ, ಇಸ್ಲಾಂ ಧರ್ಮದ ಮೇಲೂ ಪೈಗಂಬರರ ಮೇಲೂ ಕೆಸರೆರಚುವ ತಮ್ಮ ಕುಕೃತ್ಯಗಳನ್ನು ಈ ಕ್ರೈಸ್ತ ಪಾದ್ರಿಗಳು ನಿಲ್ಲಿಸಲಿಲ್ಲ. ಇದು ಅಸಹನೀಯವಾದಾಗ, ಯುದ್ಧದಲ್ಲಿ ಸೋತು ಬೆನ್ನು ತಿರುಗಿಸಿ ಓಡಿಹೋದ ಮೇಲೂ ಮರೆಯಲ್ಲಿ ನಿಂತು ಬಾಣ ಹೂಡುವ ಈ ಕುಚೇಷ್ಟೆಯನ್ನು ತಡೆಯದೆ ನಿರ್ವಾಹವಿಲ್ಲವೆಂಬ ಸನ್ನಿವೇಶ ಉಂಟಾದಾಗ ಹಜ್ರತ್ ಅಹ್ಮದ್ ಘೋಷಿ

ಸಿದರು: "ಅಬ್ದುಲ್ಲಾ ಆಥಂ ಪವಿತ್ರ ಪ್ರವಾದಿಯವರನ್ನು ದಜ್ಜಾಲ್ ಎಂದು ಹೇಳಿದ್ದಾರೆ. ನನ್ನನ್ನೂ ಇಸ್ಲಾಂ ಧರ್ಮವನ್ನೂ ಆಕ್ಷೇಪಿಸುತ್ತಾರೆ. ಅವರು ಅತ್ಯಂತ ಅಬದ್ಧ ವಿಶ್ವಾಸಗಳನ್ನು ಹೊಂದಿದ್ದು ಅದನ್ನೇ ಸಮರ್ಥಿಸುತ್ತಿದ್ದಾರೆ. ಆದುದರಿಂದ ಅವರು ತಮ್ಮ ಈ ದುಷ್ಕೃತ್ಯಗಳನ್ನು ತ್ಯಜಿಸಿ ಪಶ್ಚಾತಾಪಪಟ್ಟು ಸತ್ಯವನ್ನು ಅಂಗೀಕರಿಸದ ಪಕ್ಷದಲ್ಲಿ 15 ತಿಂಗಳೊಳಗಾಗಿ ಮರಣವು ಅವರನ್ನು ಆವರಿಸುವುದು,"

ಹೌದು, "ಕಾದಿಯಾನೀ ಪ್ರವಾದಿಯ" ಮರಣವಾರ್ತೆ! ಇಸ್ಲಾಂ ಧರ್ಮದ ಸಂರಕ್ಷಣೆ ಮಾಡಬೇಕಾದ ಒಂದು ನಿರ್ಣಾಯಕ ಘಟ್ಟದಲ್ಲಿ ನೀಡಿದ ಈ ವಾರ್ತೆಯು ಒಂದು ಬಹಿರಂಗ ಮುನ್ನೆಚ್ಚರಿಕೆಯಾಗಿತ್ತು. ಮುನ್ನೆಚ್ಚರಿಕೆ ಮಾತ್ರ. ಸತ್ಯವನ್ನು ಅಂಗೀಕರಿಸದ ಪಕ್ಷದಲ್ಲಿ ಮರಣ. ಅಬ್ದುಲ್ಲಾ ಆಥಮರ ಮನಸ್ಸಿನ ಮೇಲೆ ಇದೊಂದು ವಜ್ರಾಯುಧವಾಗಿ ಬಡಿದಾಗ ಅವರ ಜಂಘಾಬಲವೇ ಉಡುಗಿ ಹೋಯಿತು. ಅವರು ನಡುಗಿದರು. ತನ್ನ ಅವಸಾನ ಸನ್ನಿಹಿತವಾಗಿದೆ ಎಂಬ ಪ್ರಜ್ಞೆಯು ಅವರ ನರನಾಡಿಗಳನ್ನು ದುರ್ಬಲಗೊಳಿಸಿತು. ಅವರು ಭಯವಿಹ್ವಲರಾದರು. ತಾನು ಹಝ್ರತ್ ಪೈಗಂಬರರನ್ನು ದಜ್ಜಾಲ್ ಎಂಬುದಾಗಿ ಕರೆದಿಲ್ಲವೆಂದು ಅವರು ಅನೇಕ ಬಾರಿ ಹೇಳಿದರು. ಆಥಮರ ಮನಸ್ಸು ಸಂಪೂರ್ಣ ಅಸ್ವಸ್ಥವಾಗಿತ್ತು. ಅವರು ಒಂದೇ ಸ್ಥಳದಲ್ಲಿ ಇರದೆ ಬೇರೆಬೇರೆ ಕಡೆಗೆ ತನ್ನ ಇರುವನ್ನು ಬದಲಾಯಿಸುತ್ತಿದ್ದರು. ಆದರೂ ಅವರಿಗೆ ನೆಮ್ಮದಿ ದೊರಕಲಿಲ್ಲ. ಏನು ಮಾಡಿಯೂ ಅವರ ಮನಸ್ಸು ಸ್ವಸ್ಥಗೊಳ್ಳಲಿಲ್ಲ. ಆತ್ಮಬಂಧನದ ಕಠೋರವಾದ ಈ ವ್ಯೂಹದಿಂದ ಮುಕ್ತಿ ಪಡೆಯಲು ಕೊನೆಗೆ ಅವರು ಪವಿತ್ರ ಖುರ್‌ಆನನ್ನೇ ಶರಣು ಹೊಂದಬೇಕಾಯಿತು. ಅವರು ಖುರ್‌ಆನ್ ಪಾರಾಯಣ ಪ್ರಾರಂಭಿಸಿದರು.

ಆಥಮರ ಈ ಪರಿಭ್ರಾಂತಿಯನ್ನು ಕಂಡು ಕ್ರಿಸ್ತೀಯರು ಅವರನ್ನು ಸಂರಕ್ಷಿಸಲಿಕ್ಕೂ ಅವರ ಮನಸ್ಸಿನ ಭೀತಿ ಆತಂಕಗಳನ್ನು ದೂರೀಕರಿಸಲಿಕ್ಕೂ ಅವರಿಗೆ ಪೋಲೀಸ್ ಪಹರೆಯನ್ನು ಏರ್ಪಡಿಸಿದರು. ಆದರೆ, ಅದಾವುದರಿಂದಲೂ ಆಥಂ ಸ್ವಸ್ಥರಾಗಲಿಲ್ಲ. ಪ್ರವಾದಿ ಮುಹಮ್ಮದರ ಸತ್ಯವೂ ಇಸ್ಲಾಂ ಧರ್ಮದ ವಿಶುದ್ಧಿಯೂ ಅವರನ್ನು ಅಧೀರನನ್ನಾಗಿ ಮಾಡುತ್ತಿತ್ತು.

ಒಟ್ಟಿನಲ್ಲಿ, ಆಂತರಿಕವಾದ ಒಂದು ಮನಃ ಪರಿವರ್ತನೆಗೆ ಆಥಂ ಒಳಗಾಗಿದ್ದರು. ಆ ಮೂಲಕ ಅವರು ನಾಶದಿಂದ ಪಾರಾಗಲು ಬಯಸಿದರು. ಸತ್ಯವನ್ನು ಸಮ್ಮತಿಸದ ಪಕ್ಷದಲ್ಲಿ ಮರಣ ಎಂಬುದು ಭವಿಷ್ಯವಾಣಿಯ ನಿಬಂಧನೆಯಾಗಿತ್ತು. ಆಥಮರ ಆತ್ಮಸಾಕ್ಷಿಯು ಸತ್ಯವನ್ನು ಅಂಗೀಕರಿಸುವುದರೊಂದಿಗೆ ಭವಿಷ್ಯವಾಣಿಯ ಶಿಕ್ಷೆಯೂ ಕೂಡ ಅವರಿಂದ ದೂರ ಸರಿಯಿತು. ದಯಾಮಯನಾದ ಅಲ್ಲಾಹನು ತನ್ನ ಮಾತನ್ನು ಅಕ್ಷರಶಃ ಪಾಲಿಸಿದನು ಎಂದರ್ಥ. "ಅವರು ಕ್ಷಮಾಯಾಚನೆ ಮಾಡುತ್ತಿರುವ ಅವಸ್ಥೆಯಲ್ಲಿ ಅಲ್ಲಾಹನು ಅವರನ್ನು ಶಿಕ್ಷಿಸುವುದಿಲ್ಲ." (ಪ. ಖುರ್‌ಆನ್ 8:34)

ಆದರೆ ಮುಂದೇನಾಯಿತು? ಮರಣ ಪಾಶದಿಂದ ಆಥಂ ಸಂರಕ್ಷಿತನಾಗುತ್ತಲೇ ಕ್ರೈಸ್ತಲೋಕವು ಒಟ್ಟಾಗಿ ಎದ್ದು ನಿಂತಿತು. ಅವರ ಬೆಂಬಲಕ್ಕೆ ಇತರ ಮತಸ್ಥರೂ ಮುಲ್ಲಾಗಳೂ ಮೌಲಾನಾಗಳೂ ಸಹ ಪಂಕ್ತಿಕಟ್ಟಿ ನಿಂತರು. ಪವಿತ್ರ ಪ್ರವಾದಿಯವರ ಹಾಗೂ ಇಸ್ಲಾಂ ಧರ್ಮದ ಮಹತ್ವವನ್ನು ಎತ್ತಿಹಿಡಿಯುವುದೇ ಭವಿಷ್ಯವಾಣಿಯ ಉದ್ದೇಶವಾಗಿತ್ತೆಂಬುದನ್ನು ಕೂಡ ಈ ಮೌಲಾನಾಗಳು ಮರೆತುಬಿಟ್ಟರು. '15 ತಿಂಗಳು ಕಳೆದಿರುತ್ತದೆ. ಅಬ್ದುಲ್ಲಾ ಆಥಂ ಇನ್ನೂ ಬದುಕಿ ಉಳಿದಿದ್ದಾರೆ. ಮಿರ್ಝಾರ ಭವಿಷ್ಯವಾಣಿ ಸುಳ್ಳಾಗಿದೆ. ಆಥಂ ಪಶ್ಚಾತ್ತಾಪ ಪಟ್ಟಿಲ್ಲ. ಅವರು ಈಗಲೂ ತನ್ನ ಹಳೆಯ ನಂಬಿಕೆಗಳನ್ನೇ ಪುರಸ್ಕರಿಸುತ್ತಾರೆ'. ಕ್ರೈಸ್ತ ಮತ ಪಂಡಿತರೂ ಆರ್ಯ ಸಮಾಜದವರೂ ಮುಸ್ಲಿಂ ಮುಲ್ಲಾಗಳೂ ಒಕ್ಕೊರಳಿನಿಂದ ಕೂಗುತ್ತಿದ್ದರು. ಪರಿಹಾಸ್ಯ ಮಾಡುತ್ತಿದ್ದರು.

15 ತಿಂಗಳ ಒಳಗಾಗಿ ಆಥಂ ಹಲವು ಸಲ ಪಶ್ಚಾತ್ತಾಪ ಪ್ರಕಟಪಡಿಸಿದ್ದಾರೆ. ಪೈಗಂಬರರನ್ನು ದಜ್ಜಾಲ್ ಎಂಬುದಾಗಿ ತಾನು ಹೇಳಿಲ್ಲವೆಂದು ಖಡಾಖಂಡಿತವಾಗಿ ನುಡಿದಿದ್ದಾರೆ. ಪವಿತ್ರ ಖುರ್‌ಆನ್ ಓದಿದ್ದಾರೆ. ಇಸ್ಲಾಂ ಸತ್ಯವಾದ ಧರ್ಮವೆಂದು ಸಹ ಹೇಳಿರುತ್ತಾರೆ. ಈ ಮನಃ ಪರಿವರ್ತನೆಯೇ ಆಥಮರನ್ನು ಶಿಕ್ಷೆಯಿಂದ ಕಾಪಾಡಿತು. ಶಾಪ ಶಿಕ್ಷೆಯಿಂದ ಅಲ್ಲಾಹನು ಅವರಿಗೆ ಮುಕ್ತಿ ನೀಡಿದನು.

ಆದರೆ, ವಿರೋಧಿಗಳ ಅಟ್ಟಹಾಸವೂ ಆರ್ಭಟವೂ ಮೇರೆ ಮೀರುತ್ತಿತ್ತು. ಅದು ಸಹಿಸಲಸಾಧ್ಯವಾದ ಘಟ್ಟವನ್ನು ತಲಪಿದಾಗ ಹಝ್ರತ್ ಅಹ್ಮದರ ಮುಂದೆ ಒಂದು ದಾರಿ ಮಾತ್ರವೇ ಬಾಕಿ ಉಳಿದಿತ್ತು. ಆ ಮಹಾತ್ಮರು ಪುನಃ ಅಬ್ದುಲ್ಲ ಆಥಮರನ್ನು ಸಂಬೋಧಿಸುತ್ತಾರೆ–

"ಎಲೈ ಆಥಂ, ನೀವು ಪ್ರಮಾಣ ಮಾಡಿ ಹೇಳಿರಿ. ಇಸ್ಲಾಂ ಧರ್ಮವು ಸತ್ಯವೆಂಬ ವಿಚಾರ ನಿಮ್ಮ ಮನಸ್ಸನ್ನು ಆವರಿಸಿರಲಿಲ್ಲವೆಂದೂ ನೀವು ಪಶ್ಚಾತ್ತಾಪ ಪಟ್ಟಿರಲಿಲ್ಲವೆಂದೂ ಪ್ರಮಾಣ ಮಾಡಿ ಹೇಳಿರಿ. ಹಾಗೆ ನೀವು ಪ್ರಮಾಣ ಮಾಡಿದಲ್ಲಿ ಒಂದು ವರ್ಷದೊಳಗೆ ವಿನಾಶವು ನಿಮ್ಮನ್ನು ಬೆಂಬತ್ತುವುದು. ಅಥವಾ} ನೀವು ನಾಶವಾಗದ ಪಕ್ಷದಲ್ಲಿ ನಿಮಗೆ ಒಂದು ಸಾವಿರ ರೂಪಾಯಿಗಳ ಬಹುಮಾನ ನೀಡುವೆನು ಮತ್ತು ನನ್ನ ಎಲ್ಲಾ ವಾದಗಳೂ ಸುಳ್ಳೆಂದು ನಾನು ಬಹಿರಂಗವಾಗಿ ಒಪ್ಪಿಕೊಳ್ಳುವೆನು."

ಆಥಂ ಪ್ರಮಾಣಮಾಡಲು ಮುಂದೆ ಬರಲಿಲ್ಲ. ಬದಲಾಗಿ ಸಾಮಾನ್ಯ ರೀತಿಯ ಒಂದು ಹೇಳಿಕೆಯನ್ನು ನೀಡುತ್ತಾ ಅದರಲ್ಲಿ ತಾನು ಈಗಲೂ ಕ್ರೈಸ್ತ ಧರ್ಮವನ್ನು ಸತ್ಯವೆಂದು ನಂಬುತ್ತಿರುವುದಾಗಿ ಹೇಳಿದರು. ಆದರೆ, ಯೇಸುಕ್ರಿಸ್ತರ ದೇವತ್ವದ ಬಗ್ಗೆ ಇತರ ಕ್ರೈಸ್ತರಿಗಿಂತ ಭಿನ್ನವಾದ ರೀತಿಯಲ್ಲಿ ತಾನು ನಂಬುತ್ತಿರುವುದಾಗಿಯೂ ಯೇಸು ದೇವರೆಂದು ತಾನು ನಂಬುವುದಿಲ್ಲವೆಂದೂ ಕೂಡ ಆಥಂ ಅದರಲ್ಲಿ ಸ್ಪಷ್ಟಪಡಿಸಿದರು. ತನ್ನ ಸಹವರ್ತಿಗಳ ಒತ್ತಾಯಕ್ಕೆ ಕಟ್ಟುಬಿದ್ದು ಆಥಮರು ನೀಡಿದ ಈ ಹೇಳಿಕೆಯು ವಿಷಯದಿಂದ ನುಣುಚಿಕೊಳ್ಳಲು ನಡೆಸಿದ ಬರೇ ಒಂದು ಕುತಂತ್ರವಾಗಿತ್ತು. ತಾನು ಪಶ್ಚಾತ್ತಾಪ ಪಟ್ಟಿರಲಿಲ್ಲವೆಂದು ದೇವರ ಹೆಸರಿನಲ್ಲಿ ಪ್ರಮಾಣ ಮಾಡಿ ಸ್ಪಷ್ಟವಾಗಿ ಹೇಳಬೇಕೆಂದು ಮಿರ್ಝಾ ಸಾಹೇಬರು ಪುನಃ ಆಥಮರನ್ನು ಆಹ್ವಾನಿಸಿದರು. ಪ್ರಮಾಣದ ಹೊರತಾಗಿ ಅವರನ್ನು ತನ್ನ ಭವಿಷ್ಯವಾಣಿಗೆ ಒಳಪಡಿಸಲು ಮಿರ್ಝಾ ಸಾಹೇಬರಿಗೆ ಸಾಧ್ಯವಿರಲಿಲ್ಲ.

ಆದರೆ, ಪ್ರಮಾಣ ಮಾಡಲು ಆಥಂ ತಯಾರಿರಲಿಲ್ಲ. ಪ್ರಮಾಣ ಮಾಡುವುದನ್ನು ತನ್ನ ಧರ್ಮವು ಅನುಮತಿಸುವುದಿಲ್ಲವೆಂದು ಆಥಂ ಉತ್ತರಿಸಿದರು! ಅದು ಅತ್ಯಂತ ವಿಸ್ಮಯಕರವಾದ ಉತ್ತರವಾಗಿತ್ತು. ಪ್ರಮಾಣ ವಚನ ಸ್ವೀಕರಿಸಿದ ಅನೇಕ ಉದಾಹರಣೆಗಳನ್ನು ಬೈಬಲಿನಲ್ಲೇ ನಾವು ಕಾಣುತ್ತೇವೆ. ಕ್ರೈಸ್ತ ರಾಷ್ಟ್ರಗಳಲ್ಲಿ ಪ್ರಮಾಣ ವಚನ ಸ್ವೀಕರಿಸುವ ಪದ್ಧತಿ ಈಗಲೂ ರೂಢಿಯಲ್ಲಿದೆ. ನ್ಯಾಯಾಧೀಶರು, ಶಾಸಕಾಂಗ ಸದಸ್ಯರು, ಉನ್ನತ ಹುದ್ದೆಗಳನ್ನು ವಹಿಸಿಕೊಳ್ಳುವ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ತಮ್ಮ ನಿಷ್ಠೆಯನ್ನು ಪ್ರಮಾಣ ವಚನದ ಮೂಲಕ ದೃಢೀಕರಿಸುವುದು ಕ್ರೈಸ್ತರಾಷ್ಟ್ರಗಳೂ ಸೇರಿದಂತೆ ಪ್ರಪಂಚದ ಎಲ್ಲೆಡೆಗಳಲ್ಲೂ ಜಾರಿಯಲ್ಲಿರುವ ಒಂದು ಪದ್ಧತಿಯಾಗಿದೆ. ಇದೆಲ್ಲಾ ಆಥಮರಿಗೆ ತಿಳಿದಿದ್ದೂ ಸಹ ಅವರು ಪ್ರಮಾಣ ಮೂಲಕ ತನ್ನ ನಿಲುವನ್ನು ಬಯಲುಗೊಳಿಸಲು ಸ್ಪಷ್ಟವಾಗಿ ನಿರಾಕರಿಸಿದರು. ಪ್ರೊಟೆಸ್ಟೆಂಟ್ ವಿಭಾಗದ ಕ್ರೈಸ್ತರೂ ಸಹ ಇಗರ್ಜಿಗಳಲ್ಲಿ ತಮ್ಮ ರಾಷ್ಟ್ರದ ಮೇಲೂ ಚರ್ಚಿನ ಮೇಲೆ ನಿಷ್ಠೆಯನ್ನು ಪ್ರಕಟಿಸಿ ಪ್ರಮಾಣವಚನ ಸ್ವೀಕರಿಸುವುದು ವಾಡಿಕೆಯಾಗಿದೆ. ಇದನ್ನು ಚೆನ್ನಾಗಿ ಬಲ್ಲ ಫಾದರ್ ಅಬ್ದುಲ್ಲ ಆಥಂ ಪ್ರಮಾಣ ಮಾಡುವುದನ್ನು ತನ್ನ ಧರ್ಮವು ಒಪ್ಪುವುದಿಲ್ಲವೆಂದು ಹೇಳಿದ್ದು ಒಂದು ನೆಪ ಮಾತ್ರ. ಅವರು ಆ ಮೂಲಕ ಜನಸಾಮಾನ್ಯರನ್ನು ತಪ್ಪು ದಾರಿಗೆಳೆಯುತ್ತಿದ್ದರು. ವಂಚನಾತ್ಮಕವಾದ ಕ್ರಮವನ್ನು ಅನುಸರಿಸುತ್ತಿದ್ದರು. ಯಥಾರ್ಥದಲ್ಲಿ ಪರೀಕ್ಷೆಗೆ ಒಳಗಾಗಲು ಅವರು ಸಿದ್ಧರಿರಲಿಲ್ಲ. ಮಿರ್ಝಾ ಸಾಹೇಬರ ಸವಾಲನ್ನು ನೇರವಾಗಿ ಸ್ವೀಕರಿಸುವ ಸಾಹಸಕ್ಕೆ ಕೈಹಾಕದೆ ಅವರು ಬಳಸುದಾರಿಯನ್ನು ಹಿಡಿದು ಜನರನ್ನು ಮರುಳುಗೊಳಿಸುತ್ತಿದ್ದರು. ಆದರೆ, ಮುಗ್ಧ ಜನರನ್ನು ದಾರಿ ತಪ್ಪಿಸುವ ಈ ರೀತಿಯ ನಯವಂಚಕತನಕ್ಕೆ ತಕ್ಕ ಶಿಕ್ಷೆಯನ್ನು ನೀಡುವುದು ಅಲ್ಲಾಹನ ತೀರ್ಮಾನವಾಗಿತ್ತು.

ಮಿರ್ಝಾ ಸಾಹೇಬರು ಬಹುಮಾನದ ಮೊತ್ತವನ್ನು 1000ದಿಂದ 2000ಕ್ಕೆ ಮತ್ತೆ 3000ಕ್ಕೆ ನಂತರ 4000ಕ್ಕೆ ಏರಿಸಿದರು – "ಭವಿಷ್ಯವಾಣಿಯು ನಿಮ್ಮ ಹೃದಯವನ್ನು ಸ್ಪರ್ಶಿಸಿರಲಿಲ್ಲವೆಂದೂ ನೀವು ಪಶ್ಚಾತ್ತಾಪ ಪಟ್ಟಿರಲಿಲ್ಲವೆಂದೂ ಪ್ರಮಾಣಪೂರ್ವಕವಾಗಿ ಹೇಳುವುದಾದರೆ ನಿಮಗೆ 4000 ರೂಪಾಯಿಗಳನ್ನು ನಗದಾಗಿ ನೀಡುವೆನು. ಈ ರೀತಿ ನೀವು ಪ್ರಮಾಣ ಮಾಡಿದರೆ ಒಂದು ವರ್ಷದೊಳಗೆ ನಿಮ್ಮ ಅಂತ್ಯ ನಿಶ್ಚಿತವಾಗಿದೆ. ಅದಕ್ಕೆ ಬೇರೆ ಯಾವುದೇ ಷರತ್ತುಗಳು ಇರುವುದಿಲ್ಲ. ಅಥವಾ ನೀವು ಪ್ರಮಾಣ ಮಾಡದೆ ಇರುವುದಾದರೂ ಮೌನದ ಮೂಲಕ ನೀವು ಸತ್ಯವನ್ನು ಮರೆಮಾಚು

ತ್ರಿದ್ದೀರಿ ಎಂದು ಬುದ್ಧಿಜೀವಿಗಳು ತಿಳಿದುಕೊಳ್ಳುವರು. ಹಾಗಿದ್ದಲ್ಲಿ ನಾನು ನಿಮಗೆ ಅವಧಿಯನ್ನು ನಿರ್ಣಯಿಸುವುದಿಲ್ಲ. ಅತಿ ಬೇಗನೇ ನಿಮಗೆ ವಿನಾಶ ಬಂದೆರಗಲಿ ಎಂದು ನಾನು ಪ್ರಾರ್ಥಿಸುವೆನು. ಯಾವ ಕೃತ್ರಿಮ ದೇವರಿಗೂ ಅದರಿಂದ ನಿಮ್ಮನ್ನು ಸಂರಕ್ಷಿಸಲು ಸಾಧ್ಯವಾಗಲಾರದು."

ಹಝ್ರತ್ ಅಹ್ಮದರ ಈ ಭವಿಷ್ಯವಾಣಿ ಪ್ರಕಟವಾಗಿ ಕೇವಲ 7 ತಿಂಗಳು ಕಳೆಯುವಷ್ಟರಲ್ಲಿ 1896 ಜುಲಾಯಿ 27ರಂದು ಅಬ್ದುಲ್ಲ ಆಥಂ ಕೊನೆಯುಸಿರೆಳೆದರು!

ಪಾದ್ರಿ ಆಥಮರ ಮರಣದ ಕುರಿತಾದ ಭವಿಷ್ಯವೂ ಕಾಲನಿರ್ಣಿತವಾಗಿತ್ತು. ಭವಿಷ್ಯವಾಣಿಗಳ ಪ್ರಕಾರವೇ ಅದು ಸಂಭವಿಸಿತು. ಪಶ್ಚಾತ್ತಾಪದಿಂದ ಮರುಗಿದ ಕಾರಣ ಮೊದಲಿನ 15 ತಿಂಗಳೊಳಗೆ ಅವರಿಗೆ ಮರಣ ಬರಲಿಲ್ಲ. ಅದು ಸಹ ಭವಿಷ್ಯವಾಣಿಯ ಷರತ್ತು ಪ್ರಕಾರವೇ ಸಂಭವಿಸಿದೆ. ಆದರೆ, ದೇವರ ಕಾರುಣ್ಯದ ಪ್ರಯೋಜನವನ್ನು ತಕ್ಕ ರೀತಿಯಲ್ಲಿ ಪಡೆಯಲು ಆಥಂ ವಿಫಲರಾದರು. ಅವರ ಮತ್ತು ಅವರ ಸಹವರ್ತಿಗಳ ಉದ್ಧಟತನವು ಅವರನ್ನು ವಿನಾಶಕ್ಕೆ ಕೊಂಡೊಯ್ಯಿತು.

"ಭವಿಷ್ಯವಾಣಿಯನ್ನು ನಿಜಗೊಳಿಸಲಿಕ್ಕಾಗಿ ಆಥಮ್‌ರ ನಿವಾಸದೊಳಗೆ ವಿಷದ ಹಾವುಗಳನ್ನು ಬಿಡಲಾಯಿತು" ಎಂಬ 'ಸನ್ಮಾರ್ಗ'ದ ಲೇಖಕರ ಆರೋಪವು ಅಪಹಾಸ್ಯಕರವಾಗಿದೆ. ಸತ್ಯವನ್ನು ಮೊಟಕುಗೊಳಿಸುವ ವಿದ್ಯೆ ನಾಗರಿಕತೆಯ ಲಕ್ಷಣವಲ್ಲ. ಒಂದು ಭವಿಷ್ಯವಾಣಿಯ ಕುರಿತು ವಿಶ್ಲೇಷಿಸುವಾಗ ಅದನ್ನು ಸಂಪೂರ್ಣವಾಗಿಯೂ ಕೂಲಂಕಶವಾಗಿಯೂ ಪರಿಶೀಲಿಸಬೇಕಾದುದು ಅಗತ್ಯ. ಅದಕ್ಕೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನೂ ಒಟ್ಟುಸೇರಿಸಿ ಪರಾಮರ್ಶಿಸಬೇಕು. ಅದನ್ನು ಬಿಟ್ಟು ಭವಿಷ್ಯವಾಣಿಯ ಒಂದು ಭಾಗವನ್ನು ಮಾತ್ರ ವಿಮರ್ಶೆಗೆ ಗುರಿಪಡಿಸುವುದು, ಅದನ್ನು ಮನಬಂದಂತೆ ವ್ಯಾಖ್ಯಾನಿಸುವುದು, ನಂತರ ಪರಿಹಾಸ್ಯ ಮಾಡುವುದು ಇದು ಕಪಟತನವಾಗಿದೆ. ವಂಚನೆಯಾಗಿದೆ. ಕಾಪಟ್ಯವನ್ನೂ ವಂಚನೆಯ ಮಾರ್ಗವನ್ನೂ ಕೈಬಿಡಲು ಇಸ್ಲಾಂ ಧರ್ಮ ಕಲಿಸುತ್ತದೆ. ಲೇಖಕನಿಯ ಧರ್ಮವೂ ಅದೇ ಆಗಿದೆ.

**ಪಂಡಿತ್ ಲೇಖ್‌ರಾಂ**

ಇವರೊಬ್ಬ ಆರ್ಯಸಮಾಜದ ನೇತಾರ. ನಾಲಗೆ ಅತಿ ದೂಷಿತವಾದುದು. ಪರಿಹಾಸ್ಯ ಮಾಡುವುದರಲ್ಲಿ ಎಲ್ಲರಿಗಿಂತಲೂ ಮುಂದು. ಸತ್ಯವನ್ನು ತಿರುವು ಮುರುವು ಮಾಡುವುದರಲ್ಲಿ ಕುಪ್ರಸಿದ್ಧ. ಇಸ್ಲಾಂ ಧರ್ಮವನ್ನು ಅವಹೇಳಿಸುವುದು, ಮುಹಮ್ಮದ್ ಪೈಗಂಬರರನ್ನು ನಿಂದಿಸುವುದು, ಅತ್ಯಂತ ಕೆಟ್ಟ ರೀತಿಯ ಅಬದ್ಧ ಭಾಷಾಂತರಗಳನ್ನು ನೀಡಿ ಪವಿತ್ರ ಖುರ್‌ಆನನ್ನು ಅಪಕೀರ್ತಿಗೊಳಿಸುವುದು, ಮುಸ್ಲಿಂ ಸಮುದಾಯದ ಶೋಚನೀಯ ಅವಸ್ಥೆಯ ದುರ್ಲಾಭ ಪಡೆದು ಅವರನ್ನು ಮತಾಂತರಗೊಳಿಸುವುದು ಇವೇ ಪಂಡಿತ್ ಲೇಖ್‌ರಾಮರ ಕಾರ್ಯಕ್ರಮಗಳು.

ಇಸ್ಲಾಂ ಧರ್ಮದ ವೀರ ಸೇನಾನಿಯಾಗಿ ಉದಯಿಸಿದ ಹಝ್ರತ್ ಅಹ್ಮದ್ ಅವರು ಸ್ವರ್ಗೀಯ ದೃಷ್ಟಾಂತಗಳ ಮೂಲಕವೂ ಸಮರ್ಥನೀಯ ಸಾಕ್ಷ್ಯಾಧಾರಗಳ ಮೂಲಕವೂ ಇಸ್ಲಾಂ ಧರ್ಮದ ಮಹಿಮೆಯನ್ನು ಘೋಷಿಸುತ್ತಾ ದಿಗ್ವಿಜಯ ಮಾಡುತ್ತಿರುವುದು ಸಹಜವಾಗಿಯೇ ಲೇಖ್‌ರಾಮರಿಗೆ ಅಸಹನೀಯವಾದ ಸಂಗತಿಯಾಗಿತ್ತು.

ಒಂದು ದೃಷ್ಟಾಂತವನ್ನು ಮಿರ್ಝಾ ನನಗೆ ತೋರಿಸಿಕೊಡಲಿ – ಹಝ್ರತ್ ಅಹ್ಮದರೊಡನೆ ಲೇಖ್‌ರಾಮರ ಸವಾಲು.

ಮಿರ್ಝಾ ಸಾಹೇಬರು ಸಂಯಮನದಿಂದ ವರ್ತಿಸಿದರು. ಆದರೆ, ಇಸ್ಲಾಂ ಧರ್ಮವನ್ನೂ ಹಝ್ರತ್ ಪೈಗಂಬರರನ್ನೂ ನಿಂದಿಸುವ ಕಾರ್ಯದಲ್ಲಿ ಈ ಪಂಡಿತರ ವರ್ತನೆಯು ಸಹನೆಯ ಎಲ್ಲಾ ಸೀಮೆಗಳನ್ನೂ ದಾಟಿದಾಗ ಅವರ ಅಂತ್ಯದ ಕುರಿತು ಅಲ್ಲಾಹನು ತನಗೆ ಅರುಹಿದ ವಾರ್ತೆಯನ್ನು ಮಿರ್ಝಾ ಸಾಹೇಬರು ಅವರಿಗೆ ಬರೆದು ತಿಳಿಸುತ್ತಾರೆ. ಲೇಖ್‌ರಾಮರ ಅಂತ್ಯ ಸಮೀಪಿಸಿರುತ್ತದೆ ಎಂಬುದಾಗಿ ಅವರು ತಿಳಿಸಿದರು. ಲೇಖ್‌ರಾಂ ಅದನ್ನು ತುಚ್ಛೀಕರಿಸಿ ತಮಾಷೆ ಮಾಡಿಬಿಟ್ಟರು. ಇದೇ ಏನು ದೃಷ್ಟಾಂತ? ಮರಣ ಯಾವಾಗ ಎಂಬುದನ್ನು ನಿಖರವಾಗಿ ತಿಳಿಸಬೇಕು – ಲೇಖ್‌ರಾಂ ಆರ್ಭಟಿಸಿದರು.

ಪಂಡಿತ್ ಲೇಖ್‌ರಾಮರ ಈ ಉದ್ಧಟತನದ ಕಾರಣದಿಂದ ಅವರು ಬಯಸುವಂತೆಯೇ ಅವರ ಕುರಿತು ಸ್ಪಷ್ಟವಾದ ವಿವರವನ್ನು ಅಲ್ಲಾಹನು ಮಿರ್ಝಾ ಸಾಹೇಬರಿಗೆ ತಿಳಿಸುತ್ತಾನೆ. ತನಗೆ ಲಭಿಸಿದ ದಿವ್ಯವಾರ್ತೆಯನ್ನು ಮಿರ್ಝಾ ಸಾಹೇಬರು ಲೋಕದ ಮುಂದೆ ಸಾದರ ಪಡಿಸಿದರು. ಎಲ್ಲಾ ಮತ ನೇತಾರರಿಗೂ ಅವರು ಅದನ್ನು ಬರೆದು ಕಳುಹಿಸಿದರು.

"1893 ಫೆಬ್ರವರಿ 20ರ ನಂತರ 6 ವರ್ಷಗಳೊಳಗೆ ಅಲ್ಲಾಹನ ಅತಿ ದಾರುಣವಾದ ಶಿಕ್ಷೆಯು ಲೇಖ್‌ರಾಮರ ಮೇಲೆ ಬಂದೆರಗಲಿದೆ. ಅವರು ಶಿಕ್ಷೆಗೆ ಗುರಿಯಾಗದಿದ್ದ ಪಕ್ಷದಲ್ಲಿ, ನಾನು ದೇವರ ಕಡೆಯಿಂದ ಬಂದವನಲ್ಲವೆಂದು ತಿಳಿದುಕೊಳ್ಳಬಹುದಾಗಿದೆ; ಅದಕ್ಕೆ ಶಾಸ್ತಿಯಾಗಿ ಯಾವ ಶಿಕ್ಷೆಯನ್ನೂ ಸ್ವೀಕರಿಸಲು ನಾನು ಸಿದ್ಧನಿರುವೆನು. ಕುತ್ತಿಗೆಗೆ ಹಗ್ಗಬಿಗಿದು ನೇಣುಹಾಕುವುದು ಕೂಡ ನನಗೆ ಒಪ್ಪಿಗೆಯಾಗಿರುತ್ತದೆ."

ಕೆಲವೇ ಸಮಯದಲ್ಲಿ ತನಗೆ ಲಭಿಸಿದ ಮತ್ತೊಂದು ದಿವ್ಯವಾರ್ತೆಯನ್ನು ಸಹ ಹಝ್ರತ್ ಮಿರ್ಝಾ ಸಾಹೇಬರು ಪ್ರಕಟ ಪಡಿಸಿದರು : "ದೇವರು ಒಂದು ಸಂತೋಷವಾರ್ತೆಯನ್ನು ನನಗೆ ಅರುಹಿದ್ದಾನೆ. ಈದ್ ಹಬ್ಬಕ್ಕೆ ಸಮಾನವಾದ ಒಂದು ಸುದಿನಕ್ಕೆ ನಾನು ಸಾಕ್ಷಿಯಾಗಲಿರುವೆನು. ಆ ಶುಭದಿನವು ಈದ್ ಹಬ್ಬದ ಮಾರನೆಯ ದಿನ ಬರಲಿರುವುದು."

ಪಂಡಿತ್ ಲೇಖ್‌ರಾಮರನ್ನು ಸಂಬೋಧನೆ ಮಾಡುತ್ತಾ ಅವರು ಈ ರೀತಿ ಬರೆದರು – "ತಪ್ಪು ಗ್ರಹಿಕೆಗಳಿಗೆ ಬಲಿಯಾಗಿರುವ ಎಲೈ ಮೂಢನಾದ ಶತ್ರು! ಮುಹಮ್ಮದರ ಹರಿತವಾದ ಖಡ್ಗಕ್ಕೆ ಭಯಪಡು. ನೀನು ಮುಹಮ್ಮದರ ಮಹತ್ವವನ್ನೂ ಅವರ ತೇಜೋಮಯವಾದ ಪ್ರಕಾಶವನ್ನೂ ನಿರಾಕರಿಸಿರುವೆ. ದಿವ್ಯ ದೃಷ್ಟಾಂತಗಳು ಪೂರ್ವಕಾಲದ ದಂತಕಥೆಗಳೆಂದು ನೀನು ಭಾವಿಸಿರುವೆ. ಇದೋ, ಮುಂದೆ ಬಂದು ಮುಹಮ್ಮದರ ಅನುಯಾಯಿಗಳ ಮೂಲಕ ಪ್ರಕಟವಾಗುವ ದಿವ್ಯ ದೃಷ್ಟಾಂತಗಳನ್ನು ನೋಡು."

ಹಝ್ರತ್ ಮಿರ್ಝಾ ಸಾಹೇಬರ ಮೇಲೆ ವಿವರಿಸಲಾದ ಭವಿಷ್ಯವಾಣಿಗಳಿಂದ ನಾವು ಈ ಕೆಳಗಿನ ವಿವರಗಳನ್ನು ಸಂಗ್ರಹಿಸಬಹುದು:

1. ಲೇಖ್‌ರಾಂ ಒಂದು ದುರ್ಘಟನೆಗೆ ಬಲಿಯಾಗಲಿರುವರು – ಅತಿದಾರುಣವಾದ ದುರ್ಘಟನೆ.
2. ಅದು ಆರು ವರ್ಷಗಳೊಳಗೆ ಸಂಭವಿಸಲಿರುವುದು.
3. ಅದು ಈದ್ ಹಬ್ಬದ ಮರುದಿನ ಸಂಭವಿಸಲಿದೆ.
4. ಮುಹಮ್ಮದರ ಖಡ್ಗ – ಅದುವೇ ಲೇಖ್‌ರಾಮರಿಗೆ ಅಂತ್ಯತರುವ ಆಯುಧವಾಗಿರುವುದು.

ವರ್ಷಗಳು ಉರುಳಿದವು. 1893ರಿಂದ 1897ಕ್ಕೆ ಬಂತು. ಏನೂ ಸಂಭವಿಸಲಿಲ್ಲ. ಜನರು ವಿಶೇಷತಃ ಆರ್ಯ ಸಮಾಜದವರು, ಕ್ರಿಸ್ತೀಯರು, ಮುಲ್ಲಾಗಳು ಮಿರ್ಝಾ ಸಾಹೇಬರನ್ನು ಅಧಿಕ್ಷೇಪಿಸತೊಡಗಿದರು. 'ಲೇಖ್‌ರಾಂ ಸುರಕ್ಷಿತರಾಗಿದ್ದಾರೆ. ಮಿರ್ಝಾರ ಕಳ್ಳತನ ಸಾಬೀತಾಗುತ್ತಿದೆ.' ಆರೋಪಗಳೂ ನಿಂದನೆಗಳೂ ಮತ್ತೆ ಕರ್ಕಶವಾಗತೊಡಗಿತು. ಆದರೆ, ಭವಿಷ್ಯವಾಣಿಗಳ ಕಾಲಾವಧಿಯು ಪೂರ್ತಿಯಾಗಿರಲಿಲ್ಲ. ನಿಂದನೆಗಳನ್ನೂ ಪರಿಹಾಸ್ಯಗಳನ್ನೂ ಕೇಳುತ್ತಾ ಮಿರ್ಝಾ ಸಾಹೇಬರು ಬಹಳ ತಾಳ್ಮೆಯಿಂದ ವರ್ತಿಸಿದರು. ಅಹ್ಮದಿಯಾ ಜಮಾಅತಿನ ಸದಸ್ಯರು ಉದ್ವೇಗ ಭರಿತವಾದ ಆ ದಿನಗಳನ್ನು ಪ್ರಾರ್ಥನೆಯಲ್ಲಿ ಕಳೆದರು. ಹಾಗೆ ದಿನಗಳು ಉರುಳಿದವು.

1897ನೇ ಇಸವಿಯಲ್ಲಿ ಈದುಲ್ ಫಿತರ್ ಶುಕ್ರವಾರದ ದಿನವಾಗಿತ್ತು. ಮರುದಿವಸ ಶನಿವಾರ. ಆ ಶನಿವಾರ ಸಾಯಂಕಾಲದ ಹೊತ್ತಿಗೆ ಯಾರೋ ಅಜ್ಞಾತ ವ್ಯಕ್ತಿ ಲೇಖ್‌ರಾಮರ ಉದರಕ್ಕೆ ಹರಿತವಾದ ಖಡ್ಗದಿಂದ ತಿವಿದು ಅಪ್ರತ್ಯಕ್ಷನಾಗುತ್ತಾನೆ! ಮಾರನೆ ದಿನ ಆದಿತ್ಯವಾರ ಲೇಖ್‌ರಾಂ ಅಸುನೀಗಿದರು!!

ಭವಿಷ್ಯವಾಣಿಯು ಅದರ ಎಲ್ಲಾ ಸೂಕ್ಷ್ಮವಾದ ಅರ್ಥದಲ್ಲೂ ನೆರವೇರಿರುವುದನ್ನು ನಾವು ಇಲ್ಲಿ ಕಾಣುತ್ತೇವೆ. ಅಲ್ಲಾಹನ ವಚನಗಳು ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಪೂರ್ತಿಗೊಂಡವು. ಲೇಖ್‌ರಾಂ ಒಂದು ದುರ್ಘಟನೆಗೆ ಬಲಿಯಾಗುವರು ಎಂಬುದು ಭವಿಷ್ಯವಾಣಿಯಾಗಿತ್ತು. ಅತಿ ದಾರುಣವಾದ ದುರ್ಘಟನೆಗೆ ಅವರು ಬಲಿಯಾದರು. ಅದಕ್ಕೆ 6 ವರ್ಷಗಳ ಕಾಲಾವಧಿಯನ್ನು ನಿಶ್ಚಯಿಸಲಾಗಿತ್ತು. ಲೇಖ್‌ರಾಂ ಆ ಅವಧಿಯಲ್ಲೇ ಅಸುನೀಗಿದರು. ದುರ್ಘಟನೆಯು ಈದ್ ಹಬ್ಬದ ಮರುದಿನ ಸಂಭವಿಸಲಿದೆಯೆಂಬ ಭವಿಷ್ಯವಾಣಿಯು ಮಾತು ಸಹ ಅದೇ ರೀತಿ ಪೂರ್ತಿಗೊಂಡಿತು!

ಲೇಖ್‌ರಾಂ ವಧಿಸಲ್ಪಟ್ಟು ತೊಂಭತ್ತು ವರ್ಷಗಳು ಸಂದರೂ ತನ್ನ ಭವ್ಯ ಬಂಗಲೆಯು ಮುಹಡಿಯು

ಮೇಲಿದ್ದ ಲೇಖರಾಮ್‌ರನ್ನು ಕೊಲೆಗೈದ ವ್ಯಕ್ತಿ ಯಾರೆಂಬುದು ಇಂದಿಗೂ ಕೂಡ ಜಗತ್ತಿಗೆ ಅಜ್ಞಾತ ವಾಗಿಯೇ ಉಳಿದಿದೆ.*

ಲೇಖ್‌ರಾಂ ಸಂಭವವು ಸತ್ಯವನ್ನು ಸಂಸ್ಥಾಪನೆ ಮಾಡುವ ಕುರಿತು ನಿಚ್ಚಳವಾಗಿ ಪ್ರಕಟಗೊಂಡ ಒಂದು ದಿವ್ಯ ದೃಷ್ಟಾಂತವಾಗಿದೆ. 'ಸನ್ಮಾರ್ಗ'ದ ಲೇಖಕರಿಗೆ ಅದನ್ನು ಕಾಣುವ ಕಣ್ಣಿಲ್ಲ. ಅವರು ಲೇಖ್‌ರಾಮರ ಪರವಾಗಿ ವಾದಿಸಿದ್ದು ಇಸ್ಲಾಂ ಧರ್ಮದೊಡನೆ ಅವ ರಿಗೆ ವಿರೋಧವಿರುವುದರಿಂದ ಎಂದು ನಾವು ತಿಳಿಯು ವುದಿಲ್ಲ. ಆದರೆ, ಇಸ್ಲಾಂ ಧರ್ಮವನ್ನು ನಿಂದಿಸುವ ಕಾರ್ಯದಲ್ಲಿ ನಿರತರಾಗಿದ್ದ ಫಾದರ್ ಅಬ್ದುಲ್ಲಾ ಆಥಂ, ಪಂಡಿತ್ ಲೇಖ್‌ರಾಂ ಮೊದಲಾದವರ ವಕಾಲತು ವಹಿ ಸಲು 'ಸನ್ಮಾರ್ಗ'ವೂ ಅದರ ಲೇಖಕರೂ ಮುಂದಾ ದುದು ದೌರ್ಭಾಗ್ಯಕರವೆಂದು ಮಾತ್ರ ನಾವು ಹೇಳು ತ್ತೇವೆ.

ಆಥಂ ಮತ್ತು ಲೇಖ್‌ರಾಂ ಇಸ್ಲಾಂ ಧರ್ಮದ ಮೇಲೆ ನಡೆಸಿದ ಅತೀ ನೀಚವಾದ ಆಕ್ರಮಣದ ಕುರಿತು 'ಸನ್ಮಾರ್ಗ'ದವರಿಗೆ ನಾವು ಹೇಳಿ ತಿಳಿಸಬೇಕಾಗಿಲ್ಲ. ಅವರು ಮುಹಮ್ಮದ್ ಪೈಗಂಬರರನ್ನು ಯಾವ ರೀತಿ ಯಲ್ಲೆಲ್ಲಾ ನಿಂದಿಸಿರುವರು! ಇಸ್ಲಾಂ ಧರ್ಮವನ್ನು ಅವರು ಅದೆಷ್ಟು ಕಠೋರವಾಗಿ ಆಕ್ಷೇಪಿಸಿದರು! ಅವರ ಆಯುಷ್ಕಾಲವಿಡೀ ಇಸ್ಲಾಂ ಧರ್ಮದ ಹಾಗೂ ಪವಿತ್ರ ಪ್ರವಾದಿಯವರ ಮೇಲೆ ಕೆಸರೆರಚುವ ಕೆಲಸವನ್ನೇ ಮಾಡಿದರು. ಅದಕ್ಕೆ ಒಂದು ವಿರಾಮವುಂಟಾದುದು ಹಝ್ರತ್ ಅಹ್ಮದರ ಮೂಲಕ ಎಂಬ ಚಾರಿತ್ರಿಕ ಸತ್ಯ ವನ್ನು ಅಲ್ಲಗಳೆಯಲು 'ಸನ್ಮಾರ್ಗ'ದಿಂದ ಸಾಧ್ಯವೇ? "ಈ ಪೈಕಿ ಯಾರೂ ಭವಿಷ್ಯ ಹೇಳಿದ ರೀತಿಯಲ್ಲಿ ನಿಧನ ರಾಗಿಲ್ಲವೆಂಬುದು ಭವಿಷ್ಯವಾಣಿಯ ವೈಶಿಷ್ಟ್ಯವಾಗಿದೆ" ಎಂಬ 'ಸನ್ಮಾರ್ಗ'ದ ಹೇಳಿಕೆಯು ಸತ್ಯದ ನೇರ ಎಸ ಗಿದ ಅತಿ ಘೋರ ಅತ್ಯಾಚಾರವಾಗಿದೆ. "ಆಕಾಶಗಳಲ್ಲೂ ಭೂಮಿಯಲ್ಲೂ ಅದೆಷ್ಟು ದೃಷ್ಟಾಂತಗಳು ಪ್ರಕಟವಾಗುತ್ತಿವೆ. ಆದರೆ ಅವರು ಅವೆಲ್ಲವನ್ನೂ ಕಡೆಗಣಿಸಿಬಿಡುತ್ತಾರೆ." (ಪ. ಖುರ್‌ಆನ್ 12 : 106).

## ಮುಹಮ್ಮದೀ ಬೇಗಮಳ ತಂದೆ ಮತ್ತು ಪತಿ

"ತನ್ನ ಗಗನ ವಿವಾಹದ ನಾಯಕಿ ಮುಹಮ್ಮದೀ ಬೇಗಮ್‌ಳ ತಂದೆ ಮತ್ತು ಆಕೆಯನ್ನು ಭೂಮಿಯಲ್ಲಿ ವರಿಸಿದ ಪತಿಯ ಮರಣದ ಬಗ್ಗೆ ಮಿರ್ಝಾ ಭವಿಷ್ಯ ನುಡಿದಿದ್ದರು. ಈ ಭವಿಷ್ಯದ ಸಾಕ್ಷಾತ್ಕಾರಕ್ಕೆ ನಿರ್ದಿಷ್ಟ ಅವಧಿಯನ್ನೂ ಸೂಚಿಸಲಾಗಿತ್ತು. ಆದರೆ ಈ ಪೈಕಿ ಯಾರೂ ಭವಿಷ್ಯ ಹೇಳಿದ ರೀತಿಯಲ್ಲಿ ನಿಧನರಾಗಿಲ್ಲ" ಎಂದು ಹೇಳುತ್ತಾ 'ಸನ್ಮಾರ್ಗ'ದ ಲೇಖಕರು ಅಪ ಹಾಸ್ಯದ ನಗು ನಗುತ್ತಾರೆ.

ಈ ಕಥೆಯನ್ನು ಸಹ ಅಹ್ಮದಿಯಾ ಪತ್ರಿಕೆಗಳಲ್ಲೂ ಇತರ ಪ್ರಕಟಣೆಗಳ ಮೂಲಕವೂ ಎಷ್ಟೋ ಸಾರಿ ಬಹಳ ವಿಸ್ತಾರವಾಗಿ ವಿವರಿಸಿ ಆಗಿದೆ. ಆದರೆ, ಸತ್ಯವನ್ನು ಸಂಶೋಧನೆ ಮಾಡುವುದರ ಬದಲು ಮತ್ತೇನನ್ನೋ ಕಂಡುಹಿಡಿಯಲು ಹವಣಿಸುತ್ತಿರುವ ವಿಲಕ್ಷಣ ವಾಂಛೆಯೇ ಹಲವರಲ್ಲಿ ಎದ್ದು ಕಾಣುತ್ತದೆ.

ಮುಹಮ್ಮದೀ ಬೇಗಂ ಅಂದರೆ ಹಝ್ರತ್ ಮಿರ್ಝಾ ಸಾಹೇಬರ ಚಿಕ್ಕಪ್ಪನ ಮಗಳಾದ ಉಮರುನ್ನಿಸಾರ ಪುತ್ರಿ. ತಂದೆ ಮಿರ್ಝಾ ಅಹ್ಮದ್ ಬೇಗ್. ಚಿಕ್ಕಪ್ಪನ ಇತರ ಮಕ್ಕಳೆಂದರೆ– ಮಿರ್ಝಾ ಇಮಾಮುದ್ದೀನ್ ಮತ್ತು ಮಿರ್ಝಾ ನಿಜಾಮುದ್ದೀನ್. ಮಿರ್ಝಾ ಸಾಹೇಬರ ಅತ್ಯಂತ ನಿಕಟ ಸಂಬಂಧಿಕರು. ಮಿರ್ಝಾ ಸಾಹೇಬರ ಪಿತೃ ಕುಟುಂಬದವರಾಗಿದ್ದ ಇವರು ನಾಸ್ತಿಕರೂ ಇಸ್ಲಾಂ ಧರ್ಮವನ್ನು ನಿಂದಿಸು ವವರೂ ಆಕ್ಷೇಪಿಸುವವರೂ ಆಗಿದ್ದರು. ಮಿರ್ಝಾ ಸಾಹೇಬರ ಇಲ್ಹಾಂಗಳ ಕುರಿತು ಅಪಹಾಸ್ಯ ಮಾಡುವವ ರಾಗಿದ್ದರು. ಅವರು ಅಲ್ಲಾಹನ ದೃಷ್ಟಾಂತಗಳನ್ನು ನಿಷೇಧಿಸುವ ದೇವಧಿಕ್ಕಾರಿಗಳಾಗಿದ್ದರು. ತಮಗೊಂದು ದಿವ್ಯ ದೃಷ್ಟಾಂತ ತೋರಿಸಿಕೊಡುವಂತೆ ಅವರು

* ಜನರಲ್ ಜಿಯಾ ಸಂಚರಿಸುತ್ತಿದ್ದ 4 ಇಂಜಿನುಗಳಿದ್ದ ವಿಮಾನವು ದುರ್ಘಟನೆಗೀಡಾಗದಂತೆ ತಡೆಯುವುದಂತೂ ಇರಲಿ, ಜ। ಜಿಯಾ, ಅಮೇರಿಕಾದ ರಾಯಭಾರಿ ಮತ್ತು ಇತರ ಅನೇಕ ಸೇನಾಧಿಕಾರಿಗಳನ್ನು ಹೊತ್ತು ಸಾಗುತ್ತಿದ್ದ ಆ ವಿಮಾನವು ಮೂತಿ ಕೆಳಗಾಗಿ ಭೂಮಿಗೆ ಅಪ್ಪಳಿಸಲು ಕಾರಣವೇನೆಂದು ಕಂಡು ಹಿಡಿಯ ಲಿಕ್ಕಾದರೂ ತಂತ್ರಜ್ಞಾನದಲ್ಲಿ ಅಷ್ಟೊಂದು ಮುಂದುವರಿದಿರುವ ಅಮೇರಿಕಾದ ಸಂಶೋಧನಾ ತಂಡಕ್ಕೆ ಕೂಡ ಸಾಧ್ಯವಾಗಲಿಲ್ಲ. ಚಿಂತನೆ ಮಾಡುವವರಿಗೆ ಇದರಲ್ಲಿ ದೃಷ್ಟಾಂತಗಳನ್ನು ಕಾಣಲು ಸಾಧ್ಯವಿದೆ.

ಮಿರ್ಝಾ ಸಾಹೇಬರನ್ನು ಅಗತ್ಯಪಡಿಸಿದರು. ಅವರು ಹಝ್ರತ್ ಅಹ್ಮದರನ್ನು ಕಟುವಾಗಿ ವಿರೋಧಿಸುವವ ರಾಗಿದ್ದರು.

1886 ಜನವರಿಯಲ್ಲಿ ಹೋಶಿಯಾರ್‌ಪುರದಲ್ಲಿ ಹಝ್ರತ್ ಮಿರ್ಝಾ ಸಾಹೇಬರಿಗೆ ಲಭಿಸಿದ ಒಂದು ದಿವ್ಯವಾಣಿಯು 'ಸನ್ಮಾರ್ಗ'ದ ಲೇಖಕರು ಪರಾಮರ್ಶಿಸುವ 'ಗಗನ ವಿವಾಹ'ದ ಸಂಭವಗಳಿಗೆ ನಾಂದಿ ಹಾಕುತ್ತದೆ. ಹಝ್ರತ್ ಅಹ್ಮದ್ ಹೇಳುತ್ತಾರೆ:

"ನಾನು ಒಂದು ಆಧ್ಯಾತ್ಮಿಕ ದರ್ಶನದಲ್ಲಿ ಆ ಮಹಿಳೆಯನ್ನು (ಉಮರುನ್ನಿಸಾರ ತಾಯಿಯನ್ನು) ಅಳುತ್ತಿರುವುದಾಗಿ ಕಂಡೆನು. ನಾನು ಅವಳೊಡನೆ ಹೇಳಿದೆ–ಹೆಂಗಸೇ, ಪಶ್ಚಾತ್ತಾಪ ಪಡು. ಪಶ್ಚಾತ್ತಾಪ ಪಡು; ಇಲ್ಲವಾದರೆ ನಿನ್ನ ಸಂತತಿಗಳ ಮೇಲೆ ಆಪತ್ತುಗಳು ಬರಲಿವೆ. ಒಬ್ಬನಿಗೆ ಸಾವು ಬರುವುದು ಅದರ ಫಲವಾಗಿ ಅನೇಕ ನಾಯಿಗಳು ಬಾಕಿ ಉಳಿಯುವುವು."

ಅದೇ ಫೆಬ್ರವರಿ ತಿಂಗಳಲ್ಲಿ ತನ್ನ ಪಿತೃವ್ಯ ಕುಟುಂಬದ ಮೇಲೆ ಎರಗಲಿರುವ ವಿನಾಶದ ಕುರಿತು ತನಗೆ ಲಭಿಸಿದ ಮತ್ತೊಂದು ದಿವ್ಯ ವಾರ್ತೆಯನ್ನು ಸಹ ಅವರು ಪ್ರಕಟಿಸಿದರು:

"ನಿನ್ನ ಪಿತೃವ್ಯ ಕುಟುಂಬದ ಪ್ರತಿಯೊಂದು ಶಾಖೆಯೂ ಅಳಿಸಲ್ಪಡುವುದು. ಅವರು ಪಶ್ಚಾತ್ತಾಪ ಪಡದಿದ್ದರೆ ದೇವರು ಅವರ ಮೇಲೆ ವಿಪತ್ತುಗಳನ್ನು ಇಳಿಸುವನು. ಅವರ ಗೃಹಗಳು ವಿಧವೆಯರಿಂದ ತುಂಬುವುವು. ಅಲ್ಲಾಹನ ಕೋಪವು ಅವರ ಮೇಲೆ ಎರಗುವುದು. ಆದರೆ, ಪಶ್ಚಾತ್ತಾಪಪಟ್ಟು ಅವರು ಹಿಂದಿರುಗುವವರಾದರೆ ಅಲ್ಲಾಹನೂ ಕರುಣೆಯಿಂದ ವರ್ತಿಸುವನು."

"ಅಹ್ಮದ್ ಬೇಗ್‌ರ ಪುತ್ರಿ ಮುಹಮ್ಮದೀ ಬೇಗಮಳನ್ನು ನಿನಗೆ ವಿವಾಹ ಮಾಡಿಕೊಡುವಂತೆ ಅವರಲ್ಲಿ ಕೇಳು. ವಿವಾಹವು ಸಂಬಂಧವನ್ನು ಬಲಪಡಿಸುತ್ತದೆ; ಉತ್ತಮ ಪರಿಣಾಮಗಳನ್ನುಂಟುಮಾಡುತ್ತದೆ. ಈ ವಿವಾಹವು ನಿರಾಕರಿಸಲ್ಪಟ್ಟು ಆಕೆಯನ್ನು ಅವರು ಬೇರೆ ಯಾರಿಗಾದರೂ ವಿವಾಹ ಮಾಡಿಕೊಟ್ಟರೆ ಅಹ್ಮದ್ ಬೇಗ್ 3 ವರ್ಷಗಳೊಳಗೆ, ಅಲ್ಲ ಬಹಳ ಬೇಗನೇ ಸಾಯುವರು. ಎರಡೂವರೆ ವರ್ಷದೊಳಗೆ ವರನೂ ಸಾಯುವನು."

ತನ್ನ ಪಿತೃವ್ಯ ಕುಟುಂಬದ ಕುರಿತು ಅಲ್ಲಾಹನಿಂದ ಲಭಿಸಿದ ದಿವ್ಯ ವಾರ್ತೆಗಳನ್ನು ಹಝ್ರತ್ ಅಹ್ಮದ್ ಬಹಿರಂಗ ಪಡಿಸಿದರು. ಅಲ್ಲಾಹನ ದಿವ್ಯ ದೃಷ್ಟಾಂತಗಳಿಗೆ ಆ ಕುಟುಂಬವು ಸಹ ಸಾಕ್ಷಿಯಾಗಲಿರುವುದು.

ದೇವ ಧಿಕ್ಕಾರದ ಮಾರ್ಗವನ್ನು ತ್ಯಜಿಸಿ ಅವರು ಪಶ್ಚಾತ್ತಾಪದೊಂದಿಗೆ ಅಲ್ಲಾಹನ ಕಡೆಗೆ ಮುಖ ತಿರುಗಿಸುವರಾದರೆ ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾಗುವರು. ಅಲ್ಲ, ಧಿಕ್ಕಾರವನ್ನೇ ಮುಂದುವರಿಸುವುದಾದರೆ ಆ ಕುಟುಂಬದ ಮೇಲೆ ಅಲ್ಲಾಹನ ಕೋಪಾಗ್ನಿಯು ಸುರಿಯುವುದು. ಇದೇ ಆ ದೇವವಾಣಿಗಳ ಸಾರಾಂಶ. ಅವರೊಡನೆ ಸಂಬಂಧವನ್ನು ಬಲಪಡಿಸಲಿಕ್ಕಾಗಿ ಮಿರ್ಝಾ ಅಹ್ಮದ್ ಬೇಗ್‌ರ ಪುತ್ರಿ ಮುಹಮ್ಮದೀ ಬೇಗಮಳನ್ನು ತನಗೆ ವಿವಾಹ ಮಾಡಿಕೊಡಲು ಅವಶ್ಯಪಡುವಂತೆಯೂ ಹಝ್ರತ್ ಅಹ್ಮದರಿಗೆ ದೇವ ನಿರ್ದೇಶವುಂಟಾಯಿತು.

ಮೇಲಿನ ದಿವ್ಯವಾಣಿಗಳನ್ನು ಬಹಿರಂಗಪಡಿಸಿದ ನಂತರವೂ ಅವರು ಹಝ್ರತ್ ಮಿರ್ಝಾ ಸಾಹೇಬರ ಮೇಲಿನ ವಿರೋಧವನ್ನು ಕೈಬಿಡಲಿಲ್ಲ. ದೇವ ನಿರ್ದೇಶವನ್ನು ಅವರು ತಿರಸ್ಕರಿಸಿದರು. ತನ್ನ ಮಗಳನ್ನು ಮಿರ್ಝಾ ಸಾಹೇಬರಿಗೆ ವಿವಾಹ ಮಾಡಿಕೊಡಲು ಅಹ್ಮದ್ ಬೇಗ್ ನಿರಾಕರಿಸಿದರು. ಮಾತ್ರವಲ್ಲ ಸಕಲ ಮಾನವೀಯ ಮರ್ಯಾದೆಗಳನ್ನೂ ಉಲ್ಲಂಘಿಸುವ ರೀತಿಯಲ್ಲಿ ಮಿರ್ಝಾ ಸಾಹೇಬರನ್ನು ಕುಟುಂಬದವರು ಆಕ್ಷೇಪಿಸತೊಡಗಿದರು. ಅವಹೇಳಿಸಿದರು. ತಮ್ಮೊಂದಿಗೆ ಆರ್ಯ ಸಮಾಜದವರನ್ನೂ ಕ್ರಿಸ್ತೀಯರನ್ನೂ ಇತರ ಮುಸ್ಲಿಂ ಮುಲ್ಲಾಗಳನ್ನೂ ಜತೆಸೇರಿಸಿಕೊಂಡು ಅವರನ್ನು ಅಪಮಾನಿಸತೊಡಗಿದರು. ಅಷ್ಟು ಮಾತ್ರವಲ್ಲ, ಎಲ್ಲರೂ ಸೇರಿ ಅವಸರದಿಂದ ಮುಹಮ್ಮದೀ ಬೇಗಮಳಿಗೆ ಬೇರೊಬ್ಬ ವರನನ್ನು ಹುಡುಕಿ ವಿವಾಹ ಮಾಡಿಕೊಡಲು ತೀರ್ಮಾನಿಸಿದರು.

ಹಾಗೆ, 1892 ಎಪ್ರಿಲ್ ತಿಂಗಳಲ್ಲಿ ಮುಹಮ್ಮದೀ ಬೇಗಮಳ ವಿವಾಹವು ಸುಲ್ತಾನ್ ಮುಹಮ್ಮದ್ ಎಂಬವರೊಂದಿಗೆ ನಡೆಯಿತು.

ಅದರೊಂದಿಗೆ ಸನ್ನಿವೇಶವು ಬಿಸಿಯೇರಿತು. ಓರ್ವ ಪ್ರವಾದಿಯು ಪ್ರಶ್ನಿಸಲ್ಪಟ್ಟಿದ್ದಾರೆ. ಎಲ್ಲರ ಗಮನವೂ ಮಿರ್ಝಾ ಸಾಹೇಬರ ಭವಿಷ್ಯವಾಣಿಗಳ ಕಡೆಗೆ. 3 ವರ್ಷಗಳೊಳಗೆ ಅಹ್ಮದ್ ಬೇಗ್, $2\frac{1}{2}$ ವರ್ಷಗಳೊಳಗೆ ಸುಲ್ತಾನ್ ಮುಹಮ್ಮದ್ ನಿಧನರಾಗುವರೇ? ಎಲ್ಲರ ಮುಂದೆ ಪ್ರಶ್ನಾರ್ಥಕ ಚಿಹ್ನೆ! ಗಂಭೀರವಾದ ಮೌನವು ಖಾದಿಯಾನ್ ಗ್ರಾಮವನ್ನೇ ಆವರಿಸಿತು.

ಮೂರೂ ವರ್ಷಗಳೂ ಪೂರ್ತಿ ಕಾಯಬೇಕಾಗಲಿಲ್ಲ. ಕೇವಲ 6 ತಿಂಗಳು ಮಾತ್ರ ಕಳೆಯುವಷ್ಟರಲ್ಲಿ ಒಂದು ಜ್ವರ ನಿಮಿತ್ತದಿಂದ ಅಹ್ಮದ್ ಬೇಗ್ ಅಸುನೀಗುತ್ತಾರೆ! ಈ ಮರಣಕ್ಕೆ ಸಾಕ್ಷಿಗಳಾದ ಖಾದಿಯಾನ್ ನಿವಾಸಿಗಳು ನಡುಗಿದರು. ಕ್ರೈಸ್ತರು, ಆರ್ಯ ಸಮಾಜದವರು, ಮುಲ್ಲಾಗಳು—ಈ ಮರಣ ವಾರ್ತೆಯು ಅವರ ಮೇಲೆ ಗರಸಿಡಿಲಿನಂತೆ ಬಡಿಯಿತು. ಭವಿಷ್ಯವಾಣಿಯು ಪೂರ್ತಿಯಾಗಿದೆ. "ಒಬ್ಬನಿಗೆ ಸಾವು ಬರುವುದು, ಅನೇಕ ನಾಯಿಗಳು ಉಳಿಯುವವು." ಹಝ್ರತ್ ಮಿರ್ಝಾ ಸಾಹೇಬರ ಬದ್ಧ ಶತ್ರುವಾಗಿದ್ದ ಮುಹಮ್ಮದ್ ಹುಸೇನ್ ಬಟಾಲವಿ ಕೂಡ ಭವಿಷ್ಯವಾಣಿಯ ಪೂರ್ತೀಕರಣವನ್ನು ಒಪ್ಪಿದರು. ಆದರೆ, ಶತ್ರುತ್ವದ ಕಾರಣದಿಂದ ಅವರು ತನ್ನ ಮಾತುಗಳನ್ನು ವಕ್ರಗೊಳಿಸಿದರು. ಅವರು "ಇಶಾಅತುಸ್ಸುನ್ನ" ಎಂಬ ತನ್ನ ಪತ್ರಿಕೆಯಲ್ಲಿ ಈ ರೀತಿ ಬರೆದರು: "ಭವಿಷ್ಯವಾಣಿ ಪೂರ್ತಿಯಾಗಿದೆ. ಆದರೆ ಅದು ಇಲ್ಹಾಂ ಅಲ್ಲ. ಜೋತಿಷ್ಯವೋ ಗಣಿತ ಶಾಸ್ತ್ರವೋ ಆಗಿದೆ"!

ಅಹ್ಮದ್‌ಬೇಗ್‌ರ ಮರಣವೆಂಬ ಬೆಂಕಿಯ ಜ್ವಾಲೆಯು ಅವರ ಕುಟುಂಬವನ್ನು ನಿಶ್ಶಬ್ಧರನ್ನಾಗಿ ಮಾಡಿತು. ಅವರಿಗೆ ಮಾತನಾಡುವ ಶಕ್ತಿಯಿರಲಿಲ್ಲ! ಅವರ ಹೃದಯಗಳು ಭಾರವಾದುವು. ಅವರು ಭಯ ವಿಹ್ವಲರಾದರು. ಅಲ್ಲಾಹನ ಶಾಪವೆಂಬ ಕರಾಳ ಹಸ್ತವು ತಮ್ಮ ಮೇಲೆ ಕರಿನೆರಳನ್ನು ಬೀರುತ್ತಿರುವಂತೆ ಅವರಿಗೆ ಭಾಸವಾಯಿತು. ಅವರು ರಕ್ಷಣೆಯ ಮಾರ್ಗವನ್ನು ಹುಡುಕತೊಡಗಿದರು. ಸ್ವಾಭಾವಿಕವಾಗಿಯೇ ಅವರಲ್ಲಿ ಬಹುದೊಡ್ಡ ಮಾರ್ಪಾಟು ಉಂಟಾಯಿತು. ಭವಿಷ್ಯವಾಣಿಯ ಕಡೆಗೇ ಅವರೆಲ್ಲರೂ ಗಮನ ಹರಿಸತೊಡಗಿದರು. ಸತ್ಯದ ಕಡೆಗೆ ಅವರು ಮೆಲ್ಲ ಮೆಲ್ಲನೆ ಅಡಿಯಿಡತೊಡಗಿದರು. ನಿಂದನೆ, ಅಪಹಾಸ್ಯ, ಟೀಕೆ, ಗಲಾಟೆ, ಗದ್ದಲ. ಯಾವುದೂ ಈಗ ಇಲ್ಲ. ಒಟ್ಟಿನಲ್ಲಿ ಸಾತ್ವಿಕ ಜೀವನದ ಕಡೆಗೆ ಅವರು ತಿರುಗಿದರು. "ಪಶ್ಚಾತ್ತಾಪ ಪಟ್ಟು ಮರಳುವುದಾದರೆ ಅಲ್ಲಾಹನೂ ಕರುಣೆಯಿಂದ ವರ್ತಿಸುವನು" ಎಂಬ ಭವಿಷ್ಯವಾಣಿಯ ನಿಬಂಧನೆಗಳ ಪ್ರಕಾರವೇ ಸುಲ್ತಾನ್ ಮುಹಮ್ಮದ್ ಮರಣದಿಂದ ರಕ್ಷಣೆ ಹೊಂದಿದರು.

"ಒಂದು ಮರಣದ ನಂತರ ಅದರ ಫಲವಾಗಿ ಅನೇಕ ನಾಯಿಗಳು ಬಾಕಿ ಉಳಿಯುವುವು." ಸುಲ್ತಾನ್ ಮುಹಮ್ಮದ್ $2\frac{1}{2}$ ವರ್ಷದಲ್ಲಿ ಸಾಯದೆ ಇದ್ದಾಗ ವಿರೋಧಿಗಳು ಮತ್ತೆ ಬೀದಿಗಿಳಿಯುತ್ತಾರೆ. ಎಲ್ಲೆಲ್ಲೂ ಕೂಗಾಟ, ಬೊಗಳು ಮಾತುಗಳು: "ಸುಲ್ತಾನ್ ಮುಹಮ್ಮದ್ ಜೀವಂತವಾಗಿಯೇ ಇದ್ದಾರೆ, ಮಿರ್ಝಾರ ಭವಿಷ್ಯವಾಣಿ ಸುಳ್ಳಾಗಿದೆ." ನಮ್ಮ ಲೇಖಕರು ಹೇಳುವ ಅದೇ ಧಾಟಿ. ಅಂದರೆ ಅವರು ಸಾಯಲಿಲ್ಲವೇಕೆ? ಎಂಬುದು. ಭವಿಷ್ಯವಾಣಿ ಪೂರ್ತಿಯಾಗಿದೆಯೆಂದು ಒಪ್ಪಬೇಕಾದರೆ ಇವರಿಗೆ ಸುಲ್ತಾನ್ ಮುಹಮ್ಮದರ ರಕ್ತವೇ ಬೇಕು. ಹಿಂದ್‌ಳ ವರ್ತನೆಯನ್ನು ಜ್ಞಾಪಕಕ್ಕೆ ತರುವ ಅದೇ ಮನೋಭಾವ!

ಅಕ್ಷೋಭರಾಗಿಯೇ ಹಝ್ರತ್ ಮಿರ್ಝಾ ಸಾಹೇಬ್ ಸಾವಧಾನದಿಂದ ಉತ್ತರಿಸಿದರು—

ಸುಲ್ತಾನ್ ಮುಹಮ್ಮದ್ ನಿಧನರಾಗಲಿಲ್ಲ ನಿಜ. ಅದು ಭವಿಷ್ಯವಾಣಿಯ ಸತ್ಯತೆಗೆ ನಿದರ್ಶನವಾಗಿದೆ. ಇನ್ನು, ಈ ವಿಷಯದಲ್ಲಿ ಒಂದು ತೀರ್ಮಾನ ಬೇಕೆಂದೇ ಇದ್ದರೆ ಅದು ಬಹಳ ಸುಲಭ. ತನಗೆ ಮನಃ ಪರಿವರ್ತನೆ ಉಂಟಾಗಲಿಲ್ಲವೆಂದು ಸುಲ್ತಾನ್ ಮುಹಮ್ಮದ್ ಒಂದು ಹೇಳಿಕೆಯ ಮೂಲಕ ಸ್ಪಷ್ಟಪಡಿಸಲಿ. ಬೇಕಾದರೆ ನೀವು ಅವರನ್ನು ಅದಕ್ಕಾಗಿ ಪ್ರೇರೇಪಿಸಿರಿ. ಹಾಗೆ ಅವರು ಹೇಳಿಕೆ ನೀಡುವ ಪಕ್ಷದಲ್ಲಿ ಅಲ್ಲಾಹನು ನಿಶ್ಚಯಿಸುವ ಅವಧಿಯೊಳಗೆ ಖಂಡಿತವಾಗಿಯೂ ಅವರು ನಿಧನರಾಗುವರು. ಆದರೆ, ತಾನು ಪಶ್ಚಾತ್ತಾಪ ಪಟ್ಟಿಲ್ಲವೆಂದು ಎಷ್ಟರವರೆಗೆ ಅವರು ಸ್ವಯಂ ಬಹಿರಂಗವಾಗಿ ಪ್ರಕಟಿಸುವುದಿಲ್ಲವೋ ಅದುವರೆಗೂ ಭವಿಷ್ಯವಾಣಿಯ ಶಿಕ್ಷೆಯಿಂದ ಅವರು ಸುರಕ್ಷಿತರಾಗಿ ಇರುತ್ತಾರೆ. ಅವರು ಮತ್ತೇನೂ ಮಾಡಬೇಕಾಗಿಲ್ಲ. ಕೇವಲ ಒಂದು ಬಹಿರಂಗ ಹೇಳಿಕೆ ಮಾತ್ರ. (ಅಂಜಾಮೆ ಆಥಂ ರೂಹಾನಿ ಖಿಝಾಯಿನ್ ಸಂ–11: ಪುಟ–32)

ಸುಲ್ತಾನ್ ಮುಹಮ್ಮದ್ ಸಂಪೂರ್ಣ ನಿಶ್ಶಬ್ಧರಾದರು. ಹಝ್ರತ್ ಮಿರ್ಝಾ ಸಾಹೇಬರು ಆ ನಂತರ 12 ವರ್ಷಗಳ ವರೆಗೆ ಜೀವಿಸಿದ್ದು ತನ್ನ ಈ ಸವಾಲನ್ನು ಆಗಾಗ ವಿರೋಧಿಗಳ ಮುಂದೆ ಪುನರಾವರ್ತಿಸುತ್ತಿದ್ದರೂ ತಾನು ಪಶ್ಚಾತ್ತಾಪ ಪಟ್ಟಿಲ್ಲವೆಂಬ ಒಂದು ಹೇಳಿಕೆಯನ್ನು ನೀಡಲು ಸುಲ್ತಾನ್ ಮುಹಮ್ಮದ್ ತಯಾರಾಗಲಿಲ್ಲ. ಫಲವಾಗಿ ಅವರು ಶಿಕ್ಷೆಯಿಂದ ಮುಕ್ತರಾದರು.

'ಸನ್ಮಾರ್ಗ'ದ ಲೇಖಕರು ಹೇಳುವಂತೆಯೇ "ಅವರು ಪ್ರಥಮ ಜಾಗತಿಕ ಯುದ್ಧದಲ್ಲಿ ಭಾಗವಹಿಸಿ ತೀವ್ರ ಗಾಯಗೊಂಡರೂ ಹಲವು ಕಾಲ ಬದುಕಿದರು."

ಹರ್ಝ್ರತ್ ಮಿರ್ಝಾ ಸಾಹೇಬರ ನಿಧನದ ನಂತರ, ಖಾದಿಯಾನದಿಂದ ಪ್ರಕಟವಾಗುತ್ತಿದ್ದ "ಶಶ್‌ಹೀದುಲ್ ಅದ್‌ಹಾನ್" ಎಂಬ ಮಾಸಪತ್ರಿಕೆಯು 1913 ಮೇ ತಿಂಗಳ ಸಂಚಿಕೆಯಲ್ಲಿ ಸುಲ್ತಾನ್ ಮುಹಮ್ಮದರ ಒಂದು ಹೇಳಿಕೆಯು ಪ್ರಕಟವಾಯಿತು:

"ನಾನು ಜನಾಬ್ ಮಿರ್ಝಾ ಸಾಹೇಬರನ್ನು ಓರ್ವ ಸಾತ್ವಿಕನೆಂದು ನಂಬುತ್ತೇನೆ. ಅವರು ಓರ್ವ ಪುಣ್ಯವಂತನೆಂದೂ ಇಸ್ಲಾಂ ಧರ್ಮದ ಶುಶ್ರೂಷಕನೆಂದೂ ಮಹೋನ್ನತ ವ್ಯಕ್ತಿಯೆಂದೂ ನಾನು ಈಗಲೂ ನಂಬುತ್ತೇನೆ. ಅವರ ಜಮಾಅತಿನ ವ್ಯಕ್ತಿಗಳೊಡನೆ ನನಗೆ ಯಾವ ರೀತಿಯ ವಿರೋಧವೂ ಇರುವುದಿಲ್ಲ."

**ಸುಲ್ತಾನ್ ಮುಹಮ್ಮದ್ ಮತ್ತೂ ಹೇಳುತ್ತಾರೆ:**

"ನನ್ನ ಮಾವ ಮಿರ್ಝಾ ಅಹ್ಮದ್ ಬೇಗ್ ನಿಧನರಾದುದು ನಿಜವಾಗಿಯೂ ಭವಿಷ್ಯವಾಣಿಯ ಕಾರಣದಿಂದಲೇ ಆಗಿದೆ. ಆದರೆ, ಅಲ್ಲಾಹನು ಕ್ಷಮಾಪಣೆ ನೀಡುವವನೂ ಕರುಣೆಯುಳ್ಳವನೂ ಆಗಿರುತ್ತಾನೆ. ನಾನು ಸತ್ಯವಾಗಿಯೂ ಹೇಳುತ್ತೇನೆ, ನನಗೆ ಆ ಭವಿಷ್ಯವಾಣಿಯ ಕುರಿತು ಯಾವುದೇ ಸಂಶಯವೂ ಇರುವುದಿಲ್ಲ. ಮಿರ್ಝಾ ಸಾಹೇಬರ ಇತರ ವಾದಗಳಲ್ಲಿ ಕೂಡ ನನಗೆ ಯಾವುದೇ ಸಂಶಯವೂ ಇಲ್ಲವೆಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿರುವನು... ಭವಿಷ್ಯವಾಣಿಯ ಕಾಲದಲ್ಲಿ ನಾನು ಅವರ ವಿರುದ್ಧ ಏನಾದರೂ ಮೊಕದ್ದಮೆ ಹೂಡುವುದಾದರೆ ನನಗೆ ಕ್ರೈಸ್ತರೂ ಆರ್ಯ ಸಮಾಜದವರೂ ಲಕ್ಷಾಂತರ ರೂಪಾಯಿಗಳನ್ನು ನೀಡುವುದಾಗಿ ಆಮಿಷವೊಡ್ಡಿದ್ದರು. ಆ ಹಣವನ್ನು ನಾನು ಪಡೆಯುತ್ತಿದ್ದರೆ ನಾನೊಬ್ಬ ದೊಡ್ಡ ಕುಬೇರನಾಗುತ್ತಿದ್ದೆ. ಆದರೆ ನನಗೆ ಮಿರ್ಝಾ ಸಾಹೇಬರ ಮೇಲೆ ಇರುವ ವಿಶ್ವಾಸವು ನನ್ನನ್ನು ಹಾಗೆ ಮಾಡುವುದರಿಂದ ತಡೆಯಿತು." (ಅಲ್ ಫರ್ಝ್ಲ್ ದೈನಿಕ 9-6-1921)

ಪವಿತ್ರ ಖುರ್‌ಆನ್ ಹೇಳುತ್ತದೆ: "ಪಶ್ಚಾತ್ತಾಪಪಟ್ಟು ತಮ್ಮ ನಡವಳಿಕೆಗಳನ್ನು ಉತ್ತಮಗೊಳಿಸುವವರು ಹಾಗೂ ಅಲ್ಲಾಹನ ಮೂಲಕ ತಮ್ಮ ರಕ್ಷಣೆಯನ್ನು ಬಯಸುವವರಾರೋ ಅವರಿಗೆ ಅಲ್ಲಾಹನು ಉತ್ತಮ ಪ್ರತಿಫಲ ನೀಡುವವನಾಗಿದ್ದಾನೆ. ನೀವು ಕೃತಜ್ಞತೆ ಸೂಚಿಸುವವರಾದರೆ ಅಲ್ಲಾಹನು ನಿಮ್ಮನ್ನು ಯಾಕೆ ಶಿಕ್ಷಿಸುತ್ತಾನೆ?" (4:147, 148)

ಹೌದು, ಪ್ರಥಮ ಜಾಗತಿಕ ಮಹಾಯುದ್ಧದಲ್ಲಿ ಭಾಗವಹಿಸಿ ತೀವ್ರವಾಗಿ ಗಾಯಗೊಂಡರೂ ಅವರು ಹಲವು ಕಾಲ ಬದುಕಿದರು. ಸಾಯಬೇಕಾದರೆ ಜಾಗತಿಕ ಮಹಾಯುದ್ಧವೂ ತೀವ್ರವಾದ ಗಾಯವೂ ಬೇಕಾಗಿಲ್ಲ. ಆಥಂ ಗತಿಸಿದ್ದು ಯುದ್ಧದಲ್ಲಲ್ಲ. ಲೇಖ್‌ರಾಂ ವಧಿಸಲ್ಪಟ್ಟದ್ದು ರಣರಂಗದಲ್ಲಲ್ಲ. ಅಹ್ಮದ್ ಬೇಗ್ ನಿಧನರಾದುದು ಸಹ ಯುದ್ಧಮಾಡಿಯಲ್ಲ. ಇದೆಲ್ಲಾ 'ಸನ್ಮಾರ್ಗ'ದವರಿಗೂ ಲೇಖಕ ಪಿ. ಪಿ. ಅಬ್ದುಲ್ ರಹ್ಮಾನ್‌ರಿಗೂ ತಿಳಿದಿರುವ ವಿಷಯವೇ ಆಗಿದೆ. ಅಲ್ಲಾಹನೇ ಅತ್ಯಂತ ದೊಡ್ಡವನು. ಅವನು ಪ್ರತಾಪಶಾಲಿಯೂ ಸರ್ವಶಕ್ತನೂ ಆಗಿರುವನು. ಅವನು ಬಯಸುವುದಾದರೆ ಯುದ್ಧವಾಗಲೀ ಗಾಯಗಳಾಗಲೀ ಬೇಕಾಗಿಲ್ಲ. ಮರಣ ತಾನಾಗಿಯೇ ಬರುವುದು. ಆದರೆ, ಅವನು ಬಯಸಲಿಲ್ಲವೆಂದಾದರೆ ಶಿಲುಬೆಯಲ್ಲಿ ತೂಗಹಾಕಿದರೂ ಗುಂಡಿನ ಸುರಿಮಳೆಗೈದರೂ ಮರಣವು ದೂರವೇ ಉಳಿಯುತ್ತದೆ.

ಹರ್ಝ್ರತ್ ಮಿರ್ಝಾ ಸಾಹೇಬರ ಮೇಲಿನ ಭವಿಷ್ಯವಾಣಿಯ ಉದ್ದೇಶವೇ ತನ್ನ ಪಿತೃವ್ಯ ಕುಟುಂಬದವರನ್ನು ಅಲ್ಲಾಹನ ದಾರಿಗೆ ತರುವುದಾಗಿತ್ತು. ಈ ಉದ್ದೇಶವು ಅತ್ಯಂತ ಸಮರ್ಪಕವಾಗಿ ಪೂರ್ತಿಯಾಗಿದೆ ಎಂಬುದಕ್ಕೆ ನಿದರ್ಶನವಾಗಿ ಆ ಕುಟುಂಬದಿಂದ 'ಬೈಅತ್' ಮಾಡಿ ಅಹ್ಮದಿಯಾ ಜಮಾಅತಿಗೆ ಸೇರಿದವರ ಪೈಕಿ ಕೆಲವರ ಹೆಸರುಗಳನ್ನು ಇಲ್ಲಿ ಸೇರಿಸಿಕೊಳ್ಳುತ್ತೇನೆ.

1. ಭವಿಷ್ಯವಾಣಿಯ ಫಲವಾಗಿ ನಿಧನರಾದ ಮಿರ್ಝಾ ಅಹ್ಮದ್ ಬೇಗ್‌ರ ಪತ್ನಿ ('ಗಗನ ವಿವಾಹದ ನಾಯಕಿ' ಮುಹಮ್ಮದೀ ಬೇಗಮಳ ತಾಯಿ)
2. ಅಹ್ಮದ್ ಬೇಗ್‌ರ ಮಗ ಮಿರ್ಝಾ ಮುಹಮ್ಮದ್ ಬೇಗ್ (ಮುಹಮ್ಮದೀ ಬೇಗಮಳ ಸಹೋದರ)
3. ಅಹ್ಮದ್ ಬೇಗ್‌ರ ಪುತ್ರಿ ಇನಾಯತ್ ಬೇಗಂ (ಮುಹಮ್ಮದೀ ಬೇಗಮಳ ಸಹೋದರಿ)
4. ಮತ್ತೊಬ್ಬ ಪುತ್ರಿ ಸರ್‌ದಾರ್ ಬೇಗಂ.
5. ಮತ್ತೊಬ್ಬ ಪುತ್ರಿ ಮಹ್ಮೂದಾ ಬೇಗಂ.
6. ಭವಿಷ್ಯವಾಣಿಯ ಷರತ್ತುಗಳನ್ನು ಪಾಲಿಸಿ ಪಶ್ಚಾತ್ತಾಪಪಟ್ಟ ಕಾರಣ ಶಿಕ್ಷೆಯಿಂದ ಪಾರಾದ

ಸುಲ್ತಾನ್ ಮುಹಮ್ಮದ್ ಸಾಹೇಬರ ಸಾಕ್ಷಾತ್ ಪುತ್ರ ಮುಹಮ್ಮದ್ ಇಸ್ಹಾಕ್ ಬೇಗ್ (ಮುಹಮ್ಮದೀ ಬೇಗಮಳ ಪುತ್ರ)

ಇವರೆಲ್ಲಾ ಅಲ್ಲಾಹನಲ್ಲಿ ಭಯಭಕ್ತಿಯಿರಿಸಿ ತಮ್ಮ ನಡವಳಿಕೆಗಳನ್ನು ತಿದ್ದಿಕೊಂಡು ಇಮಾಂ ಮಹ್‌ದಿಯವರ ಜಮಾಅತಿನಲ್ಲಿ ಸೇರಿದ ವ್ಯಕ್ತಿಗಳಾಗಿದ್ದಾರೆ. ಈ ಪಟ್ಟಿಯಲ್ಲಿ ಇನ್ನೂ ಅನೇಕರ ಹೆಸರುಗಳನ್ನು ಸೇರಿಸಬಹುದಾದರೂ ಸ್ಥಳಾಭಾವದಿಂದ ಇಷ್ಟೇ ಸಾಕೆಂದು ಭಾವಿಸುತ್ತೇನೆ.

ಕೊನೆಯದಾಗಿ, ಮಿರ್ಝಾ ಸಾಹೇಬರ ಭವಿಷ್ಯವಾಣಿಗಳೊಂದೂ ಪೂರ್ತಿಯಾಗಲಿಲ್ಲವೆಂದು ವ್ಯಂಗ್ಯ ಮಾಡಿದ 'ಸನ್ಮಾರ್ಗ'ದವರಿಗೆ, ಅವರ 'ಜಾಗತಿಕ ಯುದ್ಧದ' ಕಥಾ ನಾಯಕ ಜನಾಬ್ ಸುಲ್ತಾನ್ ಮುಹಮ್ಮದರ ಸ್ವಂತ ಮಗನ ಮಾತುಗಳಲ್ಲೇ ಉತ್ತರ ನೀಡಬಯಸುತ್ತೇನೆ. ಸುಲ್ತಾನ್ ಮುಹಮ್ಮದರ ಮಗ ಮಿರ್ಝಾ ಇಸ್ಹಾಕ್ ಬೇಗ್ ಹೇಳುತ್ತಾರೆ:

"ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ರವರ ಎಲ್ಲಾ ಭವಿಷ್ಯವಾಣಿಗಳೂ ಅರ್ಥವತ್ತಾಗಿ ಪೂರ್ತಿಯಾಗಿವೆ. ಕೆಲವರು, ವಿದ್ವೇಷದ ಕಾರಣದಿಂದಲೋ ತಿಳಿಗೇಡಿತನದಿಂದಲೋ ಅವರ ಕೆಲವು ಭವಿಷ್ಯವಾಣಿಗಳು ನೆರವೇರಲಿಲ್ಲವೆಂದು ಹೇಳಿಕೊಂಡು ಮುಗ್ಧ ಜನರನ್ನು ತಪ್ಪು ದಾರಿಗೆಳೆಯುತ್ತಿರುವುದು ದೌರ್ಭಾಗ್ಯದ ಸಂಗತಿಯಾಗಿದೆ. ಆ ರೀತಿ ಹೇಳಲ್ಪಡುವವುಗಳಲ್ಲಿ ಮಿರ್ಝಾ ಅಹ್ಮದ್ ಬೇಗ್ ಮತ್ತು ಇತರರ ಕುರಿತು ಹೇಳಲಾದ ಭವಿಷ್ಯವಾಣಿಯೂ ಒಂದಾಗಿದೆ. ಯಥಾರ್ಥದಲ್ಲಿ ಈ ಭವಿಷ್ಯವಾಣಿಯೂ ಸ್ಪಷ್ಟವಾಗಿ ನೆರವೇರಿರುತ್ತದೆ ...... ಹಝ್ರತ್ ಮಿರ್ಝಾ ಸಾಹೇಬರ ಬಂಧುಗಳು ಧಿಕ್ಕಾರದಿಂದ ವರ್ತಿಸುತ್ತಿದ್ದರು. ಅವರು ದೇವಾಸ್ತಿತ್ವವನ್ನು ನಿರಾಕರಿಸಿದರು. ಪೈಗಂಬರರನ್ನೂ ಪವಿತ್ರ ಖುರ್‌ಆನನ್ನೂ ಅಪಮಾನಿಸಿದರು. ತಮಗೆ ದಿವ್ಯ ದೃಷ್ಟಾಂತಗಳನ್ನು ತೋರಿಸಿಕೊಡಿರೆಂದು ಅಹಂಭಾವದಿಂದ ಗರ್ಜಿಸಿದರು. ಅದಕ್ಕೆ ಉತ್ತರವಾಗಿ ಅಲ್ಲಾಹನು ತನ್ನ ನಿಯೋಜಿತ ದಾಸನ ಮೂಲಕ ಭವಿಷ್ಯವಾಣಿಯನ್ನು ಸಾದರಪಡಿಸಿದನು. ಆ ಭವಿಷ್ಯವಾಣಿಯ ಫಲವಾಗಿಯೇ ನನ್ನ ನಾನಾಜಾನ್ (ಅಜ್ಜ) ಮರಣಹೊಂದಿದರು. ಆಗ ಕುಟುಂಬದ ಇತರರು ಭಯಭೀತರಾಗಿ ತಮ್ಮನ್ನು ಸುಧಾರಿಸಿಕೊಂಡು ಸರಿದಾರಿಯಲ್ಲಿ ನಡೆಯಲು ಪ್ರಯತ್ನಿಸಿದರು. ಅವರಲ್ಲಿ ಹೆಚ್ಚಿನವರೂ ಅಹ್ಮದಿಯಾ ಜಮಾಅತಿನಲ್ಲಿ ಸೇರಿದರು ಎಂಬುದೇ ಇದಕ್ಕೆ ಉಜ್ವಲ ನಿದರ್ಶನವಾಗಿದೆ. ಹಾಗೆ ಆದಾಗ, ಮಹೋನ್ನತನಾದ ಅಲ್ಲಾಹನು ತನ್ನ ಗಫೂರ್ ಹಾಗೂ ರಹೀಂ ಎಂಬ ಗುಣಗಳನ್ನು ಪ್ರಕಟಪಡಿಸಿ ಕ್ರೋಧವನ್ನು ಕಾರುಣ್ಯವಾಗಿ ಮಾರ್ಪಡಿಸಿದನು.

ನಾನು ಮತ್ತೊಮ್ಮೆ ಶಕ್ತಿಯುತವಾಗಿ ಹೇಳುತ್ತೇನೆ– ಹಝ್ರತ್ ಮಸೀಹ್ ಮವ್‌ಊದ್ (ಅ) ಅವರ ಈ ಭವಿಷ್ಯವಾಣಿಯೂ ನೆರವೇರಿರುತ್ತದೆ. ನಾನು ಅಲ್ಲಾಹನನ್ನು ಸಾಕ್ಷಿಮಾಡಿ ಹೇಳುತ್ತೇನೆ, ಹಝ್ರತ್ ಮುಹಮ್ಮದ್ ಪೈಗಂಬರ್(ಸ)ರು ಯಾವ ಮಹ್‌ದೀ ಮಸೀಹರ ಕುರಿತು ಭವಿಷ್ಯ ನುಡಿದಿರುವರೋ ಆ ದಿವ್ಯಪುರುಷ ಇವರೇ ಆಗಿರುವರು." (ಅಲ್ ಫರ್ಝ್ಲ್ ದಿನ ಪತ್ರಿಕೆ 26–2–1932)

ಸತ್ಯಸಂಗತಿ 'ಸನ್ಮಾರ್ಗ'ದವರಿಗೂ ಅದರ ಲೇಖಕರಿಗೂ ಈಗ ಮನವರಿಕೆಯಾಗಿರಬಹುದೆಂದು ಭಾವಿಸುತ್ತೇನೆ. ಸತ್ಯವನ್ನು ತಿಳಿದುಕೊಳ್ಳುವುದು ಬಹಳ ದೊಡ್ಡ ಒಂದು ಸಂಗತಿಯಾಗಿದೆ. ಅದನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಂತೂ ಅದಕ್ಕಿಂತಲೂ ಮಿಗಿಲಾದ ಕಾರ್ಯ. ಭವಿಷ್ಯವಾಣಿಗಳನ್ನು ಬಿಡಿಸಿಟ್ಟು "ಈ ಪೈಕಿ ಯಾರೂ ಭವಿಷ್ಯ ಹೇಳಿದ ರೀತಿಯಲ್ಲಿ ನಿಧನರಾಗಿಲ್ಲ" ಎಂದು ಇನ್ನು ಮುಂದಕ್ಕಾದರೂ ಲೇಖಕರು ಹೇಳಲಾರರು ಎಂದು ಭಾವಿಸುತ್ತೇನೆ.

## ಝುಲ್‌ಫಿಕಾರ್ ಅಲಿ ಭುಟ್ಟೋ

'ಸನ್ಮಾರ್ಗ'ದ ಲೇಖನ ಮುಂದುವರಿಯುತ್ತದೆ– "ಪಾಕಿಸ್ತಾನದ ಮಾಜೀ ಪ್ರಧಾನಿ ಝುಲ್ಫಿಕಾರ್ ಅಲಿ ಭುಟ್ಟೋ ಅಹ್ಮದೀಯರನ್ನು (ಕಾದಿಯಾನಿ ಮತ್ತು ಲಾಹೋರಿಗಳು) ಮುಸ್ಲಿಮೇತರರೆಂದು ಘೋಷಿಸಿದ್ದರಿಂದ ಅವರ ವೈರಕ್ಕೆ ಗುರಿಯಾಗಿದ್ದರು. ಅವರನ್ನು ನೇಣಿಗೇರಿಸಿದಾಗ, ಅದು ನಮ್ಮ ಪ್ರವಾದಿಯ ಭವಿಷ್ಯ ನುಡಿಯಾಗಿತ್ತೆಂದು ಕಾದಿಯಾನೀ ಪತ್ರಿಕೆಗಳು ಬರೆದಿದ್ದುವು. ಆದರೆ, 1974ರ ಎಪ್ರಿಲ್ 4ರಂದು ಝುಲ್ಫಿಕಾರ್ ಅಲಿ ಭುಟ್ಟೋ ಎಂಬ ಶತ್ರುವನ್ನು ನೇಣುಗಂಭಕ್ಕೇರಿಸಲಾಗುವುದೆಂದು ಭವಿಷ್ಯ ನುಡಿದಿರಲಿಲ್ಲ. ಪರಂತು, 'ಕಲ್ಬುನ್ ಯಮೂತು ಅಲಾ ಕಲ್‌ಬಿನ್' ಅಂತ ಹೇಳಲಾಗಿತ್ತು. ಇದು ಮಿರ್ಝಾ ಗುಲಾಮ್‌ರ ದಿವ್ಯದರ್ಶನದಲ್ಲಿರುವ ತಲೆಬುಡವಿಲ್ಲದ ಒಂದು ವಾಕ್ಯ. ಇದರ ಅರ್ಥ ಅವ್ಯಕ್ತವೆಂದು ಮಿರ್ಝಾರು ಅದರ ಕೆಳಗೆ ಟಿಪ್ಪಣಿ ಬರೆದಿದ್ದರು. 'ನಾಯಿಯು ಮೇಲೆ ನಾಯಿ ಸಾಯುವುದು' ಎಂಬುದು ಅದರ ಶಬ್ದಾರ್ಥ. 'ಕಲ್‌ಬ್' ಎಂಬ ಪದದ ತಹಜ್ಜಿ ಲೆಕ್ಕಾಚಾರದಂತೆ ತನ್ನ ವೈರಿಯು 52ನೇ

ವಯಸ್ಸಿನಲ್ಲಿ ಮರಣಹೊಂದುವನು ಮತ್ತು ವಿಶ್ವಸಂಸ್ಥೆಯಲ್ಲಿ ಭಾರತೀಯರನ್ನು ನಾಯಿಯೆಂದು ಅಭಿಸಂಬೋಧಿಸಿದ ಭುಟ್ಟೋರೇ ಆ ವಾಕ್ಯದ ತಾತ್ಪರ್ಯ ಮತ್ತು ಇಂಗಿತವೆಂದೂ ಕಾದಿಯಾನೀ ಪತ್ರಿಕೆ ವಿಶ್ಲೇಷಿಸಿತ್ತು." (-'ಸನ್ಮಾರ್ಗ'). ಸತ್ಯಾನ್ವೇಷಿಗಳಾದ ವಾಚಕರು ಗಮನಿಸಬೇಕಾದ ಅನೇಕ ಸಂಗತಿಗಳು ಇದರಲ್ಲಿ ಅಡಕವಾಗಿರುವುದರಿಂದ 'ಸನ್ಮಾರ್ಗ'ದ ಈ ಉದ್ಧವಾದ ವಿವರಣೆಯನ್ನು ನಾನಿಲ್ಲಿ ಅದೇ ರೀತಿ ನೀಡಿರುವೆನು.

ಝುಲ್ಫಿಕಾರ್ ಅಲಿ ಭುಟ್ಟೋ ಎಂಬ ಆ ಮನುಷ್ಯನ ರಕ್ತಕ್ಕಾಗಿ ಹಾತೊರೆದುದು ಕಾದಿಯಾನಿಗಳಲ್ಲ; ಜಿಯಾ ಉಲ್ ಹಕ್ ಎಂಬ ಆಧುನಿಕ ಫಿರ್‌ಔನ್. ಅವರು ಭುಟ್ಟೋರನ್ನು ಓರ್ವ ಸಾಮಾನ್ಯ ಕ್ರಿಮಿನಲ್ ಅಪರಾಧಿಯ ತರ ನೇಣುಗಂಬಕ್ಕೇರಿಸಿ ಒಬ್ಬ ಭಿಕ್ಷುಕನ ದೆಂಬಂತೆ ಅವರ ಕಳೇಬರವನ್ನು ಅವಸರವಸರವಾಗಿ ದಫನ ಮಾಡಿದರು.

ಈ ಭುಟ್ಟೋ ಯಾರಾಗಿದ್ದರು? ಅವರ ಅಂತ್ಯ ಯಾವ ರೀತಿಯಲ್ಲಾಯಿತು? ಇವೆಲ್ಲವನ್ನೂ ವಿವರಿಸಿ ಹೇಳಬೇಕಾದ ಅಗತ್ಯವಿಲ್ಲ. ಹೆಸರಿಗೆ ಮಾತ್ರ ಮುಸಲ್ಮಾನನಾಗಿದ್ದ ಅವರು ತನ್ನ ಆಚಾರ ವಿಚಾರಗಳೆಲ್ಲದರಲ್ಲೂ ಅವಿಶ್ವಾಸಿಯೇ ಆಗಿದ್ದರು. ಅಹ್ಮದೀಯರ ವಿರುದ್ಧ ಅತಿ ಕಠೋರವಾದ ನಿಲುವನ್ನು ತಾಳಿ ಅವರನ್ನು ಮುಸ್ಲಿಮೇತರರೆಂದು ಘೋಷಿಸಿದರು. ಅಲ್ಪಸಂಖ್ಯಾತರೆಂದು ಸಾರಿದರು. ಸಂವಿಧಾನದಲ್ಲಿ ಈ ರೀತಿ ತಿದ್ದುಪಡಿ ತಂದು ಅವರನ್ನು ಮತ್ತೆ ಮತ್ತೆ ಹಿಂಸೆಗೆ ಗುರಿಪಡಿಸಿದರು. ಆದರೆ, ಈ 'ಇಸ್ಲಾಮಿನ ಧೀರಸೇವಕ'ನನ್ನು ಅವರ ಸ್ವಂತ ಜನರೇ ನಂತರ ಊದ್ಧಟನೆಂದೂ ಕ್ರೂರನೆಂದೂ ತಂತ್ರಶಾಲಿಯೆಂದೂ ಕುಟಿಲನೆಂದೂ ಅಧಿಕಾರದಾಹಿಯೆಂದೂ ಇನ್ನೂ ಏನೇನೆಲ್ಲಾ ಕರೆದರು. ಕುಟಿಲತೆಯಲ್ಲಿ ಅವರಿಗಿಂತಲೂ ಕೋವಿದನಾಗಿದ್ದ ಝಿಯಾ ಉಲ್ ಹಕ್ ಅವರ ಕುರಿತು ಹೇಳಿದ್ದೇನು? "ಆ ಮನುಷ್ಯನ ಸುಂದರವಾದ ಮುಖವಾಡವನ್ನು ಕಿತ್ತು ಎಸೆದರೆ ಆ ವ್ಯಕ್ತಿ ಎಷ್ಟೊಂದು ತತ್ವಹೀನನೆಂಬುದನ್ನು ಕಾಣಲು ಸಾಧ್ಯವಿದೆ. ತನ್ನ ಸ್ವಾರ್ಥಕ್ಕಾಗಿ ತನ್ನವರನ್ನೇ ಬಲಿಕೊಡಲು ಅವರು ಸಿದ್ಧರಿದ್ದರು. ಅವರಿಗೆ ರಾಜಕಾರಣವು ಒಂದು ಆಟವಾಗಿತ್ತು. ಜನಲಕ್ಷಗಳು ಬರೇ ಆಟಿಕೆಗಳು ಮಾತ್ರ. ಮೃದುವಾದ ಕೈಚೀಲಗಳೊಳಗಿನ ಅವರ ಮಿನುಮಿನುಗುವ ಕೈಗಳ ಮೇಲೆ ಅದೆಷ್ಟು ನಿರಪರಾಧಿಗಳ ರಕ್ತದ ಕಲೆಗಳಿತ್ತು. ಅಧಿಕಾರದ ಉನ್ನತಕ್ಕೇರಲು ತನ್ನ ನಿಕಟವರ್ತಿಗಳ ಶವಗಳನ್ನು ಮೆಟ್ಟಲುಗಳನ್ನಾಗಿ ಉಪಯೋಗಿಸಲಿಕ್ಕೂ ಅವರು ಹಿಂಜರಿದಿರಲಿಲ್ಲ!"

'ಕಲ್‌ಬುನ್ ಯುಮಾತು ಅಲಾ ಕಲ್‌ಬಿನ್' ಎಂಬುದು ತಲೆಬುಡವಿಲ್ಲದ ಒಂದು ವಾಕ್ಯವೆಂದು ಲೇಖಕರು ಹೇಳುತ್ತಾರೆ. ಅದು 'ಸನ್ಮಾರ್ಗ'ದ ನಿರೂಪಣಾ ಶೈಲಿಯಿರಬಹುದು. ಆದರೆ, ಆ ದಿವ್ಯವಾಣಿಯಲ್ಲಿ ಅತಿ ಮಹತ್ವಾದ ಅರ್ಥವನ್ನೂ ಸಂದೇಶವನ್ನೂ ನಾವು ಕಾಣುತ್ತಿದ್ದೇವೆ. ಸ್ವಲ್ಪ ಯೋಚಿಸಿ ನೋಡಿದರೆ 'ಸನ್ಮಾರ್ಗ'ದವರಿಗೂ ಆ ದಿವ್ಯ ಸಂದೇಶದ ಮಹತ್ವವನ್ನು ಅರಿಯಲು ಸಾಧ್ಯವಿದೆ. 'ನಾಯಿಯ ಮೇಲೆ ನಾಯಿ ಸಾಯುವುದು' ಎಂಬುದು ಅದರ ಶಬ್ದಾರ್ಥ. ಕಲ್‌ಬ್ ಎಂಬ ಪದದ ತಜ್ಜ ಸಂಖ್ಯೆ 52 ಆಗಿರುವುದರಿಂದ "ಒಂದು ನಾಯಿ 52ರಲ್ಲಿ ಸಾಯುತ್ತದೆ" ಎಂಬುದಾಗಿ ಅದಕ್ಕೆ ಅರ್ಥ ನೀಡಿದರೆ ಲೇಖಕರು ಅದನ್ನು ತಪ್ಪೆನ್ನಲಾರರು ಎಂದು ಭಾವಿಸುತ್ತೇನೆ. ನಾಯಿಯ ಹೆಸರು ಭುಟ್ಟೋ ಎಂದು. ಲೋಕದಲ್ಲಿ ಎಷ್ಟೋ ನಾಯಿಗಳಿಗೆ ಭುಟ್ಟೋ ಎಂಬ ಹೆಸರಿದೆ. ಭಾರತೀಯರನ್ನೆಲ್ಲಾ ಒಟ್ಟಾಗಿ 'ಭಾರತೀಯ ನಾಯಿಗಳು' ಎಂದು ಭುಟ್ಟೋ ವಿಶ್ವಸಂಸ್ಥೆಯಲ್ಲಿ ಬೊಗಳಿದರು. ಅದೊಂದು ಅಭಿಸಂಬೋಧನೆ ಎಂದು ತಿಳಿಯುವುದಾದರೆ, ಭುಟ್ಟೋರನ್ನು 'ಪಾಕ್ ನಾಯಿ' ಎಂದು ಅಭಿಸಂಬೋಧಿಸುವುದರಲ್ಲಿ ಯಾವುದೇ ಅನ್ಯಾಯ ಇರುವುದಿಲ್ಲ. ಮಾತ್ರವಲ್ಲ, ಅದು ಅವರಿಗೆ ಅನ್ವರ್ಥನಾಮವೂ ಆಗುತ್ತದೆ. ನಾಯಿಯ ಹಾಗೆ ಶೌರ್ಯ ತೋರಿಸಿದ್ದೂ, ಬೊಗಳಿ ಮೈಮೇಲೆ ಹಾರಿದ್ದೂ ಮತ್ತೆ ಮೆಲ್ಲನೆ ಕಾಲೆಡೆಯಲ್ಲಿ ಬಾಲ ಮುದುಡಿಸಿ ಮಲಗಿದ್ದೂ ಭುಟ್ಟೋ ಅಲ್ಲವೇ?

ಬೊಗಳಿ, ಶೌರ್ಯ, ಜೈಲು, ನೇಣು ಇದು ಭುಟ್ಟೋರ ಜೀವನದ ಸಂಕ್ಷಿಪ್ತ ರೂಪ. ಅವರು ನೇಣುಗಂಬದಲ್ಲಿ ಸತ್ತರೇ ಅಥವಾ ಅವರ ಶವವನ್ನು ನೇಣುಗಂಬಕ್ಕೆ ತೂಗಿಸಲಾಯಿತೇ ಎಂಬುದೂ ಇನ್ನೂ ಅಜ್ಞಾತವಾಗಿಯೇ ಇದೆ. ಅದೇನೇ ಆದರೂ ಒಂದು

ತುಂಡು ಹಗ್ಗದಲ್ಲಿ ಅವರ ಶವ ನೇತಾಡಿತು. ಒಂದು ಮುಸ್ಲಿಂ ರಾಷ್ಟ್ರದಲ್ಲಿ, ಮುಸ್ಲಿಮರಾದ ಅಹ್ಮದೀಯರನ್ನು ಮುಸ್ಲಿಮರಲ್ಲವೆಂದು ಘೋಷಿಸಿದ ಭುಟ್ಟೋ ಕೊನೆಗೆ ಮುಸ್ಲಿಮೇತರನಾಗಿಯೇ ಸತ್ತು ಹೋದರು. ಚಿಂತಿಸುವವರಿಗೆ ಖಂಡಿತವಾಗಿಯೂ ಇದರಲ್ಲಿ ಪಾಠವಿದೆ.

ಮತ್ತೊಂದು ವಿಷಯ. ಭುಟ್ಟೋರ ನಿಕೃಷ್ಟವಾದ ಅವಸಾನವು ಅಹ್ಮದಿಯಾ ಸಂಘಟನೆಯ ಮೂಲಕ ಅಲ್ಲಾಹನಿಂದ ಪ್ರಕಟಗೊಂಡ ಒಂದು ದೃಷ್ಟಾಂತವಾಗಿದೆ ಎಂದು ನಂಬಲು 'ಸನ್ಮಾರ್ಗ'ದವರಿಗೆ ಅಸಾಧ್ಯವಾದ ಬಗೆಯನ್ನು ಅವರು ವಿವರಿಸುತ್ತಾರೆ: "ಆದರೆ, 1974ರ ಎಪ್ರಿಲ್ 4ರಂದು ಜ಼ುಲ್ಫಿಕಾರ್ ಅಲಿ ಭುಟ್ಟೋ ಎಂಬ ಶತ್ರುವನ್ನು ನೇಣುಗಂಭಕ್ಕೇರಿಸಲಾಗುವುದೆಂದು ಭವಿಷ್ಯ ನುಡಿದಿರಲಿಲ್ಲ. ಪರಂತು, 'ಕಲ್ಬುನ್ ಯಮೂತು ಅಲಾ ಕಲ್ಬಿನ್' ಅಂತ ಹೇಳಲಾಗಿತ್ತು."

ಭಾವೀಕಾಲದಲ್ಲಿ ಸಂಭವಿಸಲಿರುವ ಸಂಗತಿಗಳ ಕುರಿತು ಅಲ್ಲಾಹನು ತನ್ನ ಪ್ರವಾದಿಗಳಿಗೆ ತಿಳಿಸಿಕೊಡುವ ದಿವ್ಯಜ್ಞಾನಗಳ ಹಾಗೂ ಪ್ರವಾದಿಗಳು ನುಡಿಯುವ ಭವಿಷ್ಯವಾಣಿಗಳ ಕುರಿತು 'ಸನ್ಮಾರ್ಗ'ದವರ ನಿಲುವು ಇದೇ ಆಗಿದ್ದರೆ ನಮಗೆ ಅವರ ಮೇಲೆ ಬಹಳ ಕನಿಕರ ತೋರುತ್ತದೆ. ಪ್ರಪಂಚದಲ್ಲಿ ಈ ತನಕ ಅವತೀರ್ಣರಾದ ಒಬ್ಬನೇ ಒಬ್ಬ ಪ್ರವಾದಿಯನ್ನಾಗಲೀ ಯಾವುದೇ ಪ್ರವಾದಿಯ ಒಂದೇ ಒಂದು ಭವಿಷ್ಯವಾಣಿಯನ್ನಾಗಲೀ ಇವರಿಗೆ ನಂಬಲು ಸಾಧ್ಯವಾಗಲಾರದು! ಹೆಚ್ಚೇಕೆ, ಹಝ್ರತ್ ಮುಹಮ್ಮದ್ ಪೈಗಂಬರರನ್ನೇ ಓರ್ವ ಸತ್ಯವಂತ ಪ್ರವಾದಿಯೆಂದು ಸ್ವೀಕರಿಸಲು ಇವರಿಗೆ ಅಸಾಧ್ಯವಾದೀತು! ಉದಾಹರಣೆಗೆ, ಪೈಗಂಬರರ ಬರುವಿಕೆಯ ಬಗ್ಗೆ ತೌರಾತ್‌ನಲ್ಲೂ ಇಂಜೀಲ್‌ನಲ್ಲೂ ಸ್ಪಷ್ಟವಾದ ಭವಿಷ್ಯವಾಣಿಗಳಿವೆ ಎಂದು ಪವಿತ್ರ ಖುರ್‌ಆನ್ ಘೋಷಿಸುತ್ತದೆ. (7:158) ಆದರೆ, "ಸನ್ 569ನೇ ಇಸವಿಯಲ್ಲಿ ನವೆಂಬರ್ ತಿಂಗಳ 11ನೇ ತಾರೀಕಿನಂದು ಅರೇಬಿಯಾದ ಮಕ್ಕಾ ಎಂಬಲ್ಲಿ ಅಬ್ದುಲ್ಲಾ ಮತ್ತು ಆಮಿನಾರ ಪುತ್ರನಾಗಿ ಮುಹಮ್ಮದ್ ಎಂಬ ಪ್ರವಾದಿಯ ಅವತಾರ ಉಂಟಾಗುವುದು" ಎಂಬುದಾಗಿ ತೌರಾತಿನಲ್ಲಾಗಲೀ ಇಂಜೀಲಿನಲ್ಲಾಗಲೀ ಭವಿಷ್ಯ ನುಡಿದಿದೆ ಎಂದು 'ಸನ್ಮಾರ್ಗ'ದವರು ಹೇಳುವರೇ?

ಯೆಹೂದಿ ಮತ್ತು ನಸಾರಾ ಸಮುದಾಯದವರು ಇದೇ ರೀತಿಯ ವಾದವನ್ನು ಮುಂದಿಟ್ಟು ತಮ್ಮ ವೇದ ಗ್ರಂಥಗಳಲ್ಲಿ ಈ ಪ್ರವಾದಿಯ ಉಲ್ಲೇಖವಿಲ್ಲವೆಂದು ಹೇಳುತ್ತಾ ಪೈಗಂಬರರನ್ನು ತಿರಸ್ಕರಿಸಿದರು. ಆದರೆ, ಯಥಾರ್ಥದಲ್ಲಿ ಆಧ್ಯಾತ್ಮಿಕ ದೃಷ್ಟಿಕೋನದಿಂದ ವೀಕ್ಷಿಸುವವರಿಗೆ, ಧಾರ್ಮಿಕ ಕಾರ್ಯಗಳನ್ನು ದೇವಭಯದಿಂದ ಆಳಿಯುವವರಿಗೆ ಹಝ್ರತ್ ಮುಹಮ್ಮದ್ ಪೈಗಂಬರರ ಕುರಿತು ಭವಿಷ್ಯವಾಣಿಯನ್ನು ಇಂದು ಅಸ್ತಿತ್ವದಲ್ಲಿರುವ ಬೈಬಲಿನಲ್ಲೂ ಸಹ ಕಾಣಲು ಸಾಧ್ಯವಿದೆ! ಆದರೆ ಅದನ್ನು ಕಾಣುವ ಕಣ್ಣುಗಳು ಬೇಕು ಅಷ್ಟೆ. ಭವಿಷ್ಯವಾಣಿಗಳು ಯಾವಾಗಲೂ ಅಂತರಾರ್ಥಗಳನ್ನೊಳಗೊಂಡ ನಿಗೂಢ ಪದಗಳಿಂದ ಕೂಡಿರುತ್ತವೆ ಎಂಬ ಸಾಮಾನ್ಯ ತತ್ವವನ್ನು ಸಹ ಅಹ್ಮದಿಯ್ಯತ್ತನ್ನು ವಿರೋಧಿಸುವಾಗ 'ಸನ್ಮಾರ್ಗ'ದವರು ಮರೆತು ಬಿಟ್ಟದ್ದು ಆಶ್ಚರ್ಯ.

ಪ್ರಪಂಚದಲ್ಲಿ ಯಾವ ಪ್ರಧಾನ ಮಂತ್ರಿಗೂ ಸಂಭವಿಸಿರದ ರೀತಿಯಲ್ಲಿ ಅತ್ಯಂತ ನೀಚವೂ ನಿಕೃಷ್ಟವೂ ಆದ ತರದಲ್ಲಿ ಒಂದು ನಾಯಿಯ ಸಾವಿನಂತೆ ಭುಟ್ಟೋರ ಅವಸಾನ ಉಂಟಾಯಿತು. ಹಝ್ರತ್ ಇಮಾಂ ಮಹ್‌ದಿಯವರಿಗೆ ಅಲ್ಲಾಹನು ಅರುಹಿದ ಭವಿಷ್ಯ ನುಡಿಯನ್ನು ಭುಟ್ಟೋರ ಸಂಭವದೊಂದಿಗೆ ತಾಳೆ ನೋಡಿದರೆ ಒಬ್ಬ ಸತ್ಯವಿಶ್ವಾಸಿಗೆ ಖಂಡಿತವಾಗಿಯೂ ಆ ಭವಿಷ್ಯವಾಣಿಯ ಮಹತ್ವವನ್ನು ಕಂಡುಕೊಳ್ಳಲು ಸಾಧ್ಯವಿದೆ. ಆದರೆ, ಅಲ್ಲಾಹನು ಯಾರ ಕಣ್ಣುಗಳನ್ನು ಕುರುಡಾಗಿಸಿರುವನೋ ಅಂಥವರ ಬಗ್ಗೆ ನಾವೇನು ಹೇಳುವುದು?

## ಫೈರುಝ್ ರಾಜ

ಲಂಡನ್ ಮಸೀದಿಯ ಉದ್ಘಾಟನೆಯನ್ನು ನೆರವೇರಿಸಲು ಮೊದಲು ಒಪ್ಪಿದ ಫೈರೂಝ್ ರಾಜ ಅನಂತರ ಸರೀ ಸಮಯದಲ್ಲಿ ಅದರಿಂದ ಹಿಂಜರಿದಾಗ "ಕುಪಿತರಾದ ಕಾದಿಯಾನಿಯರು ಅವರು ವಾಗ್ದಾನ ಉಲ್ಲಂಘಿಸಿದರೆಂದು ಆರೋಪಿಸಿದರು"- 'ಸನ್ಮಾರ್ಗ'ದ ಲೇಖನ ಮುಂದುವರಿಯುತ್ತದೆ. ಇದರಲ್ಲಿ ತಪ್ಪೇನು ಬಂತು ಎಂದು ನಮಗೆ ಅರ್ಥವಾಗಲಿಲ್ಲ. ಕುಪಿತರು ಎಂದರೆ ಕೋಪಗೊಂಡವರು ಎಂಬುದು

ಅದರ ಶಬ್ದಾರ್ಥ. 'ಕಾದಿಯಾನಿ'ಗಳಿಗೆ ಕೋಪ ಬರಕೂಡದು ಎಂದು ಯಾವುದಾದರೂ ಕಿತಾಬಿನಲ್ಲಿ ಬರೆದಿದೆಯೇನು? ಇತರ ಮನುಷ್ಯರಿಗೆ ಇರುವಂತೆಯೇ ಸಕಲ ಮಾನವೀಯ ಗುಣಗಳೂ 'ಕಾದಿಯಾನಿ'ಗಳಿಗೆ ಸಹ ಇವೆಯೆಂಬುದನ್ನು ಮಾನ್ಯ ಲೇಖಕರು ತಿಳಿಯಬೇಕು. ಮಸೀದಿ ಉದ್ಘಾಟನೆಗೆ ಒಪ್ಪಿ, ಅದಕ್ಕಾಗಿ ಪರಿವಾರ ಸಮೇತನಾಗಿ ಲಂಡನಿಗೆ ಆಗಮಿಸಿ, ಕೊನೆಯ ಗಳಿಗೆಯಲ್ಲಿ ಆ ಕಾರ್ಯನಿರ್ವಹಣೆಯಿಂದ ವಿಮುಖನಾಗುವುದೆಂದರೆ ಕೋಪ ಬರಲಾರದೇ? ಖಂಡಿತವಾಗಿಯೂ ಬರುವುದು. ಇದು ವಾಗ್ದಾನ ಉಲ್ಲಂಘನೆಯಲ್ಲವಾದರೆ ಮತ್ತೇನೆಂದು 'ಸನ್ಮಾರ್ಗ'ದವರೇ ಹೇಳಿಕೊಡಬೇಕು. ಮಾತ್ರವಲ್ಲ, ಸಂಪ್ರದಾಯವಾದಿ ಮುಸ್ಲಿಂ ಮುಲ್ಲಾಗಳ ಒತ್ತಡಕ್ಕೆ ಮಣಿದು ಫೈಝಲ್ ಆ ಕಾರ್ಯನಿರ್ವಹಣೆಯಿಂದ ಹಿಂಜರಿದುದು ಅವರ ಭೀರುತ್ವವನ್ನು ತೋರಿಸುತ್ತದೆಯೆಂದು ಸಹ ಹೇಳಿದರೆ ಅನುಚಿತವಾಗಲಾರದು.

"ಅದು ಕಾದಿಯಾನಿ ಮಸೀದಿಯೆಂದು ತಿಳಿಯದೆ ಅವರು ಒಪ್ಪಿದ್ದರು" ಎಂಬ 'ಸನ್ಮಾರ್ಗ'ದ ಮಾತು ಅಪಹಾಸ್ಯಕರವಾಗಿದೆ. ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್ ಸಾಹೇಬರು ವಿಶೇಷ ಆಹ್ವಾನಿತರಾಗಿ ಸೌದಿ ಅರೇಬಿಯಕ್ಕೆ ಹೋಗಿ, ರಾಜ ಕುಟುಂಬದ ಅತಿಥಿಯಾಗಿದ್ದು, ಓರ್ವ ವಿ.ಐ.ಪಿ.ಯ ರೀತಿಯಲ್ಲಿ ಹಜ್ ಕರ್ಮಾನುಷ್ಠಾನವನ್ನೂ ನೆರವೇರಿಸಿ ರಾಜಕುಮಾರನನ್ನು ಆಹ್ವಾನಿಸಿದಾಗ ಅದೊಂದು 'ಕಾದಿಯಾನಿ' ಮಸೀದಿಯೆಂದು ಅವರಿಗೆ ತಿಳಿಯಲಿಲ್ಲ ಎಂದು ಹೇಳಿದರೆ, ಶತ ಮೂರ್ಖತನವೆಂದು ಇದಕ್ಕಲ್ಲದೆ ಇನ್ನಾವುದಕ್ಕೆ ಹೇಳುವುದು? ಮಾನ್ಯರೇ, ಸೌದಿ ರಾಜ ಕುಟುಂಬಕ್ಕೆ ಸಾಮಾನ್ಯ ವಿಷಯವನ್ನು ತಿಳಿದುಕೊಳ್ಳುವಷ್ಟು ತಿಳುವಳಿಕೆಯಿದೆ. ಅವರನ್ನು ಅಷ್ಟೊಂದು ಪೆದ್ದಾರನ್ನಾಗಿ ಚಿತ್ರೀಕರಿಸುವುದು ಉಚಿತವಲ್ಲ.

ಲಂಡನ್ ನಗರದಲ್ಲಿ ನಿರ್ಮಿಸಲಾದ ಮೊತ್ತ ಮೊದಲಿನ ಆ ಮಸೀದಿಯ ಉದ್ಘಾಟನೆಯನ್ನು ನಿರ್ವಹಿಸಲು ಫೈಝಲ್ ಹಿಂದೇಟು ಹೊಡೆದರೂ ಆ ಕೃತ್ಯ ನಿರ್ವಹಿಸುವ ಮಹಾಭಾಗ್ಯವು ಪ್ರಸಿದ್ಧ ಮುಸ್ಲಿಂ ಮುಂದಾಳೂ ಪ್ರೀವಿ ಕೌನ್ಸಿಲ್ ಸದಸ್ಯರೂ ಆಗಿದ್ದ ಸರ್ ಶೈಖ್ ಅಬ್ದುಲ್ ಖಾದಿರ್ ಸಾಹೇಬರಿಗೆ ಲಭಿಸಿತು. ಈ ಲಂಡನ್ ಮಸೀದಿಯನ್ನು ಸಂದರ್ಶಿಸಿದವರ ಪೈಕಿ 'ಖಾಯಿದೆ ಆಝಂ' ಜಿನ್ನಾ ಸಾಹೇಬರೂ ಒಬ್ಬರು. ವೈಸ್‌ರ್‍ಯಾಯ್‌ರವರ ಎಕ್ಸಿಕ್ಯೂಟಿವ್ ಸದಸ್ಯರಾಗಿದ್ದ ಸರ್ ಮಿಯಾಂ ಫಝ್ಲ್ ಹುಸೇನ್ ಸಾಹೇಬರು 1927ರಲ್ಲಿ ಈ ಮಸೀದಿಯನ್ನು ಸಂದರ್ಶಿಸಿದಾಗ "ಭೂಗೋಳದ ಪಶ್ಚಿಮಾರ್ಧಕ್ಕೆ ಇಸ್ಲಾಂ ಧರ್ಮವನ್ನು ಪರಿಚಯಿಸಿಕೊಡುವ ಯೋಜನೆ" ಎಂದು ತನ್ನ ಪ್ರತಿಕ್ರಿಯೆ ಸೂಚಿಸಿದರು.

"ಬಾಪ್ಟಿಸ್ಟ್ ಟೈಮ್ಸ್" ಎಂಬ ಒಂದು ಕ್ರೈಸ್ತ ಪತ್ರಿಕೆ ಲಂಡನ್ ಮಸೀದಿಯ ಕುರಿತು ಬರೆದ ತನ್ನ ಅಭಿಪ್ರಾಯ ಈ ರೀತಿಯಿದೆ:

"ಈ ಮಸೀದಿಯ ಉದ್ಭವವನ್ನು ಒಂದು ಚಾಲೆಂಜ್ ಎಂದು ಪರಿಗಣಿಸಬೇಕಾಗಿದೆ. ಇದುವರೆಗೆ ಪಾಶ್ಚಾತ್ಯರು ಪೌರ್ವಾತ್ಯರನ್ನು ತಮ್ಮ ಧರ್ಮಕ್ಕೆ ಮತಾಂತರಿಸುತ್ತಿದ್ದರು. ಆದರೆ, ದೌರ್ಭಾಗ್ಯವಶಾತ್ ಅವರಿಗೆ ಈಗ ಸ್ವಗೃಹದಲ್ಲೇ ನೆಲೆ ಸುಭದ್ರವಾಗಿಲ್ಲ! ಪೂರ್ವ ದೇಶದವರು ಪಶ್ಚಿಮದವರ ಮೇಲೆ ಈಗ ಕಣ್ಣಿಟ್ಟಿದ್ದಾರೆ. ಮುಸ್ಲಿಂ ಪ್ರಾರ್ಥನೆಗೆ ಆಹ್ವಾನಿಸುವ ಅಝಾನ್ ಶಬ್ದವನ್ನು ಇನ್ನು ಮುಂದೆ ಈ ನಗರದಲ್ಲೂ ನಾವು ಕೇಳಲಿದ್ದೇವೆ."

ಹೌದು, ಲಂಡನ್ ಮಸೀದಿಯು ಪಶ್ಚಿಮಾರ್ಧಗೋಳಕ್ಕೆ ಇಸ್ಲಾಂ ಧರ್ಮವನ್ನು ಪರಿಚಯಿಸಿಕೊಡುವ ಕೇಂದ್ರಸ್ಥಾನವಾಗಿದೆ. ಸತ ಧರ್ಮದ ಕಡೆಗೆ, ನೇರವಾದ ಮಾರ್ಗದ ಕಡೆಗೆ ಪಾಶ್ಚಾತ್ಯರನ್ನು ಆಹ್ವಾನಿಸುವ ಅಭಿಯಾನಕ್ಕೆ ನಾಂದಿಹಾಕಲು ಅದರ ಉದಯವಾಯಿತು. ಇಮಾಂ ಮಹ್‌ದಿಯವರ ಕಾಲದಲ್ಲಿ ಪಶ್ಚಿಮ ದಿಕ್ಕಿನಿಂದ ಸೂರ್ಯೋದಯವಾಗಲಿದೆ ಎಂಬ ಪೈಗಂಬರರ ಭವಿಷ್ಯವಾಣಿಯನ್ನು ಈ ವೇಳೆಯಲ್ಲಿ ನಾವು ನೆನಪಿಸುತ್ತೇವೆ. ಚರಿತ್ರೆಯಲ್ಲಿ ಸ್ವರ್ಣ ಲಿಪಿಗಳಿಂದ ಬರೆಯಲ್ಪಡುವಂತಹ, ಎಂದೆಂದಿಗೂ ಅಳಿಸಲ್ಪಡದಂತಹ ಆ ಅಮೂಲ್ಯ ಮುಹೂರ್ತಕ್ಕೆ ಸಾಕ್ಷಿನಿಲ್ಲಲು ಫೈಝಲ್ ರಾಜರಿಗೆ ಸಾಧ್ಯವಾಗಲಿಲ್ಲವೆಂಬುದು ಅವರ ದೌರ್ಭಾಗ್ಯ. 'ಸನ್ಮಾರ್ಗ'ದವರಿಗೆ ಅದು ಆನಂದವನ್ನುಂಟು ಮಾಡಿದ್ದರೆ ಅದು ಅವರ ಸಂಕುಚಿತತೆಯನ್ನು ತೋರಿಸುತ್ತದೆ. وَ اَنَّ الْمَسٰجِدَ لِلّٰهِ – "ವ ಅನ್ನಲ್ ಮಸಾಜಿದ ಲಿಲ್ಲಾಹಿ" ಮಸೀದಿಗಳು ಅಲ್ಲಾಹನದ್ದಾಗಿವೆ ಎಂಬ ಅಲ್ಲಾಹನ ವಚನವನ್ನು (72 : 19) 'ಸನ್ಮಾರ್ಗ'ದವರು ಮರೆಯದಿರುವುದು ಒಳಿತು.

ಫೈಝಲ್ ರಾಜರು ಕೊಲೆಯಾದಾಗ "ಈ ಬಗ್ಗೆಯೂ ಕಾದಿಯಾನಿ ಭವಿಷ್ಯವಾಣಿಯಿದೆ!" ಎಂದು ಲೇಖನದಲ್ಲಿ ಹೇಳಲಾಗಿದೆ. ದುರಹಂಕಾರಿಯಾಗಿದ್ದ ಓರ್ವ ರಾಜನ ಆಡಳಿತವು ಸಹ ಈ ಭೂಮಿಯಲ್ಲಿ ಕೊನೆಗೊಂಡಿತೆಂದೂ ಚಿಂತನೆ ಮಾಡುವವರಿಗೆ ಅವರ ಮರಣದಲ್ಲಿ ಪಾಠವಿದೆಯೆಂದೂ ನಾವು ಹೇಳಿದ್ದೇವೆಯೇ ವಿನಾ ಅವರು ಭವಿಷ್ಯವಾಣಿಯ ಪ್ರಕಾರ ಮರಣಹೊಂದಿದರೆಂದು ಅಹ್ಮದಿಯಾ ಜಮಾಅತ್ ಹೇಳಿರಲಿಲ್ಲ. ಅದು 'ಸನ್ಮಾರ್ಗ'ದವರ ಸುಳ್ಳು ಸೃಷ್ಟಿಯಾಗಿದೆ. ಜಾಗತಿಕ ಮುಸ್ಲಿಮರ ನೇತಾರನಾಗಿ 'ಖಲೀಫತುಲ್ ಮುಸ್ಲಿಮೀನ್' ಎಂದೆಣಿಸಿಕೊಳ್ಳಲು ಕನಸು ಕಂಡಿದ್ದ ಸೌದಿ ರಾಜ ಫೈಝಲ್, ತನ್ನ ಖಿಲಾಫತ್ ಅಭಿಯಾನಕ್ಕೆ ಅಡ್ಡಗೋಡೆಯಾಗಿ ಕಂಡ ಅಹ್ಮದಿಯಾ ಖಿಲಾಫತನ್ನು ಕಿತ್ತೆಸೆಯಲು ಯೋಜನೆ ಹಾಕಿದರು. ಅಹ್ಮದಿಯಾ ಖಿಲಾಫತ್ತನ್ನೂ ಅಹ್ಮದೀಯರನ್ನೂ ನಿರ್ಮೂಲನ ಮಾಡಲಿಕ್ಕಾಗಿ ಭುಟ್ಟೋರ ಕಾಲದಲ್ಲಿ ಅವರು ಪೆಟ್ರೋಡಾಲರಿನ ಹೊಳೆಯನ್ನೇ ಪಾಕಿಸ್ತಾನದತ್ತ ಹರಿಸಿದರು. ಆದರೆ, ಅಹ್ಮದಿಯಾ ಖಿಲಾಫತ್ ಅಲ್ಲಾಹನಿಂದ ನೆಡಲ್ಪಟ್ಟ ಗಿಡವೆಂದು ಪಾಪ ಆ ರಾಜನಿಗೆ ಗೊತ್ತಿರಲಿಲ್ಲ. ಭುಟ್ಟೋರಿಗೆ ಒಂದು ತುಂಡು ಹಗ್ಗ, ಫೈಝಲರಿಗೆ ತನ್ನ ಸೋದರ ಪುತ್ರನ ಬಂದೂಕಿನಿಂದ ಹೊರಟ ಒಂದು ಗುಂಡು. ಚಿಂತನೆ ಮಾಡುವವರಿಗೆ ನಿಶ್ಚಯವಾಗಿಯೂ ಇದರಲ್ಲಿ ಕಲಿಯಬೇಕಾದ ಪಾಠವಿದೆ.

## ಅಫಘಾನಿಸ್ತಾನ

'ಸನ್ಮಾರ್ಗ'ದ ಲೇಖಕರು ಅಫಘಾನಿಸ್ತಾನದಲ್ಲಿ ನಡೆದ ಸಂಗತಿಗಳನ್ನು ತನ್ನ ಲೇಖನದಲ್ಲಿ ಪರಾಮರ್ಶಿಸಿದ್ದಾರೆ:

"ಮಿರ್ಝಾ ಗುಲಾಮರ ಕಾಲದಲ್ಲಿ ಅಫಘಾನಿಸ್ತಾನದ ಈರ್ವರು ಕಾದಿಯಾನಿಗಳನ್ನು ಆಡಳಿತಗಾರರ ಆಜ್ಞೆಯಂತೆ ವಧಿಸಲಾಯಿತು. ತನ್ಮೂಲಕ ಮಿರ್ಝಾ ಆ ರಾಷ್ಟ್ರವನ್ನು ತನ್ನ ಭವಿಷ್ಯವಾಣಿಗಳ ಸರಣಿಯಲ್ಲಿ ಸೇರಿಸಿದರು. 1973ರಲ್ಲಿ ದಾವೂದ್ ಖಾನ್, 1979ರಲ್ಲಿ ನೂರ್ ಮುಹಮ್ಮದ್ ತರಾಕಿ. ಹಫೀಝುಲ್ಲಾ ಅಮೀನ್‌ರು ಅದೇ ಕಾರಣದಿಂದ ಕೊಲೆಯಾದರಂತೆ!"

ಅಫಘಾನಿಸ್ತಾನದಲ್ಲಿ ಅಮೀರ್ ಅಮಾನುಲ್ಲಾ ಖಾನ್‌ರ ಕಾಲದಲ್ಲಿ ಈರ್ವರು ಅಹ್ಮದೀಯರನ್ನು ನಿರ್ದಯವಾಗಿ ವಧಿಸಲಾಯಿತು. ಆ ಮೊದಲ್ಗೊಂಡು ಇವತ್ತಿನ ವರೆಗೂ ಅಲ್ಲಿ ರಾಜಕೀಯ ಸುಭದ್ರತೆ ಉಂಟಾಗಲಿಲ್ಲವೆಂಬುದು ಒಂದು ಚಾರಿತ್ರಿಕ ಸತ್ಯ. 'ಅಂತೆ' ಎಂದು ಹೇಳುತ್ತಾ ವಿಷಯದ ಪ್ರಾಮುಖ್ಯತೆಯನ್ನು ಮೃದುಗೊಳಿಸುವ ಅಗತ್ಯವಿಲ್ಲ. ಸುದೃಢವಾಗಿಯೇ ಹೇಳಬಹುದು – ಅಲ್ಲಿ ರಾಜಕೀಯ ಸ್ಥಿರತೆಯಾಗಲೀ ಸಾಮಾಜಿಕ ಸುಭದ್ರತೆಯಾಗಲೀ ಈ ತಾರೀಕಿನ ವರೆಗೂ ಉಂಟಾಗಲಿಲ್ಲ. ಅನೇಕ ಹಸ್ತಗಳಿಗೆ ಆಡಳಿತಾಧಿಕಾರದ ವರ್ಗಾವಣೆಯಾಯಿತು. ಅಮಾನುಲ್ಲಾ ಖಾನ್, ನಾದಿರ್ ಶಾ, ಝಹಿರ್ ಶಾ, ದಾವೂದ್ ಖಾನ್, ಕರ್ನಲ್ ಅಬ್ದುಲ್ ಖಾದರ್, ನೂರ್ ಮುಹಮ್ಮದ್ ತರಾಕಿ, ಹಫೀಝುಲ್ಲಾ ಅಮೀನ್, ಬಬ್ರಕ್ ಕರ್ಮಾಲ್, ಈಗ ನಜೀಬುಲ್ಲಾ. ವೀರಾದಿ ವೀರರೂ ಸಮರ್ಥ ಆಡಳಿತಗಾರರೂ ಅಫಘಾನಿಸ್ತಾನದಲ್ಲಿ ಅಧಿಕಾರ ನಡೆಸಿದರು. ಆದರೆ, ಶಾಂತಿಯುತ ಜನಜೀವನವಾಗಲೀ ನಿರ್ಭೀತ ವಾತಾವರಣವಾಗಲೀ ಅಲ್ಲಿನ ಪ್ರಜೆಗಳ ಅದೃಷ್ಟದಲ್ಲಿ ಇಂದಿನವರೆಗೂ ವಿಧಿಸಲ್ಪಟ್ಟಿಲ್ಲ.

'ಸನ್ಮಾರ್ಗ'ದ ಲೇಖಕರೊಡನೆ ಒಂದು ಚಿಕ್ಕ ಪ್ರಶ್ನೆ: "ಅಫಘಾನಿಸ್ತಾನದ ಈರ್ವರು ಕಾದಿಯಾನಿಗಳನ್ನು ಆಡಳಿತಗಾರರ ಆಜ್ಞೆಯಂತೆ ವಧಿಸಲಾಯಿತು" ಎಂದು ಹೇಳುತ್ತೀರಲ್ಲಾ, ನಿಮಗೆ ಅದರ ಬಗ್ಗೆ ಏನೂ ಬರೆಯಲಿಕ್ಕೆ ತೋರಲಿಲ್ಲವೇ? ಧಾರ್ಮಿಕ ಸ್ವಾತಂತ್ರ್ಯವೆಂಬುದು ಮಾನವೀಯ ಮೂಲಭೂತ ಹಕ್ಕಲ್ಲವೇ? ವಿಶ್ವಾಸ ಬದಲಾವಣೆಗಾಗಿ ಈರ್ವರು ಅಹ್ಮದೀಯರನ್ನು ಅಧಿಕಾರಿಗಳು ಅನ್ಯಾಯವಾಗಿ, ನಿಷ್ಠುರವಾಗಿ ಕೊಲೆಗೈದುದರಲ್ಲಿ ನಿಮಗೆ ಕನಿಕರ ತೋರಲಿಲ್ಲವೆ? ದುಃಖವಾಗಲಿಲ್ಲವೇ? 'ಬದ್ರ್' ಯುದ್ಧದಲ್ಲಿ ಹ. ಹಮ್‌ಝಾ(ರ)ರ ಮೃತದೇಹವನ್ನು ಸೀಳಿ ಕರುಳನ್ನು ಜಗಿದು ಕುಣಿದಾಡಿದ ಹಿಂದ್‌ಳ' ರಾಕ್ಷಸೀಯ ಮುಖವಾಡವನ್ನು ನೀವು ಧರಿಸಿದ್ದೀರಿ ಎಂದು ನಾವು ಹೇಳುವುದಿಲ್ಲ. ಆದರೆ. ಜಿ। ಜಿಯಾರ ದೇಹವು ಸುಟ್ಟು ನೂರಾಯಿತು ಎಂಬ ವಾಸ್ತವಿಕಾಂಶವನ್ನು ನಾವು ಹೇಳುವಾಗ ನೀವೇಕೆ ಭೂತನರ್ತನಗೈದ ಆ ರಾಕ್ಷಸಿಯನ್ನು ಕರೆದು ತರುತ್ತೀರಿ?

"ಎರಡು ಕುರಿಗಳು ಕೊಯ್ಯಲ್ಪಡುವುವು. ಅದರ ಫಲವಾಗಿ ಭಯಂಕರವಾದ ನಾಶ ನಷ್ಟಗಳು ಉಂಟಾಗು ವುವು." ಅಫಘಾನಿಸ್ತಾನದಲ್ಲಿ ಸಂಭವಿಸಿದ ಈ ಘಟನೆ ಗಳಿಗೆ ಎಷ್ಟೋ ವರ್ಷಗಳ ಮೊದಲು ಹಝ್ರತ್ ಮಿರ್ಝಾ ಸಾಹೇಬರಿಗೆ ಲಭಿಸಿದ ಒಂದು ದಿವ್ಯವಾಣಿ ಯಿದು. ಈ ಭವಿಷ್ಯವಾಣಿಯು ಅಫಘಾನಿಸ್ತಾನದಲ್ಲಿ ಅಕ್ಷರಶಃ ಪೂರ್ತಿಯಾಯಿತು. ಹಝ್ರತ್ ಮೌಲಾನಾ ಅಬ್ದುಲ್ ರಹ್ಮಾನ್ ಸಾಹೇಬರನ್ನೂ ಸಾಹಿಬ್‌ಝಾದಾ ಅಬ್ದುಲ್ ಲತೀಫ್ ಸಾಹೇಬರನ್ನೂ ಅಹ್ಮದಿಯ್ಯತ್ ಸ್ವೀಕರಿಸಿದ ಏಕಮಾತ್ರ ಕಾರಣಕ್ಕಾಗಿ ಅಫಘಾನಿಸ್ತಾನ ದಲ್ಲಿ 'ಕುಫ್ರ್' ಫತ್ವಾನೀಡಿ ಅತಿ ದಾರುಣವಾಗಿ ವಧಿಸ ಲಾಯಿತು! ಹ! ಮೌಲಾನಾ ಸಾಹೇಬರನ್ನು ಕುತ್ತಿಗೆಗೆ ಹಗ್ಗಬಿಗಿದು ಉಸಿರು ಕಟ್ಟಿಸಿ ವಧಿಸಿದರೆ, ಸಾಹಿಬ್ ಝಾದಾ ಅಬ್ದುಲ್ಲತೀಫ್ ಸಾಹೇಬರನ್ನು ಕಲ್ಲೆಸೆದು ಕೊಲ್ಲಲಾಯಿತು.

ಸಾಹಿಬ್‌ಝಾದಾ ಸಾಹೇಬರು ಅಫಘಾನಿಸ್ತಾ ನದ ಅಮೀರ್ (ರಾಜ)ನಿಗೆ ಕಿರೀಟ ತೊಡಿಸುವ ಆಸ್ಥಾನ ಪುರೋಹಿತರಾಗಿದ್ದರು. ಅವರಿಗೆ ಸಾವಿ ರಾರು ಮುರೀದ್ (ಅನುಗಾಮಿ)ಗಳಿದ್ದರು. ಜನ ಮನ್ನಣೆಗಳಿಸಿದ್ದ ಸಾತ್ವಿಕರಾಗಿದ್ದರು. ಅಂತಹ ಓರ್ವ ಮಹೋನ್ನತ ವ್ಯಕ್ತಿಯಾಗಿದ್ದ ಸಾಹಿಬ್‌ಝಾದಾ ಅಬ್ದುಲ್ಲತೀಫ್ ಸಾಹೇಬರು ಮಿರ್ಝಾ ಸಾಹೇಬರನ್ನು ಸತ್ಯವಂತನೆಂದು ಸ್ವೀಕರಿಸಿದ ಏಕಮಾತ್ರ ಕಾರಣಕ್ಕಾಗಿ ಅವರ ಮೇಲೆ 'ಕುಫ್ರ್‌ಫತ್ವಾ' ಹೊರಡಿಸಿ, ನಂತರ ಸೊಂಟದವರೆಗೆ ಮಣ್ಣಿನಲ್ಲಿ ಹೂತು ಕಲ್ಲೆಸೆದು ಕೊಲ್ಲ ಲಾಯಿತು. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಖಾದಿಯಾನಿಯವರು ಅಲ್ಲಾಹನಿಂದ ನಿಯೋಜಿತನಾಗಿ ರುವ ಧರ್ಮ ಸುಧಾರಕನೆಂಬ ತನ್ನ ವಿಶ್ವಾಸವನ್ನು ಕೈಬಿಡುವಂತೆ ಅವರನ್ನು ಅಫಘಾನಿಸ್ತಾನದ ಅಮೀರ್ ಬಹಳ ಒತ್ತಾಯಿಸಿದ್ದರೂ ಅವರು ತನ್ನ ವಿಶ್ವಾಸದಲ್ಲಿ ಅಚಲರಾಗಿಯೇ ಇದ್ದರು. ಸತ್ಯವನ್ನು ಕಂಡುಕೊಂಡ ಬಳಿಕ ಅದನ್ನು ತ್ಯಜಿಸುವುದು ಯಾವತ್ತೂ ತನ್ನಿಂದ ಸಾಧ್ಯವಿಲ್ಲವೆಂದೂ ಅದಕ್ಕಾಗಿ ತನ್ನ ಪ್ರಾಣವನ್ನು ಸಹ ನೀಡಲು ತಾನು ಹಿಂಜರಿಯಲಾರೆನೆಂದೂ ಆ ಮಹಾನ್ ವಿಶ್ವಾಸಿ ದೃಢವಾಗಿಯೇ ಹೇಳಿದರು. ಹಾಗೆ ಅವರನ್ನು ಒಂದು ಮೈದಾನದಲ್ಲಿ ಸೊಂಟದಷ್ಟು ಹೊಂಡದಲ್ಲಿ ಹೂತು ಕಲ್ಲೆಸೆದು ಕೊಲ್ಲಲು ತಯಾರಾದ ಕೊನೆಯ ಗಳಿಗೆಯಲ್ಲಿ ಅಮೀರ್ ಮತ್ತೊಮ್ಮೆ ಅವರ ಹತ್ತಿರ ಸಾಗಿ ಮಿರ್ಝಾ ಸಾಹೇಬರ ಮೇಲಿನ ವಿಶ್ವಾಸವನ್ನು ಬಿಟ್ಟು ಬಿಡುವಂತೆಯೂ ತನ್ನ ಹೆಂಡತಿ ಮಕ್ಕಳನ್ನು ನೆನಸಿಯಾದರೂ 'ತೌಬಾ' (ಪಶ್ಚಾತ್ತಾಪ) ಮಾಡಿ ರೆಂದೂ, ಹಾಗೆ ಮಾಡುವ ಪಕ್ಷದಲ್ಲಿ ತಮ್ಮನ್ನು ಬಿಟ್ಟು ಬಿಡುವುದಾಗಿಯೂ ತಿಳಿಸಿದರು. ಆದರೆ ಆ ದೃಢ ವಿಶ್ವಾಸಿ ಕದಲಲಿಲ್ಲ. ಅವರು ಉತ್ತರಿಸಿದರು:
"ನಮೂದುಬಿಲ್ಲಾ, ನಾನು ಸತ್ಯವನ್ನು ಯಾಕಾಗಿ ನಿರಾಕರಿಸಲಿ, ಅದನ್ನು ಹೇಗೆ ತಾನೆ ಕೈಬಿಡಲಿ. ನನ್ನ ಪ್ರಾಣವು ಅದೇನು ಮಹಾ? ನನ್ನ ಪ್ರಾಣವಾಗಲಿ ನನ್ನ ಹೆಂಡತಿ ಮತ್ತು ಮಕ್ಕಳಾಗಲಿ ಸತ್ಯ ವನ್ನು ಸ್ವೀಕರಿಸುವುದಕ್ಕಿಂತ ನನಗೆ ಹೆಚ್ಚಿನವರೆ? ಇದಕ್ಕಾಗಿ ನಾನು ಸತ್ಯವನ್ನು ಕೈಬಿಡಬೇಕೆ? ನನ್ನಿಂದ ಅದು ಯಾವತ್ತೂ ಸಾಧ್ಯ ವಿಲ್ಲ. ನಾನು ಸತ್ಯವಿಶ್ವಾಸಕ್ಕಾಗಿ ಜೀವವನ್ನು ಬಲಿಯರ್ಪಿಸಲು ತಯಾರಿದ್ದೇನೆ."

ಸಾಹಿಬ್‌ಝಾದಾ ಅಬ್ದುಲ್ಲತೀಫ್ ಸಾಹೇಬರನ್ನು ಕಾಫಿರ್ ಎಂದು ವಿಧಿಸಿದ ಖಾಝಿ ಅಲ್ಲಿಯೇ ಇದ್ದರು. ಬಾದಶಹನ ಆಜ್ಞೆಯಂತೆ ಸಾಹಿಬ್ ಝಾದಾ ಸಾಹೇಬರ ಮೇಲೆ ಮೊತ್ತ ಮೊದಲಿನ ಕಲ್ಲನ್ನು ಆ ನತದೃಷ್ಟ ಖಾಝಿ ಬೀಸಿ ಎಸೆದರು. ನಂತರ ಅಮೀರ್ ಹಬೀಬುಲ್ಲಾ ಖಾನ್ ತನ್ನ ಶಾಪಗ್ರಸ್ತ ಕೈಯಿಂದ ಆ ವೀರ ವಿಶ್ವಾಸಿಯ ಮೇಲೆ ಎರಡನೇ ಕಲ್ಲನ್ನೆಸೆದರು. ಕಲ್ಲು ಕೂಡ ಕ್ಷಮಿಸದ ಮಹಾ ಪಾತಕ!. ಹಝ್ರತ್ ಸಾಹಿಬ್‌ಝಾದಾ ಸಾಹೇಬರ ಮಂದಹಾಸ ಬೀರುತ್ತಿದ್ದ ಮುಖದಲ್ಲಿ ಯಾವುದೇ ಭಾವ ವ್ಯತ್ಯಾಸ ಉಂಟಾಗಲಿಲ್ಲ. ಅವರು ಎತ್ತಿದ ಧ್ವನಿಯಲ್ಲಿ ಪವಿತ್ರ 'ಕಲಿಮ'ವನ್ನು ಜೋರಾಗಿ ಉಚ್ಚರಿಸಿದರು:

اشهد ان لا اله الاالله
و اشهد انّ محمدا رسول الله

"ಅಲ್ಲಾಹನ ಹೊರತು ಆರಾಧ್ಯನಾಗಿ ಬೇರೆ ಯಾರೂ ಇಲ್ಲ ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ; ಮುಹಮ್ಮದ್ ಅವನ ಪ್ರವಾದಿಯೆಂದೂ ನಾನು ಸಾಕ್ಷಿ ಹೇಳುತ್ತೇನೆ."

ರಾಜನನ್ನು ಅನುಕರಿಸಿಕೊಂಡು ಅಲ್ಲಿ ನೆರೆದಿದ್ದ ಜನಸ್ತೋಮವು ಸಾಹಿಬ್‌ಝಾದಾ ಸಾಹೇಬರ ಶರೀರದ ಮೇಲೆ ಕಲ್ಲಿನ ಸುರಿಮಳೆಯನ್ನೇ ಗೈಯಿತು. ಸಾಹಿಬ್

ರಷೀದಾ ಸಾಹೇಬರು ಉಚ್ಚ ಸ್ವರದಲ್ಲಿ ಪ್ರಾರ್ಥಿಸು ತ್ತಿದ್ದರು:

انت ولى فى الدنيا والاخرة توفنى مسلما
و الحقنى بالصالحين

"ಓ ನನ್ನ ಸೃಷ್ಟಿಕರ್ತನೇ, ಈ ಲೋಕದಲ್ಲೂ ಪರ ಲೋಕದಲ್ಲೂ ನೀನೇ ನನ್ನ ರಕ್ಷಕನಾಗಿರುವೆ. ನನ್ನನ್ನು ಮುಸ್ಲಿಮನಾಗಿ ಮರಣಗೊಳಿಸು, ನನ್ನನ್ನು ನಿನ್ನ ಇಷ್ಟ ದಾಸರ ಜತೆ ಸೇರಿಸಿಕೋ."

ಹಾಗೆ, ಪ್ರವಾದಿಗಳ ಅನುಯಾಯಿಗಳಲ್ಲಿ ಮಾತ್ರ ಕಾಣಲು ಸಾಧ್ಯವಾಗುವಂತಹ ತ್ಯಾಗ ಬಲಿದಾನಗಳ ಅಧ್ಯಾಯವನ್ನು ನವೀಕರಿಸುತ್ತಾ ಸತ ವಿಶ್ವಾಸ, ಸುದೃಢತೆಯನ್ನು ದಿಗಂತಗಳಲ್ಲಿ ಸಾರುತ್ತಾ ಆ ವೀರ ವಿಶ್ವಾಸಿ ಹುತಾತ್ಮರಾದರು.

انا لله و انا اليه راجعون

ಅದು ಅಂತ್ಯವಾಗಿರಲಿಲ್ಲ. ಪ್ರಾರಂಭವಾಗಿತ್ತು. ಅಫಘಾನಿಸ್ತಾನದ ವಿನಾಶದ ಆರಂಭ. ನಡುಕ ಹುಟ್ಟಿ ಸುವಂತಹ ಈ ಭಯಾನಕ ವಾರ್ತೆಯನ್ನು ಕೇಳುತ್ತಲೇ ಹಜ್ರತ್ ಮಿರ್ಜಾ ಗುಲಾಂ ಅಹ್ಮದ್ ಖಾದಿಯಾನಿ ಉದ್ಗರಿಸಿದರು:

"ಹಾ! ಆ ತಿಳಿಗೇಡಿ ಅಮೀರ್ ಅದೇನು ಮಾಡಿ ಬಿಟ್ಟ! ಆ ನಿರಪರಾಧಿ ವ್ಯಕ್ತಿಯನ್ನು ನಿಷ್ಕರುಣೆಯಿಂದ ಸಾಯಿಸುತ್ತಾ ಆತನು ತನ್ನನ್ನು ತಾನೇ ನಾಶಪಡಿಸಿರುವನು. ಎಲೈ ಅಫಘಾನಿಸ್ತಾನದ ಬೂಮಿಯೇ, ನೀನು ಸಾಕ್ಷಿಯಾಗು. ನಿನ್ನಲ್ಲಿ ಅತಿ ಕ್ರೂರವಾದ ಅತ್ಯಾಚಾರವು ಎಸಗಲ್ಪಟ್ಟಿದೆ. ಎಲೈ, ದುರದೃಷ್ಟ ಭೂಮಿಯೇ, ನೀನು ಆ ಭಯಾನಕ ದೌರ್ಜನ್ಯದ ಸ್ಥಾನವಾಗಿರುವುದರಿಂದ ದೇವರ ದೃಷ್ಟಿಯಲ್ಲಿ ನೀನು ಪತನಗೊಂಡಿರುವೆ. (ತದ್‌ಕಿರತುಶ್ಶಹಾದತೈನ್–ರೂಹಾನಿ ಖಿಝೂಇನ್

ಸಂ– 20 ಪು–74)

"ಷಾಹ್‌ಝಾದಾ ಅಬ್ದುಲ್ಲತೀಫ್ ಸಾಹೇಬರ ಭಾಗ್ಯದಲ್ಲಿ ಬರೆಯಲ್ಪಟ್ಟಿದ್ದ ಶಹಾದತ್ (ಹುತಾತ್ಮತೆ) ನೆರವೇರಿತು. ಈಗ ಅಕ್ರಮಿಗಳ ವಿನಾಶವು ಬಾಕಿ ಉಳಿದಿದೆ."

(ತದ್‌ಕಿರತುಶ್ಶಹಾದತೈನ್)

ಸಾರ್ವತ್ರಿಕವಾದ ನಾಶವು ಅಫಘಾನಿಸ್ತಾನವನ್ನು ಸುತ್ತುವರಿಯುತ್ತದೆ. ಅನಿರೀಕ್ಷಿತವಾಗಿ ಕೊಲೆರಾ ಹರಡಿತು. ಆ ಮಹಾಮಾರಿಗೆ ಬಲಿಯಾಗಿ ಸಾವಿರ ಸಾವಿರ ಸಂಖ್ಯೆಯಲ್ಲಿ ಜನರು ಅಸುನೀಗಿದರು. ಇಡೀ ಅಫಘಾನಿಸ್ತಾನವನ್ನು ಭೀಕರತೆಯ ಕರಿನೆರಳು ಆವರಿಸಿತು. ಜನರು ಭಯವಿಹ್ವಲರಾದರು. ನಿರಪರಾಧಿಗಳಾದ ಈರ್ವರು ಸಾತ್ವಿಕರನ್ನು ಕ್ರೂರವಾಗಿ ಕೊಲೆಗೈದುದರ ಪರಿಣಾಮವಾಗಿಯೇ ಈ ನಾಡಿನ ಮೇಲೆ ಇಂತಹ ಶಾಪಶಿಕ್ಷೆ ಎರಗಿದೆ ಎಂದು ಜನರು ಹೇಳತೊಡಗಿದರು.

ಮಹಾಮಾರಿಯ ನಂತರ ಅಫಘಾನಿಸ್ತಾನದ ಪ್ರಕೃತಿಯೇ ಬದಲಾಯಿತು. ಅಲ್ಲಿಯ ರಾಜಕಾರಣದ ಮೇಲೆ ಕೊನೆಯಿಲ್ಲದ ಶಾಪ ಶಿಕ್ಷೆ. ರಾಜರುಗಳು ವಧಿಸಲ್ಪಡುತ್ತಾರೆ ಇಲ್ಲವೇ ದೇಶ ಬಿಟ್ಟು ಪಲಾಯನ ಮಾಡುತ್ತಿದ್ದಾರೆ. ಅಂದಿನಿಂದ ಇಂದಿನವರೆಗೂ ಲೋಕಕ್ಕೆ ಕಾಣಲು ಸಾಧ್ಯವಾದ ಅಫಘಾನಿಸ್ತಾನದ ದುರಂತದ ಕಥೆಯಿದು. ಅಭದ್ರತೆ, ಭಯ ಭೀತಿಯ ವಾತಾವರಣ, ಬೀದಿಗಳಲ್ಲಿ ಹೆಪ್ಪುಗಟ್ಟಿ ನಿಲ್ಲುವ ರಕ್ತ, ಗುಂಡಿನ ಶಬ್ದಗಳಿಲ್ಲದ ದಿನಗಳನ್ನೇ ಅಲ್ಲಿಯ ಜನರು ಕಂಡದ್ದಿಲ್ಲ. ಇಂದು ಕೂಡ ಇದೇ ಸ್ಥಿತಿ ಮುಂದುವರಿಯುತ್ತಿದೆ,

## 'ಸನ್ಮಾರ್ಗ'ದ ಅಪಲಾಪ

ಈಜಿಪ್ಟಿನ ಅನ್ವರ್ ಸಾದಾತ್, ಭಾರತದ ಶ್ರೀಮತಿ ಇಂದಿರಾ ಗಾಂಧಿ– 'ಸನ್ಮಾರ್ಗ'ದ ಲೇಖಕರು ವೃಥಾ ಬೆಟ್ಟು ಹತ್ತುತ್ತಿದ್ದಾರೆ! ವಿದ್ವೇಷದ ವಿಷಜ್ವರ ನೆತ್ತಿಗೇರಿದರೆ, ಮತ್ತೆ ತಾವು ಹೇಳುತ್ತಿರುವುದೇನೆಂದು ಅಂಥಹವರಿಗೆ ಅರ್ಥವಾಗಲಾರದು.

"ಕಾದಿಯಾನಿ ವಿಶ್ವಾಸದಂತೆ ಸಿಖ್ ಧರ್ಮ ಸ್ಥಾಪಕ ಗುರುನಾನಕರೂ ಓರ್ವ ಪ್ರವಾದಿ" ಎಂದು 'ಸನ್ಮಾರ್ಗ'ದ ಲೇಖಕ ಹೇಳುತ್ತಾರೆ. "ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್" (ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ) ಎಂಬ ಪವಿತ್ರ ಖುರ್‌ಆನಿನ ವಚನದ ಮೂಲಕ ನಾವು ಇದಕ್ಕೆ ಉತ್ತರಿಸುತ್ತೇವೆ. ಮಾನ್ಯರೇ, ಯಾವ 'ಕಾದಿಯಾನಿ ಪತ್ರಿಕೆ'ಯಲ್ಲಿ ಅಥವಾ ಗ್ರಂಥದಲ್ಲಿ ಇದನ್ನು ಓದಿದಿರಿ ಎಂಬುದನ್ನು ತಿಳಿಸುವ ಕೃಪೆ ತೋರಿಸುವಿರಾ ? ಧಾರ್ಮಿಕ ವಿಷಯಗಳನ್ನು ಇಷ್ಟು ಹಗುರವಾಗಿ ಪರಿಗಣಿಸುವ ನಿಮ್ಮ ಕುರಿತು ಅನುಕಂಪ

ತೋರುತ್ತದೆ. ಈ ಲೋಕದಲ್ಲಿ ಮನುಷ್ಯನು ಮಾಡುವ ಪ್ರತಿಯೊಂದು ಕರ್ಮ, ಕೃತ್ಯಗಳ ಬಗ್ಗೆ ಪರ ಲೋಕದಲ್ಲಿ ಅಲ್ಲಾಹನೊಡನೆ ಉತ್ತರಿಸಲಿದೆ ಎಂಬು ದನ್ನು ನೀವು ಜ್ಞಾಪಿಸಿಕೊಳ್ಳಿರಿ.

ಗುರುನಾನಕ್ ಪ್ರವಾದಿಯೆಂದು 'ಕಾದಿಯಾನಿ ಗಳು' ಹೇಳಿದ್ದಿಲ್ಲ, ಹಾಗೆ ಹೇಳಲು ಸಾಧ್ಯವೂ ಇಲ್ಲ. ليس بيني وبينه نبي ನನಗೂ ವಾಗ್ದತ್ತ ಮಸೀಹ ರಿಗೂ ಮಧ್ಯೆ ಪ್ರವಾದಿಗಳಿಲ್ಲ (ಮಿಶ್‌ಕಾತ್) ಎಂಬ ಹಝ್ರತ್ ಮುಹಮ್ಮದ್ ಪೈಗಂಬರರ ವಚನದ ಪ್ರಕಾರ ಪೈಗಂಬರರ ನಂತರ ಮಹ್‌ದಿ ಇಮಾಮರ ಹೊರತು ಆ ಮಧ್ಯದಲ್ಲಿ ಪ್ರವಾದಿಗಳಿಲ್ಲವೆಂದು ನಾವು ನಂಬುತ್ತೇವೆ. ಆದರೆ ಹೌದು, ಗುರುನಾನಕ್‌ಜೀ ಓರ್ವ ಮಹಾಪುರುಷರಾಗಿದ್ದರು. ಮಹಾ ವಿದ್ವಾಂಸರೂ ಸಾತ್ವಿಕರೂ ದೇವಭಕ್ತರೂ ಆಗಿದ್ದರು. ಅವರು ಓರ್ವ ಪ್ರಸಿದ್ಧ ಪುರುಷ ಅಥವಾ ಸಂತ ಆಗಿದ್ದರು. ಗುರುನಾನಕರ ನಿಲು ವಂಗಿಯ ಮೇಲೆ لا اله الا الله محمد رسول الله ಎಂಬ ಪವಿತ್ರ ಕಲಿಮ ಬರೆಯಲಾಗಿತ್ತು. ಅಲ್ಲದೆ, "ಅಲ್ಲಾಹನ ಬಳಿ ಸತ್ಯವಾದ ಧರ್ಮವೆಂದರೆ ಇಸ್ಲಾಂ ಆಗಿದೆ", "ಇಸ್ಲಾಂ ಅಲ್ಲದ ಬೇರೆ ಯಾವ ಧರ್ಮವೂ ಸ್ವೀಕರಿಸಲ್ಪಡಲಾರದು" ಎಂಬ ಪವಿತ್ರ ಖುರ್‌ಆನಿನ ವಚನಗಳನ್ನು ಅವರು ತನ್ನ ಶಿರೋ ವಸ್ತ್ರದ ಮೇಲೆ ಬರೆದಿಟ್ಟಿದ್ದರು. ಅವರು ಯಾವಾಗಲೂ ತನ್ನ ಬಳಿ ಯಲ್ಲಿಯೇ ಇರಿಸುತ್ತಿದ್ದ ಒಂದು ಚಿಕ್ಕ ಪೆಟ್ಟಿಗೆಯಲ್ಲಿ ಪವಿತ್ರ ಖುರ್‌ಆನಿನ ಒಂದು ಪ್ರತಿಯನ್ನು ಕೂಡ ಇಟ್ಟಿರುತ್ತಿದ್ದರು. ಅಂತಹ ಆ ಮನುಷ್ಯನನ್ನು ಓರ್ವ ದೇವಭಕ್ತನೆಂದು ಹೇಳುವುದರಲ್ಲಿ 'ಸನ್ಮಾರ್ಗ'ದವರಿಗೆ ಸಹಮತವಿಲ್ಲದಿದ್ದರೆ ಅದಕ್ಕೆ ನಾವೇನು ಮಾಡಲು ಸಾಧ್ಯ? ಸತ್ಯವು ನಿಮಗೆ ಅಪಥ್ಯವೆಂದಾದರೆ ಅದು ನಿಮ್ಮ ವಿಧಿಲಿಖಿತ.

ಕೊನೆಯದಾಗಿ ಲೇಖಕರು ತನ್ನ ದೇವ ಧಿಕ್ಕಾರದ ಪರಮಾವಧಿಯನ್ನು ಪ್ರದರ್ಶಿಸುತ್ತಾ ಈ ರೀತಿ ಪ್ರಶ್ನಿಸುತ್ತಾರೆ: "ಕೇವಲ ದುರಂತಗಳಿಗಾಗಿ ದೇವನು ಈ ಪ್ರವಾದಿಯನ್ನು ಕಳುಹಿಸಿದನೇ?" ಅತ್ಯಂತ ವಿಸ್ಮಯಕರವಾದ ಪ್ರಶ್ನೆಯಿದು. ಈ ಪ್ರಶ್ನೆಯನ್ನು ಮಾನವ ಜನಾಂಗಕ್ಕೆ ಕಾಲೋಚಿತವಾಗಿ ಪ್ರವಾದಿ ಗಳನ್ನು ಕಳುಹಿಸುತ್ತಾ ಬಂದಿರುವ ಸೃಷ್ಟಿಕರ್ತನಾದ ಅಲ್ಲಾಹನೊಡನೆಯೇ ಲೇಖಕರು ಕೇಳಬೇಕಾಗಿದೆ. ಈ ಪ್ರಶ್ನೆಗೆ ಉತ್ತರಿಸಬೇಕಾದವನೂ ಅಲ್ಲಾಹನೇ. ಕೇವಲ ದುರಂತಗಳಿಗಾಗಿಯೇ ಅಲ್ಲಾಹನು ಪ್ರವಾದಿ ಗಳನ್ನು ಕಳುಹಿಸಿದನೇ? ಪ್ರವಾದಿಗಳ ನೇಮಕವು ಅನುಗ್ರಹವೆಂಬ ಪೂರ್ವ ಪ್ರವಾದಿಗಳ ಹೇಳಿಕೆಯನ್ನು ತಿದ್ದಬೇಕೇ? ಎಂಬ ಪ್ರಶ್ನೆಗಳಿಗೆ ಪರಿಹಾರ ದೊರಕಿಸಿ ಕೊಳ್ಳಲು ದಯವಿಟ್ಟು ಪವಿತ್ರ ಖುರ್‌ಆನನ್ನು ಒಂದು ಸಲ ಶಾಂತ ಚಿತ್ತದಿಂದ ಗಮನವಿರಿಸಿ ಓದಿರಿ ಎಂದು ನಾವು 'ಸನ್ಮಾರ್ಗ'ದವರಿಗೆ ಸಲಹೆ ನೀಡಬಯಸುತ್ತೇವೆ. ಅಲ್ಲಿ ನಿಮ್ಮ ಪ್ರಶ್ನೆಗಳಿಗೆ ಉತ್ತರ ಲಭಿಸುವುದು.

ದುರಂತಗಳು ಜೀವನದ ಅವಿಭಾಜ್ಯ ಅಂಗಗಳಾಗಿವೆ. ಸರ್ವಸುಖಗಳನ್ನೂ ಅನುಭವಿಸುತ್ತಾ ಸ್ವೇಚ್ಛೆ ಯಿಂದ ಜೀವಿಸಲು ಮಾತ್ರ ಮನುಷ್ಯನು ಈ ಲೋಕಕ್ಕೆ ಬಂದಿರುವುದಲ್ಲ. ಮನುಷ್ಯನಿಗೆ ಇಲ್ಲಿ ಕೆಲವು ಪರಿಧಿ ಗಳಿವೆ. ಪರಿಮಿತಿಗಳಿವೆ. ದೇವ ನಿಯಮಗಳನ್ನು ಮಾನ ವರು ಉಲ್ಲಂಘಿಸುವಾಗ ಅಲ್ಲಾಹನು ಅವರ ಬಳಿಗೆ ಪ್ರವಾದಿಗಳನ್ನು ಕಳುಹಿಸುತ್ತಾನೆ.

"ಪ್ರತಿಯೊಂದು ಸಮುದಾಯದ ಬಳಿಗೂ ಮಾರ್ಗದರ್ಶಕ ರನ್ನು ಕಳುಹಿಸಲಾಗಿದೆ" (13 : 8) "ಮುನ್ನೆಚ್ಚರಿಕೆದಾರರು ಕಳು ಹಿಸಲ್ಪಡದ ಯಾವುದೇ ಜನ ಸಮುದಾಯವೂ ಇಲ್ಲ" (35 : 25) ಎಂದು ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳು ತ್ತಾನೆ. ಪ್ರತಿಯೊಂದು ಸಮುದಾಯಕ್ಕೂ ಪ್ರತಿಯೊಂದು ಕಾಲದವರಿಗೂ ಪ್ರತಿಯೊಂದು ದೇಶದವರಿಗೂ ದೇವರ ಕಡೆಯಿಂದ ಮಾರ್ಗದರ್ಶನವು ನೀಡಲ್ಪಟ್ಟಿದೆ ಎಂಬುದು ಇದರ ಅರ್ಥ. ನೀತಿ ನಿಯಮಗಳನ್ನು ಅವರಿಗೆ ತಿಳಿಸಲಾಗಿದೆ. ಜೊತೆಯಲ್ಲೇ ದೇವನ ಶಿಕ್ಷೆಯ ಕುರಿತು ಮುನ್ನೆಚ್ಚರಿಕೆಗಳನ್ನು ಸಹ ನೀಡಲಾಗಿದೆ. ಜನರೆಡೆಯಲ್ಲಿ ವ್ಯಾಪಕವಾಗಿ ಅಧರ್ಮವು ಪಸರಿಸುವಾಗ ದೇವನ ನೀತಿ ನಿಯಮಗಳನ್ನು ಜನರು ಉಲ್ಲಂಘಿಸಿ, ಅನ್ಯಾಯ, ಅಕ್ರಮ, ಅನೀತಿ, ಅಧರ್ಮವು ಹೆಚ್ಚುವಾಗ ಅವರಿಗೆ ಸರಿದಾರಿಯನ್ನು ನೆನಪಿಸಿಕೊಡಲು ಪ್ರವಾದಿ ಗಳನ್ನು ಅಲ್ಲಾಹನು ಕಳುಹಿಸುತ್ತಾನೆ. ಆಗ ಜನರು ತಮ್ಮ ಧಿಕ್ಕಾರವನ್ನೇ ಮುಂದುವರಿಸಿ ದೇವ ಸಂದೇಶ ವನ್ನು ತಿರಸ್ಕರಿಸಿದರೆ ಆ ಜನರ ಮೇಲೆ ಭಯಂಕರ ಶಿಕ್ಷೆ ಬರುತ್ತದೆ. "ಓರ್ವ ಪ್ರವಾದಿಯನ್ನು ಕಳುಹಿಸದ

ನಾವು ಜನರನ್ನು ಶಿಕ್ಷಿಸುವುದಿಲ್ಲ" (17 : 16) ಎಂದು ಅಲ್ಲಾಹನು ಹೇಳುತ್ತಾನೆ. ಆದುದರಿಂದ ಜನರನ್ನು ಸನ್ಮಾರ್ಗದತ್ತ ಕರೆಯುವುದು ಯಾವ ರೀತಿಯಲ್ಲಿ ಪ್ರವಾದಿಗಳ ಕೆಲಸವೋ ಅದೇ ರೀತಿ ಅಕ್ರಮಿಗಳಿಗೆ ಶಿಕ್ಷೆಯ ಕುರಿತು ಮುನ್ನೆಚ್ಚರಿಕೆ ನೀಡುವುದು ಸಹ ಪ್ರವಾದಿಗಳ ಕೆಲಸವಾಗಿರುತ್ತದೆ ಎಂದು ಪವಿತ್ರ ಖುರ್ ಆನ್ ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ದೇವ ಶಿಕ್ಷೆಯ ಕುರಿತು ತಾಕೀತು ನೀಡದ ಒಬ್ಬನೇ ಒಬ್ಬ ಪ್ರವಾದಿಯ ಹೆಸರನ್ನು ಹೇಳಲು 'ಸನ್ಮಾರ್ಗ'ದವರಿಂದ ಸಾಧ್ಯವೇ ? ದುರಂತಗಳ ಕುರಿತು ಭವಿಷ್ಯ ನುಡಿಯದ ಒಬ್ಬ ಪ್ರವಾದಿಯಾದರೂ ಇರುವರೇ ? ಇಲ್ಲವೆಂಬುದು ಸತ್ಯವಾದರೆ, ಕೇವಲ ದುರಂತಗಳಿಗಾಗಿ ದೇವನು ಈ ಪ್ರವಾದಿಗಳನ್ನು ಕಳುಹಿಸಿದನೇ ?!

ಪವಿತ್ರ ಖುರ್ಆನಿನ ಕಡೆಗೇ ಬರೋಣ. ಹಝ್ರತ್ ಮುಹಮ್ಮದ್ ಪೈಗಂಬರರನ್ನು "ಒಂದು ಜನತೆಗೆ ಮುನ್ನೆಚ್ಚರಿಕೆ ನೀಡಲಿಕ್ಕಾಗಿ ಕಳುಹಿಸಲಾಗಿದೆ" ಎಂದು ಅಲ್ಲಾಹನು ಹೇಳುತ್ತಾನೆ. (28 : 47) "ನಿಶ್ಚಯವಾಗಿಯೂ ನೀನೊಬ್ಬ ಮುನ್ನೆಚ್ಚರಿಕೆ ನೀಡುವವನಾಗಿರುವೆ" (13 : 8) ಎಂಬುದಾಗಿ ಅಲ್ಲಾಹನು ಹೇಳಿರುವನು. "ಸತ್ಯ ನಿಷೇಧಿಗಳಿಗೆ ಅತಿ ಭಯಂಕರವಾದ ಶಿಕ್ಷೆ ಕಾದಿದೆ." (2 : 105) ಎಂದು ಆ ಪವಿತ್ರ ಪ್ರವಾದಿಯು ಸಾರಿದ ಸಂದೇಶವನ್ನು ಲೆಕ್ಕಿಸದೆ ಅವರ ಭವಿಷ್ಯವಾಣಿಗಳನ್ನು ತಮಾಷೆ ಮಾಡಿ ಧಿಕ್ಕರಿಸಿದವರ ಗತಿ ಕೊನೆಗೆ ಏನಾಯಿತೆಂದು ಇಲ್ಲಿ ನಾವು ವಿವರಿಸಬೇಕಾಗಿಲ್ಲವಲ್ಲ.

"ನಾನು ಒಬ್ಬ ಮುನ್ನೆಚ್ಚರಿಕೆ ನೀಡುವವನಾಗಿದ್ದೇನೆ" ಎಂದು ಪ್ರವಾದಿ ನೂಹ್ (ಅ) ಘೋಷಿಸಿದರು (26:116). ಯಾವುದರ ಕುರಿತು ಮುನ್ನೆಚ್ಚರಿಕೆ? ಅಕ್ರಮಿಗಳಿಗೆ ದೇವ ಶಿಕ್ಷೆ ಬರಲಿದೆ ಎಂಬ ಮುನ್ನೆಚ್ಚರಿಕೆ. ಯೂಫ್ರೆಟೀಸ್ ನದೀ ಕಿನಾರೆಯ ಜನ ಸಮುದಾಯಕ್ಕೆ ದೇವ ಶಿಕ್ಷೆಯ ಕುರಿತು ಅವರು ಸ್ಪಷ್ಟವಾದ ತಾಕೀತು ನೀಡಿದರು. ಅಧರ್ಮದ ಹಾದಿಯನ್ನು ಬಿಟ್ಟು ದೇವ ಸಂದೇಶವನ್ನು ಗಮನಿಸಿರೆಂದು ಅವರು ಉಪದೇಶಿಸಿದರು. ಇಲ್ಲವಾದರೆ ನಿಮ್ಮ ಮೇಲೆ ಶಿಕ್ಷೆ ಎರಗಲಿದೆಯೆಂದೂ ಅವರು ಮುನ್ನೆಚ್ಚರಿಕೆ ನೀಡಿದರು. ಧಿಕ್ಕಾರದ ಪರಮಾವಧಿಯನ್ನು ಪ್ರದರ್ಶಿಸಿದ ಆ ಜನತೆಯ ಮೇಲೆ ಒಂದು ಭೀಕರ ಜಲಪ್ರಳಯವು ಉಕ್ಕಿ ಬಂತು. ನೂಹ್ (ಅ) ಮತ್ತು ಅವರ ಸಂಗಡಿಗರನ್ನು ಮಾತ್ರ ಸಂರಕ್ಷಿಸಿಕೊಂಡು "ನಂತರ ಅಲ್ಲಾಹನು ಇತರ ಎಲ್ಲರನ್ನೂ ನೆರೆಯಲ್ಲಿ ಮುಳುಗಿಸಿ ನಾಶ ಪಡಿಸಿದನು. ಇದರಲ್ಲಿ ನಿಮಗೆ ಕಲಿಯಬೇಕಾದ ಪಾಠವಿದೆ" (26:121,122) ಎಂದು ಪವಿತ್ರ ಖುರ್ಆನ್ ಹೇಳುತ್ತದೆ.

'ಆದ್' ಎಂಬ ಜನ ಸಮುದಾಯವನ್ನು ಅವರ ಅತಿರೇಕಗಳಿಂದ ತಡೆಯಲು ಪ್ರವಾದಿ ಹೂದ್ (ಅ) ಅವರಿಗೆ ಮುನ್ನೆಚ್ಚರಿಕೆ ನೀಡಿದರು. "ನಿಮ್ಮ ಮೇಲೆ ಬಂದೆರಗಲಿರುವ ಒಂದು ಭಯಾನಕ ವಿಪತ್ತಿನ ದಿವಸದ ಕುರಿತು ನಾನು ಭಯಪಡುತ್ತೇನೆ" (26 : 136) ಎಂದು ಅವರು ತಾಕೀತು ನೀಡಿದರು. "ಹಾಗೆ ಆ ಪ್ರವಾದಿಯನ್ನು ನಿರಾಕರಿಸಿದ ಕಾರಣಕ್ಕಾಗಿ ಆ ಜನರನ್ನು ನಾವು ನಾಶಪಡಿಸಿದೆವು" (26 : 140) ಎಂದು ಅಲ್ಲಾಹನು ಹೇಳುತ್ತಾನೆ. ಆದ್ ಸಮುದಾಯಕ್ಕೆ ಬಂದೆರಗಿದ ಶಿಕ್ಷೆಯನ್ನು ಪವಿತ್ರ ಖುರ್ಆನ್ ಈ ರೀತಿ ವರ್ಣಿಸುತ್ತದೆ: "ಆದ್ ಸಮುದಾಯದವರು ಒಂದು ತೀವ್ರಗತಿಯ ಚಂಡಮಾರುತದ ಮೂಲಕ ವಿನಾಶಗೊಳಿಸಲ್ಪಟ್ಟರು. ಭಯಂಕರವಾದ ಆ ಗಾಳಿಯನ್ನು ಅಲ್ಲಾಹನು ಅವರ ಮೇಲೆ ಅವಿರತವಾಗಿ ಏಳು ರಾತ್ರಿ ಮತ್ತು ಎಂಟು ಹಗಲುಗಳ ವರೆಗೂ ಬೀಸುವಂತೆ ಮಾಡಿದನು. (ಅದರಲ್ಲಿ ಅವರ ಸರ್ವನಾಶವಾಯಿತು). ಖರ್ಜೂರ ಮರದ ಟೊಳ್ಳಾದ ಕಾಂಡಗಳಂತೆ ಅದರಲ್ಲಿ ಅವರು ಅಪ್ಪಳಿಸಿ ಬಿದ್ದಿರುವುದನ್ನು ನೀವು ನೋಡಬಹುದಿತ್ತು. ಅವರಲ್ಲಿ ಯಾರನ್ನಾದರೂ ಉಳಿದಿರುವುದಾಗಿ ನೀವು ಕಾಣುತ್ತೀರಾ ?" (69 : 7–9)

ಸಮೂದ್ ಎಂಬ ಜನ ಸಮುದಾಯಕ್ಕೆ ಮುನ್ನೆಚ್ಚರಿಕೆ ನೀಡಲು ಪ್ರವಾದಿ ಸಾಲಿಹ್ (ಅ) ನಿಯೋಜಿಸಲ್ಪಟ್ಟರು. ಅವರ ಪ್ರವಾದಿತ್ವವನ್ನೂ ಉಪದೇಶ ನಿರ್ದೇಶಗಳನ್ನೂ ಜನರು ತಿರಸ್ಕರಿಸಿದಾಗ, ತನ್ನ ದಿವ್ಯ ಸಂದೇಶದ ಸಂಕೇತವಾಗಿ ಅವರು ಒಂದು ಒಂಟೆಯನ್ನು ಜನರಿಗೆ ತೋರಿಸುತ್ತಾ "ಓ ನನ್ನ ಜನಾಂಗದವರೇ, ಇದು ಅಲ್ಲಾಹನ ಒಂಟೆಯಾಗಿದೆ. ಇದು ನಿಮಗೆ ಒಂದು ದೃಷ್ಟಾಂತವಾಗಿರುತ್ತದೆ. ಆದುದರಿಂದ ಇದನ್ನು ನೀವು ಬಿಟ್ಟು ಬಿಡಿರಿ. ಇದು ಅಲ್ಲಾಹನ ಭೂಮಿಯಲ್ಲಿ ಮೇದು ತಿಂದುಕೊಳ್ಳಲಿ. ಇದಕ್ಕೆ ಏನೂ ಉಪದ್ರ ನೀಡಬೇಡಿರಿ'' ಎಂದು ಹೇಳಿದರು. ಆದರೆ, ಪ್ರವಾದಿ ಸಾಲಿಹರ ಮಾತನ್ನು ಆ ಜನರು ಲೆಕ್ಕಿಸಲಿಲ್ಲ. ಊರ ಪ್ರಮುಖರೂ ಮುಂದಾಳುಗಳೂ ಸೇರಿ ಆ ಒಂಟೆಯನ್ನು ಹಿಡಿದು ಕೊಂದೇ ಬಿಟ್ಟರು,

ಇದರಿಂದ ನೊಂದ ಪ್ರವಾದಿ ಸಾಲಿಹ್‌ರು ಆ ಜನರಿಗೆ ಮುನ್ನೆಚ್ಚರಿಕೆ ನೀಡಿದರು–ಕೇವಲ ಮೂರು ದಿವಸಗಳೊಳಗೆ ಅಲ್ಲಾಹನ ಅತಿ ಭಯಂಕರ ಶಿಕ್ಷೆಯು ನಿಮ್ಮ ಮೇಲೆ ಎರಗಲಿದೆ ಎಂದು, ಅವರ ತಾಕೀತು ಗುರಿ ತಪ್ಪಲಿಲ್ಲ. ಭೀಕರವಾದೊಂದು ಭೂಕಂಪದ ಮೂಲಕ ಅಲ್ಲಾಹನು ಅವರನ್ನು ನಿರ್ಮೂಲನ ಮಾಡಿದ ವೃತ್ತಾಂತವನ್ನು ಪವಿತ್ರ ಖುರ್‌ಆನ್ ವಿವರಿಸುತ್ತದೆ: "ಅಕ್ರಮ ಪ್ರವರ್ತಿಸಿದವರನ್ನು ಭಯಂಕರವಾದೊಂದು ಆಪತ್ತು ಆವರಿಸಿತು. ಹಾಗೆ ಅವರು ತಮ್ಮ ಮನೆಗಳಲ್ಲೇ ಮಣ್ಣುಪಾಲಾಗಿ ಬಿದ್ದರು, ಹಿಂದೆ ಅವರು ಅಲ್ಲಿ ವಾಸಿಸಿಯೇ ಇಲ್ಲವೆಂಬಂತೆ" (ಪವಿತ್ರ ಖುರ್‌ಆನ್ 11ನೇ ಅಧ್ಯಾಯ 65ರಿಂದ 69ರ ವರೆಗಿನ ವಚನಗಳನ್ನು ನೋಡಿರಿ.)

ಹಝ್ರತ್ ಲೂತ್(ಅ) ಕೂಡ ಓರ್ವ ಮುನ್ನೆಚ್ಚರಿಕೆಗಾರನಾಗಿದ್ದರು. ಜೋರ್ಡಾನಿನ ಸಡೂಮ್ ಎಂಬ ಪ್ರದೇಶದ ಜನರಿಗೆ ಅವರು ದೇವ ಶಿಕ್ಷೆಯ ಕುರಿತು ಮುನ್ನೆಚ್ಚರಿಕೆ ನೀಡಿದರು. ಕಾಮ ತೃಷ್ಣೆಯನ್ನು ತೀರಿಸಲು ಪ್ರಕೃತಿ ವಿರುದ್ಧವಾದ ಕ್ರಮಗಳನ್ನು ಬಳಸುತ್ತಿದ್ದ ಆ ಜನತೆಯು ಮುನ್ನೆಚ್ಚರಿಕೆಗಳನ್ನೆಲ್ಲಾ ಕಡೆಗಣಿಸಿದಾಗ ಅಲ್ಲಾಹನ ಶಿಕ್ಷೆಯು ಅವರ ಮೇಲೆ ಎರಗಿತು. "ಹಾಗೆ ನಮ್ಮ ಅಪ್ಪಣೆ ಹೊರಟಾಗ ಆ ನಾಡನ್ನೇ ನಾವು ಅಡಿಮೇಲು ಮಾಡಿಬಿಟ್ಟೆವು" (11:83) ಎಂದು ಅಲ್ಲಾಹನು ಹೇಳುತ್ತಾನೆ.

ಪ್ರವಾದಿ ಶುಐಬ್ (ಅ) ಕೂಡ ತನ್ನ ಜನರಿಗೆ ದೇವ ಶಿಕ್ಷೆಯ ಕುರಿತು ತಾಕೀತು ನೀಡಿದರು. ಅದು ಕಡೆಗಣಿಸಲ್ಪಟ್ಟಾಗ ಒಂದು ಭೂಕಂಪದ ಮೂಲಕ ಅಲ್ಲಾಹನು ಅವರನ್ನು ಶಿಕ್ಷಿಸಿದನು. "ಶುಐಬ್‌ರನ್ನೂ ಅವರಲ್ಲಿ ನಂಬಿಕೆ ಹೊಂದಿದವರನ್ನೂ ಅಲ್ಲಾಹನು ಕಾಪಾಡಿದನು. ಅಕ್ರಮ ಪ್ರವರ್ತಿಸಿಕೊಂಡಿದ್ದವರನ್ನು ಭಯಾನಕವಾದೊಂದು ಆಪತ್ತು ಹಿಡಿಯಿತು. ಹಾಗೆ ರಾತ್ರಿ ಬೆಳಗಾಗುವುದರಲ್ಲಿ ಅವರ ಮನೆಗಳಲ್ಲೇ ಅವರು ಉರುಳಿಬಿದ್ದರು'' (11:95)

''ಹಿಂದಿನ ವಂಶಗಳನ್ನು ನಾಶಪಡಿಸಿದ ನಂತರ ಮೂಸಾರಿಗೆ ನಾವು ಗ್ರಂಥವನ್ನು ನೀಡಿದೆವು'' (28:44). ಹಝ್ರತ್ ಮೂಸಾ(ಅ)ರವರ ಕಾಲದ ದೇವ ಧಿಕ್ಕಾರಿಗಳೆಂದರೆ ಈಜಿಪ್ಟಿನ ರಾಜ ಫಿರ್‌ಔನ್ ಮತ್ತು ಆತನ ಸಂಗಡಿಗರಾಗಿದ್ದರು. ಅಧಿಕಾರ ದರ್ಪದಿಂದ ಮತ್ತೇರಿದ ಫಿರ್‌ಔನ್, ಪ್ರವಾದಿ ಮೂಸಾರ ಉಪದೇಶ ನಿರ್ದೇಶಗಳನ್ನು ಪರಿಹಾಸ್ಯಮಾಡಿ ತಿರಸ್ಕರಿಸಿದ. ಅಹಂಭಾವ, ಧಿಕ್ಕಾರ, ಪರಿಹಾಸ್ಯ, ದೌರ್ಜನ್ಯ – ಹಝ್ರತ್ ಮೂಸಾ(ಅ) ಮತ್ತು ಅವರ ಸಂಗಡಿಗರೊಡನೆ ಫಿರ್‌ಔನ್ ಅತಿ ಕ್ರೂರವಾಗಿ ವರ್ತಿಸಿದನು. ಕ್ರೌರ್ಯವು ಸಹಿಸಲಸಾಧ್ಯವಾದ ಮಟ್ಟವನ್ನು ತಲಪಿದಾಗ ಮೂಸಾ ಹೇಳಿದರು: "ತನ್ನ ಬಳಿಯಿಂದ ಮಾರ್ಗದರ್ಶನ ತಂದವರು ಯಾರೆಂಬುದನ್ನು ನನ್ನ ರಕ್ಷಕನಾದ ದೇವನು ಚೆನ್ನಾಗಿ ಬಲ್ಲವನಾಗಿದ್ದಾನೆ ಅಂತೆಯೇ ಈ ಲೋಕದಲ್ಲಿ ಅಂತಿಮ ವಿಜಯ ಯಾರಿಗೆಂಬುದನ್ನೂ ಸಹ ಅವನು ಬಲ್ಲನು. ಖಂಡಿತವಾಗಿಯೂ ಅಕ್ರಮಿಗಳು ಯಾವತ್ತೂ ಸಫಲರಾಗುವುದಿಲ್ಲ." (28 : 38)

ಅದೊಂದು ಮುನ್ನೆಚ್ಚರಿಕೆಯಾಗಿತ್ತು. ಆದರೆ, ಅದರಿಂದ ಪ್ರಯೋಜನ ಪಡೆಯಲು ಫಿರ್‌ಔನನಿಗೆ ಸಾಧ್ಯವಾಗಲಿಲ್ಲ. ಆದರೂ ಆ ರಾಜನೊಡನೆ ಒಂದು ಬಲಪರೀಕ್ಷೆ ನಡೆಸಲು ಬಯಸದೆ ಹಝ್ರತ್ ಮೂಸಾ ಮತ್ತು ಸಂಗಡಿಗರು ಕೆಂಪು ಸಮುದ್ರವನ್ನು ದಾಟಿ ಈಜಿಪ್ಟಿನಿಂದ ಪಲೆಸ್ತೀನಿಗೆ ಹೋಗಲು ತೀರ್ಮಾನಿಸಿದರು. ಇದನ್ನು ತಿಳಿದ ಫಿರ್‌ಔನ್ ತನ್ನ ಸೇನಾಬಲ ಸಮೇತನಾಗಿ ಪ್ರವಾದಿ ಮೂಸಾರನ್ನು ಹಿಂಬಾಲಿಸಿದ. ಹ। ಮೂಸಾ (ಅ) ಮತ್ತು ಅವರ ಅನುಯಾಯಿಗಳು ಕೆಂಪು ಸಮುದ್ರವನ್ನು ದಾಟಿ ಸುರಕ್ಷಿತವಾಗಿ ಆಚೆ ದಡ ಸೇರಿದರೆ, ಫಿರ್‌ಔನ್ ತನ್ನ ಸಮಸ್ತ ಸೇನಾನಾಯಕರೊಂದಿಗೆ ಅದೇ ಸಮುದ್ರದಲ್ಲಿ ಮುಳುಗಿ ಸತ್ತುಹೋದ. ಅಲ್ಲಾಹನು ಹೇಳುತ್ತಾನೆ: "ಹಾಗೆ ಅವನನ್ನೂ ಅವನ ಸೇನಾನಾಯಕರನ್ನೂ ನಾವು ಹಿಡಿದೆವು; ಅವರನ್ನು ನಾವು ಸಮುದ್ರಕ್ಕೆ ಬಿಸಾಡಿಬಿಟ್ಟೆವು. ಅಕ್ರಮಿಗಳ ಪರ್ಯಾವಸಾನ ಹೇಗಿತ್ತೆಂಬುದನ್ನು ನೋಡಿರಿ" (28 : 41)

ಒಟ್ಟಿನಲ್ಲಿ ಹೇಳುವುದಾದರೆ, ಎಲ್ಲಾ ಪ್ರವಾದಿಗಳೂ ದೇವಶಿಕ್ಷೆಯ ಕುರಿತು ಮುನ್ನೆಚ್ಚರಿಕೆ ನೀಡಿದವರಾಗಿದ್ದರು. ದುರಂತಗಳ ಬಗ್ಗೆ ನೀಡಲಾದ ತಾಕೀತುಗಳು ತಿರಸ್ಕರಿಸಲ್ಪಟ್ಟಾಗ ಅಹಂಕಾರಿಗಳಾದ ಜನರ ಮೇಲೆ ಅಲ್ಲಾಹನ ಶಾಪವೂ ನಾಶವೂ ಎರಗಿತು. ಇಂತಹ ವಿವರಣೆಗಳಿಂದ ಪವಿತ್ರ ಖುರ್‌ಆನ್ ತುಂಬಿರುತ್ತದೆ. ಇದರಿಂದ ನೀವು ಪಾಠ ಕಲಿಯಿರಿ ಎಂದು ಸಹ ಪವಿತ್ರ ಖುರ್‌ಆನ್ ನಮ್ಮೊಡನೆ ಅವಶ್ಯಪಡುತ್ತದೆ.

ಆದರೆ, 'ಸನ್ಮಾರ್ಗ'ದ ಲೇಖಕರು ಧಿಕ್ಕಾರದಿಂದ ಪ್ರಶ್ನಿಸುತ್ತಾರೆ–ಕೇವಲ ದುರಂತಗಳಿಗಾಗಿಯೇ ಈ ಪ್ರವಾದಿಗಳನ್ನು ದೇವನು ಕಳುಹಿಸಿದನೇ ಎಂದು. "ಈ ಲೋಕದಲ್ಲಿ ಅವರ ಮೇಲೆ ನಾವು ಶಾಪವನ್ನು ಹೇರಿರುತ್ತೇವೆ" (28 : 43) ಎಂದು ಧಿಕ್ಕಾರಿಗಳ ಕುರಿತು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹು ಹೇಳಿರುವನು. ಅಲ್ಲಾಹನೇ ಅವನ ಸೃಷ್ಟಿಗಳ ಮೇಲೆ ಶಾಪ ಹೇರಿದನು ಎಂದು. ಅವರನ್ನು ಅತಿ ಭಯಾನಕವಾದ ದುರಂತಗಳಿಗೆಬಲಿಯಾಗುವಂತೆ ಮಾಡಿದನು. ಭೂಕಂಪ, ನೆರೆಹಾವಳಿ, ಮಹಾಮಾರಿ, ಅಗ್ನಿವಿಕೋಪ ಮೊದಲಾದ ದುರಂತಗಳ ಮೂಲಕ ಅವರನ್ನು ನಿರ್ಮೂಲನ ಮಾಡಿದನು. ಲೋಕದಲ್ಲಿ ಸಂಭವಿಸಿದ ಈ ವಿಪತ್ತುಗಳನ್ನೆಲ್ಲಾ ಅಲ್ಲಾಹನು ತನ್ನ "ಖಾತೆಗೆ ಜಮಾ" ಮಾಡಿದ್ದಾನೆ. ಅಥವಾ ಈ 'ಮರಣವಾರ್ತೆ'ಗಳನ್ನೆಲ್ಲಾ ವಿವರಿಸುತ್ತಾ ಅಲ್ಲಾಹನು ಅವುಗಳನ್ನೆಲ್ಲಾ ತನ್ನ ಪ್ರವಾದಿಗಳ "ಖಾತೆಗೆ" ಜಮಾ ಮಾಡಿರುವನು. ಆದರೆ, ಈದುರಂತಗಳಿಗೆ ಮುಂಚಿತವಾಗಿಯೇ ಜನರಿಗೆ ತಾಕೀತು ನೀಡಲಾಗುತ್ತಿಂಬುದನ್ನು ಸಹ ಪವಿತ್ರ ಖುರ್‌ಆನ್ ನಮಗೆ ತಿಳಿಸಿಕೊಡುತ್ತದೆ. ಪ್ರವಾದಿಗಳ ಮುನ್ನೆಚ್ಚರಿಕೆಗಳನ್ನು ಲೆಕ್ಕಿಸದೆ ಧಿಕ್ಕಾರದಿಂದ ವರ್ತಿಸಿದವರ ಮೇಲೆ ಈ ಅನಾಹುತಗಳು ಎರಗಿದವು.

ಪ್ರವಾದಿಗಳನ್ನು ಕಳುಹಿಸಿದ್ದು ಯಾಕೆ ಎಂಬ ಪ್ರಶ್ನೆಗೆ ಪವಿತ್ರ ಖುರ್‌ಆನಿನ ಮೂಲಕ ನಾವು ಈಗ ಉತ್ತರ ಕಂಡುಕೊಂಡಿದ್ದೇವೆ. ದುರಂತಗಳಿಗೆ ಬಲಿಯಾಗಬೇಕಾದವರು ಆ ರೀತಿ ಆಗಲೇಬೇಕಲ್ಲವೇ. ಅಬೂಜಹಲ್, ಅಬೂಲಹಬ್ ಮೊದಲಾದವರಿಗೆ ಮರಣವಾರ್ತೆಗಳನ್ನೂ ದುರಂತಗಳನ್ನೂ ಅಲ್ಲದೆ, ಮುಹಮ್ಮದ್ ಪೈಗಂಬರ್ (ಸ)ರು ಮತ್ತೇನನ್ನು ತಾನೆ ಭವಿಷ್ಯ ನುಡಿಯಲು ಸಾಧ್ಯ? "ಅಬೂಲಹಬನ ಎರಡು ಕೈಗಳೂ ನಾಶಗೊಂಡವು. ಸ್ವತಹ ಅವನೂ ನಾಶಗೊಂಡನು" (111 : 2) ಇದು ಒಂದು ಭವಿಷ್ಯವಾಣಿಯಾಗಿತ್ತು. ಮುಹಮ್ಮದ್ ಪೈಗಂಬರರ ಈ ಭವಿಷ್ಯವಾಣಿ ಅಕ್ಷರಶಃ ಪೂರ್ತಿಗೊಂಡಿತು. ಅಬೂಲಹಬನ ವರಮಾನದ ಪ್ರಧಾನ ಮಾರ್ಗವು ತಕ್ಷಣದಿಂದಲೇ ನಿಂತುಹೋಯಿತು. ಬದ್ರ್ ಯುದ್ಧದಲ್ಲಿ ಆತನ ಎಲ್ಲಾ ಸಂಗಾತಿಗಳೂ ಸಹಾಯಕರೂ ಕೊಲ್ಲಲ್ಪಟ್ಟರು. ತನ್ನ ಪ್ರಾಣವನ್ನು ರಕ್ಷಿಸಿಕೊಳ್ಳುವ ಸಲುವಾಗಿ ಆತನು ರಣರಂಗಕ್ಕೆ ಹೋಗಲಿಲ್ಲವಾದರೂ ಅಲ್ಲಾಹನ ಯಾತನೆ ಮತ್ತು ಶಿಕ್ಷೆಯಿಂದ ತನ್ನನ್ನು ರಕ್ಷಿಸಿಕೊಳ್ಳಲು ಆತನಿಂದ ಸಾಧ್ಯವಾಗಲಿಲ್ಲ. ಬದ್ರ್ ಯುದ್ಧದ 7ನೇ ದಿವಸ ಸಿಡುಬು ರೋಗದಲ್ಲಿ ಬಿದ್ದು ಅದರಲ್ಲೇ ನಾಶಹೊಂದಿದನು. ಸಾಂಕ್ರಾಮಿಕ ರೋಗವಾದ ಸಿಡುಬು ತಮಗೂ ತಗಲುವುದೆಂಬ ಭಯದಿಂದ ಅವನ ಮಕ್ಕಳು ಕೂಡ ಎರಡು ಮೂರು ದಿನಗಳ ವರೆಗೂ ಅವನ ಶವದ ಹತ್ತಿರ ಸುಳಿಯಲಿಲ್ಲ. ಕೊನೆಗೆ ಆತನ ಶವವು ಕೊಳೆತು ವಾಸನೆ ಬರತೊಡಗಿದ್ದಾಗ ಜನರು ಅಪಮಾನಿಸತೊಡಗಿದ ಮೇಲೆ ಅದನ್ನು ಒಂದು ವಿಶೇಷ ವಿಧಾನದಿಂದ ಅಂದರೆ ಅದನ್ನು ಎಳಕೊಂಡುಹೋಗಿ ಒಂದು ಗೋಡೆಯ ಬಳಿ ಹಾಕಿ ದೂರದಿಂದಲೇ ಕಲ್ಲು ಮತ್ತು ಇತರ ಘನ ವಸ್ತುಗಳನ್ನು ಎಸೆದು ಅದನ್ನು ಮರೆಯಾಗುವಂತೆ ಮಾಡಿದರು. ಅವನ ಸ್ವತ್ತಾಗಲೀ ಸ್ವಂತ ಸಂತಾನವಾಗಲೀ ಅವನಿಗೆ ಉಪಯೋಗಕ್ಕೆ ಬರಲಿಲ್ಲ. (ದಿವ್ಯ ಕುರ್‌ಆನ್ ನೋಡಿರಿ)

ಇಷ್ಟೆಲ್ಲಾ ಪವಿತ್ರ ಖುರ್‌ಆನಿನಿಂದಲೂ ಮತ ಚರಿತ್ರೆಯಿಂದಲೂ ನಮಗೆ ತಿಳಿಯುವಾಗ ನಮ್ಮ ಮನಸ್ಸಿನಲ್ಲಿ ಏನು ತೋಚುತ್ತದೆ? ಅಬೂಲಹಬನಿಗಾಗಿ ಕಣ್ಣೀರು ಸುರಿಸಲು ಯಾರಿಗಾದರೂ ತೋರುತ್ತದೆಯೇ? ತನ್ನ ಭವಿಷ್ಯವಾಣಿಗಳ ಮೂಲಕ ಅಬೂಲಹಬನನ್ನು ಈ ರೀತಿಯ ಶಾಪಶಿಕ್ಷೆಗೆ ಗುರಿಪಡಿಸಿ ಈ ದುರಂತವನ್ನು ತನ್ನ ಖಾತೆಗೆ ಜಮಾ ಮಾಡಿದ ಹ। ಮುಹಮ್ಮದ್ ಪೈಗಂಬರರ ಕುರಿತು "ದುರಂತಗಳಿಗಾಗಿ ದೇವನು ಈ ಪ್ರವಾದಿಯನ್ನು ಕಳುಹಿಸಿದನೇ?" ಎಂದು 'ಸನ್ಮಾರ್ಗ'ದ ಲೇಖಕರಿಗೆ ಅನಿಸುತ್ತಿದೆಯೇ? ಅಥವಾ "ಪ್ರವಾದಿಗಳ ನೇಮಕವು ಅನುಗ್ರಹವೆಂಬ ಪೂರ್ವ ಪ್ರವಾದಿಗಳ ಹೇಳಿಕೆಯನ್ನು" ಈ ಸಂಭವದ ಬೆಳಕಿನಲ್ಲಿ "ತಿದ್ದಬೇಕಾದೀತೆಂದು" 'ಸನ್ಮಾರ್ಗ'ದವರು ತಿಳಿಯುತ್ತಾರೆಯೇ?

## ಜನರಲ್ ಜಿಯಾಉಲ್ ಹಕ್

ಇನ್ನು ಹೇಳಬೇಕಾಗಿರುವುದು ಜ। ಜಿಯಾರ ಕುರಿತು. ಅಹ್ಮದೀಯರ ವಿರುದ್ಧ ಜಿಯಾರ ಅವಹಾನಕರ ವರ್ತನೆಗಳ ಬಗ್ಗೆ 'ಸನ್ಮಾರ್ಗ'ದ ಲೇಖನದಿಂದಲೇ ಅದರ ಓದುಗರಿಗೆ ಒಂದು ಚಿಕ್ಕ ವರ್ಣನೆ ಲಭಿಸುತ್ತದೆ. "ಇಸ್ಲಾಮಿನ ಸಮ್ಮಿಶ್ರಣದಿಂದ ಕಾದಿಯಾನಿಯನ್ನು

ಗುರುತಿಸಲು ಕಷ್ಟವಾಗಬಾರದೆಂದು, ಅವರು ಇಸ್ಲಾಮಿನ ಸಂಕೇತಗಳನ್ನು ಬಳಸುವುದನ್ನು ರಿಯಾ ಕಾನೂನು ಮೂಲಕ ನಿಷೇಧಿಸಿದರು. ಕಾದಿಯಾನಿಗಳ ಮಸೀದಿಗಳಲ್ಲಿ 'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾ' ಎಂಬ ಸಾಕ್ಷ್ಯ ವಚನವನ್ನು ಬರೆಯುವುದು, ಕಾದಿಯಾನಿ ಮಸೀದಿಗಳಲ್ಲಿ ಮುಸ್ಲಿಮರಂತೆ ಅದಾನ್ ನೀಡುವುದು ಇತ್ಯಾದಿಗಳಿಂದ ಹೊಸಬರಾರೂ ವಂಚಿತರಾಗಬಹುದೆಂಬ ನೆಲೆಯಲ್ಲಿ ಅವುಗಳನ್ನು ನಿಷೇಧಿಸಲಾಯಿತು." ಹಾಗಾದರೆ, ಈಗ ನೀವು ಸತ್ಯ ನುಡಿಯಲು ಕಲಿತಿದ್ದೀರಿ ಎಂದು ಭಾಸವಾಗುತ್ತದೆ. ಕಾದಿಯಾನಿಗಳ ಕಲಿಮವು لا اله الا الله محمد رسول الله "ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್" ಎಂಬುದೇ ಆಗಿರುತ್ತದೆ; ಕಾದಿಯಾನಿಗಳ ಮಸೀದಿಗಳಲ್ಲಿ ಮುಸ್ಲಿಮರಂತೆಯೇ ಅದಾನ್ (ಬಾಂಗ್) ನೀಡಲಾಗುತ್ತದೆ. ಅವರು ಇಸ್ಲಾಮಿನ ಎಲ್ಲಾ ಸಂಕೇತಗಳನ್ನೂ ಬಳಸುತ್ತಾರೆ. ಅಂದರೆ ಮುಸ್ಲಿಮನಾಗಿರಬೇಕಾದರೆ ಏನೇನು ಆಚಾರ ವಿಚಾರಗಳು ಇರಬೇಕೋ, ಅವೆಲ್ಲವೂ ಕಾದಿಯಾನಿಗಳಲ್ಲಿ ಎದ್ದುಕಾಣುತ್ತವೆ. ಈ ಸತ್ಯ ಸಂಗತಿಗಳನ್ನು ಬಹಿರಂಗಪಡಿಸಿದ 'ಸನ್ಮಾರ್ಗ'ದವರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ. ಒಂದು ನೂರು ವರ್ಷಗಳಿಂದಲೂ ಮುಲ್ಲಾ ಮೌಲಾನಾಗಳು ಇದಕ್ಕೆ ವಿರುದ್ಧವಾಗಿ ಹೇಳುತ್ತಾ, ಪ್ರಚಾರಪಡಿಸುತ್ತಾ ಬಂದಿದ್ದಾರಲ್ಲಾ. ಮಾತ್ರವಲ್ಲ ಈಗಲೂ ಸಹ ಸಮಯ ಸಿಕ್ಕಿದರೆ ಅದೇ ಪ್ರಚಾರ ನಡೆಸುತ್ತಾರಲ್ಲಾ. ಅಂಥವರ ಕಣ್ಣು ತೆರೆಸಲಿಕ್ಕಾದರೂ 'ಸನ್ಮಾರ್ಗ'ದ ಈ ವಿವರಣೆ ಪ್ರಯೋಜನಕಾರಿಯಾಗಬಹುದೆಂದು ನಾವು ಭಾವಿಸುತ್ತೇವೆ. ಆದರೆ ನಮಗೆ ಒಂದು ಸಂಶಯವಿದೆ. ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್ ಎಂಬ ಶಹಾದತ್ ಕಲಿಮವನ್ನು ಬರೆದಿಟ್ಟರೆ ಅಥವಾ ಉಚ್ಚರಿಸಿದರೆ, ಮಸೀದಿಗಳಲ್ಲಿ ಅದಾನ್ ಕರೆಕೊಟ್ಟರೆ, ಇಸ್ಲಾಮಿನ ಆಚಾರ ವಿಚಾರಗಳನ್ನು ಜೀವನದಲ್ಲಿ ಬಳಸಿಕೊಂಡರೆ ಅದರಿಂದ ಇತರರು ವಂಚಿತರಾಗುವುದು ಹೇಗೆಂಬುದು ನಮಗೆ ಎಷ್ಟು ಯೋಚಿಸಿಯೂ ಅರ್ಥವಾಗಲಿಲ್ಲ. ಇವೆಲ್ಲವೂ ಜನರನ್ನು ವಂಚಿಸುವ ಅಥವಾ ಮೋಸಗೊಳಿಸಲು ಬಳಸಲಾಗುವ ಸಂಗತಿಗಳೇ? 'ಸನ್ಮಾರ್ಗ'ದವರ ತಲೆಬುಡವಿಲ್ಲದ ಈ ತರ್ಕದ ಪ್ರಕಾರ, ನವೂದುಬಿಲ್ಲಾಹ್, ಮನುಷ್ಯ ವಂಶವನ್ನು ಮೊತ್ತಮೊದಲು ವಂಚಿಸಿದ್ದು ಪ್ರವಾದಿ ಮುಹಮ್ಮದರು ಎಂದು ಹೇಳಬೇಕಾದೀತು! (ಅಲ್ಲಾಹನು ಕ್ಷಮಿಸಲಿ.)

ಇಸ್ಲಾಮಿಕ ಸಂಪ್ರದಾಯಗಳನ್ನು ಕಾನೂನು ಮೂಲಕ ತಡೆಯಲು ಹೊರಟ 'ಮಹಾಮನುಷ್ಯ' ಜಿಯಾರ ಕುರಿತು ನಾವಿನ್ನು ಏನು ಹೇಳಬೇಕಾಗಿದೆ? ಇಸ್ಲಾಮಿನ ಆಚಾರ ವಿಚಾರಗಳೆಲ್ಲವೂ ಜಿಯಾರಿಗೆ ವೈಯಕ್ತಿಕವಾಗಿ ಅಲರ್ಜಿಯಾಗಿದ್ದರೂ ಕೂಡ ಓರ್ವ ರಾಷ್ಟ್ರ ನೇತಾರನೆಂಬ ನೆಲೆಯಲ್ಲಿ ಮತ ಸ್ವಾತಂತ್ರ್ಯದ ಕುರಿತಾದರೂ ಅವರು ಸ್ವಲ್ಪ ಆಲೋಚಿಸಬೇಕಾಗಿತ್ತು. ಇಸ್ಲಾಮಿನ ಆಚಾರ ವಿಚಾರಗಳನ್ನು ಅವರು ಅಧಿಕಾರದ ಮೂಲಕ ದಮಿಸಿದ್ದು ಯಾವ ಕಾರಣಕ್ಕೂ ಸರಿಯಾಗಲಿಲ್ಲ. ಮತ ಸ್ವಾತಂತ್ರ್ಯದ ಉನ್ನತವಾದ ತತ್ವಗಳನ್ನು ಲೋಕಕ್ಕೆ ಸಂಭಾವನೆಯಿತ್ತ ಇಸ್ಲಾಂ ಧರ್ಮದ ಮೌಲ್ಯಗಳನ್ನು ಗಾಳಿಗೆ ತೂರುತ್ತಾ ಮಾನವೀಯ ಮೂಲಭೂತ ಹಕ್ಕುಗಳನ್ನು ಕೂಡ ಅಹ್ಮದೀಯರಿಗೆ ಪಾಕಿಸ್ತಾನದಲ್ಲಿ ಜ। ಜಿಯಾ ನಿಷೇಧಿಸಿದರು. ಅಧಿಕಾರದ ದಂಡವನ್ನು ಅವರು ಅದಕ್ಕಾಗಿ ಬಳಸಿದರು. ಓರ್ವ ನಿರಂಕುಶ ಸ್ವೇಚ್ಛಾಧಿಪತಿಯು ಒಂದು ಅಲ್ಪಸಂಖ್ಯಾತ ವಿಭಾಗದವರೊಡನೆ ಈ ರೀತಿಯಲ್ಲಿ ವರ್ತಿಸಿದರೆ ಆ ವಿಭಾಗದ ಜನರು ಅಲ್ಲಿ ಎಷ್ಟು ಯಾತನೆಗಳನ್ನು ಅನುಭವಿಸಿರಬಹುದು ಎಂಬುದು ಯಾರಿಗೂ ಊಹಿಸಲು ಸಾಧ್ಯವಿರುವ ಸಂಗತಿಯಾಗಿದೆ. ಇಸ್ಲಾಂ ಧರ್ಮದ ಮೇಲೆ ಹಾಗೂ ಮಾನವೀಯತೆಯ ಮೇಲೆ ನಡೆದ ಈ ಘೋರ ಅತ್ಯಾಚಾರವನ್ನು ಖಂಡಿಸುವುದರ ಬದಲು 'ಸನ್ಮಾರ್ಗ'ದ ಲೇಖಕರು ಅದನ್ನು ಅನುಮೋದಿಸುತ್ತಿರುವುದು ನಿಜಕ್ಕೂ ಅವರ ತಲೆಬುಡವಿಲ್ಲದ ನೀತಿಗೆ ಒಂದು ಪುರಾವೆಯಾಗಿದೆ.

ಜನರಲ್ ಜಿಯಾರ ಕಡೆಗೇ ಬರೋಣ. ಜಿಯಾ ಒಂದು ವಿಮಾನ ಅಪಘಾತದಲ್ಲಿ ಮಡಿದರು. ನಮ್ಮ ಪ್ರತಿಕ್ರಿಯೆ ದುಃಖವೋ ಅಥವಾ ಸಂತೋಷವೋ ಎಂದು ಕೇಳಿದರೆ, ಎರಡೂ ಸಹ ನಮಗೆ ಇವೆ ಎಂಬುದೇ ಸತ್ಯಸಂಧವಾದ ಉತ್ತರ. ಒಂದು ದುರಂತ ಸಂಭವಿಸುವಾಗ, ಅದರಲ್ಲಿ ಜನರು ಹತ್ಯೆಗೀಡಾಗುವಾಗ ದುಃಖವು ತಾನಾಗಿಯೇ ಮನಸ್ಸನ್ನು ಆವರಿಸುತ್ತದೆ. ಜ। ಜಿಯಾರ

ಮರಣವು ನಮ್ಮಲ್ಲಿ ದುಃಖವನ್ನುಂಟುಮಾಡಿದ್ದರೆ ಅದು ಸ್ವಾಭಾವಿಕವೇ ಆಗಿದೆ. ಮನುಷ್ಯ ಸಹಜವಾದ ಒಂದು ಗುಣ. ಖಂಡಿತವಾಗಿಯೂ ಆಕಾಶದಲ್ಲಿ ಸಂಭವಿಸಿದ ಆ ದುರಂತವು ನಮಗೆ ವೇದನೆಯನ್ನುಂಟುಮಾಡಿದೆ.

ಆದರೆ, ಈ ಸಂಭವವನ್ನು ಕೇವಲ ಒಂದು ದುರ್ಘಟನೆ ಎಂದು ಮಾತ್ರ ನಾವು ಪರಿಗಣಿಸುವುದಿಲ್ಲ. "ಬಿಹಾರದ ಭೂಕಂಪ ಮತ್ತು ಕೇರಳದ ರೈಲು ದುರಂತವೂ" ದುರಂತಗಳೇ ಆಗಿವೆ. ಭೂಕಂಪಗಳಿಗೆ ಕಾರಣ ಪ್ರಕೃತಿಯೊಂದಿಗೆ ಸಂಬಂಧಪಟ್ಟ ವಿಷಯಗಳಾದರೆ, ರೈಲು ದುರಂತಕ್ಕೆ ಮನುಷ್ಯನ ಅಜಾಗರೂಕತೆ ಕಾರಣವಾಗಿದೆ. ಆ ರೀತಿಯ ದುರಂತಗಳು ಯಾವಾಗಲಾದರೊಮ್ಮೆ ಸಂಭವಿಸುತ್ತಲೇ ಇರುತ್ತವೆ. ಆ ರೀತಿಯ ದುರಂತಗಳಿಗೆಲ್ಲಾ ಸ್ಪಷ್ಟವಾದ ಕಾರಣಗಳನ್ನು ಕಂಡುಹಿಡಿಯಲು ಸಹ ಸಾಧ್ಯವಾಗುತ್ತದೆ. ಆದರೆ, 1988ನೇ ಆಗಸ್ಟ್ 17ರಂದು ಆಕಾಶದಲ್ಲಿ ಸಂಭವಿಸಿದ ಈ ದುರಂತವು ಖಂಡಿತವಾಗಿಯೂ ಇತರ ಎಲ್ಲಾ ದುರಂತಗಳ ವರ್ಗದಿಂದ ಬೇರ್ಪಟ್ಟು ನಿಲ್ಲುತ್ತದೆ. ಇದು ನಮ್ಮ ವಿಶ್ವಾಸದ ಒಂದು ಭಾಗ ಎಂಬುದನ್ನು 'ಸನ್ಮಾರ್ಗ'ದವರಿಗೆ ತಿಳಿಸಬಯಸುತ್ತೇವೆ.

ಜಗತ್ತಿನಲ್ಲಿ ಸಂಭವಿಸುವ ದುರಂತಗಳನ್ನೆಲ್ಲಾ "ತಮ್ಮ ಪ್ರವಾದಿಯ ಖಾತೆಗೆ ಜಮೆಗೊಳಿಸುವುದು ಕಾದಿಯಾನಿಗಳ ಸ್ವಭಾವವಾಗಿದೆ" ಎಂಬುದಾಗಿ ಲೇಖಕರು ಅಪಹಾಸ್ಯ ಮಾಡುತ್ತಾರೆ. ಜಿಯಾರಿಗೆ ಅಂತ್ಯ ತಂದ ಈ ವಿಮಾನ ದುರಂತಕ್ಕೂ ತಮ್ಮ ಖಲೀಫರ ಶಾಪ ಪ್ರಾರ್ಥನೆ (ಮುಬಾಹಲ) ಕಾರಣವೆಂದು ಕಾದಿಯಾನಿಗಳು ಪ್ರಚಾರ ಮಾಡುತ್ತಾರೆ ಎಂದು ಸಹ 'ಸನ್ಮಾರ್ಗ' ಹೇಳುತ್ತದೆ. ಜಿಯಾರ ಮರಣವು ಒಂದು ಆಕಸ್ಮಿಕ ಸಂಭವವೆಂದೂ ಅವರು ಮರಣಗೊಂಡ ನಂತರವಷ್ಟೇ ಅದಕ್ಕೆ ಖಲೀಫರೊಂದಿಗೆ ಮಾಡಿದ ಮುಬಾಹಲ ಕಾರಣವೆಂದು ಕಾದಿಯಾನಿಗಳು ಪ್ರಚಾರ ಮಾಡುತ್ತಿರುವುದಾಗಿಯೂ ಲೇಖಕರು ದೂರುತ್ತಾರೆ.

ಬಲು ದೊಡ್ಡ ತಪ್ಪು. ಜಿಯಾಉಲ್‌ಹಕ್‌ರಿಗೆ ಬರಲಿದ್ದ ವಿನಾಶವು ನಿರ್ಣಯಿಸಲ್ಪಟ್ಟ ದುರಂತ ಎಂಬುದರಲ್ಲಿ ನಮಗೆ ಎಳ್ಳಷ್ಟೂ ಸಂಶಯವಿಲ್ಲ. ಕೆಂಪು ಸಮುದ್ರವನ್ನು ದಾಟಿ ಪ್ರವಾದಿ ಮೂಸಾ ಮತ್ತು ಅನುಯಾಯಿಗಳು ಸುರಕ್ಷಿತರಾದರು. ಆದರೆ, ಫಿರ್‌ಔನ್ ಮತ್ತು ಆತನ ಸೈನಿಕರು ಅದೇ ಸಮುದ್ರದಲ್ಲಿ ಮುಳುಗಿ ಸತ್ತು ಹೋಗುತ್ತಾರೆ. ಫಿರ್‌ಔನನ ಆ ದುರಂತವು ಮೊದಲೇ ನಿರ್ಣಯಿಸಲ್ಪಟ್ಟದ್ದಾಗಿತ್ತು. ಅದೇ ರೀತಿ ಈ ಆಧುನಿಕ ಫಿರ್‌ಔನನ ವಿನಾಶವೂ ಸಹ ನಿರ್ಣಯಿಸಲ್ಪಟ್ಟದ್ದೇ ಆಗಿತ್ತು. ಕೆಲವು ಸಮಯದ ಹಿಂದೆ ಹಝ್ರತ್ ಖಲೀಫತುಲ್ ಮಸೀಹ್ ಮಿರ್ಝಾ ತಾಹಿರ್ ಅಹ್ಮದ್ ಅವರು ಪಾಕಿಸ್ತಾನವನ್ನು ಬಿಟ್ಟು ಆಕಾಶ ಮಾರ್ಗವಾಗಿ ಬೇರೊಂದು ದೇಶಕ್ಕೆ ತೆರಳಿದರು. ಕಾರಣ ಜಿಯಾರ ಕ್ರೌರ್ಯ. ಖಲೀಫ ಮತ್ತು ಸಹಚರರನ್ನು ದಸ್ತಗಿರಿ ಮಾಡುವ ಅವರ ಕ್ರೂರ ಹಂಚಿಕೆಯೂ ಅದರೊಂದಿಗೆ ಪರಾಭವಗೊಂಡಿತು. ಈಗ ಸ್ವಲ್ಪ ಕಾಲದ ನಂತರ ಆಕಾಶದಲ್ಲಿಯೇ ಜನರಲ್ ಜಿಯಾ ದುರಂತಕ್ಕೀಡಾಗುತ್ತಾರೆ! ಮಹೋನ್ನತನೂ ಎಲ್ಲವನ್ನೂ ಬಲ್ಲವನೂ ಆದ ಅಲ್ಲಾಹನ ಒಂದು ದೃಷ್ಟಾಂತವಾಗಿ ಮಾತ್ರವೇ ನಮಗೆ ಇದನ್ನು ಕಾಣಲು ಸಾಧ್ಯ.

ಈ ಮಹಾ ವಿಪತ್ತು ಮೊದಲೇ ಭವಿಷ್ಯ ನುಡಿಯಲ್ಪಟ್ಟದ್ದು ಎಂಬುದರಲ್ಲಿ ಲೇಖಕರು ಸಂಶಯಪಡಬೇಕಾದ ಅಗತ್ಯವಿಲ್ಲ. ಸ್ಪಷ್ಟವಾದ ಭವಿಷ್ಯವಾಣಿಯಿಂದೆ. ಪಾಕಿಸ್ತಾನದಲ್ಲಿ ಅಹ್ಮದೀಯರ ಮೇಲೆ ನಡೆಯುತ್ತಿರುವ ದಬ್ಬಾಳಿಕೆಗಳು ಅಸಹನೀಯವಾದಾಗ ಪಾಕ್ ಅಧ್ಯಕ್ಷ ಜನರಲ್ ಜಿಯಾರನ್ನು ಪ್ರಥಮ ಸಂಬೋಧಿತನಾಗಿ ಹೆಸರಿಸಿಕೊಂಡು 1988 ಜೂನ್ 10ನೇ ಶುಕ್ರವಾರದ ಖುತ್‌ಬಾ ಪ್ರವಚನದಲ್ಲಿ ಖಲೀಫತುಲ್ ಮಸೀಹ್ ಅವರು ಮುಬಾಹಲ ಪ್ರಾರ್ಥನೆಯ ಪಂಥಾಹ್ವಾನವನ್ನು ಒಡ್ಡಿದರು. ಅವರು ಜ।ಜಿಯಾರನ್ನು ಸಂಬೋಧಿಸುತ್ತಾ, ಮುಬಾಹಲ ಪಂಥಾಹ್ವಾನವನ್ನು ಬಹಿರಂಗವಾಗಿ ಸ್ವೀಕರಿಸಲು ತನ್ನ ಉನ್ನತ ಸ್ಥಾನಮಾನಗಳು ಅಡ್ಡಿಯಾಗುವುದಾದರೆ, ಆದಷ್ಟು ಬೇಗನೇ ಹಿಂಸೆಯಿಂದ ಹಿಂದೆ ಸರಿಯಲು ಶ್ರಮಿಸಬೇಕೆಂದೂ ಉಪದೇಶಿಸಿದ್ದರು. ಈ ರೀತಿ ಉಪದೇಶ ನೀಡಿದ ನಂತರವೇ ಜ।ಜಿಯಾರನ್ನು ಎದುರು ಪಕ್ಷದ ಒಂದನೇ ಸ್ಥಾನದಲ್ಲಿರಿಸಿ ಮುಬಾಹಲ ಪಂಥಾಹ್ವಾನವನ್ನು ಘೋಷಿಸಿದ್ದು. ಮುಬಾಹಲದ ಪ್ರತಿಯನ್ನು ಅಂಚೆ ಮೂಲಕ ಜ। ಜಿಯಾರಿಗೆ ಕಳುಹಿಸಲಾಗಿತ್ತು. ಖಲೀಫರ ಖುತ್‌ಬಾ ಪ್ರವಚನಗಳ

ಕ್ಯಾಸೆಟ್‌ಗಳನ್ನು ಅವರು ಆಲಿಸಿ ಕೇಳುತ್ತಿದ್ದರು. "ಕೊನೆಯ ದಿನಗಳಲ್ಲಿ ಅಧ್ಯಕ್ಷ ಜಿಯಾ ಅವರು ಅಸ್ವಸ್ಥರಾದಿಯೂ ಬಹಳ ನಿರಾಶರಾಗಿಯೂ ಕಾಣುತ್ತಿದ್ದರೆಂದು ಕೆಲವು ಪಾಕ್ ಅಧಿಕಾರಿಗಳನ್ನು ಉಲ್ಲೇಖಿಸುತ್ತಾ 'ನ್ಯೂಯಾರ್ಕ್ ಟೈಂಸ್' ಪತ್ರಿಕೆ ವರದಿ ಮಾಡಿದೆ. ರಾವಲ್ಪಿಂಡಿಯ ಮಿಲಿಟರಿ ಕ್ಯಾಂಪಿನಲ್ಲಿದ್ದ ತನ್ನ ವಸತಿಯಿಂದ ಜಿಯಾ ಬಹಳ ಅಪರೂಪದಲ್ಲಿ ಮಾತ್ರವೇ ಹೊರಗೆ ಬರುತ್ತಿದ್ದರು. ಅವರನ್ನು ಏನೋ ಒಂದು ಭೀತಿಯು ಆವರಿಸಿತ್ತು ಎಂದು ನಿಕಟ ವರ್ತಿಗಳನ್ನು ಉಲ್ಲೇಖಿಸುತ್ತಾ ಪತ್ರಿಕೆ ಹೇಳಿದೆ" (ಚಂದ್ರಿಕ, ಮಾಧ್ಯಮಂ, **Indian Express 31-8-88**)

ಮುಬಾಹಲ ಪಂಥಾಹ್ವಾನವನ್ನು ಬಹಿರಂಗವಾಗಿ ಸ್ವೀಕರಿಸುವುದು ಓರ್ವ ರಾಷ್ಟ್ರನಾಯಕನಿಗೆ ಅಷ್ಟು ಸುಲಭ ಸಾಧ್ಯವಲ್ಲ. ಆದರೆ, ಲೋಕನಾಯಕನೆಂಬ ತನ್ನ ವಿಶಿಷ್ಟ ಸ್ಥಾನ ಮಾನಗಳ ಮರೆಯಲ್ಲಿ ನಿಂತುಕೊಂಡು ಮುಬಾಹಲವನ್ನು ನಗಣ್ಯವಾಗಿ ತಳ್ಳುತ್ತಾ ಅದಕ್ಕೆ ವಿರುದ್ಧವಾಗಿ ಕಾರ್ಯವೆಸಗಲು ಅಲ್ಲಾಹನು ಅವರನ್ನು ಅನುಮತಿಸಲಿಲ್ಲ, ಮುಬಾಹಲ ಘೋಷಣೆಯ ನಂತರವೂ ಹಝ್ರತ್ ಖಲೀಫ, ಜನರಲ್ ಜಿಯಾರನ್ನು ಸಂಭೋಧಿಸುತ್ತಾರೆ. ದುಷ್ಕೃತ್ಯಗಳಿಂದ ಹಿಂದಿರುಗಿ ದೇವ ಶಿಕ್ಷೆಯಿಂದ ಪಾರಾಗಲು ಉಪದೇಶಿಸುತ್ತಾರೆ. ಆದರೆ, ಅಹಂಭಾವವು ಜಿಯಾರನ್ನು ಕುರುಡನನ್ನಾಗಿಯೂ ಕಿವುಡನನ್ನಾಗಿಯೂ ಮಾಡಿತ್ತು. ಅಹ್ಮದೀಯರ ಮೇಲೆ ದಬ್ಬಾಳಿಕೆ ಮತ್ತಷ್ಟು ಊರ್ಜಿತಗೊಂಡವು. ಮುಬಾಹಲದ ಪ್ರತಿಗಳನ್ನು ಹಂಚಿದ ಕಾರಣಕ್ಕಾಗಿಯೇ ಅನೇಕ ಅಹ್ಮದೀಯರನ್ನು ಪಾಕಿಸ್ತಾನದಲ್ಲಿ ಬಂಧಿಸಲಾಯಿತು. ಹಿಂಸೆ ತೀವ್ರಗೊಂಡಿತು. ಹಝ್ರತ್ ಖಲೀಫತುಲ್ ಮಸೀಹ್, ಮುಬಾಹಲ ಪಂಥಾಹ್ವಾನದೊಂದಿಗೆ ಜನರಲ್ ಜಿಯಾರ ಸಂಬಂಧವನ್ನು ಸ್ಪಷ್ಟಪಡಿಸುತ್ತಾ ಈ ರೀತಿ ಹೇಳಿದರು:

"ಪಾಕಿಸ್ತಾನದ ಅಧ್ಯಕ್ಷರ ಕುರಿತು ಹೇಳುವುದಾದರೆ, ನೋಡೋಣ – ಅಲ್ಲಾಹನ ವಿಧಿ ಅದೇನು ಪ್ರಕಟಿಸುತ್ತದೆ ಎಂದು. ಅವರು ಮುಬಾಹಲ ಪಂಥಾಹ್ವಾನವನ್ನು ಸ್ವೀಕರಿಸಿದರೂ ಸ್ವೀಕರಿಸದೆ ಇದ್ದರೂ ಅವರು ಎಲ್ಲಾ ವಿರೋಧಿ ನೇತಾರರ ಮುಖಂಡರಾಗಿರುವುದರಿಂದ ಎಲ್ಲರಿಗಿಂತಲೂ ಹೆಚ್ಚಿನ ಪಾಪದ ಭಾರ ಆ ಒಬ್ಬ ವ್ಯಕ್ತಿಯ ಮೇಲೆ ನಿಕ್ಷಿಪ್ತವಾಗುತ್ತದೆ. ಅವರು ನಿರಪರಾಧಿಗಳಾದ ಅಹ್ಮದೀಯರ ಮೇಲೆ ದೌರ್ಜನ್ಯವೆಸಗಿದ್ದಾರೆ.......... ಅಂತಹ ವ್ಯಕ್ತಿಯು ಮುಬಾಹಲವನ್ನು ಬಹಿರಂಗವಾಗಿ ಸ್ವೀಕರಿಸಬೇಕಾದ ಅಗತ್ಯವಿರುವುದಿಲ್ಲ." (ಖುತ್‌ಬ ಜುಮಅ 1-7-88)

"ಅವರು ಆಕ್ರಮಣದ ಪರಂಪರೆಯನ್ನು ನಿಲ್ಲಿಸದಿದ್ದಲ್ಲಿ, ಯಾರ ನ್ಯಾಯಾಲಯದಲ್ಲಿ ನಾವು ಫಿರ್ಯಾದಿ ಸಲ್ಲಿಸಿರುತ್ತೇವೋ ಆ ಅಲ್ಲಾಹನು ಅವರ ದೌರ್ಜನ್ಯಕಾರಕ ವರ್ತನೆಗಳಿಗೆ ತಕ್ಕ ಶಿಕ್ಷೆಯನ್ನು ನೀಡಲು ಸಮರ್ಥನಾಗಿದ್ದಾನೆ."

"ಅವರು ತನ್ನ ಹಿಂಸಾತ್ಮಕ ವರ್ತನೆಯಿಂದ ಹಿಮ್ಮೆಟ್ಟದೆ ಇರುವ ಕಾರಣ ಖಂಡಿತವಾಗಿಯೂ ಅಲ್ಲಾಹನ ವಿಧಿಯು ಅವರನ್ನು ಹಿಡಿಯಲಿದೆ. ನಿಶ್ಚಯವಾಗಿಯೂ ಅವರ ಮೇಲೆ ಶಿಕ್ಷೆ ಬಂದೆರಗಲಿದೆ." (ಖುತ್‌ಬ ಜುಮುಅ 12-8-88)

ಮಲೆಯಾಳಂ ದೈನಿಕ "ಮಾಧ್ಯಮಂ"ನಲ್ಲಿ ಪ್ರಕಟವಾದ ಒಂದು ವಾರ್ತೆ: "ಅಧ್ಯಕ್ಷ ಜಿಯಾಉಲ್‌ಹಕ್ ಅವರು ವಿಮಾನ ದುರ್ಘಟನೆಯಲ್ಲಿ ಸಾಯುವ ಕೆಲವೇ ದಿವಸಗಳಿಗೆ ಮೊದಲು ಅವರ ಹೆಸರೆತ್ತಿ ಹೇಳುತ್ತಾ ಅತಿ ಭಯಾನಕ ಭವಿಷ್ಯದ ಕುರಿತು ಮುನ್ನೆಚ್ಚರಿಕೆ ನೀಡಿದ ಕಾದಿಯಾನಿ ನೇತಾರ ಮಿರ್ಝಾ ತಾಹಿರ್ ಅಹ್ಮದ್ ಮಾಡಿದ ಭಾಷಣವನ್ನು ಸಹ ದುರಂತದ ಕುರಿತು ತನಿಖೆಯಲ್ಲಿ ಒಳಪಡಿಸಬೇಕೆಂದು ಜಾಗತಿಕ ಪ್ರವಾದಿತ್ವ ಪರಿಸಮಾಪ್ತಿ ಮಿಶನರಿ ಮೌಲಾನಾ ಮನ್ಸೂರ್ ಅಹ್ಮದ್ ಒತ್ತಾಯಿಸಿದರು." (25-9-88)

ಆದುದರಿಂದ ಜಿಯಾರ ಅಂತ್ಯವು ಭವಿಷ್ಯ ನುಡಿಯಲ್ಪಟ್ಟ ಅಂತ್ಯವೆಂಬುದರಲ್ಲಿ ಸಂಶಯವಿಲ್ಲ. ಜಿಯಾರ ಮರಣದ ನಂತರವಷ್ಟೇ 'ಕಾದಿಯಾನಿಗಳು' ಆ ರೀತಿ ಹೇಳುತ್ತಾರೆಂಬ 'ಸನ್ಮಾರ್ಗ'ದವರ ಹೇಳಿಕೆ ಶುದ್ಧ ಸುಳ್ಳಾಗಿದೆ. ಅಂತೆಯೇ "ಲಂಡನಿನ ಯಾವುದೋ ಒಂದು ಮೂಲೆಯಲ್ಲಿ ಓರ್ವ ವ್ಯಕ್ತಿಯು ತನಗೆ ಪಂಥಾಹ್ವಾನ ನೀಡಿದ್ದನ್ನು ಕಾರ್ಯಬಾಹುಳ್ಯದಿಂದ ಝಿಯಾವುಲ್‌ಹಕ್‌ರು ಗಮನಿಸಿರಲಿಲ್ಲವೋ ಏನೋ" ಎಂಬ 'ಸನ್ಮಾರ್ಗ'ದ ಲೇಖಕರ ಮಾತು ಸಹ ಅರ್ಥಹೀನವಾಗಿದೆ.

## ಮುಬಾಹಲದ ಕುರಿತು ಮೌನವೇಕೆ?

ಮುಖ್ಯ ವಿಷಯದ ಕಡೆಗೆ ಬರೋಣ. 'ಸನ್ಮಾರ್ಗ'ದಲ್ಲಿ ಪ್ರಸ್ತುತ ಲೇಖನವು ಪ್ರಕಟವಾಗಲು ಹೇತುವಾದುದು ಅಹ್ಮದಿಯಾ ಖಲೀಫರು ಘೋಷಿಸಿರುವ ಮುಬಾಹಲ ಪಂಥಾಹ್ವಾನವಾಗಿರುವುದರಿಂದ ಅದರ ಬಗ್ಗೆ ಸಹ ಇಲ್ಲಿ ಎರಡು ಮಾತು ಹೇಳಬೇಕಾಗಿದೆ.

ಅಹ್ಮದೀಯರು ಕಳೆದ ನೂರು ವರ್ಷಗಳಿಂದಲೂ ಹಿಂಸೆಗೂ ಪೀಡನೆಗೂ ಗುರಿಯಾಗುತ್ತಿದ್ದಾರೆ. ಕ್ರೂರವಾದ ಅಪಹಾಸ್ಯ, ಸಾಮಾಜಿಕ ಬಹಿಷ್ಕಾರ, ಶಾರೀರಿಕ ಹಿಂಸೆ, ದೌರ್ಜನ್ಯ ಮೊದಲಾದ ಮಾನವೀಯತೆಯನ್ನು ಹೆಪ್ಪುಗಟ್ಟಿಸುವ ರೀತಿಯ ವರ್ತನೆಗಳನ್ನು ಇತರ ಮುಸ್ಲಿಮರು ಅಹ್ಮದೀಯರ ವಿರುದ್ಧ ಕೈಗೊಂಡಿರುತ್ತಾರೆ. ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರ ಕಾಲದಿಂದಲೇ ದೌರ್ಜನ್ಯದ ಪರಂಪರೆ ಆರಂಭವಾಯಿತು ಎಂದು ಹೇಳಿದರೆ ತಪ್ಪಲ್ಲ. ಈ ದೌರ್ಜನ್ಯವೂ ಹಿಂಸಾಚಾರವೂ ಅನ್ಯಾಯವೂ ಹೆಚ್ಚುತ್ತಾ ಬರುತ್ತಿದೆ ವಿನಾ ಕಡಿಮೆಯಾಗುತ್ತಿಲ್ಲ. ಒಂದು ಕಡೆ ಅಹ್ಮದಿಯಾ ಜಮಾಅತ್ ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿದೆ. ಇನ್ನೊಂದು ಕಡೆ ಅದರ ವಿರುದ್ಧ ದಬ್ಬಾಳಿಕೆಗಳೂ ಬಲಗೊಳ್ಳುತ್ತಾ ಬರುತ್ತಿವೆ. ನೂರು ವರ್ಷಗಳ ಮೊದಲು ಯಾರಿಗೂ ಗೊತ್ತಿಲ್ಲದ "ಒಂದು ಮೂಲೆ" ಆಗಿದ್ದ ಖಾದಿಯಾನ್, ಈಗ ಎಲ್ಲರಿಗೂ ಸುಪರಿಚಿತವಾದ ಒಂದು ದೃಷ್ಟಾಂತ ಭೂಮಿಯಾಗಿ ಮಾರ್ಪಟ್ಟಿದೆ. ಇಂದು ಪ್ರಪಂಚದ 117 ರಾಷ್ಟ್ರಗಳಲ್ಲಾಗಿ ವಾಸಿಸುವ ಅಹ್ಮದೀಯರ ಜನಸಂಖ್ಯೆಯು ಒಂದು ಕೋಟಿಯನ್ನು ಮೀರಿದೆ. ಶಿಲುಬೆಯ ದೇಶದಲ್ಲೂ ನಾಸ್ತಿಕರ ನಾಡಿನಲ್ಲೂ ಆಫ್ರಿಕದ ಕಾಡುಗಳಲ್ಲೂ ಇಸ್ಲಾಂ ಧರ್ಮದ ಮಧುರ ಸಂದೇಶವನ್ನು ಸಾರುತ್ತಾ, ಅಭಿವೃದ್ಧಿಯಿಂದ ಅಭಿವೃದ್ಧಿಗೆ ಮುನ್ನುಗ್ಗುತ್ತಿರುವ ಅಹ್ಮದಿಯಾ ಸಂಘಟನೆಯು ಇಂದು ಲೋಕದಲ್ಲಿ ಅವಗಣಿಸಲು ಸಾಧ್ಯವಿಲ್ಲದ ಒಂದು ಯಥಾರ್ಥವಾಗಿ ಮಾರ್ಪಟ್ಟಿದೆ. ಆದರೆ, ಅದೇ ವೇಳೆ, ಇತಿಹಾಸದಲ್ಲಿ ಉದಾಹರಣೆ ಕಾಣಲು ಸಾಧ್ಯವಿಲ್ಲದ ರೀತಿಯ ಹಿಂಸಾಚಾರಗಳಿಗೆ ವಿಶೇಷತಃ ಪಾಕಿಸ್ತಾನದಲ್ಲಿ ಅಹ್ಮದೀಯರು ಗುರಿಯಾಗುತ್ತಿದ್ದಾರೆ. ಅವರನ್ನು ಅಲ್ಲಿ ನರಬೇಟೆಯಾಡಲಾಗುತ್ತಿದೆ. ಅಹ್ಮದೀಯರು ಪಾಕಿಸ್ತಾನದಲ್ಲಿ ಅಝಾನ್ ಕರೆ ನೀಡಬಾರದು, ಸಲಾಂ ಹೇಳಬಾರದು, ಕಲಿಮ ಉಚ್ಚರಿಸಬಾರದು. ಅವರ ಮಸೀದಿಗಳನ್ನು 'ಮಸ್ಜಿದ್' ಎಂದು ಕರೆಯಬಾರದು. ಮಸೀದಿಗಳಲ್ಲಾಗಲೀ ಇತರ ಸ್ಥಳಗಳಲ್ಲಾಗಲೀ ಕಲಿಮ ಬರೆದಿಡಬಾರದು. ಅವರು ಸ್ವಯಂ ಮುಸ್ಲಿಮರೆಂದು ಹೇಳಿಕೊಳ್ಳಬಾರದು! ಕ್ರೂರತೆ, ಬರ್ಬರತೆ, ಮೃಗೀಯತೆ – ಅಲ್ಲಿ ಅಹ್ಮದೀಯರು ನಿಷ್ಠುರವಾಗಿ ವಧಿಸಲ್ಪಡುತ್ತಾರೆ. ಅವರ ಅಂಗಾಂಗಗಳನ್ನು ಕತ್ತರಿಸಲಾಗುತ್ತದೆ. ರಕ್ತ ಹರಿಸಲ್ಪಡುತ್ತದೆ. ಮನೆಗಳನ್ನೂ ಸೊತ್ತು ಸಾಮಗ್ರಿಗಳನ್ನೂ ಕೊಳ್ಳೆ ಹೊಡೆಯಲಾಗುತ್ತಿದೆ. ಸುಳ್ಳು ಮೊಕದ್ದಮೆಗಳನ್ನು ಹೂಡಿ ವಿಚಾರಣೆಯಿಲ್ಲದೆ ಜೈಲುಗಳಲ್ಲಿ ಬಂಧಿಸಿಡಲಾಗುತ್ತಿದೆ.

ಪ್ರಿಯರೇ, ಇವೆಲ್ಲವೂ ಒಂದು ಸರಕಾರದ ನೇತೃತ್ವದಲ್ಲಿ (ದಿವಂಗತ ಪಾಕ್ ಅಧ್ಯಕ್ಷ ಜಿಯಾರ ನೇತೃತ್ವದಲ್ಲಿ) ಬಲಹೀನರಾದ ಅಹ್ಮದೀಯರ ವಿರುದ್ಧ ನಡೆಯುತ್ತಿದ್ದ ಪೈಶಾಚಿಕ ಕೃತ್ಯಗಳಾಗಿವೆ ಎಂಬುದನ್ನು ತಿಳಿಯಿರಿ. ಈ ಎಲ್ಲಾ ಕ್ರೂರ ಹಿಂಸಾಚಾರಗಳಿಗೆ ಈಡಾಗಿಯೂ ಅಹ್ಮದೀಯರು ಸಹಿಷ್ಣುತೆಯನ್ನು ಕೈಗೊಂಡಿದ್ದಾರೆ. ಈ ಏಕಪಕ್ಷೀಯ ದೌರ್ಜನ್ಯಗಳನ್ನು ಇದುವರೆಗೂ ಸಹಿಸಿಕೊಂಡೇ ಬಂದಿದ್ದಾರೆ. ಖಡ್ಗ ಬಲದಿಂದ ಅಧಿಕಾರವನ್ನು ಕಿತ್ತುಕೊಳ್ಳಲು ಅಥವಾ ಕಠಾರಿಯನ್ನು ಝಳಪಿಸುತ್ತಾ ಧರ್ಮ ಸಂಸ್ಥಾಪನೆ ಮಾಡಲು ಮಿರ್ಝಾ ಸಾಹೇಬರು ಕಲಿಸಲಿಲ್ಲ. ಆ ಕಾರಣದಿಂದಲೇ ಸಾಮಾಜಿಕ ಸುಭದ್ರತೆಗೆ ಹಾನಿಯುಂಟಾಗುವ ಅಥವಾ ಧಾರ್ಮಿಕ ಶಿಥಿಲೀಕರಣಕ್ಕೆ ಕಾರಣವಾಗುವಂತಹ ಯಾವುದೇ ಕೃತ್ಯವೂ ಅಹ್ಮದೀಯರ ಕಡೆಯಿಂದ ಸಂಭವಿಸಲು ಸಾಧ್ಯವಿಲ್ಲ. ಈ ಭೂಮಿಯಲ್ಲಿ ಆಧಿಪತ್ಯ ಸ್ಥಾಪಿಸಲು ಅಹ್ಮದೀಯರಿಗೆ ಆಕಾಂಕ್ಷೆಯಿಲ್ಲ. 'ಹುಕೂಮತೆ ಇಲಾಹಿ' ಎಂಬ ಧರ್ಮರಾಜಕೀಯ ಧೋರಣೆಯಾಗಲೀ ವಿನಾಶಕಾರಕವೂ ಆಪತ್ಕರವೂ ಆದ ರಾಜಕೀಯ ನೀತಿಯಾಗಲೀ ನಮಗೆ ಇರುವುದಿಲ್ಲ. ಬುಡಮೇಲು ಕೃತ್ಯವು ನಮ್ಮ ಕಾರ್ಯವಿಧಾನವಲ್ಲ. ನಾವು ಶಾಂತಿ ಸಮಾಧಾನವನ್ನು ಬಯಸುವವರಾಗಿದ್ದೇವೆ. ಶಾಂತಿಯುತ ಬಾಳುವೆಯನ್ನು ನಡೆಸಲು ಇಚ್ಛಿಸುತ್ತೇವೆ. ಆದರೆ, ಸರ್ವರಿಂದಲೂ ಸಮ್ಮತಿಸಲ್ಪಡುವಂತಹ ಮೂಲಭೂತವಾದ ಈ ಹಕ್ಕನ್ನು ಪಾಕಿಸ್ತಾನದಲ್ಲಿ ನಮಗೆ ಅನುಮತಿಸಲಾಗುವುದಿಲ್ಲ. ಬಹುಸಂಖ್ಯಾತ ಮುಸ್ಲಿಂ ಜನಸಾಮಾನ್ಯರ ಬೆಂಬಲವು ಅಲ್ಲಿನ ಆಡಳಿತಗಾರರನ್ನು ಅಂಧರನ್ನಾಗಿ ಮಾಡಿದೆ. ಆಯುಧ ಭಂಡಾರವು ತಮ್ಮನ್ನು ಕಾವಲು ಕಾಯುತ್ತಿದೆ ಎಂಬ ಅಹಂಭಾವ ಅವರನ್ನು ಉನ್ಮತ್ತರನ್ನಾಗಿ ಮಾಡಿದೆ.

ಪಾಕಿಸ್ತಾನದಲ್ಲಿ ಅಹ್ಮದೀಯರಿಗೆ ಜೀವನ ಎಷ್ಟು ದುರ್ಭರವಾಯಿತೆಂದರೆ, 1984ರಲ್ಲಿ ಅಹ್ಮದೀಯರ

ಖಲೀಫರಾದ ಹ। ಮಿರ್ಜಾ ತಾಹಿರ್ ಅಹ್ಮದ್ ಸಾಹೇಬರು ಪಾಕಿಸ್ತಾನವನ್ನು ಬಿಟ್ಟು ಪರಿವಾರ ಸಮೇತ ಲಂಡನ್‌ಗೆ ತೆರಳಬೇಕಾಯಿತು. ಪಾಕ್ ಸರಕಾರವನ್ನೂ ಅಲ್ಲಿನ ಮುಲ್ಲಾ ಮೌಲವಿಗಳನ್ನೂ ಬಹುಸಂಖ್ಯಾತ ಮುಸ್ಲಿಂ ಜನರನ್ನೂ ಈ ನಾಲ್ಕು ವರ್ಷಗಳಿಂದಲೂ ಅವರು ಉಪದೇಶಿಸುತ್ತಾ ಬಂದಿದ್ದಾರೆ. ಅನ್ಯಾಯದ ಹಾದಿಯನ್ನು ತ್ಯಜಿಸುವಂತೆ ಅವರು ಜಿಯಾ ಸರಕಾರವನ್ನು ನಿರಂತರ ಉಪದೇಶಿಸಿದರು. ಆದರೆ, ಉಪದೇಶಗಳಿಂದಲೂ ಬುದ್ಧಿಮಾತುಗಳಿಂದಲೂ ಏನೂ ಪ್ರಯೋಜನ ಉಂಟಾಗಲಿಲ್ಲ. ಆಗ ಕೊನೆಯ ಅಸ್ತ್ರವೆಂಬಂತೆ 1988ನೇ ಜೂನ್ 10ರಂದು ಹಝ್ರತ್ ಖಲೀಫ ಅವರು "ಮುಬಾಹಲ" ಪಂಥಾಹ್ವಾನವನ್ನು ಘೋಷಿಸಿದರು. ಅಹ್ಮದಿಯಾ ಜಮಾಅತಿನ ಸತ್ಯತೆಯನ್ನು ನಿರಾಕರಿಸುವ ಲೋಕದ ಎಲ್ಲಾ ವಿರೋಧಿಗಳನ್ನೂ "ಮುಬಾಹಲ" ಎಂಬ ಪ್ರಾರ್ಥನಾ ಸಮರಕ್ಕೆ ಆಹ್ವಾನಿಸಲಾಗಿದ್ದರೂ ಅದರ ಪ್ರಮುಖ ಸಂಬೋಧಿತರು ಪಾಕಿಸ್ತಾನದ ಅಧ್ಯಕ್ಷರೂ ಅಲ್ಲಿನ ಮುಲ್ಲಾ ಮೌಲವಿಗಳೂ ಶರೀಅತ್ ಕೋರ್ಟಿನ ನ್ಯಾಯಾಧೀಶರೂ ಆಗಿದ್ದರು.

ಮುಬಾಹಲ ಎಂದರೆ ಸತ್ಯಾಸತ್ಯ ವಿವೇಚನೆಗೆ ಕೈಗೊಳ್ಳುವಂತಹ ಕೊನೆಯ ಮಾರ್ಗವಾಗಿದೆ. ತಮ್ಮ ಫಿರ್ಯಾದಿಯನ್ನು ಅಂತಿಮ ತೀರ್ಮಾನಕ್ಕಾಗಿ ಸರ್ವಶಕ್ತನೂ ಕರುಣಾಮಯನೂ ನ್ಯಾಯಾಧಿಪತಿಯೂ ಆದ ಅಲ್ಲಾಹನ ನ್ಯಾಯಾಲಯದಲ್ಲಿ ಸಲ್ಲಿಸುವುದಾಗಿದೆ. ಉಭಯ ಕಕ್ಷಿಗಳೂ ಆರೋಪ ಪ್ರತ್ಯಾರೋಪಗಳನ್ನು ಮಾಡುವುದು ಅಥವಾ ಯಾವುದೇ ರೀತಿಯ ವಾದ-ವಿವಾದ ನಡೆಸುವುದು ಇತ್ಯಾದಿಗಳು ಮುಬಾಹಲದ ವ್ಯಾಪ್ತಿಯೊಳಗೆ ಸೇರಿದ್ದಲ್ಲ. ಸರ್ವಶಕ್ತನಾದ ಅಲ್ಲಾಹನ ಮುಂದೆ ವಾದ-ವಿವಾದಗಳಿಗೆ ಸ್ಥಾನವಿಲ್ಲ. ಅವನು ಎಲ್ಲವನ್ನೂ ಬಲ್ಲವನಾಗಿದ್ದಾನೆ. ಎಲ್ಲವನ್ನೂ ತಿಳಿದಿರುವವನೊಡನೆ ನಾವು ಮಾಡಬೇಕಾದುದು ಒಂದೇ ಒಂದು ಪ್ರಾರ್ಥನೆ ಮಾತ್ರ. ಸತ್ಯವನ್ನು ಬಹಿರಂಗಪಡಿಸು ಎಂಬುದು. ಅಸತ್ಯ ಪಕ್ಷವನ್ನು ಶಿಕ್ಷಿಸಿ, ಸತ್ಯಪಕ್ಷವನ್ನು ಅನುಗ್ರಹಿಸಿ ಆ ಮೂಲಕ ಸತ್ಯ-ಅಸತ್ಯವನ್ನು ಬೇರ್ಪಡಿಸಿ ತೋರಿಸು ಎಂದು. ಸುಳ್ಳು ಹೇಳುವವರ ಮೇಲೆ ಶಾಪ. ಸತ್ಯ ಪಕ್ಷದವರ ಮೇಲೆ ಅನುಗ್ರಹ ಇಷ್ಟೆ.

ಇದೇ ಮುಬಾಹಲ ಎಂಬುದು. ಇದು ಅಂತಿಮ ಘಟ್ಟದಲ್ಲಿ ಮಾತ್ರ ಕೈಗೊಳ್ಳಬೇಕಾದ ಒಂದು ಮಾರ್ಗವಾಗಿದೆ. ಮಾನವ ರಾಶಿಯನ್ನು ಬಹುದೊಡ್ಡ ವಿಪತ್ತಿನಿಂದ ಸಂರಕ್ಷಿಸುವುದು ಕೂಡ ಮುಬಾಹಲದ ಉದ್ದೇಶವಾಗಿದೆ. ಎದುರು ಪಕ್ಷದವರು ಮುಬಾಹಲವನ್ನು ಸ್ವೀಕರಿಸಿದರೆ, ಮುಬಾಹಲ ಪಂಥಾಹ್ವಾನ ನೀಡಿದವರ ಮತ್ತು ಮುಬಾಹಲವನ್ನು ಸ್ವೀಕರಿಸಿದವರ ಮಧ್ಯೆ ನಿಶ್ಚಿತ ಕಾಲಾವಧಿಯೊಳಗೆ ನ್ಯಾಯಾಧಿಪತಿಯಾದ ಅಲ್ಲಾಹನು ದೃಷ್ಟಾಂತಗಳನ್ನು ಪ್ರಕಟಪಡಿಸುವನು. ಮುಬಾಹಲ ಆಹ್ವಾನವನ್ನು ಸ್ವೀಕರಿಸದೆ ಅದರಿಂದ ಯಾರಾದರೂ ದೂರಸರಿದರೆ ಅಂಥವರಿಗೆ ಮುಬಾಹಲ ಅನ್ವಯವಾಗುವುದಿಲ್ಲ.

ಬಹುಸಂಖ್ಯಾತ ಮುಸ್ಲಿಮರು ಅಹ್ಮದಿಯಾ ಜಮಾಅತಿನ ವಿರುದ್ಧ ಇದುವರೆಗೆ ಸ್ವೀಕರಿಸಿದ ನಿಲುವು ಮುಬಾಹಲ ಪಂಥಾಹ್ವಾನವನ್ನು ಘೋಷಿಸಲು ನಮ್ಮನ್ನು ನಿರ್ಬಂಧಗೊಳಿಸಿರುತ್ತದೆ. ಅವರ ವಾರ್ತಾ ಮಾಧ್ಯಮಗಳೂ ಸಾಹಿತ್ಯ ಪ್ರಕಟಣೆಗಳೂ ಅಹ್ಮದಿಯಾ ಜಮಾಅತಿನ ವಿರುದ್ಧ ಅನ್ಯಾಯವಾದ ಆರೋಪಗಳನ್ನು ಮಾಡುತ್ತಿವೆ. ಅಹ್ಮದಿಯಾ ವಿರೋಧಿಗಳಾದ ಮುಲ್ಲಾ ಮೌಲಾನಾಗಳು ಯಾವುದೇ ಸಂಕೋಚವೂ ದೇವಭಯವೂ ಇಲ್ಲದೆ ಅಹ್ಮದಿಯಾ ಜಮಾಅತಿನ ಮೇಲೆ ಸುಳ್ಳು ಸುಳ್ಳು ಆರೋಪಗಳನ್ನು ಹೊರಿಸುತ್ತಾರೆ. ಅಪ್ಪಟವಾದ ಸುಳ್ಳುಗಳನ್ನೇ ಪ್ರಚಾರ ಪಡಿಸಿ ಮುಗ್ಧ ಮುಸ್ಲಿಂ ಜನಸಾಮಾನ್ಯರನ್ನು ಅಹ್ಮದೀಯರ ವಿರುದ್ಧ ಎತ್ತಿಕಟ್ಟುತ್ತಿದ್ದಾರೆ. ಇಸ್ಲಾಮಿಕ ಸರಕಾರಗಳು ಅಹ್ಮದೀಯರನ್ನು ನಿರ್ಮೂಲನ ಮಾಡಲು ಕಂಕಣಬದ್ಧವಾಗಿವೆ. ಪಾಕಿಸ್ತಾನದಲ್ಲಂತೂ ಅಹ್ಮದೀಯರಿಗೆ ಜೀವನವೇ ದುರ್ಭರವಾಗಿ ಪರಿಣಮಿಸಿತು. ಅಲ್ಲಿ ಅಹ್ಮದೀಯರಿಗೆ ವಾಕ್ ಸ್ವಾತಂತ್ರ್ಯವೂ ಪ್ರಕಟಣಾ ಸ್ವಾತಂತ್ರ್ಯವೂ ಧಾರ್ಮಿಕ ಸ್ವಾತಂತ್ರ್ಯವೂ ಮುಸ್ಲಿಮರೆಂದು ಹೇಳಿಕೊಂಡು ಬದುಕುವ ಸ್ವಾತಂತ್ರ್ಯವೂ ಇಲ್ಲವಾಗಿದೆ. ಉಪದೇಶಗಳನ್ನೂ ಮುನ್ನೆಚ್ಚರಿಕೆಗಳನ್ನೂ ಅಲ್ಲಿನ ಮೌಲಾನಾಗಳಾಗಲೀ ಅಧಿಕಾರಿಗಳಾಗಲೀ ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಅಹಂಕಾರದ ಪರಮಾವಧಿ. ಪೂರ್ವಿಕ ಪ್ರವಾದಿಗಳನ್ನು ಧಿಕ್ಕರಿಸಿದ ಶತ್ರು

ನೇತಾರರ ವರ್ತನೆಗಳನ್ನು ನೆನಪಿಗೆ ತರುವಂತಹ ಅದೇ ರೀತಿಯ ದೇವಧಿಕ್ಕಾರ, ಕ್ರೂರತೆ, ಅಹಂಭಾವ.

ಅಹ್ಮದೀಯರಿಗೆ ಉಳಿದಿದ್ದುದು ಒಂದೇ ಮಾರ್ಗ; ಪವಿತ್ರ ಖುರ್‌ಆನ್ ಬೋಧಿಸುವ ಮುಬಾಹಲದ ಪಂಥಾಹ್ವಾನ ಘೋಷಣೆ ಒಂದು ಮಾತ್ರವೇ ಉಳಿದಿರುವ ದಾರಿ. ಕೊನೆಯ ಅಸ್ತ್ರವೆಂಬಂತೆ ನಾವು ಅದನ್ನು ಪ್ರಯೋಗಿಸಿದ್ದೇವೆ. ನಮ್ಮ ಫಿರ್ಯಾದಿಯನ್ನು ಅಲ್ಲಾಹನ ನ್ಯಾಯಾಲಯಕ್ಕೆ ಕೊಂಡೊಯ್ದು, ಅತ್ಯಂತ ಪ್ರಾಮಾಣಿಕತೆಯಿಂದಲೂ ಹೃದಯ ಪೂರ್ವಕವಾಗಿಯೂ ನಮ್ರತೆಯಿಂದಲೂ ನಾವು ಅಲ್ಲಾಹನೊಡನೆ ಪ್ರಾರ್ಥಿಸು ತ್ತೇವೆ– ಸತ್ಯವನ್ನು ಬಹಿರಂಗಗೊಳಿಸಲು.

ಆದರೆ, ನಮ್ಮ ಈ ಆಹ್ವಾನವನ್ನು ಸ್ವೀಕರಿಸಿಕೊಂಡು ಅದಕ್ಕೆ ಬದ್ಧರಾಗಿ, ಸತ್ಯಾಸತ್ಯ ವಿವೇಚನೆಗೆ ಅಲ್ಲಾಹನೊಡನೆ ಪಾರ್ಥಿಸಲು ತಯಾರಾಗುವ ಎದುರು ಪಕ್ಷವೂ ಇರಬೇಕಾದುದು ಅವಶ್ಯವಾಗಿದೆ. ಅಹ್ಮದಿಯಾ ಜಮಾಅತ್ ಹೊಂದಿರುವ ವಿಶ್ವಾಸಗಳು ಅಸತ್ಯವೆಂದು ನಂಬುವ, ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಅವರ ದೇವ ನಿಯುಕ್ತವಾದವನ್ನು ಅಲ್ಲಗಳೆಯುವ ಪ್ರಪಂಚದ ಯಾವನೇ ವ್ಯಕ್ತಿಯೂ ಆತನು ತನ್ನ ನಂಬಿಕೆಗಳಲ್ಲಿ ಪ್ರಾಮಾಣಿಕನಾಗಿದ್ದರೆ, ನಮ್ಮ ಮುಬಾಹಲ ಪಂಥಾಹ್ವಾನವನ್ನು ಸ್ವೀಕರಿಸಬಹುದು. ಈಗ ವಾದ ವಿವಾದವಾಗಲೀ ಮೊದಲು ಯಾರೋ ಅಹ್ಮದಿಯಾ ವಿರೋಧಿಗಳು ಬರೆದಿಟ್ಟದ್ದನ್ನು ನಕಲು ಮಾಡುವ ಆವಶ್ಯಕತೆಯಾಗಲೀ ಇರುವುದಿಲ್ಲ; ಸುಳ್ಳು ಆರೋಪಗಳನ್ನು ಮತ್ತೆ ಮತ್ತೆ ಜಪಿಸಬೇಕಾದ್ದಿಲ್ಲ. ದಾರಿಯನ್ನು ನಾವು ಅತ್ಯಂತ ಸುಗಮಗೊಳಿಸಿದ್ದೇವೆ.

'ಸನ್ಮಾರ್ಗ' ಪತ್ರಿಕೆಯವರೇ, ಜಮಾಅತೇ ಇಸ್ಲಾಮಿ ಹಿಂದ್ ನೇತಾರರೇ, ಪಿ. ಪಿ. ಅಬ್ದುಲ್ ರಹ್ಮಾನ್ ಸಾಹೇಬರೇ, ಅಹ್ಮದಿಯಾ ಜಮಾಅತ್ ಒಂದು ಮಿಥ್ಯಾ ಸಂಘಟನೆಯೆಂದೂ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಅವರು ಓರ್ವ ಸುಳ್ಳು ಪ್ರವಾದಿಯೆಂದೂ ನಂಬುತ್ತಿರುವ ಯಾವುದೇ ಗುಂಪಿನ ಪ್ರಾತಿನಿಧ್ಯವಹಿಸುವ ನೇತಾರರೇ, ನಿಮ್ಮ ನಂಬಿಕೆಗಳಲ್ಲಿ ನಿಮಗೆ ಪ್ರಾಮಾಣಿಕತೆಯಿದ್ದರೆ, ನೀವು ನೇರವಾಗಿ ಮುಬಾಹಲವನ್ನು ಸ್ವೀಕರಿಸಬಹುದು. ಸರಳವೂ ನೇರವೂ ಅತ್ಯಂತ ಸುಲಭವೂ ಆದ ವಿಧಾನವನ್ನು ನಾವು ನಿಮ್ಮ ಮುಂದೆ ಇಟ್ಟಿದ್ದೇವೆ. ಬರಹ ಮೂಲಕ ಮುಬಾಹಲ. ಮುಬಾಹಲವನ್ನು ನೀವು ಸ್ವೀಕರಿಸಿದ್ದಾಗಿ ಬಹಿರಂಗಪಡಿಸಿ ಅಹ್ಮದಿಯಾ ಖಲೀಫರ ಪ್ರಾರ್ಥನೆಯೊಂದಿಗೆ ಸ್ವರ ಸೇರಿಸಿದರೆ, "ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್" ಎಂಬ ಪವಿತ್ರ ಖುರ್‌ಆನಿನ ಪ್ರಾರ್ಥನೆಯನ್ನು ನೀವು ಸಹ ಪುನರುಚ್ಚರಿಸಿಕೊಂಡು ನಿಮ್ಮ ನಿಲುವನ್ನು ಸಾರ್ವಜನಿಕವಾಗಿ ಸ್ಪಷ್ಟಪಡಿಸಿದರೆ ಸಾಕು. ಇದು ಅತ್ಯಂತ ನೇರವಾದ ಮಾರ್ಗ. ವಕ್ರತೆಯಿಲ್ಲದ ಕುಟಿಲತೆಯಿಲ್ಲದ ಶುದ್ಧವಾದ ದಾರಿ.

ಆದರೆ, ಅಕಟಾ! 'ಸನ್ಮಾರ್ಗ'ದ ಉದ್ದವಾದ ಲೇಖನದಲ್ಲಿ ಎಲ್ಲೂ ಈ ಬಗ್ಗೆ ಏನೂ ಕಾಣಿಸಲಿಲ್ಲ; ಅಹ್ಮದೀಯರ ಮುಬಾಹಲವನ್ನು ಸ್ವೀಕರಿಸಿದ್ದಾಗಿ 'ಸನ್ಮಾರ್ಗ'ದವರ ಕಡೆಯಿಂದಾಗಲೀ, ಜಮಾಅತೇ ಇಸ್ಲಾಮಿ ಹಿಂದ್‌ನವರ ಕಡೆಯಿಂದಾಗಲೀ ಪಿ. ಪಿ. ಅಬ್ದುಲ್ ರಹ್ಮಾನ್ ಅವರಾಗಲೀ ಹೇಳಿದ್ದು ಕಾಣಲೇ ಇಲ್ಲ. ಮಿರ್ಝಾ ಸಾಹೇಬರು ಕಪಟವಾದಿ, ಅವರ ಯಾವುದೇ ಭವಿಷ್ಯವಾಣಿ ಪೂರ್ತಿಯಾಗಲಿಲ್ಲ, ಅಹ್ಮದೀಯರು ಮುಸ್ಲಿಮರಲ್ಲ ಇತ್ಯಾದಿ ಇತ್ಯಾದಿ ಅಸಂಬದ್ಧಗಳನ್ನು ಅಚ್ಚುಮಾಡಿದ್ದಾರೆ ವಿನಾ ವಿಷಯದ ಮರ್ಮಕ್ಕೆ ಅವರು ಪ್ರವೇಶಿಸಲೇ ಇಲ್ಲ. ಹಝ್ರತ್ ಮಿರ್ಝಾ ಸಾಹೇಬರು ಅಸತ್ಯವಾದಿಯೆಂದು ನಿಮಗೆ ದೃಢನಂಬಿಕೆಯಿದ್ದರೆ, ನಮ್ಮ ಮುಬಾಹಲವನ್ನು ನೋಡಿ ನಿಮಗೆ ಸಂತೋಷವಾಗಬೇಕಿತ್ತು. ಅಹ್ಮದಿಯಾ ವಿರೋಧಿಗಳು ನಮ್ಮ ಮೇಲೆ ಹೊರಿಸುತ್ತಿರುವ ಆರೋಪಗಳನ್ನು ಸಂಗ್ರಹಿಸಿ ಅವೆಲ್ಲವನ್ನೂ ಒಂದೊಂದಾಗಿ ನಿಷೇಧಿಸುತ್ತಾ ಅಹ್ಮದಿಯಾ ಇಮಾಂ "ಲಅ್‌ನತುಲ್ಲಾಹಿ ಅಲಲ್ ಕಾದಿಬೀನ್" (ಸುಳ್ಳು ಹೇಳುವವರ ಮೇಲೆ ಅಲ್ಲಾಹನ ಶಾಪ ಬೀಳಲಿ) ಎಂಬ ಪವಿತ್ರ ಖುರ್‌ಆನಿನ ವಾಕ್ಯವನ್ನುಚ್ಚರಿಸುತ್ತಾ ಮುಬಾಹಲ ಘೋಷಿಸಿದ್ದಾರೆ. ದೇವರ ಮೇಲೆ ನಿಮಗಿರುವ ನಂಬಿಕೆಯು ನಿಜವೆಂದಾದರೆ, ನೀವು ಆತ್ಮಸಂತೋಷದಿಂದ ಮುಂದೆ ಬಂದು ಆ ಮುಬಾಹಲವನ್ನು ಸ್ವೀಕರಿಸಬಹುದಲ್ಲಾ. ನೀವು ಅದನ್ನು ಸ್ವೀಕರಿಸದೆ ಮರೀಚಿಕೆಯ ಮರೆಯಲ್ಲಿ ನುಣುಚಿಕೊಳ್ಳಲು ಪ್ರಯತ್ನಿಸುವುದರ

ಅರ್ಥವೇನು? ಮೌಲವಿ ಸನಾವುಲ್ಲಾ ಅಮೃತಸರಿ, ಮುಹಮ್ಮದ್ ಹುಸೇನ್ ಬಟಾಲವಿ, ಫಾದರ್ ಅಬ್ದುಲ್ಲ ಆಥಂ, ಮುಹಮ್ಮದೀ ಬೇಗಂ, ಗಗನ ವಿವಾಹ, ಅಫಘಾನಿಸ್ತಾನದ ಅವಸ್ಥೆ – ನೂರು ವರ್ಷಗಳಿಂದ ಹಾಡಿದ್ದನ್ನೇ ಈಗಲೂ ನೀವು ಹಾಡುತ್ತಿದ್ದೀರಿ. ಮಿರ್ಝಾ ಸಾಹೇಬರ ಭವಿಷ್ಯವಾಣಿಗಳು ಪೂರ್ತಿಯಾಗ ಲಿಲ್ಲವೆಂದು ಪರಿಹಾಸ್ಯ ಮಾಡುತ್ತಿದ್ದೀರಿ.

ಮಿತ್ರರೇ, ಮಿರ್ಝಾ ಸಾಹೇಬರ ಭವಿಷ್ಯವಾಣಿ ಗಳ ಪೂರ್ತೀಕರಣವನ್ನು ಮನಗಾಣಲು ಸ್ವರ್ಗೀಯ ಪ್ರಕಾಶದ ಅಗತ್ಯವಿದೆ. ಕಣ್ಣಿನಿಂದ ಯಾವುದಾದರೂ ಒಂದು ವಸ್ತುವನ್ನು ನಾವು ಕಾಣಬೇಕಾದರೆ, ಬೆಳಕು ಎಂಬ ಮಾಧ್ಯಮದ ಅಗತ್ಯವಿರುವಂತೆಯೇ ಆಧ್ಯಾತ್ಮಿಕ ವಿಷಯಗಳ ಬಗ್ಗೆ ತಿಳಿಯಬೇಕಾದರೆ, ಹಿದಾಯತ್ ಎಂಬ ದಿವ್ಯ ಪ್ರಕಾಶದ ಸಹಾಯದಿಂದ ಮಾತ್ರ ಸಾಧ್ಯ. ಹಿದಾಯತ್ ಅಥವಾ "ಯಥಾರ್ಥ ಸನ್ಮಾರ್ಗ" ಎಂಬುದು ಈ ಲೋಕಕ್ಕೆ ಸಂಬಂಧಪಟ್ಟ ವಿಷಯವಲ್ಲ. ಅದು ಅಲ್ಲಾಹನ ವರದಾನವಾಗಿ ಲಭಿಸಬೇಕಾದುದು. ಅಲ್ಲಾಹನು ತಾನಿಚ್ಛಿಸುವ ತನ್ನ ದಾಸರಿಗೆ ಅದನ್ನು ಅನುಗ್ರಹಿಸುತ್ತಾನೆ. ಆದುದರಿಂದ ಮಿತ್ರರೇ, ಪರಿಹಾಸ್ಯದ ಮಾತುಗಳನ್ನೂ ನಿಂದನೆಗಳನ್ನೂ ಬಿಟ್ಟು ದೇವ ಭಯದಿಂದ, ಪ್ರಾಮಾಣಿಕತೆಯಿಂದ ವಿಷಯ ಗಳನ್ನು ನಿರೂಪಣೆ ಮಾಡಿರಿ. ವಕ್ರದಾರಿಯನ್ನು ಸ್ವೀಕರಿಸಬೇಡಿರಿ. ನೇರವಾದ ದಾರಿಗೆ ಬನ್ನಿರಿ. ಅಲ್ಲಾಹನು ಇಷ್ಟಪಡುವ ದಾರಿ ಅದೇ ಆಗಿದೆ. ನೀವು ಅಲ್ಲಾಹನ ಕ್ರೋಧವನ್ನು ಭಯಪಡಿರಿ.

"ತೂರ್ ಪರ್ವತದ ಆಣೆ. ತೆರೆದಿಟ್ಟ ಚರ್ಮ ಕಾಗದದಲ್ಲಿ ಬರೆದಿಡಲಾಗಿರುವ ದೈವಿಕ ನಿಯಮಗಳ ಆಣೆ. ಜನನಿಬಿಡವಾದ ಮಂದಿರದ; ಉನ್ನತವಾದ ಛಾವಣಿಯ; ಪೂರ್ಣವಾಗಿ ತುಂಬಿಕೊಂಡಿರುವ ಸಮುದ್ರದ ಆಣೆ. ನಿಶ್ಚಯವಾಗಿಯೂ ನಿಮ್ಮ ಸೃಷ್ಟಿ ಕರ್ತನ ಶಿಕ್ಷೆಯು ಬಂದೇ ತೀರುವುದು. ಅದನ್ನು ನಿವಾರಿ ಸಲು ಯಾರಿಂದಲೂ ಸಾಧ್ಯವಿಲ್ಲ. ಆ ಯಾತನೆಯು ಬಂದೊದಗುವ ದಿವಸ ಆಕಾಶವು ಗಡಗಡನೆ ನಡುಗು ವುದು. ಪರ್ವತಗಳೂ ಸ್ಥಾನ ಪಲ್ಲಟನಗೊಳ್ಳುವುವು. ಸುಳ್ಳು ಹೇಳುವವರಿಗೆ (ಪ್ರವಾದಿಗಳನ್ನು ತಿರಸ್ಕರಿಸು ವವರಿಗೆ) ಆ ದಿವಸ ಭಯಂಕರ ವಿನಾಶವು ಕಾದಿದೆ. ನಿರರ್ಥಕ ವಾದ–ವಿವಾದಗಳಲ್ಲಿ ಮುಳುಗಿ ವಿನೋದಿಸು ವವರನ್ನೂ ಆ ದಿವಸ ನರಕಾಗ್ನಿಯತ್ತ ದೂಡಲಾಗು ವುದು." (ಪವಿತ್ರ ಖುರ್‌ಆನ್ 52 : 2–14)

"ಓ ಮನುಷ್ಯರೇ. ನಿಮ್ಮ ಸೃಷ್ಟಿಕರ್ತನನ್ನು ಭಯಪಡಿರಿ. ಆ ದಿನದ ಭಯವಿರಿಸಿಕೊಳ್ಳಿರಿ - ಅಂದು ಯಾವನೇ ಪಿತನೂ ತನ್ನ ಸಂತಾನಕ್ಕಾಗಿ ಯಾವ ಬಾಧ್ಯತೆ ಯನ್ನೂ ನೆರವೇರಿಸಲು ಸಾಧ್ಯವಿಲ್ಲ. ಅಂತೆಯೇ ಯಾವನೇ ಪುತ್ರನೂ ತನ್ನ ಪಿತನ ಪರವಾಗಿ ಏನೊಂದು ಪ್ರತಿಫಲವನ್ನೂ ಕೊಡಲು ಸಾಧ್ಯವಾಗಲಾರದು. (ಅಂತಹ ಆ ದಿವಸವನ್ನು ಭಯಪಡಿರಿ). ನಿಶ್ಚಯ ವಾಗಿಯೂ ಅಲ್ಲಾಹನ ವಾಗ್ದಾನ ಸತ್ಯವಾಗಿರುತ್ತದೆ. ಆದುದರಿಂದ ಈ ಲೋಕದ ಜೀವನ ನಿಮ್ಮನ್ನು ವಂಚನೆಗೆ ಗುರಿಪಡಿಸದಿರಲಿ. ಮನುಷ್ಯರನ್ನು ಅತಿ ಹೆಚ್ಚು ವಂಚಿ ಸುವ ಮಹಾವಂಚಕ (ಶೈತಾನ್) ಕೂಡ ಅಲ್ಲಾಹನ ಬಗ್ಗೆ ನಿಮ್ಮನ್ನು ವಂಚನೆಗೆ ಗುರಿಪಡಿಸದಿರಲಿ" (ಪವಿತ್ರ ಖುರ್‌ಆನ್ 31 : 34).

ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ (ಅ) ಹೇಳುತ್ತಾರೆ:

"ಎಲೈ ಜನರೇ, ಇದು ಒಂದು ದೈವಿಕ ಸಂಘಟನೆ ಯಾಗಿದೆ. ನೀವು ದೇವರ ವಿರುದ್ಧ ಸಮರಕ್ಕೆ ಮುಂದಾಗ ಬೇಡಿರಿ. ಅವನನ್ನು ಸೋಲಿಸಲು ನಿಮ್ಮಿಂದ ಸಾಧ್ಯವಿಲ್ಲ. ಅವನ ವಚನಗಳು ಯಾವತ್ತೂ ಎಲ್ಲಕ್ಕಿಂತಲೂ ಉನ್ನತ ವಾಗಿಯೇ ಇರುವುವು. ನೀವು ನಿಮ್ಮ ಮೇಲೆಯೇ ದ್ರೋಹ ಬಗೆಯದಿರಿ......... ಕಡಿಮೆ ಪಕ್ಷ, ನಿಮಗೆ ತಪ್ಪು ಸಂಭವಿಸಿದೆಯೋ ಎಂದೂ, ನೀವು ಮಾಡುತ್ತಿರುವ ಈ ಹೋರಾಟವು ಅಲ್ಲಾಹನೊಡನೆ ಆಗಿರುತ್ತದೆಯೋ ಎಂದೂ ನೀವು ಶಾಂತ ಚಿತ್ತದಿಂದ ಆಲೋಚಿಸಿ ನೋಡಿರಿ." (ಅರ್‌ಬಈನ್ 4, ಪುಟ–21)

ವಮಾ ಅಲೈನಾ ಇಲ್ಲಲ್ ಬಲಾಗುಲ್ ಮುಬೀನ್

# ಮನ್‌ಜೂರ್ ಅಹ್ಮದ್ ಚಿನಿಯೋಟಿ

ಅಹ್ಮದಿಯಾ ಖಲೀಫ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬರು 10–6–88ನೇ ಶುಕ್ರವಾರದಂದು "ಮುಬಾಹಲ" ಪಂಥಾಹ್ವಾನವನ್ನು ಘೋಷಿಸುತ್ತಾ ಪಾಕಿಸ್ತಾನದ ಕೆಲವರನ್ನು ಹೆಸರೆತ್ತಿ ಕರೆದು ಮುಬಾಹಲ ಸ್ವೀಕರಿಸುವಂತೆ ಆಹ್ವಾನ ನೀಡಿರುತ್ತಾರೆ. ಈ ಪೈಕಿ, ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್ ಸಾಹೇಬರು ದೇವರೆಂದೂ ದೇವ ಪುತ್ರನೆಂದೂ ವಾದಿಸಿರುವುದಾಗಿ ಅತಿ ಭಯಂಕರವಾದ ಆಕ್ಷೇಪಗಳನ್ನು ಹೊರಿಸುತ್ತಿರುವ ಮನ್‌ಜೂರ್ ಇಲಾಹಿ ಮಲಿಕ್, ಮಿರ್ಝಾ ಸಾಹೇಬರನ್ನು ಒಂದು ಹೆಬ್ಬಾವಿಗೆ ಉಪಮಿಸಿದ ಸಜ್ಜಾದ್ ಖಾನ್, "ಗುಲಾಂ ಅಹ್ಮದ್ ಖಾದಿಯಾನಿ ಆಂಗ್ಲೇಯರ ಪ್ರವಾದಿ" ಎಂದು ಆರೋಪಿಸುತ್ತಿರುವ ಮೌಲಾನಾ ಉಬೈದುಲ್ಲಾ ಸಿಂಧಿ, "ಮಿರ್ಝಾ ಖಾದಿಯಾನಿಗೆ ಕ್ರೈಸ್ತರು ಸರ್ವ ಸಹಾಯಗಳನ್ನೂ ನೀಡಿದ್ದರು" ಎಂದು ಆಕ್ಷೇಪಿಸುತ್ತಿರುವ ಮೌ। ಅಬ್ದುಲ್ ಹಲೀಂ, ಅಹ್ಮದಿಯಾ ಜಮಾಅತನ್ನು "ಖಾದಿಯಾನದಲ್ಲಿ ಬ್ರಿಟಿಷರು ನೆಟ್ಟ ವೃಕ್ಷ" ಎಂದು ಆರೋಪಿಸುತ್ತಿರುವ ಪ್ರೊಫೆಸರ್ ಸಾಜಿದ್ ಮಿೂರ್, ಅಹ್ಮದೀಯರ ವಿರುದ್ಧ ಹೂಡಲಾಗಿದ್ದ ಮೊಕದ್ದಮೆಗಳ ಬಗ್ಗೆ ಸಂಪೂರ್ಣ ಅನ್ಯಾಯದಿಂದ ವರ್ತಿಸಿದ ನ್ಯಾಯಾಧೀಶರುಗಳಾದ ಅಶ್ಫಾಕ್ ಹುಸೇನ್, ಮುಹಮ್ಮದ್ ಸಿದ್ದೀಖ್ ಚೌಧರಿ, ಮೌ। ಮುಹಮ್ಮದ್ ಗುಲಾಂ ಅಲಿ, ಅಬ್ದುಲ್ ಖುದ್ದೂಸ್ ಕಾಸ್‌ಮಿ ಮೊದಲಾದವರು ಒಳಪಡುತ್ತಾರೆ.

ಇವರಲ್ಲದೆ ಮತ್ತೊಬ್ಬ ವ್ಯಕ್ತಿ ಕೂಡ ಇದ್ದಾರೆ. ಮನ್‌ಜೂರ್ ಅಹ್ಮದ್ ಚಿನಿಯೋಟಿ. ಮೌಲವಿ ಅಸ್ಲಂ ಖುರೈಷಿಯನ್ನು ಕೊಲೆಗೈದುದು ಮಿರ್ಝಾ ತಾಹಿರ್ ಅಲ್ಲವೆಂದು ಸಾಬೀತಾದರೆ, ತನ್ನನ್ನು ಬಹಿರಂಗವಾಗಿ ಗುಂಡಿಟ್ಟು ಕೊಲ್ಲಲು ಅವರು ಪಾಕ್ ಸರಕಾರಕ್ಕೆ ಅನುಮತಿ ನೀಡಿದ್ದರು.

ಈಗ ಅಸ್ಲಂ ಖುರೈಷಿ ಪಾಕಿಸ್ತಾನಕ್ಕೆ ಮರಳಿ ಬಂದಿರುತ್ತಾರೆ! ತನ್ನನ್ನು ಯಾರೂ ಕೊಲೆ ಮಾಡಿಲ್ಲ, ಅಪಹರಿಸಿ ಕೊಂಡೊಯ್ಯಲೂ ಇಲ್ಲ. ತಾನು ಸ್ವೇಚ್ಛೆಯಿಂದಲೇ ದೇಶಬಿಟ್ಟು ಹೋಗಿದ್ದೆ ಎಂದು ಆ ಮನುಷ್ಯ ಬಹಿರಂಗ ಹೇಳಿಕೆ ನೀಡಿದ್ದಾರೆ. ಇದೋ ಮನ್‌ಜೂರ್ ಅಹ್ಮದ್ ಚಿನಿಯೋಟಿಗೆ ಮುನ್ನೆಚ್ಚರಿಕೆಯ ವಾರ್ತೆ—

> ಮನ್‌ಜೂರ್ ಅಹ್ಮದ್ ಚಿನಿಯೋಟಿ ಓರ್ವ ಮತ ಪಂಡಿತನಾಗಿದ್ದರೆ, ಸತ್ಯದೊಂದಿಗೆ ಅವರಿಗೆ ಅಲ್ಪವಾದರೂ ಸಂಬಂಧವಿದೆಯೆಂದಾದರೆ, ಅವರು ತನ್ನ ತಲೆಯನ್ನು ಸರಕಾರಕ್ಕೆ ಒಪ್ಪಿಸಬೇಕಾಗಿದೆ. ಅದೇನೇ ಆದರೂ, ಅಲ್ಲಾಹನ ಗುಂಡು ಅವರ ತಲೆಗೆ ತಗಲಿರುತ್ತದೆ ಎಂಬುದನ್ನು ಅವರು ನೆನಪಿಟ್ಟುಕೊಳ್ಳಲಿ. ಅವರಿಗೆ ಇನ್ನು ರಕ್ಷಣೆ ಹೊಂದಲು ಸಾಧ್ಯವಿಲ್ಲ.

(ಲಂಡನ್ ಸಮ್ಮೇಳನದಲ್ಲಿ ಹಝ್ರತ್ ಖಲೀಫತುಲ್ ಮಸೀಹ್: 22–7–88)

# ಝಿಯಾ ಫಿರ್‌ಔನ್

— ಖಾನ್ ವಲೀಖಾನ್

ಕರಾಚಿಗೆ ಸಮೀಪ ಮೆಟ್ರೋಡಲ್‌ನಲ್ಲಿ 50,000 ಜನರು ಭಾಗವಹಿಸಿದ ಫಖ್ತೂನಿಗಳ ಬೃಹತ್ತಾದೊಂದು ಸಮ್ಮೇಳನದಲ್ಲಿ ಮಾತನಾಡುತ್ತಾ, ಜನತೆಯ ಹಕ್ಕುಗಳನ್ನು ಕಸಿದುಕೊಳ್ಳುವ ಯಾರೇ ಆದರೂ ಆತನ ಅಂತ್ಯ ಫಿರ್‌ಔನನ ಅಂತ್ಯದಂತಾಗುವುದೆಂದೂ ಝಿಯಾ ಉಲ್ ಹಕ್ ಬಡಜನರ ಮೇಲೆ ದೌರ್ಜನ್ಯದಿಂದಲೂ ಅನ್ಯಾಯವಾಗಿಯೂ ವರ್ತಿಸಿದುದರ ದುಷ್ಪರಿಣಾಮವಾಗಿ ಅವರು ಅತ್ಯಂತ ದಾರುಣಕರವಾದ ರೀತಿಯ ಮೃತ್ಯುವಿಗೆ ಈಡಾದರೆಂದು ಎಂ. ಆರ್. ಡಿ. ಕನ್ವೀನರ್ ಹಾಗೂ ಅವಾಮೀ ನೇಶನಲ್ ಪಾರ್ಟಿಯ ನೇತಾರರಾದ ಖಾನ್ ಅಬ್ದುಲ್ ವಲೀಖಾನ್ ಹೇಳಿದರು.

ನಮ್ಮ ಹಕ್ಕುಗಳನ್ನು ನಮಗೆ ನೀಡದಿದ್ದರೆ, ನಾವು ಅವರ ಕೈಗಳನ್ನು ಹಿಂದಕ್ಕೆ ಬಿಗಿದುಕಟ್ಟಿ, ಆ ಬಳಿಕ ಹೊಟ್ಟೆಯನ್ನು ಸೀಳಿಹಾಕಿ ಅವುಗಳನ್ನು ಪಡೆಯುವೆವು. ಔಷಧಿ ಮತ್ತು ಪ್ರಾರ್ಥನೆಯಿಂದ ಪ್ರಯೋಜನವೇನೂ ಇಲ್ಲದಂತಹ ಪರಿಸ್ಥಿತಿಗೆ ಸಮಸ್ಯೆಗಳು ಬಂದು ತಲಪಿವೆ. ಇನ್ನು ಈಗ ದೊಡ್ಡ ಶಸ್ತ್ರಚಿಕಿತ್ಸೆಯೇ ಬೇಕಾಗಬಹುದು. ಇದನ್ನೇ ರಾಜಕೀಯ ಭಾಷೆಯಲ್ಲಿ ಕ್ರಾಂತಿ ಎಂದು ಹೇಳುತ್ತಾರೆ. ನಾವಿನ್ನು ಗುಲಾಮರ ಗುಲಾಮರಾಗಿ ಬಾಳಲು ಇಚ್ಛಿಸುವುದಿಲ್ಲ ಎಂದು ಅವರು ಘೋಷಿಸಿದರು.

ಈ ಕಾಲಘಟ್ಟದ ಪ್ರತಿಯೊಬ್ಬ ಫಿರ್‌ಔನ್ ಸಹ ಝಿಯಾ ಉಲ್ ಹಕ್‌ರಿಗೆ ಸಂಭವಿಸಿದ ಘಟನೆಯಿಂದ ಪಾಠ ಕಲಿಯಬೇಕಾಗಿದೆ. ಅವರು ಜನರ ಹಕ್ಕುಗಳನ್ನು ಕಸಿದುಕೊಂಡಿದ್ದರು. ಬಡ-ನಿರಪರಾಧಿಗಳ ಮೇಲೆ ಅಕ್ರಮ, ಅನ್ಯಾಯ, ಅನೀತಿಯಿಂದ ವರ್ತಿಸಿದರು. ಅದರ ಫಲವಾಗಿ ಅವರೊಂದು ಭೀಭತ್ಸಕರ ಮರಣಕ್ಕೆ ತುತ್ತಾದರು ಎಂದು ಅವರು ನುಡಿದರು.

ನಾವು ಅವರ ಜನಾಸ ಪ್ರಾರ್ಥನೆ ಮಾಡಿದೆವು. ಅವರ ಶವಪೆಟ್ಟಿಗೆಯಲ್ಲಿ ಅವರ ದೇಹದ ಏನಾದರೂ ಅವಶೇಷವಿತ್ತೇ? ಎಲ್ಲಾ ಅಕ್ರಮಿಗಳ ಅಂತ್ಯವೂ ಇದೇ ರೀತಿಯಾಗುತ್ತದೆ. ಆದರೆ ನಮ್ಮ ಪ್ರಯತ್ನಗಳು ಮುಂದುವರಿಯುತ್ತಲೇ ಇರಬೇಕು. ಝಿಯಾ ಉಲ್ ಹಕ್‌ರವರ ಅವಶೇಷಗಳು ಬಾಕಿಯುಳಿಯುವ ವರೆಗೆ ಅದು ಮುಂದುವರಿಯುವುದು. ಝಿಯಾರ ಅವಶೇಷಗಳು ಎಂದರೆ ಅವರ ಆಡಳಿತ ಸಹಕಾರಿಗಳು ಎಂದೇ ಅರ್ಥ ಎಂದು ಅವರು ಹೇಳಿದರು.

ತನ್ನ ಭಾಷಣವನ್ನು ಮುಂದುವರಿಸುತ್ತಾ ಅವರು ಹೀಗೆಂದರು: 41 ವರ್ಷ ಕಳೆದರೂ ಸಹ ಮೌಲಾನಾ ಝಿಯಾ ಉಲ್ ಹಕ್, ಇಸ್ಲಾಮಿನಲ್ಲಿ ರಾಜಕೀಯ ಪಕ್ಷಗಳಿಗೆ ಅನುಮತಿ ಇಲ್ಲವೆಂದು ಹೇಳುತ್ತಿದ್ದರು. ಅವರು ಇಸ್ಲಾಮನ್ನು ತನ್ನ ಸ್ವಾರ್ಥ ಉದ್ದೇಶಕ್ಕೋಸ್ಕರ ಉಪಯೋಗಿಸಿದರು. ಮೌಲಾನಾ ಝಿಯಾ ಇಸ್ಲಾಮನ್ನು. ತನ್ನ ಸ್ಥಾನವನ್ನು ಭದ್ರಪಡಿಸಲಿಕ್ಕಾಗಿ ಉಪಯೋಗಿಸಿದರು. ನಮ್ಮ ದೌರ್ಭಾಗ್ಯವೆಂದು ಹೇಳಲೇ, ನಮ್ಮ ಆಡಳಿತಗಾರರು ಚರಿತ್ರೆಯನ್ನು ಓದುವುದಿಲ್ಲ. ಪವಿತ್ರ ಖುರ್‌ಆನಿನ ಪಾರಾಯಣವನ್ನು ಸಹ ಮಾಡುವುದಿಲ್ಲ. ಆದರೆ ಫಿರ್‌ಔನನಂತೆ ಹೇಳುತ್ತಾರೆ: 'ನಾನು ನಿಮ್ಮ ಪ್ರಭು (ರಬ್ಬ್). ಯಾವ ಪರಿಸ್ಥಿತಿಯಲ್ಲೂ ನನ್ನ ಆಜ್ಞೆಯನ್ನು ಸ್ವೀಕರಿಸಬೇಕಾಗುತ್ತದೆ. ನಿಮ್ಮ ಜೀವಿತವೂ ಮರಣವೂ ನನ್ನ ಕೈಯಲ್ಲಿದೆ' ಎಂದು.

("ಮಿಲ್ಲತ್" ದಿನ ಪತ್ರಿಕೆ, ಲಂಡನ್; "ಅನ್ಸರ್" ವಾರ ಪತ್ರಿಕೆ, ಲಂಡನ್: 9-9-1988)

ಓದಿದ್ದು

# ಯಾವ ಕ್ಷಣದಲ್ಲೂ ಜಗತ್ತು ನಾಶ

ಲಂಡನ್ : ಪುಟಾಣಿ ಕೀಟವೊಂದು ಇಡೀ ಜಗತ್ತನ್ನೇ ಸುಟ್ಟು ಭಸ್ಮ ಮಾಡಬಲ್ಲ ಅಣ್ವಸ್ತ್ರ ಸಮರವನ್ನು ನಡೆಸಲು ಸಮರ್ಥವೆಂದರೆ ನಿಮಗೆ ಆಶ್ಚರ್ಯವೆನಿಸಬಹುದು.

ಅಕಸ್ಮಾತ್ ಅಣ್ವಸ್ತ್ರ ಸಮರ ನಡೆದರೆ ಇಡೀ ಜಗತ್ತೇ ನಾಶವಾಗುವುದು ಖಂಡಿತ. ಅಣ್ವಸ್ತ್ರ ಸಮರ ನಡೆಯದೇ ಜಗತ್ತು ನಾಶವಾಗುವ ಬಗ್ಗೆ ವಿಜ್ಞಾನಿಗಳು ಗಂಭೀರ ಎಚ್ಚರಿಕೆ ನೀಡಿದ್ದಾರೆ.

ಅಣ್ವಸ್ತ್ರಗಳನ್ನು ನಿಯಂತ್ರಿಸುವ ಕಂಪ್ಯೂಟರ್‌ನೊಳಗೆ ಬರೀ ಒಂದು ಕೀಟ ಸೇರಿದರೂ ಸಾಕು ಅಥವಾ ಕಂಪ್ಯೂಟರ್‌ನ ಮೈಕ್ರೊಚಿಪ್ಸ್ ಕೆಟ್ಟರೂ ನಿಮಿಷ ಮಾತ್ರದಲ್ಲಿ ಅಣ್ವಸ್ತ್ರಗಳು ಸಿಡಿದು ಜಗತ್ತಿನ ಜೀವ ಸಂಕುಲ ಅಣ್ವಸ್ತ್ರ ಸಮರವಿಲ್ಲದೆಯೇ ಸುಟ್ಟು ಕರಕಲಾಗಬಹುದು.

ಸ್ವಇಚ್ಛೆಯಿಂದ ಹಾಗೂ ಬುದ್ಧಿ ಪೂರ್ವಕವಾಗಿ ನಡೆಸುವ ಅಣ್ವಸ್ತ್ರ ಯುದ್ಧಗಳಿಗಿಂತಲೂ, ಆಕಸ್ಮಿಕ 'ಅಣ್ವಸ್ತ್ರ ಸ್ಫೋಟ' ಅನಾಹುತ ನಡೆದರೆ ಊಹಿಸಲೂ ಅಸಾಧ್ಯವಾದ ಭೀಕರ ಅಪಾಯ ಸಂಘಟಿಸಬಹುದು.

ಲ್ಯಾಂಕೆಸ್ಟರ್ ವಿಶ್ವವಿದ್ಯಾನಿಲಯದ ವಿಜ್ಞಾನಿಗಳು ಕಂಪ್ಯೂಟರ್ ದೋಷದಿಂದ ಸಂಭವಿಸಬಹುದಾದ ಭೀಕರ ಅಪಘಾತದ ಬಗ್ಗೆ ಎಚ್ಚರಿಕೆ ನೀಡಿದ್ದಾರಲ್ಲದೆ, ಅಣ್ವಸ್ತ್ರ ನಿಯಂತ್ರಿತ ಕಂಪ್ಯೂಟರ್‌ಗಳು "ತಮಗಿಷ್ಟ" ಬಂದಾ ಕ್ಷಣದಲ್ಲಿ ಅಣ್ವಸ್ತ್ರ ಸಮರವನ್ನು ನಡೆಸಿ ಇಡೀ ಜಗತ್ತನ್ನು ಕ್ಷಣಮಾತ್ರದಲ್ಲಿ ಸುಟ್ಟು ಭಸ್ಮ ಮಾಡಬಲ್ಲವು ಎಂದು ಗಂಭೀರವಾದ ಮುನ್ನೆಚ್ಚರಿಕೆ ನೀಡಿದ್ದಾರೆ.

ಈ ವೈಜ್ಞಾನಿಕ ಜಗತ್ತಿನ ಅಂತ್ಯ ಒಂದೇ ಒಂದು ಪುಟ್ಟ 'ಯಂತ್ರದ ಗುಂಡಿ'ಯಲ್ಲಿದೆ.

— ಮುಂಗಾರು ಜೂನ್ 3, 1988

# ಕ್ರಿಸ್ತನ ಜನ್ಮದಿನ ಜೂನ್ 17

ಹೊಸದಿಲ್ಲಿ : ಯೇಸುಕ್ರಿಸ್ತನ ಜನನ ಕ್ರಿ. ಪೂ. ಜೂನ್ 17ರಂದು ಆಯಿತು. ಸಾರ್ವತ್ರಿಕ ನಂಬಿಕೆಯಂತೆ ಡಿಸೆಂಬರ್ 25ರಂದು ಅಲ್ಲ ಎಂದು ಯೇಸುಕ್ರಿಸ್ತನ ಜೀವನದ ಕುರಿತು ಇತ್ತೀಚೆಗೆ ಪ್ರಕಟವಾದ ಪುಸ್ತಕವೊಂದರಲ್ಲಿ ಹೇಳಲಾಗಿದೆ.

ಅಸಾಧಾರಣ ಹಾಗೂ ಅಲೌಕಿಕ ಸನ್ನಿವೇಶದಲ್ಲಿ ಈ ಲೋಕದಲ್ಲಿ ಯೇಸುವಿನ ಅವತಾರವಾಯಿತು. ಮೇರಿ ಡಿಸೆಂಬರಿನಲ್ಲಿ ಗರ್ಭ ಧರಿಸಿದಳು. ಯೇಸುವಿನ ಜನನ ಜೂನ್‌ನಲ್ಲಿ ಆಯಿತು ಎಂದು "ಫಿಫ್ತ್ ಗೋಸ್ಪೆಲ್" ಎಂಬ ಗ್ರಂಥದ ಲೇಖಕ ಫೀದಾ ಹಸನೈನ್ ಹೇಳುತ್ತಾರೆ.

ಅವರು ತನ್ನ ವಾದವನ್ನು ಸೈಂಟ್ ಲೂಕನ ಈ ಮಾತುಗಳಿಂದ ಸಮರ್ಥಿಸಿದ್ದಾರೆ: "ಕುರುಬರು ರಾತ್ರಿಯಲ್ಲಿ ಗದ್ದೆಯಲ್ಲಿ ತಿರುಗಾಡುತ್ತಾ ಕುರಿಮಂದೆಯನ್ನು ಕಾಯುವ ಸಮಯದಲ್ಲಿ ಕ್ರಿಸ್ತನು ಜನಿಸಿದನು" ಎಂದು ಲೂಕ್ ಹೇಳಿದ್ದಾನೆ. ಡಿಸೆಂಬರ್ ತಿಂಗಳಿನಲ್ಲಿ ಬೆತ್ಲೆಹೇಮ್ ಸೇರಿದಂತೆ ಇಡೀ ಪ್ಯಾಲೆಸ್ತೀನ್‌ನಲ್ಲಿ ಚಳಿಯ ಪ್ರತಾಪವಿರುತ್ತದೆ

ಹಾಗೂ ಕುರಿ ಮಂದೆಯನ್ನು ಮಾರ್ಚ್ ಮತ್ತು ಡಿಸೆಂಬರಿನ ನಡುವೆ ಗದ್ದೆಯಲ್ಲಿ ಮೇಯಲು ಬಿಡುತ್ತಾರೆ ಎಂದು ಪವನ ಶಾಸ್ತ್ರಜ್ಞರು ಮಾಡಿರುವ ದಾಖಲೆಗಳಿಂದ ವ್ಯಕ್ತವಾಗುತ್ತದೆ.

"ಮುಂಬರುವ ಪ್ರವಾದಿಯು ಮೀನಿನ ಸಂಕೇತದೊಂದಿಗೆ ಜನಿಸುತ್ತಾನೆ" ಎಂದು ತಾಲ್ಮುಡ್ ಹೇಳುತ್ತದೆ. ಇದನ್ನು ರಾಶಿ ಚಕ್ರದ ಪ್ರಕಾರ ಮೀನರಾಶಿಯೆಂದು ಕರೆಯುತ್ತಾರೆ. ಸೂರ್ಯನು ಮೀನರಾಶಿಯನ್ನು ಪ್ರವೇಶಿಸುವುದು ಜೂನಿನಲ್ಲಿ ಎಂದು ಜಮ್ಮು–ಕಾಶ್ಮೀರದಲ್ಲಿ ಪ್ರಾಕ್ತನ ಶಾಸ್ತ್ರ ನಿರ್ದೇಶಕರಾಗಿದ್ದ ಹಾಗೂ ಯೇಸುವಿನ ಜೀವನದ ಕುರಿತು ಅನೇಕ ಗ್ರಂಥಗಳನ್ನು ಬರೆದಿರುವ ಹಸನ್ಯನ್ ಹೇಳುತ್ತಾರೆ..................

ಹಾಗಾದರೆ ಯೇಸುವಿನ ಜನ್ಮದಿನವನ್ನು ಡಿಸೆಂಬರ್ 25ರಂದು ಯಾಕೆ ಆಚರಿಸುತ್ತಾರೆ? ರೋಮನರು ಡಿಸೆಂಬರ್ 25ನ್ನು ಲೋಕರಕ್ಷಕನಾದ ಮಿತ್ರನ (ಸೂರ್ಯ) ಜನ್ಮದಿನ ಎಂದು ಆಚರಿಸುತ್ತಿದ್ದರು. (ರೋಮನರು ಸೂರ್ಯ ಪೂಜಕರು. ಸೂರ್ಯನನ್ನು ಮಿತ್ರ ಎಂಬ ಸಂಸ್ಕೃತ ಹೆಸರಿನಿಂದಲೇ ಕರೆಯುತ್ತಿದ್ದರು.) ಈ ದಿನವನ್ನು ಅವರು "ಡೈಸ್ ನತಾಲಿಸ್ ಇನ್ವಿಕ್ಟಸ್" (ಅಜೇಯನ ಜನ್ಮದಿನ) ಎಂದೂ ಕರೆಯುತ್ತಿದ್ದರು. ರೋಮನರ ಈ ಪ್ರಮುಖ ಹಬ್ಬವನ್ನು ಆದಿ ಕ್ರೈಸ್ತರು ತಮ್ಮದಾಗಿಸಿಕೊಂಡು ಅದೇ ದಿನ ಕ್ರಿಸ್ತ ಜಯಂತಿಯನ್ನು ಆಚರಿಸತೊಡಗಿದರು. ಸೂರ್ಯನ ಜನನ ಡಿಸೆಂಬರ್ 25ರಂದು ಆಯಿತೆಂಬುದು ರೋಮನರ ನಂಬಿಕೆಯಾಗಿತ್ತು.

— ಉದಯವಾಣಿ ಜುಲೈ 6, 1988

# 5 ಸಾವಿರ ವರ್ಷ ಹಿಂದೆ ಯೇಸು ಜನ್ಮದ ಭವಿಷ್ಯ

ಹೈದರಾಬಾದ್: ಕ್ರಿ. ಪೂ. 3000 ವರ್ಷದ ಸುಮಾರಿಗೆ ವೇದವ್ಯಾಸರು ಬರೆದುದೆನ್ನಲಾದ 'ಭವಿಷ್ಯ ಪುರಾಣ'ದಲ್ಲಿ ಯೇಸುಕ್ರಿಸ್ತನ ಬಗ್ಗೆ ಭವಿಷ್ಯ ನುಡಿಯಲಾಗಿದೆ ಎಂದು ಹಿರಿಯ ಐ. ಎ. ಎಸ್. ಅಧಿಕಾರಿ ಹಾಗೂ ಆಂಧ್ರಪ್ರದೇಶ ಜಿಲ್ಲಾ ಗಜೆಟಿಯರ್ ಸಂಪಾದಕ ಡಾ। ವೇದವ್ಯಾಸ್ ಅವರು ತಿಳಿಸಿದ್ದಾರೆ.

'ವೀರಬ್ರಹ್ಮೇಂದ್ರ ಸ್ವಾಮಿಯವರ ಭವಿಷ್ಯ' ಎನ್ನುವ ತಮ್ಮ ಈಚಿನ ಪುಸ್ತಕದಲ್ಲಿ ಡಾ। ವೇದವ್ಯಾಸ್ ಈ ವಿಷಯವನ್ನು ತಿಳಿಸಿದ್ದಾರೆ. ಯೇಸುಕ್ರಿಸ್ತ ಹಿಮಾಲಯಕ್ಕೆ ಬಂದಿದ್ದು ಅಲ್ಲಿ ಸಿದ್ಧಯೋಗಿಗಳು ಮತ್ತು ಋಷಿಗಳ ನಿರ್ದೇಶನದಲ್ಲಿ ತಪಸ್ಸು ಮಾಡಿದ್ದ ಎಂದವರು ವಿವರಿಸಿದ್ದಾರೆ.

ಈಶ ಪುತ್ರ (ದೇವರ ಮಗ) ಕುಮಾರಿ ಗರ್ಭಸಂಭವ, ಎನ್ನುವ ಭವಿಷ್ಯ ಪುರಾಣದ ಉಲ್ಲೇಖಗಳು ಯೇಸು ಕ್ರಿಸ್ತನನ್ನು ಕುರಿತಾಗಿವೆ. ಯೇಸು ಜನ್ಮವಲ್ಲದೆ ಈಗ ಇತಿಹಾಸದ ಭಾಗವಾಗಿರುವ ಕಲಿಯುಗದ ಎಷ್ಟೋ ವಿಷಯಗಳ ಬಗ್ಗೆ ಭವಿಷ್ಯ ಪುರಾಣ ವಿವರಿಸುತ್ತದೆ ಎಂದು ಡಾ। ವೇದವ್ಯಾಸ್ ಹೇಳಿದ್ದಾರೆ.

— ಮುಂಗಾರು ಜುಲೈ 25, 1988

# ಭಗವದ್ಗೀತೆಯಲ್ಲಿರಬೇಕಿದ್ದ 45 ಶ್ಲೋಕಗಳು ಇಲ್ಲಿದೆ!

ಹೈದರಾಬಾದ್: ಕಳೆದು ಹೋಗಿದೆಯೆಂದು ಭಾವಿಸಲಾಗಿರುವ ಲೋಕಪ್ರಸಿದ್ಧ ಹಿಂದೂ ಗ್ರಂಥ 'ಭಗವದ್ಗೀತೆ'ಯ ಇನ್ನುಳಿದ 45 ಶ್ಲೋಕಗಳನ್ನು ತಾನೀಗ ಸಂಶೋಧಿಸಿರುವುದಾಗಿ ಆಂಧ್ರಪ್ರದೇಶದ ಹಿರಿಯ ಐ. ಎ. ಎಸ್ ಅಧಿಕಾರಿ ಡಾ। ವೇದವ್ಯಾಸ್ ಪ್ರಕಟಿಸಿದ್ದಾರೆ.

ಸದ್ಯ ಎಲ್ಲ ಕಡೆ ಲಭ್ಯವಿರುವ 'ಭಗವದ್ಗೀತೆ'ಯ ಆವೃತ್ತಿಯಲ್ಲಿರುವುದು 700 ಶ್ಲೋಕಗಳು ಮಾತ್ರ. ವಾಸ್ತವವಾಗಿ ಇರಬೇಕಾದುದು 745 ಶ್ಲೋಕಗಳು. ಈ ನಿಟ್ಟಿನಲ್ಲಿ ತಾನು ಗೈದ ಸಂಶೋಧನೆಯ ಪರಿಣಾಮವಾಗಿ ತನಗೆ ಇನ್ನುಳಿದ 45 ಶ್ಲೋಕಗಳನ್ನುಳ್ಳ ಅಪೂರ್ವ ತಾಡವೋಲೆಯ ಹಸ್ತಪ್ರತಿಯೊಂದು ಲಭಿಸಿರುವುದಾಗಿ ಈ ಸಂಶೋಧಕ ತಿಳಿಸಿದ್ದಾರೆ.

ಮಹಾಭಾರತ ಯುದ್ಧ ಜರಗಿದ್ದ ಕಾಲವನ್ನು ನಿಖರವಾಗಿ ತಿಳಿಸಿರುವ ಸಂಶೋಧನಾ ಕಾರ್ಯಕ್ಕಾಗಿ ಸಂಸ್ಕೃತದಲ್ಲಿ ಡಾಕ್ಟರೇಟ್ ಪದವಿ ಪಡೆದಿರುವ ಡಾ। ವೇದವ್ಯಾಸ್, ಇದೀಗ ಆಂಧ್ರಪ್ರದೇಶದಲ್ಲಿ ಜಿಲ್ಲಾ ಗಜೆಟಿಯರ್ ಗಳ ಸಂಪಾದಕೀಯ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ. ಅಮೆರಿಕೆಯಲ್ಲಿರುವ ಯೋಗ ಸಂಘದ ಅಧ್ಯಕ್ಷರೂ ಆಗಿರುವ ಅವರು ಸದ್ಯ ಈ ಶ್ಲೋಕಗಳನ್ನು ಪ್ರಕಟಣೆಗಾಗಿ ಅಣಿಗೊಳಿಸುತ್ತಿದ್ದು, ಇವುಗಳನ್ನು ವಿಶ್ವದ ಎಲ್ಲೆಡೆ ತಲುಪಿಸಬಲ್ಲ ಬೃಹತ್ ಪ್ರಕಾಶನ ಸಂಸ್ಥೆಯೊಂದಕ್ಕಾಗಿ ಕಾಯುತ್ತಿದ್ದಾರೆ.

ಈ 45 ಶ್ಲೋಕಗಳು ಮೂಲಕವಿಯಿಂದ ರಚಿತವಾದವುಗಳೆ ಅಥವಾ ಪ್ರಕ್ಷಿಪ್ತವೆ ಎಂಬುದರ ಪರಿಶೀಲನೆಯಲ್ಲೂ ತೊಡಗಿದ್ದಾರೆ ಡಾ। ವೇದವ್ಯಾಸ್.

— ಉದಯವಾಣಿ ಆಗಸ್ಟ್ 23, 1988

# ಹೇಳಿಕೆ ಶಾಸ್ತ್ರಬದ್ಧ: ಪುರಿಶ್ರೀ ಸಮರ್ಥನೆ

ವಾರಣಾಸಿ: ಹರಿಜನರ ವಿರುದ್ಧವಾಗಿ ಅಥವಾ ಸತಿಪದ್ಧತಿಯನ್ನು ಅನುಮೋದಿಸಿ ತಾನಿತ್ತಿರುವ ಹೇಳಿಕೆಗಳು 'ಶಾಸ್ತ್ರ'ಗಳಿಗೆ ಅನುಗುಣವಾಗಿಯೇ ಇವೆ ಎಂಬುದಾಗಿ ಪುರಿ ಜಗದ್ಗುರು ಶಂಕರಾಚಾರ್ಯ ಪೀಠಾಧೀಶ ಸ್ವಾಮಿ ನಿರಂಜನದೇವ ತೀರ್ಥ ಹೇಳಿದ್ದಾರೆ.

"ನಾನು ಇತ್ತಿರುವ ಹೇಳಿಕೆಗಳು ಶಾಸ್ತ್ರ ವಿರೋಧ"ವೆಂದಾದಲ್ಲಿ ಪೀಠತ್ಯಾಗ ಗೈದು ಯಾವ ವಿಚಾರಣೆ ಎದುರಿಸಲೂ ತಾವು ಸಿದ್ಧರಿರುವುದಾಗಿ ಅವರು ಸವಾಲೆಸೆದಿದ್ದಾರೆ.

ಕ್ರೈಸ್ತ ಹಾಗೂ ಮುಸ್ಲಿಂ ಧಾರ್ಮಿಕ ಮುಖಂಡರುಗಳು ಬೈಬಲ್ ಮತ್ತು ಖುರಾನ್‌ಗಳಲ್ಲಿ ಲಿಖಿತವಾಗಿರುವುದನ್ನು ಬೋಧಿಸಬಹುದಾದರೆ, ಇದೇ ನೀತಿ ಹಿಂದೂ ಸಂನ್ಯಾಸಿಗಳಿಗೂ ಶಂಕರಾಚಾರ್ಯ ಪೀಠದ ಯತಿಗಳಿಗೂ ಅನ್ವಯವಾಗಬೇಕು ಎಂದವರು ಪತ್ರಕರ್ತರಲ್ಲಿ ನಿನ್ನೆ ಮಾತನಾಡುತ್ತ ವಾದಿಸಿದರು.

— ಉದಯವಾಣಿ ಆಗಸ್ಟ್ 25, 1988

# ನಿಲ್ಲಲು ನೆಲೆ ಇಲ್ಲದ ಇದಿ ಅಮೀನ್

ಕಿಂಶಾಸ: ಹಿಂದೆ ಆಫ್ರಿಕಾದಲ್ಲಿ ಅತ್ಯಂತ ಕ್ರೂರ ಸರ್ವಾಧಿಕಾರಿಯೆಂದು ಜನಜನಿತವಾಗಿದ್ದ ಉಗಾಂಡಾದ ಇದಿ ಅಮೀನ್ ಅವರ ಮರು ಪ್ರವೇಶಕ್ಕೆ ಸೌದಿ ಅರೇಬಿಯಾವು ನಿಷೇಧ ಹೇರಿದ್ದು, ಅವರಿಗೆ ನಿಲ್ಲಲು ಆಶ್ರಯವೇ ಇಲ್ಲದವರಾಗಿದ್ದಾರೆ.

ಪದಚ್ಯುತ ಉಗಾಂಡಾದ ನಾಯಕ ಇದಿ ಅಮೀನ್ ಅವರನ್ನು ಗುರುವಾರ ಜ್ಯಾರೆ ಉಚ್ಚಾಟಿಸಿತ್ತು. ಆದರೆ ಸೌದಿ ಅರೇಬಿಯಾವು ಅವರ ಪ್ರವೇಶಕ್ಕೆ ನಿಷೇಧ ವಿಧಿಸಿದುದರಿಂದ ಅಮೀನ್ ಮರಳಿ ಶುಕ್ರವಾರ ಕಿಂಶಾಸಾಕ್ಕೆ ಬಂದರು,

ವಿಮಾನವೊಂದರ ಮೂಲಕ ಜೆಡ್ಡಾಗೆ ತೆರಳಲು ಅನುಕೂಲವಾಗುವಂತೆ ಜ್ಯಾರೆ ಸರಕಾರವು ಅಮಿನ್ ಅವರನ್ನು ವಿಮಾನವೊಂದರ ಮೂಲಕ ಸೆನೆಗಲ್‌ಗೆ ಕಳುಹಿಸಿತ್ತು. ಆದರೆ 1979ರಲ್ಲಿ ಪದಚ್ಯುತರಾಗಿ ಬಳಿಕ ಸೌದಿ ಅರೇಬಿಯಾದಲ್ಲಿ ನೆಲೆಸಿದ್ದ ಅಮಿನ್ ಅವರನ್ನು ಮತ್ತೆ ದೇಶದೊಳಗೆ ಸೇರಿಸಿಕೊಳ್ಳಲು ಸೌದಿ ಅರೇಬಿಯಾ ನಿರಾಕರಿಸಿತು.

ಸುಳ್ಳು ಹೆಸರು ಹೇಳಿ ಇನ್ನೋರ್ವ ಪುತ್ರನೊಂದಿಗೆ ಆಫ್ರಿಕಾಕ್ಕೆ ನುಸುಳಲು ಯತ್ನಿಸಿದ ಆರೋಪದ ಮೇಲೆ ಜನವರಿ ಮೂರರಂದು ಕಿಂಶಾಸ ವಿಮಾನ ನಿಲ್ದಾಣದಲ್ಲಿ ಅಮಿನ್ ಬಂಧನಕ್ಕೊಳಗಾಗಿದ್ದರು.

— ಮುಂಗಾರು ಜನವರಿ 18, 1989

# ಹಿಂಸಾಪೂರ್ಣ ಜಿಯಾ ಆಳ್ವಿಕೆ

ಇಸ್ಲಾಮಾಬಾದ್ : ಪಾಕಿಸ್ತಾನದ ಅಧ್ಯಕ್ಷ ಜನರಲ್ ಜಿಯಾ ಉಲ್ ಹಕ್ ಅವರ 11 ವರ್ಷದ ಆಳ್ವಿಕೆ "ಅತ್ಯಂತ ಭಯಾನಕ ಹಿಂಸಾಕೃತ್ಯದಿಂದ ಕೂಡಿದುದಾಗಿತ್ತು" ಎಂದು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿಯ ಅಧ್ಯಕ್ಷೆ ಬೆನಜಿರ್ ಭುಟ್ಟೋ ಬಣ್ಣಿಸಿದ್ದಾರೆ.

ಹಿಂಸೆಯಿಂದಲೇ ಆರಂಭವಾಗಿ ಹಿಂಸೆಯಿಂದಲೇ ಪರ್ಯಾವಸಾನಗೊಂಡ ಅವಧಿಯದು. ಜನರಲ್ ಜಿಯಾ ಆಳ್ವಿಕೆ ಈಗ ನಿಜಕ್ಕೂ ಕೊನೆಗೊಂಡಿದೆ ಎಂಬುದು ಊಹೆಗೂ ಸಿಲುಕದ್ದು ಎಂದು ಬೆನಜಿರ್ ಹೇಳಿದ್ದಾರೆ.

— ಮುಂಗಾರು ಆಗಸ್ಟ್ 19, 1988

# ವಿಧಿ ಲೀಲೆ

ಇಸ್ಲಾಮಾಬಾದ್ : "ಪಾಕಿಸ್ತಾನದ ಅಧ್ಯಕ್ಷನಾಗಿ ತಾನು ಸುದೀರ್ಘ ಕಾಲ ಮುಂದುವರಿಯುವೆ ಮತ್ತು ಮುಂದಿನ ವರ್ಷವೂ ನಿಮ್ಮನ್ನುದ್ದೇಶಿಸಿ ಮಾತನಾಡುವೆ" ಎಂದು ಒಂದೂವರೆ ತಿಂಗಳ ಹಿಂದೆಯಷ್ಟೆ ಜನರಲ್ ಜಿಯಾ ಉಲ್ ಹಕ್ ವಿತ್ತ ಖಾತೆಯ ಅಧಿಕಾರಿಗಳ ಸಭೆಯೊಂದರಲ್ಲಿ ಹೇಳಿದ್ದರು.

ಆದರೆ ವಿಧಿ ಬೇರೊಂದನ್ನು ಬಗೆಯಿತು. ಜಿಯಾ ವಿಮಾನ ದುರಂತದಲ್ಲಿ ಮೊನ್ನೆ ದುರ್ಮರಣಕ್ಕೀಡಾದರು.

"ನಾನು ಹೆಚ್ಚು ದಿನ ಅಧಿಕಾರದಲ್ಲುಳಿಯುವೆನೆನ್ನುವ 'ತಪ್ಪಭಿಪ್ರಾಯ'ವನ್ನೇನೂ ಇಟ್ಟುಕೊಳ್ಳಬೇಡಿ" ಎಂದು ಜಿಯಾ ಅಧಿಕಾರಿಗಳಿಗೆ ಕಿವಿಮಾತು ಹೇಳಿದ್ದರು. ತನ್ನ ಆಜ್ಞೆಗಳನ್ನು ಅಧಿಕಾರಿಗಳು ಪಾಲಿಸದಿರುವ ಬಗ್ಗೆ ಚರ್ಚಿಸಲು ಜಿಯಾ ಈ ಸಭೆ ಕರೆದಿದ್ದರು.

— ಉದಯವಾಣಿ ಆಗಸ್ಟ್ 21, 1988

# ಛಿನ್ನ ವಿಚ್ಛಿನ್ನವಾದ ಜಿಯಾ ದೇಹ

ಜಿಯಾ ಅವರ ಛಿನ್ನ ವಿಚ್ಛಿನ್ನವಾದ ದೇಹವನ್ನು ಅವರ ಹಲ್ಲಿನ ಪರೀಕ್ಷೆಯಿಂದ ಮಾತ್ರ ಗುರುತು ಹಿಡಿಯಲಾಯಿತು.

ಬಹಳವಾಗಿ ಹಲ್ಲಿನ ರೋಗಕ್ಕೀಡಾಗಿದ್ದ ಅವರ ಎದುರಿನ ಆರು ಹಲ್ಲುಗಳನ್ನು ಕೆಲವು ವರ್ಷಗಳ ಹಿಂದೆ ಕಿತ್ತು ಕೃತಕ ಹಲ್ಲುಗಳನ್ನು ಜೋಡಿಸಲಾಗಿತ್ತು. ಜ। ಜಿಯಾ ಅವರ ದಂತವೈದ್ಯರು ದೇಹವನ್ನು ಗುರುತಿಸಿದರು.

— ಉದಯವಾಣಿ ಆಗಸ್ಟ್ 20, 1988

ದಫನಕ್ಕೆ ಮೊದಲು ಶವದ ಮುಖವನ್ನು ಕೊನೆಯ ಬಾರಿಗೆ ತೋರಿಸುವುದು ಸಂಪ್ರದಾಯ. ಆದರೆ ಜಿಯಾರ ಶವ ಚಿಂದಿ ಚಿಂದಿಯಾಗಿದ್ದುದರಿಂದ ಈ ಸಂಪ್ರದಾಯವನ್ನು ಬದಿಗಿರಿಸಲಾಯಿತು.

— ಉದಯವಾಣಿ ಆಗಸ್ಟ್ 21, 1988

The crowds thronging Islamabad on a sunny afternoon could easily have been mistaken for people celeberating a holiday... while men seemed to enjoy a day out in a country starved of entertainment... As the coffin containing only his teeth (nothing else of him could be found) was lowered into the grave, a 21 gun salute sounded.

— *Financial Times*, 22nd August 1988

# ಝಿಯಾ ಸಮಾಧಿಯನ್ನು ಫೈಝಲ್ ಮಸೀದಿಯಿಂದ ನೀಗಿಸಲು ಸೌದಿ ಬೇಡಿಕೆ

ನವದೆಹಲಿ: (ಕುಲ್ದೀಪ್ ನಯ್ಯರ್)– ಇಸ್ಲಾಮಾಬಾದಿನಲ್ಲಿರುವ ಫೈಝಲ್ ಮಸೀದಿಯ ಮುಂಭಾಗದಿಂದ ಜನರಲ್ ಝಿಯಾರ ಮಖ್‌ಬರವನ್ನು (ಸಮಾಧಿ) ತೆಗೆದು ಬೇರೆಡೆಗೆ ಸ್ಥಳಾಂತರಿಸಬೇಕೆಂದು ಸೌದಿ ಅರೇಬಿಯಾ ಸರಕಾರವು ಪಾಕಿಸ್ತಾನವನ್ನು ಕೇಳಿಕೊಂಡಿದೆ. ಅನೇಕ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಮಸೀದಿಯನ್ನು ಸೌದಿ ಅರೇಬಿಯಾ ನಿರ್ಮಿಸಿತ್ತು. ಅಧಿಕೃತ ವಕ್ತಾರರ ಹೇಳಿಕೆಯಂತೆ ಈ ಮಸೀದಿಯು ಒಂದು ಅಂತರಾಷ್ಟ್ರೀಯ ಇಸ್ಲಾಮಿಕ ಕೇಂದ್ರವಾಗಲಿದ್ದು ದಿನ ಕಳೆದಂತೆ ಝಿಯಾ ಆಡಳಿತದ ದುಷ್ಪರಿಣಾಮಗಳು ಬಯಲಿಗೆಳೆಯಲ್ಪಡುವುದರಿಂದ ಇದು ಒಂದು ವಿವಾದ ಸ್ಥಳವಾಗಿ ಮಾರ್ಪಡುವ ಭೀತಿಯಿದೆ.

ಈ ಸಮಾಧಿಯನ್ನು 4 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಇಸ್ಲಾಮಾಬಾದಿನ ಸಮೀಪದ ಕಹೋಟ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ನೋಂದಣಿ ಹೊಂದಿರುವ ಒಂದು ಕಂಪೆನಿಯು ಇದನ್ನು ನಿರ್ಮಿಸಿದೆ. ಗೋರಿಗಾಗಿ ಸ್ಥಳವನ್ನು ಆರಿಸುವಾಗಲೇ ಫೈಝಲ್ ಮಸೀದಿಯು ಇಸ್ಲಾಮಿಕ ಕೇಂದ್ರಕ್ಕೆ ಬಹಳ ಹತ್ತಿರ ಇದೆ ಎಂಬ ಕಾರಣಕ್ಕಾಗಿ ಕೆಲವು ಆಕ್ಷೇಪಗಳು ಎತ್ತಲ್ಪಟ್ಟಿದ್ದವು. ಆದರೆ, ಜನರಲ್ ಜಿಯಾರ ವಿಮಾನ ದುರ್ಘಟನೆ ಮತ್ತು ಶವವನ್ನು ದಫನ ಮಾಡುವ ಮಧ್ಯೆ ಕಾಲಾವಕಾಶ ಬಹಳ ಕಡಿಮೆ ಇದ್ದುದರಿಂದ ಈ ಕುರಿತು ಹೆಚ್ಚಿನ ಪ್ರತಿಭಟನೆ ಸಾಧ್ಯವಾಗಲಿಲ್ಲ. ಈಗ ಈ ದುರ್ಘಟನೆಯು ಆಘಾತದಿಂದ ಚೇತರಿಸಿರುವುದರಿಂದ ಆ ಶವಪೆಟ್ಟಿಗೆಯನ್ನು ಅಲ್ಲಿಂದ ತೆಗೆದು ಬೇರೆಲ್ಲಿಗಾದರೂ ಸ್ಥಳಾಂತರಿಸುವಂತೆ ಸೌದಿ ಅರೇಬಿಯಾ ಸರಕಾರವು ಒತ್ತಾಯಿಸಿದೆ. ಯಾಕೆಂದರೆ, ಭವ್ಯವಾದ ಮಸೀದಿಯ ಸಮೀಪ ಈ ಸಮಾಧಿಯ ಇರುವಿಕೆಯು ಅಷ್ಟೊಂದು ಒಳ್ಳೆಯದಾಗಿ ಕಾಣಿಸುವುದಿಲ್ಲ.

ಗುಲಾಂ ಇಸ್‌ಹಾಕ್ ಖಾನ್ ಅವರ ಉಸ್ತುವಾರಿ ಆಡಳಿತದ ಕಾಲದಲ್ಲಿಯೇ ಸೌದಿ ಅರೇಬಿಯಾ ತನ್ನ ಈ ಬೇಡಿಕೆಯನ್ನು ಮುಂದಿಟ್ಟಿತ್ತು. ಈಗ ಬೆನಜೀರ್ ಭುಟ್ಟೋರ ಸರಕಾರವು ಇದರ ಕುರಿತು ತೀರ್ಮಾನ ಕೈಗೊಳ್ಳಬೇಕಾಗಿರುತ್ತದೆ. ಅವರ ಸರಕಾರವು ಈ ಅಪೇಕ್ಷೆಗೆ ಬೆಂಬಲ ನೀಡುವ ಸಾಧ್ಯತೆಯಿದೆ. ಆದರೆ, ಆ ರೀತಿ ಮಾಡಿದಲ್ಲಿ ಇಸ್ಲಾಮಿ ಜಮ್ಹೂರಿ ಇತ್ತಿಹಾದ್ ಪಕ್ಷವು ಆ ಕುರಿತು ಬಹಳಷ್ಟು ಗೊಂದಲವೆಬ್ಬಿಸಬಹುದು. ಯಾಕೆಂದರೆ ಚುನಾವಣೆ ವೇಳೆ ಅದು ಜನರಿಗೆ "ಝಿಯಾ ಇಸಂ"ನ ಭರವಸೆಯನ್ನು ನೀಡಿತ್ತು. ಒಂದು ವೇಳೆ ಬೆನಜೀರ್ ಭುಟ್ಟೋರ ಸರಕಾರವು ಸೌದಿ ಅರೇಬಿಯಾದ ಈ ಅಪೇಕ್ಷೆಯನ್ನು ತಿರಸ್ಕರಿಸಿದರೂ ಕೂಡ ಫೈಝಲ್ ಮಸೀದಿಯ

**ಅಹ್ಮದಿಯಾ ವಾರ್ತೆ**

# ಖಾದಿಯಾನಿನಲ್ಲಿ ವಾರ್ಷಿಕ ಮಹಾಸಮ್ಮೇಳನ

ಅಹ್ಮದಿಯಾ ಜಮಾಅತಿನ ಪ್ರಥಮ ಶತಮಾನದ ಕೊನೆಯ ವಾರ್ಷಿಕ ಮಹಾ ಸಮ್ಮೇಳನವು ಕಳೆದ ಡಿಸೆಂಬರ್ 18, 19 ಮತ್ತು 20ರಂದು ಭಾರತದ ಅಹ್ಮದಿಯಾ ಕೇಂದ್ರ ಖಾದಿಯಾನಿನಲ್ಲಿ ವಿಜಯಕರವಾಗಿ ಸಮಾವೇಶಗೊಂಡಿತು.

ಭಾರತದ ವಿವಿಧೆಡೆಗಳಿಂದ ಸುಮಾರು 2000 ಪ್ರತಿನಿಧಿಗಳಲ್ಲದೆ, ಪಾಕಿಸ್ತಾನ, ಅಮೇರಿಕ, ಬ್ರಿಟನ್, ಪಶ್ಚಿಮ ಜರ್ಮನಿ, ತಾಂಜಾನಿಯಾ (ಆಫ್ರಿಕ), ಇಂಡೋನೇಷ್ಯಾ, ಬಂಗ್ಲಾದೇಶ್, ಇರಾನ್, ದುಬೈ, ನೇಪಾಲ್ ಮೊದಲಾದ ದೇಶಗಳಿಂದಲೂ ಸುಮಾರು 200 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಅಮೇರಿಕ, ಬ್ರಿಟನ್, ಪಶ್ಚಿಮ ಜರ್ಮನಿ, ತಾಂಜಾನಿಯಾ ಎಂಬೀ ರಾಜ್ಯಗಳ ಪ್ರತಿನಿಧಿಗಳ ಪೈಕಿ ಹೆಚ್ಚಿನವರು ಕ್ರೈಸ್ತಮತದಿಂದ ಅಹ್ಮದಿಯಾ ಜಮಾಅತ್ ಮೂಲಕ ಇಸ್ಲಾಂ ಧರ್ಮವನ್ನು ಸ್ವೀಕರಿಸಿದವರಾಗಿದ್ದಾರೆ.

ಅಹ್ಮದಿಯಾ ಜಮಾಅತಿನ ಸ್ಥಾಪಕರಿಂದ 96 ವರ್ಷಗಳ ಮೊದಲು ಆರಂಭಿಸಲ್ಪಟ್ಟ ಈ ವಾರ್ಷಿಕ ಮಹಾ ಸಮ್ಮೇಳನವು ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಜರಗುತ್ತದೆ.

ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟು ಒಂದು ನೂರು ವರ್ಷ ಪೂರ್ತಿಯಾಗುವ ಪ್ರಥಮ ಶತಕದ ಕೊನೆಯ ಸಮ್ಮೇಳನ ಎಂಬ ಸ್ಥಿತಿಯಲ್ಲಿ ಈ ವರ್ಷದ ಸಮ್ಮೇಳನಕ್ಕೆ ವಿಶೇಷ ಪ್ರಾಮುಖ್ಯತೆಯನ್ನೂ ಚಾರಿತ್ರಿಕ ವೈಶಿಷ್ಟ್ಯವನ್ನೂ ನೀಡಲಾಗಿದೆ.

ಮೂರು ದಿನಗಳಲ್ಲೂ ಅಹ್ಮದಿಯಾ ಮತಪಂಡಿತರೂ ಇತರ ವಿದ್ವಾಂಸರೂ ಅನೇಕ ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳ ಕುರಿತು ಸಾರವತ್ತಾದ ಭಾಷಣಗಳನ್ನು ಮಾಡಿದರು. ಜಮಾಅತಿನ ಸ್ಥಾಪಕರ ಪೌತ್ರ, ನಾಝಿರ್ ಅಅ್‌ಲಾ ಹಝ್ರತ್ ಮಿರ್ಝಾ ವಸೀಂ ಅಹ್ಮದ್ ಸಾಹೇಬರು ಧ್ವಜಾರೋಹಣದ ನಂತರ ಪ್ರಾರ್ಥನೆ ಮಾಡಿ ಸಮ್ಮೇಳನವನ್ನು ಉದ್ಘಾಟಿಸಿದರು. ವಿದೇಶದಿಂದ ಬಂದ ಪ್ರತಿನಿಧಿಗಳು, ತಮ್ಮ ರಾಜ್ಯಗಳಲ್ಲಿ ನಡೆಯುತ್ತಿರುವ ಮಹತ್ತರವಾದ ಇಸ್ಲಾಂ ಧರ್ಮ ಪ್ರಚಾರ ಚಟುವಟಿಕೆಗಳ ಬಗ್ಗೆಯೂ ಸಂಘಟನೆಯ ಮುನ್ನಡೆಯ ಕುರಿತೂ ವಿವರಿಸಿದರು.

ಸಮ್ಮೇಳನದಲ್ಲಿ ಪಂಜಾಬಿನ ಉನ್ನತ ಅಧಿಕಾರಿಗಳು, ಗುರುದಾಸಪುರ ಜಿಲ್ಲಾ ಕಲೆಕ್ಟರ್, ರಾಜ್ಯದ ನಾನಾ ಕಡೆಗಳಿಂದ ಆಗಮಿಸಿದ ಹಿಂದೂ, ಸಿಖ್ಖ್, ಕ್ರೈಸ್ತ ಸಮುದಾಯಗಳಿಗೆ ಸೇರಿದ ಗಣ್ಯರೂ ಭಾಗವಹಿಸಿದರು. ★

---

ಹತ್ತಿರ ಜನರಲ್ ಜಿಯಾರನ್ನು ದಫನ ಮಾಡಿದ ವಿಚಾರವು ಈಗಾಗಲೇ ಬಹಳಷ್ಟು ಚರ್ಚೆಗೆ ಗುರಿಯಾಗಿರುವುದರಿಂದ, ಶವ ಪೆಟ್ಟಿಗೆಯು ಅಲ್ಲಿಂದ ಸ್ಥಳಾಂತರಗೊಳ್ಳುವ ಸಾಧ್ಯತೆಯೇ ಹೆಚ್ಚಾಗಿದೆ.

ಪಾಕಿಸ್ತಾನ ರೇಡಿಯೋ ಮತ್ತು ದೂರದರ್ಶನವು ಜನರಲ್ ಜಿಯಾರನ್ನು "ಹುತಾತ್ಮ" ಎಂದು ಕರೆಯುವುದನ್ನು ನಿಲ್ಲಿಸಿದುದರ ಕುರಿತು ಚರ್ಚೆಗೆ ಜೀವಕೊಡಲು ಹೆಚ್ಚಿನವರು ಈಗ ಬಯಸುವುದಿಲ್ಲ. ಅವರ ಮರಣದ ಎರಡು ದಿವಸದ ನಂತರದ ವರೆಗೂ ಆ ರೀತಿ ಹೇಳಲಾಗುತ್ತಿತ್ತು. ಆದರೆ ಜನರಲ್ ರಿಯಾಯಾರನ್ನು ಈ ರೀತಿ ಹೊಗಳುವ ಆವಶ್ಯಕತೆಯಿಲ್ಲವೆಂದು ಭಾಸವಾದಾಗ ಆ ರೀತಿ ಹೇಳುವುದನ್ನು ಕೂಡಲೇ ನಿಲ್ಲಿಸಲಾಯಿತು. ಆದರೆ, ಪಾಕಿಸ್ತಾನ್ ಟೈಂಸ್ ಮತ್ತು ನ್ಯಾಶನಲ್ ಪ್ರೆಸ್ ಟ್ರಸ್ಟ್, ಜನರಲ್ ಜಿಯಾರ ಗುಣಗಾನ ಹಾಡುವುದನ್ನು ಮುಂದುವರಿಸಿತ್ತು. ಈಗ ನಾಶನಲ್ ಪ್ರೆಸ್ ಟ್ರಸ್ಟನ್ನು ಬರ್ಖಾಸ್ತುಗೊಳಿಸಲಾಗಿದೆ. ಬಹುಶಃ ಇದು ಬೆನಜೀರ್ ಭುಟ್ಟೋರ ಮೊದಲ ಪ್ರಹಾರವಾಗಿದೆ. ಜನರಲ್ ಝಿಯಾರದ್ದೆಂದು ಹೇಳಿ ಹೂಳಲಾಗಿದ್ದ ಶವವು ನಿಜವಾಗಿಯೂ ಜಿಯಾರ ಶವವಾಗಿರದೆ ಬೇರೆ ಯಾರದೋ ಆಗಿತ್ತೆಂಬ ಕಾರಣ ಹೇಳಿ ಆ ಸಮಾಧಿಯನ್ನು ಅಗೆಯುವ ಪ್ರಯತ್ನ ಕೂಡಾ ಮೊದಲೊಮ್ಮೆ ನಡೆದಿತ್ತು. ಆದರೆ ಈ ಕುರಿತು ಮನವಿಯನ್ನು ಲಾಹೋರಿನ ಉಚ್ಚನ್ಯಾಯಾಲಯವು ತಳ್ಳಿಹಾಕಿತು.

— ಹಿಂದ್ ಸಮಾಚಾರ್ ಡಿಸೆಂಬರ್ 18, 1988

# 'ದಿ ಸೆಟಾನಿಕ್ ವರ್ಸಸ್': ಅಹ್ಮದಿಯಾ ಖಲೀಫರ ಖಂಡನೆ

ಲಂಡನ್: 'ದಿ ಸೆಟಾನಿಕ್ ವರ್ಸಸ್' ಎಂಬ ಹೆಸರಿನಲ್ಲಿ ಸಲ್ಮಾನ್ ರಶ್ದೀ ಬರೆದ ವಿವಾದಾತ್ಮಕ ಪುಸ್ತಕದಲ್ಲಿ ಇಸ್ಲಾಮಿಗೆ ವಿರುದ್ಧವಾಗಿ ಅತ್ಯಂತ ನಿಂದನೀಯ ಭಾಷೆಯಲ್ಲಿ ಬರೆಯಲಾಗಿದೆ ಎಂದು ಅಹ್ಮದಿಯಾ ಜಮಾಅತಿನ ನೇತಾರ (ಖಲೀಫ) ಮಿರ್ಝಾ ತಾಹಿರ್ ಅಹ್ಮದ್ ಹೇಳಿದರು. ಇಸ್ಲಾಮಿನ ಅಧ್ಯಾಪನದ ಪ್ರಕಾರ ಪ್ರತಿಯೊಬ್ಬನಿಗೂ ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕು ಇರಬೇಕಾಗಿದೆ. ಆದರೆ ಕೋಟಿಗಟ್ಟಲೆ ಮುಸ್ಲಿಮರು ತಮ್ಮ ಜೀವನವನ್ನು ತ್ಯಾಗಮಾಡಲು ಸಿದ್ಧರಿರುವ ಆ ಆದರಣೀಯ ವ್ಯಕ್ತಿಗಳ ಕುರಿತು ಅವಹೇಳಿಸುವಂತಹ ಮಾತುಗಳನ್ನು ಬರೆಯಲು ಯಾರಿಗೂ ಹಕ್ಕಿಲ್ಲ. ಹೊನ್‌ಸ್ಲೋದ ಲಾರ್ಡ್ ಮೇಯರ್, ಕೌನ್ಸಿಲ್ ಸದಸ್ಯರುಗಳು, ಪಾರ್ಲಿಮೆಂಟ್ ಸದಸ್ಯರುಗಳು ಹಾಗೂ ವಿವಿಧ ಮತಸ್ಥರಾದ ಗಣ್ಯವ್ಯಕ್ತಿಗಳು ಉಪಸ್ಥಿತರಿದ್ದ, ಲಂಡನ್ ಮಸೀದಿಯ ಮಹ್ಮೂದ್ ಹಾಲ್‌ನಲ್ಲಿ ಜರಗಿದ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು. ಯಾರಾದರೂ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಪ್ರಧಾನ ಮಂತ್ರಿಗೆ ವಿರುದ್ಧವಾಗಿ ಅವಾಚ್ಯ ಶಬ್ದಗಳನ್ನು ಪ್ರಯೋಗಿಸಿದರೆ ಕೂಡಲೇ ತನ್ನ ಮಾತನ್ನು ವಾಪಾಸು ಪಡೆಯಲು ಒತ್ತಾಯಿಸಲಾಗುತ್ತದೆ ಎಂದವರು ಹೇಳಿದರು.*

ಇಸ್ಲಾಮಿನ ತತ್ವಗಳಲ್ಲಿ ಗ್ರಂಥಕರ್ತನಿಗೆ ಭಿನ್ನಾಭಿಪ್ರಾಯವಿರುವ ಕಾರಣದಿಂದ ನಾವು ಪ್ರತಿಭಟಿಸುತ್ತಿಲ್ಲ. ಆದರೆ ಇಸ್ಲಾಮಿನ ಗೌರವಾನ್ವಿತ ವ್ಯಕ್ತಿಗಳ ವಿರುದ್ಧ ಅಪಮಾನಕಾರಕ ವಿಷಯಗಳನ್ನು ಆ ಪುಸ್ತಕದಲ್ಲಿ ಬರೆಯಲಾದ ಕಾರಣದಿಂದಾಗಿ ಈ ಪ್ರತಿಭಟನೆ ಎಂದು ಖಲೀಫರು ವ್ಯಕ್ತಪಡಿಸಿದರು.

("ಜಂಗ್" ದೈನಿಕ, ಲಂಡನ್: 30–1–1989 ಮತ್ತು "ಮಿಲ್ಲತ್" ದೈನಿಕ, ಲಂಡನ್: 31–1–1989)

---

* ಆಗ ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಸ್ವರವೆತ್ತಲು ಯಾರಿಗೂ ಸಾಧ್ಯವಾಗುವುದಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯವೆಂದರೆ ಧಾರ್ಮಿಕ ಮಹಾಪುರುಷರನ್ನು ನಿಂದನೀಯ ಮಾತುಗಳಿಂದ ಜರೆಯುವ ಸ್ವಾತಂತ್ರ್ಯವಲ್ಲ.

— ಸಂ.

# ರಶ್ದೀ ಪುಸ್ತಕಕ್ಕೆ ಬ್ರಿಟನಿನ ಅಹ್ಮದಿಯರ ಖಂಡನೆ

ಮುಹಮ್ಮದ್ ಪೈಗಂಬರರ ವಿರುದ್ಧವಾಗಿ ಅತ್ಯಂತ ನಿಂದನೀಯವಾಗಿ ಬರೆದ ಸಲ್ಮಾನ್ ರಶ್ದಿಯ 'ದಿ ಸೆಟಾನಿಕ್ ವರ್ಸಸ್' ಪುಸ್ತಕದ ಬಗ್ಗೆ ತಮಗುಂಟಾದ ಆಘಾತವನ್ನೂ ವ್ಯಾಕುಲತೆಯನ್ನೂ ಬ್ರಿಟನಿನ ಅಹ್ಮದಿಯರು ಪ್ರಕಟಿಸಿದ್ದಾರೆ.

ಆ ಪುಸ್ತಕ ಒಂದು ಕಾದಂಬರಿಯೆಂದು ಹೇಳಲ್ಪಡುತ್ತಿರುವುದಾದರೂ ಅದರಲ್ಲಿ ಬಳಸಲಾದ ಹೆಸರುಗಳು ಎಲ್ಲಾ ಮುಸ್ಲಿಮರು ಅತ್ಯಂತ ಗೌರವದಿಂದ ಸ್ಮರಿಸುವ ವ್ಯಕ್ತಿಗಳದ್ದಾಗಿವೆ. ಮುಹಮ್ಮದ್ ಪೈಗಂಬರರನ್ನೂ ಅವರ ಅನುಚರರನ್ನೂ ಹೀನಕರವಾಗಿ ಚಿತ್ರೀಕರಿಸಲಾಗಿದ್ದು, ಅದು ಮುಸ್ಲಿಮರಿಗೆ ಮಾತ್ರವಲ್ಲ ಸಭ್ಯರಾದ ಮುಸ್ಲಿಮೇತರರಿಗೂ ಸಹ ಅತ್ಯಂತ ನೋವನ್ನುಂಟುಮಾಡುತ್ತದೆ. ಇಂತಹ ಕೃತಿರಚನೆಗೆ ಗ್ರಂಥಕಾರನನ್ನು ಸೈತಾನನೇ ಪ್ರೇರೇಪಿಸಿರಬೇಕೆಂದು ತೋರುತ್ತದೆ.

ಈ ಪುಸ್ತಕದ ಪ್ರಸಾರವನ್ನು ತಡೆಗಟ್ಟಬೇಕೆಂದು ಅವರು ಬೇಡಿಕೆಯಿರಿಸಿದ್ದಾರೆ. ವಿವಿಧ ಧರ್ಮೀಯರ ನೆಲೆವೀಡಾದ ಬ್ರಿಟನಿನ ಮುಸ್ಲಿಮರ ಮನಸ್ಸಿಗೆ ನೋವನ್ನುಂಟುಮಾಡುವಂತೆ, ಮುಹಮ್ಮದ್ ಪೈಗಂಬರರ ಹೆಸರಿಗೆ ಕಳಂಕ ತಂದ ಆ ಪುಸ್ತಕದ ಲೇಖಕ ಮತ್ತು ಪ್ರಕಾಶಕರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆಯೂ ಅವರು ಬ್ರಿಟಿಷ್ ಸರಕಾರವನ್ನು ಕೋರಿದ್ದಾರೆ. ಧರ್ಮ ಸಾಮರಸ್ಯದ ದೃಷ್ಟಿಯಲ್ಲಿ ಎಲ್ಲಾ ಮತಸ್ಥರು ತಮ್ಮನ್ನು ಬೆಂಬಲಿಸುವರೆಂಬ ಭರವಸೆ ಅವರಿಗಿದೆ.

ಪುಸ್ತಕಕ್ಕೆ ಮುಟ್ಟುಗೋಲು ಹಾಕಿದ ಭಾರತ ಸರಕಾರವನ್ನೂ ಇನ್ನಿತರ ಸರಕಾರಗಳನ್ನೂ ಅವರು ಶ್ಲಾಘಿಸಿದ್ದಾರೆ.

("ರಿವ್ಯೂ ಓಫ್ ರಿಲಿಜಿಯನ್ಸ್," ಲಂಡನ್:
ಒಕ್ಟೋಬರ್ 1988)

"ಮರುಭೂಮಿಯ ಸರ್ಪಗಳೊಡನೆಯೂ ಕಾಡಿನ ತೋಳಗಳೊಡನೆಯೂ ನಮಗೆ ಐಕ್ಯ ಭಾವದಿಂದಲೂ ಸೌಹಾರ್ದದಿಂದಲೂ ವರ್ತಿಸಲು ಸಾಧ್ಯವಾದರೂ ನಮ್ಮ ಜೀವಕ್ಕಿಂತಲೂ ಮಾತಾ ಪಿತರಿಗಿಂತಲೂ ಹೆಚ್ಚಾಗಿ ನಾವು ಪ್ರೀತಿಸುವ ಪವಿತ್ರ ಪೈಗಂಬರರ ಮೇಲೆ ದೋಷಾರೋಪಣೆಯನ್ನು ಮಾಡುವವರೊಡನೆ ನಮಗೆ ಮೈತ್ರಿಯಿಂದ ಸಹಬಾಳ್ವೆ ನಡೆಸಲು ಅಸಾಧ್ಯ."

(ಮೈತ್ರಿ ಸಂದೇಶ)

— ಹಝ್ರತ್ ಅಹ್ಮದ್
ಅಹ್ಮದಿಯಾ ಸಂಘಟನೆಯ ಸ್ಥಾಪಕರು.

## ಭಾರತೀಯ ಧರ್ಮ ಪರಿಷತ್ತಿನಲ್ಲಿ ಅಹ್ಮದಿ ಪ್ರತಿನಿಧಿಯ ಭಾಷಣ

ಶಿವಮೊಗ್ಗ ಜಿಲ್ಲೆಯ ಪುಣ್ಯಸ್ಥಳ ಎಂಬಲ್ಲಿ ಫೆಬ್ರವರಿ 12ರಂದು ಸಮಾವೇಶಗೊಂಡ ಭಾರತೀಯ ಧರ್ಮ ಪರಿಷತ್ತಿನ 13ನೇ ಅಧಿವೇಶದಲ್ಲಿ ಅಹ್ಮದಿಯಾ ಪ್ರತಿನಿಧಿಯಾಗಿ ಮಂಗಳೂರಿನ ಪ್ರಚಾರ ಕಾರ್ಯದರ್ಶಿ ಜನಾಬ್ ಎಂ. ಪಿ. ಇಬ್ರಾಹಿಂ ಸಾಹೇಬರು "ಮಾನವ ಸಾಹೋದರ್ಯಕ್ಕೆ ಇಸ್ಲಾಂ ಧರ್ಮದ ಕೊಡುಗೆ" ಎಂಬ ವಿಷಯದಲ್ಲಿ ಭಾಷಣ ಮಾಡಿದರು.

ಹಿಂದೂ, ಕ್ರೈಸ್ತ, ಜೈನ, ಸಿಖ್ಖ ಎಂಬೀ ಧರ್ಮಗಳ ವಿದ್ವಾಂಸರು ಸಹ ಸಮಾವೇಶದಲ್ಲಿ ಮಾತನಾಡಿದರು.


## Statement about Ownership and other particulars about the Newspaper YUGARASHMI Quarterly

**[FORM IV See Rule 8]**

| | | |
|---|---|---|
| 1 | Place of publication | Mangalore |
| 2 | Period of its publication | Quarterly |
| 3 | Printer's name | Muhammed Yusuf |
| | Whether citizen of India? | Yes |
| | Address | Jubilee Printing Press<br>10-23-1008/1 Ansari Road, Bunder,<br>Mangalore–575 001 |
| 4 | Publisher's name | Muhammad Yusuf |
| | Whether citizen of India? | Yes |
| | Address | 10-23-1008/1 Ansari Road, Bunder,<br>Mangalore–575 001 |
| 5 | Editor's name | Muhammad Yusuf |
| | Whether citizen of India? | Yes |
| | Address | 10-23-1008, Ansari Road, Bunder,<br>Mangalore–575 001 |
| 6 | Name and addressee of individuals who own the newspaper and partner or shareholder holding more than one percent of the capital | Jamath Ahmadiyya,<br>10-23-1008/1 Ansari Road, Bunder,<br>Mangalore–575 001 |

I, Muhammad Yusuf hereby declare that the particulars given above are true to the best of my knowledge and belief.

Date: 1–3–1989

Sd/-**Muhammad Yusuf**
*Signature of Publisher*

# ಸಿದ್ದೀಖ್ ಅಮೀರ್ ಅಲಿ ಸಾಹೇಬ್



ಅಹ್ಮದಿಯಾ ಜಮಾಅತಿನ ಕೇರಳ ಅಮೀರ್ ಜನಾಬ್ ಸಿದ್ದೀಖ್ ಅಮೀರ್ ಅಲಿ ಸಾಹೇಬರು ತನ್ನ 68ನೇ ವಯಸ್ಸಿನಲ್ಲಿ, ಜನವರಿ 10ರಂದು ಮೊಗ್ರಾಲಿನಲ್ಲಿರುವ ಸ್ವಗೃಹದಲ್ಲಿ ನಿಧನರಾದರು. "ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್."

1947ರಲ್ಲಿ ಅಹ್ಮದಿಯಾ ಜಮಾಅತಿಗೆ ಸೇರಿದ ಅವರು ಮರಣ ಕಾಲದ ತನಕ ಜಮಾಅತಿನ ಅನೇಕ ಹುದ್ದೆಗಳನ್ನು ವಹಿಸಿಕೊಂಡು ಸೇವೆ ಸಲ್ಲಿಸಿದ್ದರು. ಅನೇಕ ವರ್ಷಗಳ ಕಾಲ ಮೊಗ್ರಾಲ್ ಜಮಾಅತಿನ ಸೆಕ್ರೆಟರಿಯಾಗಿಯೂ 1983ರಿಂದ ಪ್ರೆಸಿಡೆಂಟ್ ಆಗಿಯೂ ಅವರು ಚುನಾಯಿತರಾಗಿದ್ದರು. 1961ರಿಂದ 1980ರ ವರೆಗೆ ಅವರು ಕೇರಳ ಅಹ್ಮದಿಯಾ ಸೆಂಟ್ರಲ್ ಕಮಿಟಿಯ ಅಧ್ಯಕ್ಷರಾಗಿದ್ದರು. 1985ರಲ್ಲಿ ಕೇರಳ ಅಮೀರ್ ಆಗಿ ಅವರು ಆಯ್ಕೆಯಾದರು. ಅನೇಕ ವರ್ಷಗಳಿಂದ ಅವರು ಭಾರತದ ಅಹ್ಮದಿಯಾ ಕೇಂದ್ರ ಸಂಸ್ಥೆಯಾದ "ಸದರ್ ಅಂಜುಮನ್ ಅಹ್ಮದಿಯಾ, ಖಾದಿಯಾನ್" ಇದರ ಸದಸ್ಯರೂ ಆಗಿದ್ದರು.

ಮಲಯಾಳಂ ಭಾಷಣಗಾರನೂ ಬರಹಗಾರನೂ ಕವಿಯೂ ಆಗಿದ್ದ ಅವರು 1979ರಿಂದ 3 ವರ್ಷಗಳ ಕಾಲ ಅಹ್ಮದಿಯಾ ಮುಖಪತ್ರಿಕೆ "ಸತ್ಯದೂತನ್" ಮಾಸ ಪತ್ರಿಕೆಯ ಸಂಪಾದಕರೂ 1970ರಿಂದ ಪ್ರಕಾಶಕರೂ ಆಗಿದ್ದರು.

ಪ್ರಸಿದ್ಧ ಕುಲೀನ ಮನೆತನದವರಾದ ಅಮೀರ್ ಅಲಿ ಸಾಹೇಬರು ಕರ್ನಾಟಕ ರಾಜ್ಯ ಮುಸ್ಲಿಂ ಲೀಗ್ ಪ್ರೆಸಿಡೆಂಟ್, ಮಂಗಳೂರಿನ ಜನಾಬ್ ಸಿ. ಅಬ್ದುಲ್ ಹಮೀದ್‌ರವರ ಸಹೋದರಿ ಸಿ. ಖೀಪಾತಿಮಾರವರನ್ನು ಪ್ರಥಮ ಪತ್ನಿಯಾಗಿ ವರಿಸಿದ್ದರು. ಅವರು "ಯುಗರಶ್ಮಿ" ಸಂಪಾದಕರ ಪತ್ನಿಯ ತಂದೆಯಾಗಿದ್ದಾರೆ. ಕನ್ನಡ ಧಾರ್ಮಿಕ ಸಾಹಿತ್ಯದಲ್ಲೂ ಆಸಕ್ತಿಯಿದ್ದ ಅವರು "ಯುಗರಶ್ಮಿ" ಪತ್ರಿಕೆಯನ್ನು ಪ್ರಾರಂಭಿಸಲು ಕಾರಣಕರ್ತರಲ್ಲಿ ಓರ್ವರಾಗಿದ್ದರು. ಅವರು ಅಹ್ಮದಿಯಾ ಜಮಾಅತಿನ "ಖುರ್‌ಆನ್ ಕನ್ನಡ ಭಾಷಾಂತರ ಮಂಡಳಿ"ಯ ಓರ್ವ ಸದಸ್ಯರೂ ಆಗಿದ್ದರು.

ದಿವಂಗತರು ತ್ಯಾಗಶೀಲರೂ ಉದಾರಮತಿಯೂ ಸರಳ ಸ್ವಭಾವಿಯೂ ಧರ್ಮನಿಷ್ಠರೂ ಆಗಿದ್ದರು.

ತನ್ನ ದ್ವಿತೀಯ ಪತ್ನಿಯನ್ನೂ ಆರು ಮಂದಿ ಪುತ್ರರನ್ನೂ ಐವರು ಪುತ್ರಿಯರನ್ನೂ ಅಪಾರ ಬಂಧು ಮಿತ್ರಾದಿಗಳನ್ನೂ ಅವರು ಅಗಲಿದ್ದಾರೆ.

ಅಲ್ಲಾಹನು ಅವರ ಆತ್ಮಕ್ಕೆ ಶಾಂತಿಯನ್ನೂ ಮಗ್‌ಫಿರತನ್ನೂ ದಯಪಾಲಿಸಲಿ. ಆಮೀನ್.

# ಮಾಡಾಕ್ಕರ ಅಬೂಬಕರ್ ಸಾಹೇಬ್

ಕಲ್ಲಿಕೋಟೆ ಅಹ್ಮದಿಯಾ ಜಮಾಅತಿನ ಆದಿಕಾಲದ ಪ್ರಮುಖರಲ್ಲಿ ಓರ್ವರಾಗಿದ್ದ ಜನಾಬ್ ಮಾಡಾಕ್ಕರ ಅಬೂಬಕರ್ ಸಾಹೇಬರು ತನ್ನ 82 ಪ್ರಾಯದಲ್ಲಿ ಜುಲ್ಯಾ 29ರಂದು ಸ್ವಗೃಹದಲ್ಲಿ ನಿಧನರಾದರು. (ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.)

ಕ್ರೈಸ್ತ ಮಿಶನರಿಯಾಗಿದ್ದ ಮಿ। ಓಟ್ಟನ್‌ರವರು ಬರೆದ "Ahmadiyya Doctrine of God" ಎಂಬ ಪುಸ್ತಕವನ್ನು ರಚಿಸಲು ಅಬೂಬಕರ್ ಸಾಹೇಬರ ಗೆಳೆತನವು ಅವರಿಗೆ ಪ್ರಚೋದನೆಯನ್ನು ನೀಡಿತ್ತು.

ದಿವಂಗತರು ಸಾಮಾಜಿಕ ಕಾರ್ಯಕರ್ತನಾಗಿ ತುಂಬಾ ಸೇವೆ ಸಲ್ಲಿಸಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತನ್ನು ಕರುಣಿಸಲಿ. ಆಮೀನ್.

---

# ಪಿ. ಕೆ. ಹಲೀಮ ಸಾಹಿಬ

"ಯುಗರಶ್ಮಿ" ಸಂಪಾದಕರ ಸಹೋದರ ಹಾಗೂ "ಯುಗರಶ್ಮಿ" ಬಳಗದ ಎಂ. ಉಬೈದುಲ್ಲಾ ಸಾಹೇಬರ ಪತ್ನಿ ಪಿ. ಕೆ. ಹಲೀಮ ಸಾಹಿಬ ಅವರು ತನ್ನ 48ನೇ ಹರೆಯದಲ್ಲಿ ಕಳೆದ ಜನವರಿ 21ರಂದು ಬೆಂಗಳೂರಿನಲ್ಲಿ ನಿಧನರಾದರು. (ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.) ಮೃತ ದೇಹವನ್ನು ಮಡಿಕೇರಿಯಲ್ಲಿ ದಫನ ಮಾಡಲಾಯಿತು.

ಪತಿಯನ್ನೂ ಆರು ಮಂದಿ ಪುತ್ರರನ್ನೂ ಮೂವರು ಪುತ್ರಿಯರನ್ನೂ ಅನೇಕ ಬಂಧು ಬಳಗವನ್ನೂ ಅವರು ಅಗಲಿದ್ದಾರೆ.

ಅಲ್ಲಾಹನು ಅವರಿಗೆ ಮಗ್‌ಫಿರತನ್ನೂ ಸಂತಪ್ತ ಕುಟುಂಬದವರಿಗೆ ಸಹನೆಯನ್ನೂ ಕರುಣಿಸಲಿ. ಆಮೀನ್.

---

# ವಿ. ಕೆ. ಇಬ್ರಾಹೀಂ ಸಾಹೇಬ್

ಮೂಲತಃ ದಕ್ಷಿಣ ಕನ್ನಡದ ವೀರಕಂಬದವರಾದ ಮಡಿಕೇರಿ ನಿವಾಸಿ ಜನಾಬ್ ವಿ. ಕೆ. ಇಬ್ರಾಹೀಂ ಸಾಹೇಬರು ತನ್ನ 50ನೇ ವಯಸ್ಸಿನಲ್ಲಿ ಫೆಬ್ರವರಿ 15ರಂದು ಕಣ್ಣಾನ್ನೂರಿನಲ್ಲಿ ನಿಧನರಾದರು. (ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.) ಮೃತ ದೇಹವನ್ನು ಮಡಿಕೇರಿಯಲ್ಲಿ ದಫನ ಮಾಡಲಾಯಿತು.

ದಿವಂಗತರು ಸುಮಾರು 20 ವರ್ಷಗಳ ಮೊದಲು ಅಹ್ಮದಿಯಾ ಜಮಾಅತಿಗೆ ಸೇರಿದರು. ಅವರೊಬ್ಬ ಸಮಾಜ ಸೇವಕರಾಗಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತನ್ನು ದಯಪಾಲಿಸಲಿ. ಆಮೀನ್.

ಕರ್ನಾಟಕ ರಾಜ್ಯ

# ಅಹ್ಮದಿಯಾ ಶತಮಾನೋತ್ಸವ ಸಮ್ಮೇಳನ


ಬೆಂಗಳೂರಿನ

## ಸಿಟಿ ಟೌನ್ ಹಾಲ್‌ನಲ್ಲಿ

1989, ಮೇ 13 ಮತ್ತು 14ರಂದು

ಭಾರತದ ವಿವಿಧ ಕಡೆಗಳಿಂದ ಆಗಮಿಸುವ ವಿದ್ವಾಂಸರು ಭಾಷಣ ಮಾಡಲಿರುವರು

Regd. with the Registrar of Newspapers for India Regd. No. R. N. 27354/75
YUGARASHMI Kannada Quarterly, March 1989 / Aman 1368




English Translation of the
HOLY QURAN
with Arabic Text &
Extensive Index

**Price : Rs. 20-00**
**Postage Extra**

Write to:
**NAZIR DAWAT-O-TABLGH**
Sadr Anjuman Ahmadiyya
Qadian - 143 516 (Punjab)

## ಸ್ಟಾಂಡರ್ಡ್ ಟೈಲರಿ

ಕಡೂರು, ಚಿಕ್ಕಮಗಳೂರು ಜಿಲ್ಲೆ

## ರಾಜಾ ಮಾರ್ಕಿನ ಹಂಚುಗಳು

ಚಾವಣಿ ಹಂಚು, ಮೂಲೆ ಹಂಚು, ಗೋಡೆ ಹಂಚು, ಹಾಸು ಹಂಚು, ಮೊತ್ತಡ ಹಂಚು, ಆಲಂಕಾರಿಕ ಹಂಚು, ಮೊದಲಾದ ಎಲ್ಲಾ ತರದ ಆವೆಮಣ್ಣಿನ ಉತ್ಪನ್ನಗಳು ದೊರೆಯುತ್ತವೆ.

**STANDARD TILERY**
KADUR
CHICKMAGALUR DIST.

Edited and Published by Muhammad Yusuf on behalf of Jamath Ahmadiyya at 10-23-1008, Ansari Road, Bunder, Mangalore-575 001. Phone: 32039
Printed at Jubilee Printing Press, Ansari Road, Bunder, Mangalore-575 001.